ಭಾನುವಾರ, ಮೇ 30, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 150 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಭೋಪಾಲದ ವಿಷಾನಿಲ ಸೋರಿಕೆ, ಚೆರ್ನೊಬಿಲ್, ಫುಕುಶಿಮಾಗಳ ವಿಕಿರಣ ಸೋರಿಕೆಯಂತೆ ಚೀನಾದ ಲ್ಯಾಬಿನಿಂದ ಕೊರೊನಾ ಸೋಂಕು ಸೋರಿಕೆಯಾಗಿದ್ದು ಹೌದೆ? ಹೌದೆಂಬ ಹೊಗೆ ಎದ್ದಿದೆ...

ರಾಜ್ಯಗಳಿಗೆ ರೆಮ್‌ಡಿಸಿವಿರ್ ಹಂಚಿಕೆ ನಿಲ್ಲಿಸಿದ ಕೇಂದ್ರ 7
ಕೇಂದ್ರ ಸರ್ಕಾರದ ದ್ವೇಷದ ರಾಜಕಾರಣಕ್ಕೆ ಮಮತಾ ಸಿಟ್ಟು
'ಅಹಂನಿಂದ ಲಸಿಕಾ ಅಭಿಯಾನಕ್ಕೆ ಹಿನ್ನಡೆ' 7
'ಮೋದಿ ಪಾದ ಮುಟ್ಟಲೂ ಸಿದ್ಧ' 7

ಉದ್ಯಮಕ್ಕೆ ಕೋವಿಡ್ ಉರುಳು

• ವಿಜಯ್ ಜೋಷಿ

ಬೆಂಗಳೂರು: ಪಾತ್ರೆ ತಯಾರಿಸುವ ಉದ್ದಿಮೆಯನ್ನು ಏಳು ವರ್ಷಗಳಿಂದ ನಡೆಸುತ್ತಿದ್ದಾರೆ ದಕ್ಷಿಣ ಕನ್ನಡ ಜಿಲ್ಲೆಯ ಬಿ. ಯೋಗಾನಂದ್ (ಹೆಸರು ಬದಲಿಸಲಾಗಿದೆ). ಹಿಂದಿನ ವರ್ಷದ ಲಾಕ್‌ಡೌನ್‌ನ ತೊಂದರೆಯನ್ನು ನಿಭಾಯಿಸಿಕೊಂಡ ಅವರಿಗೆ, ಈ ಬಾರಿಯ ಲಾಕ್‌ಡೌನ್ ಬಲವಾದ ಏಟು ನೀಡಿದೆ.

'ಹಿಂದಿನ ವರ್ಷ ಕಾರ್ಮಿಕರಿಗೆ ಸಂಬಳ ಕೊಡಲು ಹೆಣಗಾಡಿದೆ. ಮೊದಲ ತಿಂಗಳು ಪೂರ್ತಿ ಸಂಬಳ, ನಂತರದಲ್ಲಿ ಅರ್ಧದಷ್ಟು ಕೊಟ್ಟಿದ್ದಾಯಿತು. ಆತ್ಮನಿರ್ಭರ ಪ್ಯಾಕೇಜ್‌ನ ಪ್ರಯೋಜನ ದೊರೆತು, ತುಸು ಸಹಾಯ ಆಯಿತು. ಉದ್ದಿಮೆ ಸುಧಾರಿಸಿಕೊಳ್ಳುತ್ತಿತ್ತು. ಎಲ್ಲವೂ ಚೆನ್ನಾಗಿ ಆಗುವ ಹಂತ ಬಂದಾಗ ಮತ್ತೆ ಲಾಕ್‌ಡೌನ್ ಬಂತು. ಇದು ಬಹಳ ಏಟು ಕೊಟ್ಟಿದೆ' ಎಂದು ಯೋಗಾನಂದ್ ಹೇಳುತ್ತಾರೆ.

'ಈಗ ನಮಗೆ ನಿಜವಾದ ಪೆಟ್ಟು ಬಿದ್ದಿದೆ. ಈ ಬಾರಿ ಜನ ಹೆದರಿದ್ದಾರೆ. ಕಳೆದ ವರ್ಷದ ಲಾಕ್‌ಡೌನ್ ತೆರವಾದ ನಂತರ, ಇನ್ನು ಲಾಕ್‌ಡೌನ್ ಇರಲಾರದು ಎಂಬ ಭರವಸೆ ಇತ್ತು. ಆದರೆ, ಈಗ ಹಾಗಿಲ್ಲ. ಮೂರನೆಯ ಅಲೆಯ ಹೊತ್ತಿಗೆ ಇನ್ನೊಂದು ಲಾಕ್‌ಡೌನ್ ಬರುತ್ತದೆಯೇ ಎಂಬ ಭಯ ಇದೆ' ಎಂದು ಅವರು ಸಂಕಟ ಹೇಳಿ ಕೊಂಡರು.

ಜೀವ ಉಳಿಸಲೆಂದು ಜಾರಿಗೆ ತಂದ ಲಾಕ್‌ಡೌನ್, ತಯಾರಿಕಾ ವಲಯದ ಉದ್ಯಮಗಳ ಮೇಲೆ ಉಂಟುಮಾಡಿದ ಪರಿಣಾಮದ ಒಂದು ಚಿತ್ರಣ ಇದು. 'ಹಿಂದಿನ ವರ್ಷದ ಲಾಕ್‌ಡೌನ್ ನಂತರ ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ಯಮ ವಲಯದ ಕೆಲವರಿಗೆ ಉದ್ಯಮವನ್ನು ಮತ್ತೆ ಕಟ್ಟಲು ಆಗಲಿಲ್ಲ. ಎಂಎಸ್‌ಎಂಇ ವಲಯದ ಅಂದಾಜು ಶೇಕಡ 30ರಷ್ಟು ಉದ್ಯಮಗಳು ಬಾಗಿಲು ಹಾಕಿದವು. ಈಗಿನ ಲಾಕ್‌ಡೌನ್ ಮೊದಲ ಬಾರಿಯ ಲಾಕ್‌ಡೌನ್‌ಗಿಂತ ಜಾಸ್ತಿ ಏಟು ಕೊಡುತ್ತದೆ' ಎಂದು ಉದ್ಯಮಿ ಜೆ. ಕ್ರಾಸ್ತ ಹೇಳುತ್ತಾರೆ.

ಈ ವರ್ಷದ ಲಾಕ್‌ಡೌನ್‌ನಿಂದಾಗಿ ತಯಾರಿಕಾ ವಲಯಕ್ಕೆ ಆಗಿರುವ ನಷ್ಟ ಎಷ್ಟೆಂಬುದನ್ನು ಅಂದಾಜಿಸುವುದೂ ಕಷ್ಟ ಎಂದು ಉದ್ಯಮಿ ಡಿ. ಮುರಳೀಧರ ಹೇಳುತ್ತಾರೆ. 'ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ತಯಾರಿಕಾ ವಲಯದ ಚಟುವಟಿಕೆಗಳು ಶೇಕಡ 25ರಿಂದ ಶೇ 30ರಷ್ಟು ತಗ್ಗಿವೆ. ರಾಷ್ಟ್ರಮಟ್ಟದಲ್ಲಿ ತಯಾರಿಕಾ ವಲಯದಲ್ಲಿ ಆಗಿರುವ ಇಳಿಕೆ ಗಮನಿಸಿ, ಅದರ ಆಧಾರದಲ್ಲಿ ರಾಜ್ಯದಲ್ಲಿ ಇಷ್ಟು ಕಡಿಮೆ ಆಗಿರಬಹುದು ಎಂದು ಅಂದಾಜಿಸಿದ್ದೇವೆ' ಎಂದು ಮುರಳೀಧರ ವಿವರಿಸಿದರು.

'ಹಿಂದಿನ ವರ್ಷ ಸಾಲದ ಕಂತುಗಳ ಮರುಪಾವತಿಗೆ ತುಸು ವಿನಾಯಿತಿ ನೀಡಿದ್ದರೂ, ನಂತರದಲ್ಲಿ ತಯಾರಿಕಾ ವಲಯದ ಹಲವು ಉದ್ಯಮಗಳ ಸಾಲದ ಖಾತೆಗಳು ಎನ್‌ಪಿಎ (ವಸೂಲಾಗದ ಸಾಲ) ಆಗಿವೆ' ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ವಿವರಿಸಿದರು. ಉದ್ಯಮಗಳ ಹಣಕಾಸಿನ ಸ್ಥಿತಿ ಸರಿಹೋಗಲು ಕನಿಷ್ಠ ಎರಡು ವರ್ಷ ಬೇಕು ಎಂಬುದು ಅವರ ಅಭಿಪ್ರಾಯ.

ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಅಧ್ಯಕ್ಷ ಕೆ.ಬಿ. ಅರಸಪ್ಪ ಅವರು ಲಾಕ್‌ಡೌನ್‌ನ ಪರಿಣಾಮಗಳ ಬಗ್ಗೆ ಕೆಲವು ವಿವರ ನೀಡಿದರು. 'ಲಾಕ್‌ಡೌನ್ ತೆರವಾದ ನಂತರ ಉದ್ಯಮದಲ್ಲಿ ತುಸು ಚೇತರಿಕೆ ಕಾಣಿಸುತ್ತಿತ್ತು. ಆದರೆ, ಮತ್ತೆ ಲಾಕ್‌ಡೌನ್ ಬಂದ ಕಾರಣ ಚಟುವಟಿಕೆಗಳು ನೆಲಕಚ್ಚಿವೆ. ಜೂನ್ 7ರ ನಂತರ ಚಟುವಟಿಕೆ ಆರಂಭಿಸಲು ಸರ್ಕಾರ ಅವಕಾಶ ನೀಡಿದರೂ, ಅಂದಾಜು ಶೇಕಡ 30ರಷ್ಟು ಕೈಗಾರಿಕೆಗಳ ಬಾಗಿಲು ತೆರೆಯುವುದಿಲ್ಲ' ಎಂದು ಹೇಳಿದರು.

'ದೊಡ್ಡ ಉದ್ದಿಮೆಗಳಿಗೆ ಸಣ್ಣ ಉದ್ದಿಮೆಗಳಿಂದ ಉತ್ಪನ್ನಗಳ ಪೂರೈಕೆ ಆಗುತ್ತದೆ. ನಮ್ಮಿಂದ ಸಿಗದಿದ್ದರೆ ಅವೇ ಉತ್ಪನ್ನಗಳನ್ನು ದೊಡ್ಡ ಉದ್ದಿಮೆಗಳು ಹೊರರಾಜ್ಯಗಳಿಂದ ತರಿಸಿಕೊಳ್ಳುತ್ತವೆ. ನಂತರ ಮತ್ತೆ ಅವರು ನಮ್ಮ ಬಳಿ ಎಂದಿಗೂ ಬರುವುದಿಲ್ಲ' ಎಂದು ಅರಸಪ್ಪ ಆತಂಕದಿಂದ ಹೇಳಿದರು.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

ಒಳನೋಟ
ಕೋವಿಡ್ ಎರಡನೇ ಅಲೆ ಹೊಡೆತ
ಪ್ರತಿಕ್ರಿಯಿಸಿ: 9606038256
feedback@prajavani.co.in

ಲಾಕ್‌ಡೌನ್: ಉದ್ಯಮ ಉಂಡ ಫಲ

7.64 ಲಕ್ಷ ಕರ್ನಾಟಕದಲ್ಲಿ ಇರುವ ಎಂಎಸ್‌ಎಂಇ ಉದ್ಯಮಗಳು

15% ಹಿಂದಿನ ವರ್ಷದ ಲಾಕ್‌ಡೌನ್ ನಂತರ ಮುಚ್ಚಿದ ಉದ್ಯಮಗಳ ಪ್ರಮಾಣ

15%–20% ಈ ಬಾರಿಯ ಲಾಕ್‌ಡೌನ್ ನಂತರ ಮುಚ್ಚುವ ಭೀತಿಯಲ್ಲಿರುವ ಉದ್ಯಮಗಳ ಪ್ರಮಾಣ

₹50 ಸಾವಿರ ಕೋಟಿ ರಾಜ್ಯದ ಉದ್ಯಮ ವಲಯ ಅನುಭವಿಸಿದ ನಷ್ಟ (ಮಾಹಿತಿ: ಎಫ್‌ಕೆಸಿಸಿಐ)

10-12 ಲಕ್ಷ ರಾಜ್ಯದಲ್ಲಿ ಆಗಿರುವ ಉದ್ಯೋಗ ನಷ್ಟ (ಕಾಸಿಯಾ ಅಂದಾಜು)

ಧಾರವಾಡದ ಬೇಲೂರು ಕೈಗಾರಿಕಾ ಪ್ರದೇಶದಲ್ಲಿ ಟಾಟಾ ಹಿಟಾಚಿ ಯಂತ್ರಗಳ ಘಟಕ

ನಮಗೂ ನಮ್ಮ ಕೆಲಸಗಾರರ ಆರೋಗ್ಯ ಮುಖ್ಯ. ಅವರಿಗೆ ನಾವೇ ಲಸಿಕೆ ಕೊಡಿಸಲು ಸಿದ್ಧರಿದ್ದೇವೆ. ಲಸಿಕೆ ಹಾಕಿಸಿಕೊಂಡವರಿಗೆ ಕೆಲಸ ಮಾಡಲು ಅವಕಾಶ ಕೊಡಬೇಕು
ಪೆರಿಕಲ್ ಎಂ. ಸುಂದರ್

ಲಾಕ್‌ಡೌನ್ ಅಂದರೆ ಉದ್ಯಮಗಳನ್ನು ಮುಚ್ಚುವುದು ಎಂಬಂತಾಗಬಾರದು. ಕೈಗಾರಿಕಾ ಪ್ರಾಂಗಣದಲ್ಲಿ ಅನ್ಯರಿಗೆ ಪ್ರವೇಶ ನಿಷೇಧ, ಲಸಿಕೆ ಹಾಕಿಸಿಕೊಂಡವರಿಗೆ ಕೆಲಸಕ್ಕೆ ಅವಕಾಶ... ಈ ರೀತಿ ಇರಬೇಕು
ಎನ್. ನಿತ್ಯಾನಂದ

ಕಾರ್ಮಿಕರ ಸಮಸ್ಯೆ

ಎರಡು ಬಾರಿ ಜಾರಿಯಾಗಿರುವ ಲಾಕ್‌ಡೌನ್‌ನಿಂದಾಗಿ ಉದ್ದಿಮೆಗಳು ಕಾರ್ಮಿಕರ ಸಮಸ್ಯೆಯನ್ನು ತೀವ್ರವಾಗಿ ಎದುರಿಸುತ್ತಿವೆ. 'ಊರಿಗೆ ಮರಳಿದ ಕಾರ್ಮಿಕರನ್ನು ಮತ್ತೆ ಕರೆತರುವುದು ಬಹಳ ಕಷ್ಟ. ವಾಪಸ್ ಬರುವಂತೆ ಕೋರಿ ಕೆಲವು ಕಾರ್ಮಿಕರ ಕುಟುಂಬಗಳಿಗೆ ವಿಮಾನ ಟಿಕೆಟ್ ಕಳುಹಿಸಿದ್ದರೂ ಅವರು ಬಂದಿಲ್ಲ. ನಗರ ತೊರೆದ ಕಾರ್ಮಿಕರ ಪೈಕಿ ಶೇಕಡ 15ರಿಂದ ಶೇ 20ರಷ್ಟು ಕಾರ್ಮಿಕರು ಮತ್ತೆ ಕೆಲಸಕ್ಕೆ ಬರುವುದಿಲ್ಲ' ಎಂದು ಮುರಳೀಧರ ಹೇಳಿದರು.

'ಹೊಸ ಕಾರ್ಮಿಕರನ್ನು ನೇಮಕ ಮಾಡಿಕೊಂಡರೂ, ಅವರಲ್ಲಿ ಕೌಶಲ ತುಂಬಲು ಒಂದೂವರೆ ವರ್ಷ ಬೇಕಾಗುತ್ತದೆ' ಎಂದು ಅರಸಪ್ಪ ಅಂದಾಜಿಸಿದ್ದಾರೆ.

ಸರ್ಕಾರದ ಎರಡನೇ ವರ್ಷಾಚರಣೆಗೆ ಘೋಷಣೆ

ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡ ಮಕ್ಕಳಿಗೆ ನೆರವು

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡು ಅನಾಥವಾಗಿರುವ ಮಕ್ಕಳಿಗೆ ಕೇಂದ್ರ ಸರ್ಕಾರ ಆರ್ಥಿಕ ಸಹಾಯ ಘೋಷಿಸಿದೆ. ತಮ್ಮ ಸರ್ಕಾರದ ಎರಡನೇ ವರ್ಷಾಚರಣೆಯ ನಿಮಿತ್ತ ಶನಿವಾರ ಸಭೆ ನಡೆಸಿದ ಪ್ರಧಾನಿ ನರೇಂದ್ರ ಮೋದಿ ಅವರು, 'ಪಿಎಂ ಕೇರ್ಸ್ ಫಾರ್ ಚಿಲ್ಡ್ರನ್' ಯೋಜನೆಯಡಿ ವಿವಿಧ ಸೌಲಭ್ಯಗಳನ್ನು ಘೋಷಿಸಿದ್ದಾರೆ.

ಇಂಥ ಮಕ್ಕಳ ಹೆಸರಿನಲ್ಲಿ ಸರ್ಕಾರ ನಿಶ್ಚಿತ ಠೇವಣಿ ಇಡಲಿದೆ. ಮಕ್ಕಳಿಗೆ 18 ವರ್ಷ ತುಂಬುವವರೆಗೆ ವಾರ್ಷಿಕ ₹5 ಲಕ್ಷದಷ್ಟು ಆರೋಗ್ಯ ವಿಮೆ, 18 ವರ್ಷ ತುಂಬಿದ ಬಳಿಕ ಪ್ರತಿ ತಿಂಗಳು ಆರ್ಥಿಕ ನೆರವು, 23 ವರ್ಷ ತುಂಬಿದಾಗ ₹ 10 ಲಕ್ಷ ಹಣಕಾಸಿನ ನೆರವು, ಉನ್ನತ ಶಿಕ್ಷಣಕ್ಕೆ ಸಾಲ ಸೌಲಭ್ಯ ನೀಡಲಾಗುವುದು ಎಂದು ಪ್ರಧಾನಿ ಕಾರ್ಯಾಲಯ ತಿಳಿಸಿದೆ.

- 10 ವರ್ಷದೊಳಗಿನ ಮಕ್ಕಳಿಗೆ ಸಮೀಪದ ಕೇಂದ್ರೀಯ ವಿದ್ಯಾಲಯದಲ್ಲಿ ಅಥವಾ ಖಾಸಗಿ ಶಾಲೆಯಲ್ಲಿ ದಾಖಲಾತಿ
- 11–18 ವರ್ಷದೊಳಗಿನ ಮಕ್ಕಳಿಗೆ ಕೇಂದ್ರ ಸರ್ಕಾರದ ವಸತಿಸಹಿತ ಸೈನಿಕ ಶಾಲೆ ಅಥವಾ ನವೋದಯ ವಿದ್ಯಾಲಯಗಳಲ್ಲಿ ಪ್ರವೇಶ
- ಮಗುವನ್ನು ಖಾಸಗಿ ಶಾಲೆಯಲ್ಲಿ ಸೇರಿಸಿದ್ದಲ್ಲಿ, ಶಿಕ್ಷಣ ಹಕ್ಕು ಕಾಯ್ದೆಯ ಮಾನದಂಡಗಳ ಪ್ರಕಾರ ನಿಗದಿತ ಶುಲ್ಕವನ್ನು ಪಿಎಂ-ಕೇರ್ಸ್ ನಿಧಿಯಿಂದ ನೀಡಲಾಗುವುದು.
- ಪದವಿಪೂರ್ವ ಮತ್ತು ವೃತ್ತಿಪರ ಕೋರ್ಸ್‌ಗಳಿಗೆ ಕೋರ್ಸ್ ಶುಲ್ಕಕ್ಕೆ ಸಮಾನವಾದ ವಿದ್ಯಾರ್ಥಿ ವೇತನ
- ಹಾಲಿ ವಿದ್ಯಾರ್ಥಿವೇತನ ಯೋಜನೆಗಳ ಅಡಿಯಲ್ಲಿ ಅರ್ಹತೆ ಪಡೆಯದ ಮಕ್ಕಳಿಗೆ, ಪಿಎಂ ಕೇರ್ಸ್ ವಿದ್ಯಾರ್ಥಿ ವೇತನ ನೀಡಲಿದೆ

ಮೇ 25ರವರೆಗಿನ ಮಾಹಿತಿ ಪ್ರಕಾರ, ದೇಶದಲ್ಲಿ 577 ಮಕ್ಕಳು ಕೋವಿಡ್‌ನಿಂದ ಪಾಲಕರನ್ನು ಕಳೆದುಕೊಂಡಿದ್ದಾರೆ.

'ಅನಾಥ ಮಕ್ಕಳಿಗೆ ತಿಂಗಳಿಗೆ ₹3,500'

ಬೆಂಗಳೂರು: ಕೋವಿಡ್‌ನಿಂದ ತಂದೆ, ತಾಯಿ ಮತ್ತು ಪೋಷಕರನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳ ಪಾಲನೆ, ಶಿಕ್ಷಣ ಮತ್ತು ಭವಿಷ್ಯದ ಜೀವನಕ್ಕೆ ಸರ್ಕಾರದ ನೆರವು ನೀಡಲು ಮುಂದಾಗಿರುವ ಮುಖ್ಯಮಂತ್ರಿ ಯಡಿಯೂರಪ್ಪ, 'ಮುಖ್ಯಮಂತ್ರಿ ಬಾಲಸೇವಾ ಯೋಜನೆ' ಘೋಷಿಸಿದ್ದಾರೆ.



ಪ್ರಮುಖ ಸಚಿವರ ಜತೆ ಶನಿವಾರ ರಾತ್ರಿ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಕೇಂದ್ರ ಸರ್ಕಾರದ ಸಲಹೆಯಂತೆ ಈ ಯೋಜನೆಯನ್ನು ಘೋಷಿಸಲಾಗಿದೆ. ತಂದೆ ಮತ್ತು ತಾಯಿ, ಏಕ ಪೋಷಕರು, ದತ್ತು ಪೋಷಕರು ಸೇರಿದಂತೆ ಕಾನೂನುಬದ್ಧ ಪೋಷಕರನ್ನು ಕೋವಿಡ್‌ನಿಂದ ಕಳೆದುಕೊಂಡು ಅನಾಥರಾದ ಮಕ್ಕಳಿಗೆ ಈ ಯೋಜನೆ ಅನ್ವಯವಾಗಲಿದೆ' ಎಂದರು.

ಯೋಜನೆಯ ಫಲಾನುಭವಿಗಳ ಸಂಖ್ಯೆ ಎಷ್ಟು, ಎಷ್ಟು ವೆಚ್ಚವಾಗಲಿದೆ, ಸೌಲಭ್ಯವನ್ನು ಹೇಗೆ ತಲುಪಿಸಲಾಗುವುದು ಎಂಬ ಬಗ್ಗೆ ಸದ್ಯದಲ್ಲೇ ವಿವರ ನೀಡಲಾಗುವುದು ಎಂದು ಅವರು ವಿವರಿಸಿದರು.

ಪ್ರಯೋಜನವೇನು?:
- ವಿಸ್ತೃತ ಕುಟುಂಬದ ಸದಸ್ಯರ ಆರೈಕೆಯಲ್ಲಿರುವ ಮಕ್ಕಳಿಗೆ ಪ್ರತಿ ತಿಂಗಳು ₹ 3,500 ಸಹಾಯಧನ
- ಹತ್ತು ವರ್ಷದೊಳಗಿನ ಮಕ್ಕಳ ಪಾಲನೆಗೆ ವಿಸ್ತೃತ ಕುಟುಂಬದ ಸದಸ್ಯರು ಇಲ್ಲದಿದ್ದಲ್ಲಿ ಅಂತಹ ಮಕ್ಕಳನ್ನು ನೋಂದಾಯಿತ ಮಕ್ಕಳ ಪಾಲನಾ ಕೇಂದ್ರಕ್ಕೆ ದಾಖಲಿಸಿ, ಆರೈಕೆ ಮಾಡುವುದು.
- ಅನಾಥ ಮಕ್ಕಳಿಗೆ ಕಸ್ತೂರ್ ಬಾ ಗಾಂಧಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಮತ್ತು ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಂತಹ ಮಾದರಿ ವಸತಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲಾಗುವುದು.
- ಎಸ್ಸೆಸ್ಸೆಲ್ಸಿ ಪೂರೈಸಿದ ಮಕ್ಕಳಿಗೆ ಉನ್ನತ ಶಿಕ್ಷಣ ಮತ್ತು ಕೌಶಲ ಅಭಿವೃದ್ಧಿಗಾಗಿ ಲ್ಯಾಪ್‌ಟಾಪ್ ಅಥವಾ ಟ್ಯಾಬ್ ವಿತರಣೆ.
- 21 ವರ್ಷ ತುಂಬಿದ ಹೆಣ್ಣು ಮಕ್ಕಳಿಗೆ ಮದುವೆ, ಉನ್ನತ ಶಿಕ್ಷಣ, ಸ್ವಯಂ ಉದ್ಯೋಗ ಮತ್ತಿತರ ಉದ್ದೇಶಗಳಿಗಾಗಿ ತಲಾ ₹ 1 ಲಕ್ಷ ಸಹಾಯಧನ ವಿತರಣೆ.
- ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ಒಬ್ಬ ಮಾರ್ಗದರ್ಶಿ ಅಥವಾ ಹಿತೈಷಿಯನ್ನು ನೇಮಿಸಿ ಮಗುವಿನ ಸರ್ವತೋಮುಖ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.

ಇನ್ನೊಂದು ಸುದ್ದಿ 7

ಒಳ ಪುಟಗಳು

ಧಾರಾಕಾರ ಮಳೆ: ರಸ್ತೆಗಳು ಜಲಾವೃತ 4
ಬಹುರಾಷ್ಟ್ರೀಯ ಕಂಪನಿ ತೊರೆದು ಸೇನೆ ಸೇರಿದ ಹುತಾತ್ಮ ಯೋಧನ ಪತ್ನಿ 7

ರಾಜ್ಯ ಕೋವಿಡ್ ಅಂಕಿ–ಅಂಶ

25,67,449▲ ಒಟ್ಟು ಸೋಂಕಿತರು (24,24,904 ನಿನ್ನೆಯ ವಿವರ)
3,50,066▼ ಸಕ್ರಿಯ ಪ್ರಕರಣಗಳು
21,89,064▲ ಗುಣಮುಖರಾದವರು
28,298▲ ಒಟ್ಟು ಸಾವು

ದಿನದ ಏರಿಕೆ		
ಹೊಸ ಪ್ರಕರಣ	20,628	▼
ಗುಣಮುಖ	42,444	▼
ಸಾವು	492	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಅರಣ್ಯ ಸಚಿವರಿಗೆ ವರದಿ ಸಲ್ಲಿಸಿದ ಜೀವ ವೈವಿಧ್ಯ ಮಂಡಳಿ

ಲಾಕ್‌ಡೌನ್: ಅರಣ್ಯ ನಾಶ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಮಲೆನಾಡಿನಲ್ಲಿ ಅರಣ್ಯ ನಾಶದ ಪ್ರಮಾಣದಲ್ಲಿ ಭಾರಿ ಹೆಚ್ಚಳವಾಗಿದೆ ಎಂದು ಅರಣ್ಯ ಸಚಿವರಿಗೆ ವರದಿ ಸಲ್ಲಿಸಿರುವ ರಾಜ್ಯ ಜೀವವೈವಿಧ್ಯ ಮಂಡಳಿ, ಈ ಕುರಿತು ತನಿಖೆ ನಡೆಸಿ ಕ್ರಮ ಜರುಗಿಸುವಂತೆ ಶಿಫಾರಸು ಮಾಡಿದೆ.

ಲಾಕ್‌ಡೌನ್ ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆದಿರುವ ಅರಣ್ಯ ನಾಶ ಮತ್ತು ಹಸಿ ಮರಗಳ ಕಡಿತಲೆ ಪ್ರಕರಣಗಳ ಕುರಿತು ಮಾಹಿತಿ ಸಂಗ್ರಹಿಸಿರುವ ಜೀವವೈವಿಧ್ಯ ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ಪ್ರಾಥಮಿಕ ಸಮೀಕ್ಷಾ ವರದಿಯನ್ನು ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರಿಗೆ ಸಲ್ಲಿಸಿದ್ದಾರೆ.

'ಸರ್ಕಾರದ ಬಹುತೇಕ ಎಲ್ಲ ಇಲಾಖೆಗಳ ಅಧಿಕಾರಿಗಳು, ಸಿಬ್ಬಂದಿ ಕೋವಿಡ್ ನಿಯಂತ್ರಣ ಕೆಲಸದಲ್ಲಿ ಮಗ್ನರಾಗಿದ್ದಾರೆ. ಕೆಲವು ಸಮಾಜ ವಿರೋಧಿ ವ್ಯಕ್ತಿಗಳು ಹಾಗೂ ಲಾಕ್‌ಡೌನ್ ಅವಧಿಯಲ್ಲಿ ನಗರಗಳಿಂದ ಹಳ್ಳಿಗಳಿಗೆ ಬಂದಿರುವವರು ಸೇರಿದಂತೆ ಕೆಲವರು ಅರಣ್ಯ ನಾಶದಲ್ಲಿ ತೊಡಗಿದ್ದಾರೆ. ಈ ಕೃತ್ಯಕ್ಕಾಗಿ ಜೆಸಿಬಿ, ವಿದ್ಯುತ್ ಚಾಲಿತ ಯಂತ್ರಗಳನ್ನು ಬಳಸುತ್ತಿದ್ದಾರೆ. ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅರಣ್ಯ ನಾಶ ನಡೆದಿರುವ ಕುರಿತು ಮಂಡಳಿಗೆ ದೂರುಗಳು ಬಂದಿವೆ' ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಮಲೆನಾಡಿನ ಅರಣ್ಯ ನಾಶ ಪರಿಶೀಲಿಸುತ್ತಿರುವ ಅಧಿಕಾರಿಗಳು

ಕ್ರಮಕ್ಕೆ ಒತ್ತಾಯ

'ಉಲ್ಲೇಖಿಸಿದ ಪ್ರಕರಣಗಳೂ ಸೇರಿದಂತೆ ಲಾಕ್‌ಡೌನ್ ಅವಧಿಯಲ್ಲಿ ನೂರಾರು ಸ್ಥಳಗಳಲ್ಲಿ ಅರಣ್ಯ ನಾಶ ನಡೆದಿರುವ ದೂರುಗಳು ಬರುತ್ತಿವೆ. ಇಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ, ವನ್ಯಜೀವಿ ಕಾಯ್ದೆ ಮತ್ತು ಜೀವವೈವಿಧ್ಯ ಸಂರಕ್ಷಣಾ ಕಾಯ್ದೆಗಳ ಉಲ್ಲಂಘನೆ ನಡೆದಿದೆ. ತಕ್ಷಣವೇ ಅರಣ್ಯ ಜಾಗೃತ ದಳದ ಮೂಲಕ ಸ್ಥಳ ಸಮೀಕ್ಷೆ ನಡೆಸಿ, ಹಾನಿಯ ಮೊತ್ತ ಅಂದಾಜು ಮಾಡಿ, ದುಷ್ಕರ್ಮಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು' ಎಂದು ಮಂಡಳಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ವರದಿಯಲ್ಲಿ ಒತ್ತಾಯಿಸಿದ್ದಾರೆ.

5ನೇ ಪುಟ ನೋಡಿ

ಲಸಿಕೆಗೆ ಜಾಗತಿಕ ಟೆಂಡರ್: ಎರಡೂ ಬಿಡ್ ತಿರಸ್ಕೃತ

ಬೆಂಗಳೂರು: 'ಎರಡು ಕೋಟಿ ಡೋಸ್ ಕೋವಿಡ್ ಲಸಿಕೆ ಖರೀದಿಗೆ ರಾಜ್ಯ ಸರ್ಕಾರ ಆಹ್ವಾನಿಸಿದ್ದ ಮುಕ್ತ ಅಂತರ-ರಾಷ್ಟ್ರೀಯ ಟೆಂಡರ್‌ನಲ್ಲಿ ಭಾಗವಹಿಸಿದ್ದ ಎರಡೂ ಕಂಪನಿಗಳ ಪ್ರಸ್ತಾವವನ್ನು ತಿರಸ್ಕರಿಸಲಾಗಿದೆ' ಎಂದು ರಾಜ್ಯ ಕೋವಿಡ್ ಪಡೆಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಸ್ಪುಟ್ನಿಕ್ ಲಸಿಕೆ ಪೂರೈಸಲು ಮುಂಬೈ ಮತ್ತು ದೆಹಲಿಯ ಕಂಪನಿಗಳು ಬಿಡ್ ಸಲ್ಲಿಸಿದ್ದವು. ಆದರೆ, ಈ ಕಂಪನಿಗಳು ನಮೂದಿಸಿದ್ದ ದರ ಸೇರಿದಂತೆ ಇತರ ಅಂಶಗಳು ಕಾರ್ಯಸಾಧು ಅಲ್ಲ. ಹೀಗಾಗಿ, ಟೆಂಡರ್ ಅವಧಿಯನ್ನು ಮತ್ತೆ ವಿಸ್ತರಿಸಲು ನಿರ್ಧರಿಸಲಾಗಿದೆ' ಎಂದರು.

'ಟೆಂಡರ್‌ನಲ್ಲಿ ಕೇವಲ ಎರಡು ಕಂಪನಿಗಳು ಭಾಗವಹಿಸಿವೆ. ಆದರೆ, ಈ ಕಂಪನಿಗಳು ಲಸಿಕೆ ತಯಾರಕರಲ್ಲ. ಲಸಿಕೆ ಸರಬರಾಜು ಮಾಡುವ ವಿತರಕರು' ಎಂದು ಸ್ಪಷ್ಟಪಡಿಸಿದರು.

ಸೋಂಕು ಇಳಿಮುಖ: 'ಕೊರೊನಾ ಸೋಂಕಿತರ ಸಂಖ್ಯೆಯಲ್ಲಿ ಇಳಿಮುಖ ಆಗುತ್ತಿದೆ. ಸೋಂಕು ದೃಢಪಡುವ ಪ್ರಮಾಣವೂ ಕಡಿಮೆಯಾಗುತ್ತಿದೆ. ಆರ್‌ಟಿಪಿಸಿಆರ್ ಪರೀಕ್ಷೆ ಮತ್ತು ಆರ್‌ಎಟಿ ಹೆಚ್ಚಿಸಲು ಸೂಚಿಸಲಾಗಿದೆ' ಎಂದರು.

ಬಿಜೆಪಿಯ ರವಿ ಸುಬ್ರಹ್ಮಣ್ಯ ವಿರುದ್ಧ ಆರೋಪ

ಶಾಸಕರಿಗೆ 'ಲಸಿಕೆ' ಕಮಿಷನ್: ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಚಿತವಾಗಿ ನೀಡಬೇಕಾದ ಕೋವಿಡ್ ಲಸಿಕೆಯನ್ನು ಖಾಸಗಿ ಆಸ್ಪತ್ರೆಯಲ್ಲಿ ಜನರಿಗೆ ಮಾರಾಟ ಮಾಡಲಾಗುತ್ತಿದೆ. ಬಸವನಗುಡಿ ಕ್ಷೇತ್ರದ ಬಿಜೆಪಿ ಶಾಸಕ ರವಿ ಸುಬ್ರಹ್ಮಣ್ಯ ಹಣ ಪಡೆಯುತ್ತಿದ್ದಾರೆ' ಎಂದು ಆರೋಪಿಸಿ ಸಾಮಾಜಿಕ ಕಾರ್ಯಕರ್ತ ಎಚ್.ಎಂ.ವೆಂಕಟೇಶ್ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಶನಿವಾರ ದೂರು ನೀಡಿದ್ದಾರೆ.

'ಲಸಿಕೆ' ಪಡೆಯುವ ಬಗ್ಗೆ ವಿಚಾರಿಸಲು ಹೊಸಕೆರೆಹಳ್ಳಿಯ ಎ.ವಿ. ಮಲ್ಟಿ-ಸ್ಪೆಷಾಲಿಟಿ ಆಸ್ಪತ್ರೆಗೆ ಕರೆ ಮಾಡಿರುವ ವೆಂಕಟೇಶ್, ಅಲ್ಲಿನ ಸಿಬ್ಬಂದಿ ಜೊತೆ ಮಾತನಾಡಿದ ಆಡಿಯೊ ತುಣುಕನ್ನೂ ದೂರಿನ ಜೊತೆ ಒದಗಿಸಿದ್ದಾರೆ. ಮಾತುಕತೆ ನಡುವೆ ರವಿ ಸುಬ್ರಹ್ಮಣ್ಯ ಹೆಸರು ಪ್ರಸ್ತಾಪವಾಗಿದೆ. ಈ ಆಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲೂ ಹರಿದಾಡುತ್ತಿದೆ.

ಆಡಿಯೊ ವಿವರ: 'ನನಗೆ ಮತ್ತು ಮಗನಿಗೆ ಲಸಿಕೆ ಬೇಕಿತ್ತು' ಎಂದು ವೆಂಕಟೇಶ್, ನಗರದ ಎ.ವಿ. (ಅನುಗ್ರಹ ವಿಠ್ಠಲ್) ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಿಬ್ಬಂದಿಯನ್ನು ಕೇಳಿದ್ದಾರೆ. ಸಿಬ್ಬಂದಿ, 'ನೋಂದಣಿ ಮಾಡಿಕೊಳ್ಳಿ. ಸಂದೇಶ ಬಂದರೆ ಬನ್ನಿ. ಶಾಸಕ ರವಿ ಸುಬ್ರಹ್ಮಣ್ಯ ಕಚೇರಿ ಅಥವಾ ವಾಸವಿ ಆಸ್ಪತ್ರೆಯಿಂದ ಅನುಮತಿ ಕೊಡುತ್ತಾರೆ. ಅದನ್ನು ತೆಗೆದುಕೊಂಡು ಬನ್ನಿ. ಲಸಿಕೆಗೆ ₹ 900 ಶುಲ್ಕವಿದೆ. ಆ ದುಡ್ಡು ನಮಗೆ ಬರುವುದಿಲ್ಲ. ಅದು ರವಿ ಸುಬ್ರಹ್ಮಣ್ಯ ಕಚೇರಿಗೆ ಹೋಗುತ್ತದೆ. ನಮಗೆ ಇನ್ನು ಲಸಿಕೆ ಬಂದಿಲ್ಲ. ಅವರ ಕಡೆಯವರೇ ಆಸ್ಪತ್ರೆಗೆ ಬಂದು ಲಸಿಕೆ ಹಾಕಿ ಹೋಗುತ್ತಿದ್ದಾರೆ. ಅವರೇ ಮಾರ್ಕೆಟ್ ಸಹ ಮಾಡುತ್ತಿದ್ದಾರೆ. ನಮ್ಮ ಆಸ್ಪತ್ರೆ ಸಿಬ್ಬಂದಿ ಸಹ ಹಣ ಕೊಟ್ಟು ಲಸಿಕೆ ಹಾಕಿಸಿಕೊಂಡಿದ್ದೇವೆ' ಎಂದಿರುವುದು ಆಡಿಯೊದಲ್ಲಿದೆ.

'ಸರ್ಕಾರದ ಆಸ್ಪತ್ರೆಗಳಲ್ಲಿ ಕೋವಿಡ್ ಲಸಿಕೆ ಕೊರತೆ ಇದೆ. ನಿಮಗೆ ಹೇಗೆ ಲಸಿಕೆ ಸಿಕ್ಕಿತು. ಬಿಬಿಎಂಪಿಯವರು ಉಚಿತವಾಗಿ ಲಸಿಕೆ ಕೊಡುತ್ತಿದ್ದಾರಲ್ಲ. ಜೊತೆಗೆ, ಸರ್ಕಾರ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚು ಹಣ ಏಕೆ ಪಡೆಯುತ್ತಿದ್ದೀರಾ. ನಾವು ಬಡವರು. ನಿಗದಿತ ದರ ಪಡೆಯಿರಿ' ಎಂದು ಸಾಮಾಜಿಕ ಕಾರ್ಯಕರ್ತ ಕೋರಿದ್ದರು. ಅದಕ್ಕೆ ಸಿಬ್ಬಂದಿ, 'ಆಗುವುದಿಲ್ಲ ಸರ್. ಬಿಬಿಎಂಪಿಯವರಿಂದಲೇ ಇಲ್ಲಿ ಲಸಿಕೆ ಹಾಕಲಾಗುತ್ತಿದೆ. ಶಾಸಕರ ಅನುಮತಿ ತೆಗೆದುಕೊಂಡು ಬನ್ನಿ' ಎಂದು ಕರೆ ಕಡಿತಗೊಳಿಸಿದ್ದಾರೆ.

ಡಿಸಿಪಿಗೂ ದೂರು: 'ಖಾಸಗಿ ಆಸ್ಪತ್ರೆ ಕೋವಿಡ್ ಲಸಿಕೆ ಅಭಿಯಾನದ ಜಾಹೀರಾತು ನೀಡುತ್ತಿದ್ದ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಕೋವಿಡ್ ಲಸಿಕೆ ಮಾರುತ್ತಿದ್ದಾರೆ ಎನ್ನಲಾದ ಸಂಸದ ತೇಜಸ್ವಿ ಸೂರ್ಯ ಹಾಗೂ ಶಾಸಕ ರವಿ ಸುಬ್ರಹ್ಮಣ್ಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ಆರೋಪಿಸಿ ಕಾಂಗ್ರೆಸ್ ಕಾರ್ಯಕರ್ತರು, ದಕ್ಷಿಣ ವಿಭಾಗದ ಡಿಸಿಪಿ ಹರೀಶ್ ಪಾಂಡೆ ಅವರಿಗೆ ದೂರು ನೀಡಿದ್ದಾರೆ.

ರಾಜಕೀಯ ಷಡ್ಯಂತ್ರ: ರವಿ ಸುಬ್ರಹ್ಮಣ್ಯ

'ಇದು ರಾಜಕೀಯ ಷಡ್ಯಂತ್ರ. ಕೆಲವರಿಗೆ ಕೆಲಸ ಮಾಡುವ ಯೋಗ್ಯತೆ ಹಾಗೂ ಅರ್ಹತೆ ಇರುವುದಿಲ್ಲ. ಅಂಥವರು ಇಂಥ ಕಡ್ಡಿ ಅಲ್ಲಾಡಿಸುವ ಕೆಲಸ ಮಾಡುತ್ತಾರೆ. ಅವರಿಗೆ ನಾನು ಉತ್ತರ ಕೊಡಬೇಕಾಗಿಲ್ಲ' ಎಂದು ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಪ್ರತಿಕ್ರಿಯಿಸಿದ್ದಾರೆ. ಆಡಿಯೊ ಹೊರಬೀಳುತ್ತಿದ್ದಂತೆ ಹೊಸಕೆರೆಹಳ್ಳಿಯಲ್ಲಿರುವ ಎ.ವಿ. ಮಲ್ಟಿ ಸ್ಪೆಷಲಿಟಿ ಆಸ್ಪತ್ರೆಗೆ ಭೇಟಿ ನೀಡಿದ ರವಿ ಸುಬ್ರಹ್ಮಣ್ಯ, 'ಆಡಿಯೊದಲ್ಲಿ ಮಾತನಾಡಿದ್ದು ಯಾರು? ನೀವು ನನಗೆ ಹಣ ಕೊಟ್ಟಿದ್ದೀರಾ? ಈ ರೀತಿ ಮಾತನಾಡಿ ನನ್ನ ಗೌರವಕ್ಕೆ ಧಕ್ಕೆ ತರುತ್ತಿರಾ' ಎಂದು ಆಡಳಿತ ಮಂಡಳಿಯನ್ನು ತರಾಟೆಗೆ ತೆಗೆದುಕೊಂಡರು. ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ತಮ್ಮ ವಿರುದ್ಧ ಪಿತೂರಿ ನಡೆಯುತ್ತಿದೆ' ಎಂದರು.

3A ಪುಟ ನೋಡಿ

ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆ: ಸಣ್ಣಪುಟ್ಟ ಆರೋಗ್ಯ ಸಮಸ್ಯೆಗೂ ಹತ್ತಾರು ಕಿ.ಮೀ ಪ್ರಯಾಣ

ಉತ್ತರ ಕನ್ನಡ: ಕುಗ್ರಾಮಕ್ಕೆ ತಲುಪದ ಆರೋಗ್ಯ ಭಾಗ್ಯ

• ಸದಾಶಿವ ಎಂ.ಎಸ್/ ಗಣಪತಿ ಹೆಗಡೆ

ಕಾರವಾರ/ ಶಿರಸಿ: ವೈದ್ಯರಿದ್ದ ಕಡೆ ಶುಶ್ರೂಷಕರ ಕೊರತೆ, ಶುಶ್ರೂಷಕರಿದ್ದ ಕಡೆ ವೈದ್ಯರಿಲ್ಲ. ಇಬ್ಬರೂ ಇದ್ದ ಕಡೆ ಡಿ–ಗ್ರೂಪ್ ಸಿಬ್ಬಂದಿಯನ್ನು ಹುಡುಕಬೇಕು. ಇದು ಉತ್ತರ ಕನ್ನಡ ಜಿಲ್ಲೆಯ ಗ್ರಾಮೀಣ ಆರೋಗ್ಯ ಕ್ಷೇತ್ರದಲ್ಲಿರುವ ಸಾಮಾನ್ಯ ಸಮಸ್ಯೆ.

ಕರಾವಳಿ ಮತ್ತು ಮಲೆನಾಡಿನ ಬಹುತೇಕ ಎಲ್ಲ ಕಡೆಯೂ ಕಟ್ಟಡಗಳು ಸುಂದರ ಮತ್ತು ಸುಸಜ್ಜಿತವಾಗಿವೆ. ಅಲ್ಲಿ ಸಿಗುವ ಆರೋಗ್ಯ ಸೇವೆಯ ಬಗ್ಗೆ ಸ್ಥಳೀಯರಿಗೂ ಸಂತೃಪ್ತಿಯಿದೆ. ಆದರೆ, ಸಿಬ್ಬಂದಿ ಕೊರತೆ, ಕಾರ್ಯ ನಿರ್ವಹಿಸುತ್ತಿರುವವರ ಉತ್ಸಾಹಕ್ಕೆ ಅಡ್ಡಿಯಾಗಿದೆ.

ಉತ್ತರ ಕನ್ನಡವು ಬಹುಪಾಲು ಗುಡ್ಡಗಾಡು ಪ್ರದೇಶಗಳಿಂದ ಕೂಡಿದ ಜಿಲ್ಲೆ. ಇಲ್ಲಿ ಕಾಡಿನ ನಡುವೆ ಒಂಟಿ ಮನೆಗಳು ಇರುವ ಅವೆಷ್ಟೋ ಹಳ್ಳಿಗಳಿವೆ. ಅಲ್ಲಿ ಮೊಬೈಲ್ ನೆಟ್‌ವರ್ಕ್ ಕೂಡ ಸರಿಯಾಗಿ ಸಿಗುವುದಿಲ್ಲ. ಅಂಥ ಪ್ರದೇಶಗಳಲ್ಲಿ ಆರೋಗ್ಯ ಸೇವೆ ತಲುಪಿಸಲು ಪರದಾಡಬೇಕಾಗುತ್ತದೆ. ಅದರಲ್ಲೂ ಕೋವಿಡ್‌ನ ಎರಡನೇ ಅಲೆಗೆ ಜಿಲ್ಲೆ ತತ್ತರಿಸಿರುವ ಈ ಸಂದರ್ಭದಲ್ಲಂತೂ ಬಹಳ ಕಷ್ಟ ಎನ್ನುತ್ತಾರೆ ಆರೋಗ್ಯ ಕಾರ್ಯಕರ್ತರು.

ಹೊನ್ನಾವರ ತಾಲ್ಲೂಕಿನ ಗೇರುಸೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾತಿಗೆ ಸಿಕ್ಕಿದವರು ನಗರಬಸ್ತಿಕೇರಿಯ ಹಾಡಗೇರಿ ಗ್ರಾಮದ ಮಹಾದೇವಿ ನಾಯ್ಕ. ಅವರ ಮನೆ ಆರೋಗ್ಯ ಕೇಂದ್ರದಿಂದ 18 ಕಿಲೋಮೀಟರ್ ದೂರದಲ್ಲಿದೆ. ಅಂಗವಿಕಲರಿಗೆ ಶುಕ್ರವಾರ ಕೋವಿಡ್ ಲಸಿಕೆ ಅಭಿಯಾನ ಇದ್ದ ಕಾರಣ ಬುದ್ಧಿಮಾಂದ್ಯ ಮಗಳನ್ನು ಕರೆದುಕೊಂಡು ಬಂದಿದ್ದರು.

'ನಮ್ಮ ಊರಿನಿಂದ ಗೇರುಸೊಪ್ಪಕ್ಕೆ ವಾಹನಗಳ ವ್ಯವಸ್ಥೆಯಿಲ್ಲ. ಪ್ರತಿ ಬಾರಿ ಆರೋಗ್ಯ ಕೇಂದ್ರಕ್ಕೆ ಬರಬೇಕಿದ್ದರೂ ಆಟೊರಿಕ್ಷಾಕ್ಕೆ ₹ 600 ತೆಗೆದುಕೊಳ್ತಾರೆ. ಊರಲ್ಲಿ ಸುಮಾರು 300 ಮನೆಗಳಿವೆ. ದಾರಿಯಲ್ಲಿ ಸಣ್ಣ ಹಣ್ಣಗಳಿವೆ. ಸೂಕ್ತ ದಾರಿಯೂ ಇಲ್ಲ. ವಾಹನಗಳು ಸಿಗದಿದ್ದರೆ ಕೋಲಿಗೆ ಕಂಬಳಿ ಕಟ್ಟಿಕೊಂಡು ಹೊತ್ತುಕೊಂಡು ಬರೋದು' ಎಂದು ಅತ್ಯಂತ ಸಹಜವೆಂಬಂತೆ ಹೇಳಿದರು. ಈ ಪರಿಸ್ಥಿತಿ ಹೊನ್ನಾವರ, ಸಿದ್ದಾಪುರ, ಅಂಕೋಲಾ, ಜೊಯಿಡಾ ತಾಲ್ಲೂಕುಗಳ ಹಲವು ಕುಗ್ರಾಮಗಳಲ್ಲಿದೆ.

ಜೊಯಿಡಾ ತಾಲ್ಲೂಕಿನ ಹತ್ತಾರು ಕುಗ್ರಾಮಗಳಿಗೂ ಈ ಬಾರಿ ಕೋವಿಡ್ ವ್ಯಾಪಿಸಿದೆ. ಸೋಂಕಿನ ಲಕ್ಷಣ ಇರುವವರು ಕೋವಿಡ್ ತಪಾಸಣೆಗೆ ಬನ್ನಿ ಎಂದು ತಾಲ್ಲೂಕು ಆಸ್ಪತ್ರೆಯ ಅಧಿಕಾರಿಗಳು, ಸಿಬ್ಬಂದಿ ಕರೆದರೂ ಬರಲು ಹಿಂದೇಟು ಹಾಕುತ್ತಿದ್ದಾರೆ. ಅಲ್ಲಿ ರಸ್ತೆಗಳೂ ಸಮರ್ಪಕವಾಗಿ ಇಲ್ಲದ ಕಾರಣ ಸೋಂಕಿತರನ್ನು ಪತ್ತೆ ಹಚ್ಚುವುದೇ ಕಷ್ಟವಾಗುತ್ತಿದೆ ಎನ್ನುತ್ತಾರೆ ಅಧಿಕಾರಿಗಳು.

ಗ್ರಾಮಾರೋಗ್ಯ
ಆಗಲಿ ಇನ್ನಷ್ಟು ಯೋಗ್ಯ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಶಿರಸಿ ತಾಲ್ಲೂಕಿನ ಜಡ್ಡಿಗದ್ದೆ (ಮೆಣಸಿ) ಗ್ರಾಮದಲ್ಲಿ ಮಹಿಳೆಯೊಬ್ಬರ ಗಂಟಲುದ್ರವದ ಮಾದರಿಯನ್ನು ಆರೋಗ್ಯ ಕೇಂದ್ರದ ಸಿಬ್ಬಂದಿ ಸಂಗ್ರಹಿಸಿದರು
– ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಮಳೆಗಾಲದಲ್ಲಂತೂ ಆರೋಗ್ಯ ಕಾಪಾಡಿಕೊಳ್ಳುವುದೇ ಸವಾಲಾಗಿದೆ. ಸಂಚಾರಿ ಆರೋಗ್ಯ ಘಟಕಗಳು ಕುಗ್ರಾಮಗಳಿಗೆ ತಲುಪಿದರೆ ಅನುಕೂಲವಾಗುತ್ತದೆ
ಮಹಾದೇವಿ ನಾಯ್ಕ
ಗ್ರಾಮಸ್ಥೆ, ಹಾಡಗೇರಿ, ಹೊನ್ನಾವರ ತಾಲ್ಲೂಕು

ಜನ ಸೋಂಕಿನ ಲಕ್ಷಣವಿದ್ದರೂ ಆಸ್ಪತ್ರೆಗೆ ಬರುತ್ತಿರಲಿಲ್ಲ. ಆರಂಭದಲ್ಲಿ ಹಲವು ಗಂಭೀರ ಸ್ಥಿತಿಯಲ್ಲಿ ಬಂದಿದ್ದರು. ನಂತರ ದಿನಗಳಲ್ಲಿ ಪ್ರಮಾಣ ಕಡಿಮೆಯಾಯಿತು
ಡಾ.ಅರುಣ ಹಾದಿಮನಿ, ಸಮುದಾಯ ಆರೋಗ್ಯ ಅಧಿಕಾರಿ, ಮುಂಡಗೋಡ ತಾಲ್ಲೂಕು, ಇಂದೂರ ಪಿ.ಎಚ್.ಸಿ

5ನೇ ಪುಟ ನೋಡಿ
ವಿಶೇಷ ಪುಟ 5

'ಲಾಕ್‌ಡೌನ್: ಜನರ ಸಹಕಾರ ಆಧರಿಸಿ ನಿರ್ಧಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೂನ್ 7ರವರೆಗಿನ ಕೋವಿಡ್ ಸ್ಥಿತಿಗತಿ ಅವಲೋಕಿಸಿ ಲಾಕ್‌ಡೌನ್ ವಿಸ್ತರಿಸುವ ಬಗ್ಗೆ ತೀರ್ಮಾನಿಸಲಾಗುವುದು. ಜನರು ಸಹಕರಿಸಿದರೆ ಲಾಕ್‌ಡೌನ್ ಮುಂದುವರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಕೋವಿಡ್ ಪ್ರಕರಣಗಳು ಹೆಚ್ಚಿರುವ ಮೈಸೂರು, ಹಾಸನ, ಬೆಳಗಾವಿ, ಕಲಬುರ್ಗಿ ಮತ್ತು ವಿಜಯಪುರ ಜಿಲ್ಲೆಗಳ ಜನಪ್ರತಿನಿಧಿಗಳ ಜತೆ ಶನಿವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು ಈ ವಿಷಯ ತಿಳಿಸಿದರು.

ಇದಕ್ಕೆ ಮುನ್ನ ಸಭೆಯಲ್ಲಿ ಮಾತನಾಡಿದ ಯಡಿಯೂರಪ್ಪ, 'ಕೋವಿಡ್ ದೃಢ ಪ್ರಮಾಣ ಶೇ 10ಕ್ಕಿಂತ ಕಡಿಮೆ ಮಾಡಲು ಎಲ್ಲ ಕ್ರಮಗಳನ್ನು ತೆಗೆದುಕೊಳ್ಳಬೇಕು. ಸಾವಿನ ಪ್ರಮಾಣ ರಾಜ್ಯದಲ್ಲಿ ಶೇ 1.7ರಷ್ಟಿದ್ದು, ಅದನ್ನೂ ಕಡಿಮೆ ಮಾಡಬೇಕು' ಎಂದು ಸೂಚಿಸಿದರು.

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ

ಜಕ್ಕೂರು ಏರೋಡ್ರೋಮ್‌ನಲ್ಲಿ ಪ್ರಾಯೋಗಿಕ ಪ್ರಾತ್ಯಕ್ಷಿಕೆ

ಸೋಂಕು ನಿವಾರಕ ಸಿಂಪಡಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಕೋವಿಡ್ ನಿಯಂತ್ರಣ ಉದ್ದೇಶದಿಂದ ಸೋಂಕು ನಿವಾರಕವನ್ನು ವಿಮಾನದ ಮೂಲಕ ಸಿಂಪಡಿಸಲು ಮುಂದೆ ಬಂದಿರುವ ಏರಿಯಲ್ ವರ್ಕ್ಸ್ ಏರೊ ಎಲ್‌ಪಿಪಿ ಸಂಸ್ಥೆಯು ಪ್ರಾಯೋಗಿಕ ಕಾರ್ಯಾಚರಣೆ ಆರಂಭಿಸಿದೆ. ಜಕ್ಕೂರು ಏರೋಡ್ರೋಮ್‌ನಲ್ಲಿ ಕಂದಾಯ ಸಚಿವ ಆರ್.ಅಶೋಕ ಈ ಕಾರ್ಯಕ್ಕೆ ಶನಿವಾರ ಚಾಲನೆ ನೀಡಿದರು.

‘ಇದೇ ಮೊದಲ ಬಾರಿಗೆ ಸಾವಯವ ಸೋಂಕು ನಿವಾರಕ ದ್ರಾವಣ ಸಿಂಪಡಿಸುವ ಕಾರ್ಯ ಆರಂಭಿಸಲಾಗಿದೆ. ಮೊದಲ ಹಂತದಲ್ಲಿ ಕೆ.ಆರ್.ಮಾರುಕಟ್ಟೆ, ಶಿವಾಜಿನಗರ, ಕಲಾಸಿಪಾಳ್ಯ ಮೊದಲಾದ ಜನದಟ್ಟಣೆಯ ಪ್ರದೇಶಗಳಲ್ಲಿ ಮೂರು ದಿನ ಸಿಂಪಡಣೆ ಮಾಡಲು ಸಂಸ್ಥೆ ಸಿದ್ಧತೆ ಮಾಡಿಕೊಂಡಿದೆ’ ಎಂದು ಅಶೋಕ ತಿಳಿಸಿದರು.

ಸೋಂಕು ನಿವಾರಕ ವೈಮಾನಿಕ ಸಿಂಪಡಣೆಗೆ ಕಂದಾಯ ಸಚಿವ ಆರ್.ಅಶೋಕ ಚಾಲನೆ ನೀಡಿದರು. ಶಾಸಕರಾದ ಕೃಷ್ಣ ಬೈರೇಗೌಡ, ಎಸ್‌.ಆರ್‌.ವಿಶ್ವನಾಥ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ಗೌರವ ಗುಪ್ತ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ ಇದ್ದರು.

‘ಇದು ಸಫಲವಾದರೆ ಮುಂದಿನ ದಿನಗಳಲ್ಲಿ ಬೇರೆ ಪ್ರದೇಶಗಳಿಗೆ ವಿಸ್ತರಿಸಲಾಗುವುದು. ಇದು ಸಾವಯವ ದ್ರಾವಣವಾಗಿದ್ದು, ಜನರ ಮೇಲೆ ಸಿಂಪಡಣೆಯಾದರೂ ತೊಂದರೆ ಆಗುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಸಂಸ್ಥೆಯ ಮುಖ್ಯಸ್ಥ ಕ್ಯಾಪ್ಟನ್ ಮುರಳಿ ರಾಮಕೃಷ್ಣನ್, ‘ಅಮೆರಿಕ ಮತ್ತು ದಕ್ಷಿಣ ಆಫ್ರಿಕಾದಲ್ಲಿ ವೈಮಾನಿಕ ಸೋಂಕು ನಿವಾರಕ ಸಿಂಪಡಣೆಯಲ್ಲಿ ಪರಿಣತಿ ಪಡೆದ ತಂಡ ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಈ ಕಾರ್ಯಾಚರಣೆ ನಡೆಸಲಿದೆ’ ಎಂದು ತಿಳಿಸಿದರು.

‘ಸೂಕ್ಷ್ಮ ಮೈಕ್ರಾನ್ ಕಣಗಳ ಸಾಂದ್ರತೆಯಲ್ಲಿರುವ ಈ ದ್ರಾವಣ, ಗಾಳಿಯಲ್ಲಿ ತೇಲಾಡುತ್ತಿರುವ ಬ್ಯಾಕ್ಟೀರಿಯಾ ಹಾಗೂ ವೈರಾಣುಗಳನ್ನು ಕೊಲ್ಲಲಿದೆ. ಸುಮಾರು 300 ಲೀಟರ್‌ಗಳಷ್ಟು ದ್ರಾವಣ ಹೊತ್ತೊಯ್ಯಬಲ್ಲ ಅಮೆರಿಕನ್ ಚಾಂಪಿಯನ್ ಸ್ಕೌಟ್ ವಿಮಾನವು ಕಡಿಮೆ ಎತ್ತರದಲ್ಲಿ ಹಾರಾಟ ನಡೆಸಲಿದೆ. ಗಂಟೆಯಲ್ಲಿ 300 ಹೆಕ್ಟೇರ್ ಪ್ರದೇಶದಲ್ಲಿ ಸಿಂಪಡಣೆ ಮಾಡುವ ಸಾಮರ್ಥ್ಯ ಹೊಂದಿದೆ’ ಎಂದು ಮಾಹಿತಿ ನೀಡಿದರು.

ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ತಾಂತ್ರಿಕ ತಂಡವು ಈ ಪ್ರಾಯೋಗಿಕ ಕಾರ್ಯಾಚರಣೆಯ ಮೇಲುಸ್ತುವಾರಿ ವಹಿಸಲಿದೆ. ಅದರಿಂದ ಉಂಟಾಗಲಿರುವ ಪ್ರಯೋಜನಗಳ ಬಗ್ಗೆ ಮೂರು ದಿನಗಳ ನಂತರ ವರದಿ ನೀಡಲಿದೆ. ಇದೇ ವೇಳೆ ಪ್ರಾಯೋಗಿಕ ಕಾರ್ಯಾಚರಣೆಯ ಪ್ರತ್ಯಕ್ಷಿಕೆಯನ್ನು ಸಂಸ್ಥೆ ಪ್ರದರ್ಶಿಸಿತು.

‘ದೊರೆಸ್ವಾಮಿ ಬಿದ್ದ ಮರವಲ್ಲ, ಬಿತ್ತಿದ ಬೀಜ’

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ನಿಧನರಾದ ವಿವಿಧ ಕ್ಷೇತ್ರಗಳ ಗಣ್ಯರಿಗೆ ಶನಿವಾರ ನುಡಿನಮನ ಸಲ್ಲಿಸಲಾಯಿತು.

ಬಂಡಾಯ ಸಾಹಿತ್ಯ ಸಂಘಟನೆ, ಬೆಂಗಳೂರು ಹಾಗೂ ದಲಿತ ಹಕ್ಕುಗಳ ಸಮಿತಿ–ಕರ್ನಾಟಕ ವತಿಯಿಂದ ಆನ್‌ಲೈನ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ಕೊರೊನಾ ಕಂಬನಿಯ ಕುಯಿಲು’ ಕಾರ್ಯಕ್ರಮದಲ್ಲಿ ಎಚ್.ಎಸ್.ದೊರೆಸ್ವಾಮಿ, ವಿಠಲ ಭಂಡಾರಿ, ಎಚ್.ಕೆ.ರಾಮಚಂದ್ರಪ್ಪ, ಎಂ.ಜಿ.ವೆಂಕಟೇಶ್, ಭಾಸ್ಕರ್ ಮಯ್ಯ, ಕೋ.ವೆಂ.ರಾಮಕೃಷ್ಣೇಗೌಡ ಹಾಗೂ ಜರಗನಹಳ್ಳಿ ಶಿವಶಂಕರ್ ಅವರನ್ನು ಸ್ಮರಿಸಲಾಯಿತು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್, ‘ಎಚ್.ಎಸ್.ದೊರೆಸ್ವಾಮಿ ಅವರು ಅಧಿಕಾರ, ನೇಮಕಾತಿಗಾಗಿ ಆಸೆ ಪಡಲಿಲ್ಲ. ಚುನಾವಣಾ ರಾಜಕಾರಣದಲ್ಲಿ ಭಾಗಿಯಾಗಲೂ ಇಲ್ಲ. ಅನ್ಯಾಯದ ವಿರುದ್ಧ, ಭೂಗಳ್ಳರು, ಕೋಮುವಾದಿಗಳ ವಿರುದ್ಧ ಸಿಂಹದಂತೆ ಘರ್ಜಿಸಿದ್ದರು. ಅವರ ಬದುಕು ಇಂದಿನ ಯುವ ಪೀಳಿಗೆಗೆ ಆದರ್ಶವಾಗಲಿ. ದೊರೆಸ್ವಾಮಿ ಅವರು ಬಿದ್ದ ಮರವಲ್ಲ, ಬಿತ್ತಿದ ಬೀಜ. ಅದರಿಂದ ಸಹಸ್ರಾರು ಗಿಡಗಳು ಬೆಳೆದು ಹೂವುಗಳು ಅರಳಲಿ’ ಎಂದರು.

ರಂಗಕರ್ಮಿ ಲಕ್ಷ್ಮಿ ಚಂದ್ರಶೇಖರ್, ‘ಎಂ.ಜಿ.ವೆಂಕಟೇಶ್, ಸಮಾನತೆಯ ತತ್ವದಲ್ಲಿ ನಂಬಿಕೆಯುಳ್ಳವರಾಗಿದ್ದರು. ಬಹಳ ಬದ್ಧತೆಯಿಂದ ಕೆಲಸ ಮಾಡುತ್ತಿದ್ದರು. ಅನ್ಯಾಯ, ಅಕ್ರಮಗಳನ್ನು ಬಯಲಿಗೆಳೆಯುತ್ತಿದ್ದರು’ ಎಂದರು.

ಬರಹಗಾರ್ತಿ ಗೀತಾ ವಸಂತ್, ‘ವಿಠಲ ಭಂಡಾರಿ ಅವರ ಸಾವು, ಸಮೂಹದ ಸಂಕಟ. ಸಮೂಹದ ಧ್ವನಿ, ಕನಸುಗಾರನಾಗಿ ನೇಪಥ್ಯದಲ್ಲಿ ನಿಂತು ಕೆಲಸ ಮಾಡುತ್ತಿದ್ದ ಚೇತನ .’ ಎಂದರು.

ಎ.ಬಿ.ರಾಮಚಂದ್ರಪ್ಪ, ‘ಎಚ್.ಕೆ.ರಾಮಚಂದ್ರಪ್ಪ ಅವರು ಹೋರಾಟವನ್ನೇ ಬದುಕಾಗಿಸಿಕೊಂಡವರು. ಸಂಘಟನಾ ಚಾತುರ್ಯ ಅವರಲ್ಲಿತ್ತು. ಕಮ್ಯುನಿಸ್ಟ್ ತತ್ವವನ್ನು ಗಟ್ಟಿಯಾಗಿ ನಂಬಿದ್ದ ವ್ಯಕ್ತಿ. ಹಾಗಂತ ಬೇರೆಯವರ ಸೈದ್ಧಾಂತಿಕ ನಿಲುವುಗಳನ್ನು ಅವರು ವಿರೋಧಿಸಿದವರಲ್ಲ’ ಎಂದರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ದಿವಂಗತ ನಟ ಅಂಬರೀಷ್ ಅವರ ಜನ್ಮದಿನದ ಅಂಗವಾಗಿ ಪತ್ನಿ ಸುಮಲತಾ ಅಂಬರೀಷ್, ಪುತ್ರ ಅಭಿಷೇಕ್ ಅವರು ಕಂಠೀರವ ಸ್ಟುಡಿಯೊ ಆವರಣದಲ್ಲಿರುವ ಅಂಬರೀಷ್ ಅವರ ಸಮಾಧಿಗೆ ಶನಿವಾರ ಪುಷ್ಪನಮನ ಸಲ್ಲಿಸಿದರು.

ಹಾಲು ಖರೀದಿ ನಿಲ್ಲಿಸದಂತೆ ಒತ್ತಾಯ

ಬೆಂಗಳೂರು: ‘ಹಾಲಿನ ಪೂರೈಕೆ ಹೆಚ್ಚಾಗಿರುವುದರಿಂದ ಮಾರಾಟ ಕಡಿಮೆಯಾಗಿದೆ ಎಂಬ ನೆಪವೊಡ್ಡಿ ಹಾಲಿನ ಖರೀದಿ ನಿಲ್ಲಿಸಲು ಕೆಎಂಎಫ್ ಚಿಂತನೆ ನಡೆಸಿದ್ದು, ಯಾವುದೇ ಕಾರಣಕ್ಕೆ ಹಾಲು ಖರೀದಿ ನಿಲ್ಲಬಾರದು’ ಎಂದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಒತ್ತಾಯಿಸಿದ್ದಾರೆ.

‘ಹಾಲನ್ನು ಮಾರಾಟ ಮಾಡದೆ, ರಸ್ತೆಗೆ ಸುರಿಯಲು ಆಗುವುದಿಲ್ಲ. ಮಾರಾಟ ಕಡಿಮೆಯಾಗಿರುವ ನೆಪದಲ್ಲಿ ಕೆಎಂಎಫ್‌ನ ಈ ಚಿಂತನೆ ಸರಿಯಲ್ಲ. ಕೂಡಲೇ ಈ ವಿಚಾರವನ್ನು ಕೈಬಿಡಬೇಕು’ ಎಂದು ಹೇಳಿದರು.

‘ಲಾಕ್‌ಡೌನ್ ನಂತರ ರೈತರಿಗೆ ಸುಮಾರು ಒಂದು ಲಕ್ಷ ಕೋಟಿ ರೂಪಾಯಿಯಷ್ಟು ನಷ್ಟವಾಗಿದೆ. ಲಾಕ್‌ಡೌನ್‌ನಿಂದಾಗಿ ಕೃಷಿ ಉತ್ಪನ್ನಗಳ ನಷ್ಟದ ವರದಿ ಮಂಡಿಸಿ, ರೈತರಿಗೆ ನಷ್ಟ ಪರಿಹಾರವನ್ನು ಸರ್ಕಾರ ನೀಡಬೇಕು’ ಎಂದು ಒತ್ತಾಯಿಸಿದರು.

‘ಭತ್ತ ಕಟಾವು ಆದ ಕೂಡಲೇ, ಭತ್ತ ಬೆಳೆಯುವ ಎಲ್ಲ ಜಿಲ್ಲೆಗಳಲ್ಲಿ ಖರೀದಿ ಕೇಂದ್ರಗಳನ್ನು ಸರ್ಕಾರ ತೆರೆಯಬೇಕು. ರೈತರಿಂದ ಕನಿಷ್ಠ ಬೆಂಬಲ ಬೆಲೆಗೆ ಖರೀದಿಸಬೇಕು. ಖರೀದಿ ಕೇಂದ್ರಗಳ ಮೂಲಕ ಈಗಾಗಲೇ ಖರೀದಿಸಿರುವ ಉತ್ಪನ್ನಗಳ ಹಣವನ್ನು ರೈತರ ಖಾತೆಗಳಿಗೆ ಕೂಡಲೇ ಜಮಾ ಮಾಡಬೇಕು’ ಎಂದೂ ಆಗ್ರಹಿಸಿದರು.

ಸುದ್ದಿ 2 ನಿಮಿಷ

‘ಕರಾಳ ಪದ್ಧತಿ ಬಾಲ್ಯ ಕಸಿಯದಿರಲಿ’

ಬೆಂಗಳೂರು: ‘ಬಡತನದಿಂದ ನೂರಾರು ಮಕ್ಕಳು ಶಿಕ್ಷಣ ವಂಚಿತರಾಗಿದ್ದಾರೆ. ಕೋವಿಡ್‌ನಿಂದ ಶಾಲೆಗಳು ಮುಚ್ಚಿರುವ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಬಾಲಕಾರ್ಮಿಕರಾಗುತ್ತಿದ್ದಾರೆ. ಕಾನೂನು ದುರ್ಬಲವಾಗಿರುವುದರಿಂದ ಬಾಲಕಾರ್ಮಿಕ ಪದ್ಧತಿ ಇನ್ನೂ ಜೀವಂತವಿದೆ. ಮಕ್ಕಳಿಗೆ ಕಡ್ಡಾಯ ಶಿಕ್ಷಣ ಒದಗಿಸುವುದು ಹಾಗೂ ಕಾನೂನುಗಳನ್ನು ಬಲಗೊಳಿಸುವುದೇ ಇದರ ನಿರ್ಮೂಲನೆಗೆ ಇರುವ ತಂತ್ರ.’

ಚೈಲ್ಡ್ ರೈಟ್ಸ್ ಟ್ರಸ್ಟ್ ಹಾಗೂ ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನದ ರಾಜ್ಯ ಘಟಕದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಆನ್‌ಲೈನ್ ಕಾರ್ಯಕ್ರಮದಲ್ಲಿ ವಿವಿಧ ಜಿಲ್ಲೆಗಳ ಮಕ್ಕಳ ಪ್ರತಿನಿಧಿಗಳು ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ನೀಡಿದ ಒಕ್ಕೊರಲ ಸಲಹೆಗಳಿವು.

‘ಕೊಳೆಗೇರಿಗಳ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಬಾಲಕಾರ್ಮಿಕರಾಗುತ್ತಿದ್ದಾರೆ. ಬಾಲಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳ ಕುರಿತು ಪೋಷಕರಿಗೆ ಅರಿವು ಮೂಡಿಸಬೇಕು’ ಎಂದು ಬೀದರ್ ಜಿಲ್ಲೆಯ ಸಂಗಮೇಶ್ ಸಲಹೆ ನೀಡಿದರು.

ರಾಷ್ಟ್ರೀಯ ಬಾಲಕಾರ್ಮಿಕ ವಿರೋಧಿ ಆಂದೋಲನದ ಮುಖ್ಯಸ್ಥ ಮ್ಯಾಥ್ಯು ಫಿಲಿಪ್, ‘ಬಾಲಕಾರ್ಮಿಕ ಪದ್ಧತಿಯ ದುಷ್ಪರಿಣಾಮಗಳು ಹಾಗೂ ಅದರ ತಡೆಗೆ ಮಕ್ಕಳಿಂದಲೇ ಸಲಹೆಗಳನ್ನು ಸಂಗ್ರಹಿಸುತ್ತಿದ್ದೇವೆ. ಜೂನ್ 21ರ ಅಂತರರಾಷ್ಟ್ರೀಯ ಬಾಲಕಾರ್ಮಿಕ ಪದ್ಧತಿ ವಿರೋಧಿ ದಿನದಂದು ಈ ಎಲ್ಲ ಸಲಹೆಗಳು, ತುರ್ತಾಗಿ ತೆಗೆದುಕೊಳ್ಳಬೇಕಿರುವ ಕ್ರಮಗಳನ್ನು ಸರ್ಕಾರಗಳ ಮುಂದಿಡಲಾಗುವುದು’ ಎಂದರು.

ಆಂದೋಲನದ ರಾಜ್ಯ ಸಂಚಾಲಕ ವಾಸುದೇವ ಶರ್ಮ,‘18 ವರ್ಷದೊಳಗಿನ ಮಕ್ಕಳು ಕೆಲಸಗಳಲ್ಲಿ ತೊಡಗುವುದು ಅಪರಾಧ. ಆದರೆ, ದೇಶದಲ್ಲಿ ಈ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಇನ್ನೂ ಸಾಧ್ಯವಾಗಿಲ್ಲ’ ಎಂದರು.

ರಾಜ್ಯ ಸಂಘಟಕ ನಾಗಸಿಂಹ ಜಿ.ರಾವ್ ಹಾಗೂ ಇತರರು ಭಾಗವಹಿಸಿದ್ದರು.

ಕೆ.ಆರ್.ಪುರ: ಕೋಲೆ ಬಸವ ಆಡಿಸುವವರಿಗೆ ಊಟ ವಿತರಣೆ

ಕೆ.ಆರ್.ಪುರ:‘ಕೋಲೆ ಬಸವ (ಗಂಗೆತ್ತು) ಆಡಿಸಿ ಭಿಕ್ಷಾಟನೆ ಮಾಡುವ ಬಡ ಕುಟುಂಬಗಳಿಗೆ ಲಾಕ್‌ಡೌನ್ ಮುಗಿಯುವವರೆಗೂ ಊಟ ವಿತರಿಸಲಾಗುವುದು’ ಎಂದು ಪಾಲಿಕೆ ಮಾಜಿ ಸದಸ್ಯ ಬಿ.ಎನ್.ಜಯಪ್ರಕಾಶ್ ಹೇಳಿದರು.

ಬಸವನಪುರ ವಾರ್ಡ್‌ನ ಸೀಗೆಹಳ್ಳಿಯ ಖಾಲಿ ಜಾಗದ ಶೆಡ್‌ಗಳಲ್ಲಿ ವಾಸಿಸುವ ಕೋಲೆಬಸವ ಆಡಿಸುವ ವಲಸೆ ಕುಟುಂಬಗಳಿಗೆ ಆಹಾರ ವಿತರಿಸಿ ಅವರು ಮಾತನಾಡಿದರು.

‘ತಲೆಮಾರುಗಳಿಂದ ತಮ್ಮ ಕಸಬು ಮುಂದುವರಿಸಿಕೊಂಡು ಬಂದಿರುವ ಇವರು ಅಲೆಮಾರಿಗಳಂತೆ ಜೀವನ ನಡೆಸುತ್ತಾರೆ. ಲಾಕ್‌ಡೌನ್‌ನಿಂದ ಇವರ ಬದುಕು ಮತ್ತಷ್ಟು ದುಸ್ತರವಾಗಿದೆ. ಇದನ್ನು ಮನಗಂಡು ಆಹಾರ ವಿತರಿಸಲಾಗುತ್ತಿದೆ. ಲಾಕ್‌ಡೌನ್‌ನಿಂದ ಆಹಾರ ಸಮಸ್ಯೆ ಎದುರಿಸುತ್ತಿರುವವರು ನಮ್ಮನ್ನು ಸಂಪರ್ಕಿಸಿದರೆ, ನಮ್ಮ ಕಾರ್ಯಕರ್ತರು ಆಹಾರ ತಲುಪಿಸಲಿದ್ದಾರೆ’ ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಕೋಲಾರ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ,
ಕಾರ್ಯಪಾಲಕ ಅಭಿಯಂತರ ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕೋಲಾರ–563101 ದೂರವಾಣಿ: 08152–222570,
ಇ–ಮೇಲ್ ವಿಳಾಸ: eepredkolar1@gmail.com

ಸಂ: 03/2021–22 ದಿನಾಂಕ: 26.05.2021

ಅಲ್ಪಾವಧಿ ದ್ವಿ–ಲಕೋಟೆ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ KW-IVರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರೊಕ್ಯೂರ್‌ಮೆಂಟ್ ದ್ವಿ–ಲಕೋಟೆ ಪದ್ಧತಿಯಲ್ಲಿ (Two Cover System) ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ್ದು, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಕರ್ನಾಟಕ ಸರ್ಕಾರ ಇಲ್ಲಿ ಎನ್‌ರೋಲ್ ಮಾಡಿಸಿಕೊಂಡಿರುವ ಅಧಿಕೃತ ಗುತ್ತಿಗೆದಾರರಿಂದ (1) ಕೋಲಾರ ಜಿಲ್ಲೆ ಮಾಲೂರು ತಾ॥ ಚನ್ನಕಲ್ ನಿಂದ ಯರಬಶೆಟ್ಟಿಹಳ್ಳಿ ರಸ್ತೆ ಅಭಿವೃದ್ಧಿ (2) ಮಾಸ್ತಿ–ಬೇರಿಕೆ ರಸ್ತೆಯಿಂದ ಚವರಮಂಗಲ ಮುಖಾಂತರ ಸುಗೊಂಡಹಳ್ಳಿ ರಸ್ತೆವರೆಗೆ ರಸ್ತೆ ಅಭಿವೃದ್ಧಿ (3) ದೊಡ್ಡಕಲ್ಲಹಳ್ಳಿಯಿಂದ ಗೊಲ್ಲಹಳ್ಳಿ ರಸ್ತೆ ಅಭಿವೃದ್ಧಿ (4) ಮಾಲೂರು ಟೌನ್ ಪಟಾಲಮ್ಮ ದೇವಸ್ಥಾನದಿಂದ ಕಾಡದೇನಹಳ್ಳಿ ರಸ್ತೆ ಅಭಿವೃದ್ಧಿ (5) ಲಕ್ಕೂರು ಸರ್ಕಲ್ ನಿಂದ ಪುರ ಗ್ರಾಮಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿ (ಪ್ಯಾಕೇಜ್–1) ಇಂಡೆಂಟ್ ಸಂಖ್ಯೆ: 84052, ಟೆಂಡರ್‌ಗಿಟ್ಟ ಮೊತ್ತ ರೂ.190.00 ಲಕ್ಷಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಸದರಿ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್: https://eproc.karnataka.gov.in ಮುಖಾಂತರ ಇ–ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ. ಸದರಿ ಟೆಂಡರ್ ಪೂರ್ವಭಾವಿ ಸಭೆಯ ದಿನಾಂಕ: 03.06.2021ರಂದು ಬೆಳಿಗ್ಗೆ 11.00 ಗಂಟೆಗೆ ವಿಭಾಗ ಕಚೇರಿಯಲ್ಲಿ ನಿಗದಿಪಡಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: 23.06.2021ರ 16.00ರವರೆಗೆ. ಗುತ್ತಿಗೆದಾರರು ಟೆಂಡರ್‌ಗಳನ್ನು ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಟೆಂಡರ್‌ನ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: 26.06.2021ರಂದು 16.30 ಗಂಟೆಗೆಂದು ನಿಗದಿಪಡಿಸಲಾಗಿದೆ. ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದ ಗುತ್ತಿಗೆದಾರರಿಗೆ ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕವನ್ನು ಪ್ರತ್ಯೇಕವಾಗಿ ದೂರವಾಣಿ ಮುಖಾಂತರ ತಿಳಿಸಲಾಗುವುದು. ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (viz.,https://eproc.karnataka.gov.in) ಸಂಪರ್ಕಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಚೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 91 8046010000 & +91 8022631200, 080–22230960 & 22234115 ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಕೋಲಾರ.
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ 64/ಎಂ.ಸಿ.ಎ/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

शासकीय स्वशासी गजराराजा चिकित्सा महाविद्यालय ग्वालियर मध्यप्रदेश

क्रमांक / स्था / विज्ञप्त / 2021 / 16255 ग्वालियर दिनांक 17.05.2021

/ /विज्ञप्ति सूचना/ /

म.प्र. शासन, चिकित्सा शिक्षा विभाग मंत्रालय क्र. एफ2–06 / 2018 / 1–55 भापोल दिनांक 07.04.2018 एवं संचालक चिकित्सा शिक्षा म.प्र. भोपाल के पत्र क्रमांक 681 / स्था / राज / 2018 भोपाल दिनांक 07.04.2018 द्वारा म.प्र. स्वशासी चिकित्सा महाविद्यालय चिकित्सा सेवा आदर्श नियम 2018 के अतंर्गत स्वाशासी गजराराजा चिकित्सा महाविद्यालय ग्वालियर के अधीन बर्न यूनिट हेतु रिक्त पदो की पूर्ति सीधी भर्ती द्वारा की जाना है। इस हेतु एमसीआई द्वारा निर्धारित अर्हताधारी योग्य अभ्यर्थियों से निर्धारित प्रपत्र में आवेदन पत्र स्वाशासी गजराराजा चिकित्सा महाविद्यालय ग्वालियर में दिनांक 31.05.2021 सायंकाल 5:30 बजे तक आमंत्रित किये जाते हैं। उपरोक्त विज्ञापन की जानकारी, पदों का विवरण एवं आवेदन पत्र का निर्धारित प्रारुप स्वशासी चिकित्सा महाविद्यालय ग्वालियर मध्यप्रदेश की वेबसाइट www.grmcgwalior.org पर उपलब्ध है।

आवेदन पत्र डाक द्वारा अथवा व्यक्तिगत रुप से स्वशासी गजराराजा चिकित्सा महाविद्यालय ग्वालियर में जमा कराये जा सकते हैं। किसी भी स्थिती में निर्धारित तिथि एवं समय के पश्चात प्राप्त होने वाले आवेदनों पर विचार नहीं किया जावेगा।

मुख्य कार्यपालन अधिकारी
स्वशासी गजराराजा चिकित्सा महाविद्यालय ग्वालियर

(G-12849) दो गज की दूरी, मास्क है जरुरी।

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Commercial Land

Sarjapur Road

J/D 38 Acres LAND Available at Sarjapura, 12L Advance, 12L Good Will, Ratio 50/50. 9980577227.

Flat

Vijayanagar

1500 SQFT 3 BHK flats, Chickpet Society Layout behind RNS school, 1.25 crores. 9901759955/ 9035288117.

Farm House/ Land/ Resorts

Out-Station

5 ACRES Coffee Estate for Sale in Chikmaglur from town 15 minutes. Contact: 9945097687

DH ಪ್ರಜಾವಾಣಿ
BOOK YOUR REMEMBRANCE & OBITUARIES ADVERTISEMENTS IN DECCAN HERALD & PRAJAVANI
Please contact us at :
Santhosh Kumar : 9880856233
Jerry : 9731810277
Ravichandra : 9901641752
Vishal : 9845114560
Tanveer : 9886213331
E-mail: dhclassified@deccanherald.co.in

House

Vishweshwariah Layout

FOR SALE Sir MVishveshwariah Layout 4thBlock.New building with 3+1floors with single & 2 bedroomson 60×40 site with lift and carparking. Rs.2 cr Contact 9916856058 / 7892141837

Sites

Hoskote

HOSKOTE 30X60 Site Sale at Kanaka Nagar, Sir. M. Vishveshwaraiah Layout, Hoskote. Contact: 9880843416, 9743535151.

Koramangala

KORAMANGALA 3RD Block, 60X90 East Facing, BDA Site with Old House For Immediate Sale. 9980577227.

Vishweshwariah Layout

WANTED/ AVAILABLE BDA Sites Vishweshwaraiah Layout, Kempegowda Layout 20x30, 30x40, 40x60, 50x80.Contact Genuine Buyers/Sellers: 8892901567/ 9341733480

REAL ESTATE BUYING

Farm House/ Land/ Resorts

Out-Station

WANTED_2.5_TO_5 Acres_Farm_Land at_SAKLESHPUR (Hassan Dist.)_with clear_title, water_& electricity good road_approach, within_15_km from_town center_Sellers only_Contact: 9845343184

BUILDERS ESSENTIAL

Water Proofing Materials

LEAKAGE... LEAKAGE... Old/New-Building, Sump, Bathroom, Wallcrack, Skylight, Terrace Waterproofing done by New-Technology-9880916988

Water Proofing

WE-FIX LEAKING ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

RENTAL PROPERTIES

Accommodation Available

Commercial

PRIME FACILITY suitable for 50 to 75 bedded hospital on 1st main, Yeshwanthpur available on flexible terms. Call 9606969969

Accommodation Wanted

General

WANTED SPACIOUS 3/4 Bedroom INDEPENDENT HOUSE/FLAT in Chamarajpet /Bull Temple Road on rent for one year, till completion of renovation of our Bungalow in Chamarajapet. Contact: 9880033770

JOB OPPORTUNITIES

Teachers/ Professors

RMS PU COLLEGE requires Principal for PU College immediately. Experience: minimum 5 to 10 years as Principal in PU College only. Contact: 9738211017 email: ashokmv@ymail.com

WEEKEND CORNER ಕ್ಲಾಸಿಫೈಡ್ಸ್

Olive CARE FOR YOU!
NEW ARRIVAL 2021
OLV-5S / 10S
MEDICAL OXYGEN CONCENTRATOR

Support 24*7 continuously working
93% ± 3% high oxygen purity
Power failure alarm
Timing function
Low noise
Filter the air
Imported & Marketed By:- BIOLAB (INDIA)® An ISO Certified Company
Jalahalli, Bangalore
Ph: 080-28384100, M: 9980569495
email: info@biolab.co.in
Trade / Institutional Bulk Enquiries Solicited

Prestige GROUP
RERA NO: PRGO02201073
Exquisite Apartments from South India's Largest Developer
PRESTIGE OCEAN CREST
DONA PAULA, GOA
Half a KM from Beach | Private outdoor decks
Club house, Mirror Pool & Sky Deck with ocean views
Starts at ₹1.6 Crore* 63667 71794
prestigeconstructions.com
A Prestige Group and Mathias Construction Pvt. Ltd. Joint Development
MATHIAS

NIRMAN INTERNATIONAL PUBLIC SCHOOL, Near Automated RTO, 7th Block, Vishweshwaraiah Layout, Bangalore-91 Requires efficient LADY TEACHERS with BEd to teach English and Social Science for Primary and High School.Contact: 8123030731. Email: nirmanorganisation @gmail.com

Hospital & Medical Jobs

WANTED EXPERIENCED B.Sc NURSE for the post RESIDENTIAL NURSE. Apply: medicopastoralassociation@gmail.com /7411485215

Wanted

WANTED
- HR / ADMN
- ACCOUNTANT
- SECREATARY AND
- OFFICE ASSISTANTS

TO WORK IN REPUTED SECURITY AND MANPOWER SERVICES OFFICE @ R.T. NAGAR
(Must be experienced & also welcome for retired Army/Navy/Air Force/Police)
CONTACT @ 9845996744
raghu_sgr2@yahoo.co.in

EDUCATION
To Place your Classified Ads Contact: 9845114560

MATRIMONIAL

Brides Wanted

Brahmin

BANGALORE LIVING alone banker smart single 60seek. Life companion honest caring educated & adjustable pleasant looking soft matured genuine lady prefebly Brahmin who knows cooking required. Mob:6363447633

Second Marriage

LOOKING FOR humble girl for 46 yrs old boy, working in software, 5'4', well settled, KURUBA caste. The bride should be decent around 38 yrs.Call 8805460713

Telugu

DOCTOR BRIDE
Below 41 Required for Kamma Naidu / Chennai based, well settled, Non-Medico Professional. Any Caste in Fc / Bc Ok.
Ct: 8667715474

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ತ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
ಸುಮ ಗೋಪಾಲಕೃಷ್ಣ
ದೂರವಾಣಿ: 9886908152

BRIDE GROOM MATRIMONY
www.bridegroommatrimony.com
{All community matrimonial services}
Office Timings: 10 AM to 5 PM (Sunday Holiday)
Plan Rs. 101/-
Supported by : SKRGSKS(R.) {NGO}
R.K. Hegade Nagar, BENGALURU-77
72 06 06 06 17
080-7373 7474
info@bridegroommatrimony.com

BUSINESS

Business Offers

Finance

FINANCE PARTNERS required for a highly profitable commercial project for Land Owner cum Promoter. Interested persons contact 7676770503

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಕೋವಿಡ್ ಎರಡನೇ ಅಲೆ: ವ್ಯಾಪಾರಿಗಳಿಗೆ ಬಾಡಿಗೆ ಕಟ್ಟುವ ತಲೆಬಿಸಿ

ಬೇಸಿಗೆಯಲ್ಲಿ ತಂಪು ನೀಡದ ಐಸ್‌ಕ್ರೀಂ

• ಮನೋಹರ್ ಎಂ.

ಲಾಕ್‌ಡೌನ್‌ನಿಂದಾಗಿ ಹನುಮಂತನಗರದಲ್ಲಿ ಐಸ್ ಕ್ರೀಂ ಮಳಿಗೆ ಮುಚ್ಚಿರುವುದು

ಪ್ರಜಾವಾಣಿ ವಿಶೇಷ

ಬೆಂಗಳೂರು: 'ಕೋವಿಡ್ ಎರಡನೇ ಅಲೆಯ ಹೊಡೆತಕ್ಕೆ ಐಸ್‌ಕ್ರೀಂ ಉದ್ಯಮ ಸಂಪೂರ್ಣ ನೆಲಕಚ್ಚಿದೆ. ಲಾಭ ತರುವ ಬೇಸಿಗೆ ಅವಧಿಯಲ್ಲೇ ಲಾಕ್‌ಡೌನ್‌ನಿಂದಾಗಿ ವ್ಯಾಪಾರಕ್ಕೆ ಹೊಡೆತ ಬಿದ್ದಿದೆ' ಎಂದು ವ್ಯಾಪಾರಿಗಳು ಅಸಹಾಯಕತೆ ತೋಡಿಕೊಳ್ಳುತ್ತಿದ್ದಾರೆ.

ಕಳೆದ ವರ್ಷದ ಲಾಕ್‌ಡೌನ್ ಅವಧಿಯಲ್ಲಿ ಐಸ್ ಕ್ರೀಂ ಅಂಗಡಿಗಳಲ್ಲಿ ಪಾರ್ಸೆಲ್ ನೀಡಲು ಸರ್ಕಾರ ಅವಕಾಶ ಕಲ್ಪಿಸಿತ್ತು. ಗ್ರಾಹಕರ ಸಂಖ್ಯೆ ಇಳಿಮುಖವಾಗಿದ್ದರೂ ವ್ಯಾಪಾರ ಸಂಪೂರ್ಣ ನಿಂತಿರಲಿಲ್ಲ. ಇದರಿಂದ ವ್ಯಾಪಾರಿಗಳು ತುಸು ನಿಟ್ಟುಸಿರು ಬಿಟ್ಟಿದ್ದರು.

'ಈ ಲಾಕ್‌ಡೌನ್‌ನಲ್ಲಿ ಪಾರ್ಸೆಲ್‌ಗೂ ಅವಕಾಶ ನೀಡಿಲ್ಲ.ಬೆಳಿಗ್ಗೆ 6ರಿಂದ 10ರವರೆಗೆ ಐಸ್ ಕ್ರೀಂ ವ್ಯಾಪಾರ ನಡೆಯುವ ಸಮಯವೂ ಅಲ್ಲ. ಕಳೆದ ಬಾರಿಯಂತೆ ಈ ಸಲವೂ ನಷ್ಟ ತಪ್ಪುವುದಿಲ್ಲ' ಎನ್ನುವುದು ವ್ಯಾಪಾರಿಗಳ ನೋವಿನ ಮಾತು.

'ಮಾರ್ಚ್‌ನಿಂದ ಆರಂಭವಾಗುವ ಬೇಸಿಗೆ ಧಗೆಯಿಂದ ಜನ ಐಸ್ ಕ್ರೀಂ ಸವಿಯಲು ಮುಗಿ ಬೀಳುತ್ತಿದ್ದರು. ಬೇಸಿಗೆ ರಜೆಗೆ ಮನೆಯಲ್ಲೇ ಇರುತ್ತಿದ್ದ ಮಕ್ಕಳು ಹಾಗೂ ಯುವಕರು ಐಸ್ ಕ್ರೀಂ ಸವಿಯಲು ಬರುತ್ತಿದ್ದರು. ಅಂಗಡಿಯೊಳಗೆ ಕೂರಲು ಜಾಗವೂ ಇರುತ್ತಿರಲಿಲ್ಲ. ಎರಡು ವರ್ಷದ ಬೇಸಿಗೆಯಲ್ಲೂ ವ್ಯಾಪಾರ ಕಾಣಲಿಲ್ಲ' ಎಂದು ರಾಜಾಜಿನಗರದ ಜ್ಯೂಸ್ ಕಾರ್ನರ್ ಅಂಗಡಿ ಮಾಲೀಕ ನಿಶಾಂತ್ ಹೇಳಿದರು.

'ಅಗತ್ಯ ಸೇವೆಯಡಿ ಐಸ್ ಕ್ರೀಂಗೂ ರಾಜ್ಯ ಸರ್ಕಾರ ಲಾಕ್‌ಡೌನ್‌ನಲ್ಲಿ ಅನುವು ಮಾಡಿಕೊಟ್ಟಿತ್ತು. ಈ ಬಾರಿಯ ನಿರ್ಬಂಧಗಳಿಂದ ಅಂಗಡಿ ಮುಚ್ಚಲಾಗಿದೆ. ಮದುವೆ, ಶುಭ ಸಮಾರಂಭಗಳೂ ನಡೆಯುತ್ತಿಲ್ಲ. ಹಾಗಾಗಿ, ಕಾರ್ಯಕ್ರಮಗಳ ಆರ್ಡರ್‌ಗಳೂ ಇಲ್ಲ' ಎಂದು ನಾಗರಬಾವಿಯ ಐಸ್‌ಕ್ರೀಂ ಅಂಗಡಿ ಮಾಲೀಕ ಚಂದ್ರಶೇಖರ್ ತಿಳಿಸಿದರು.

'ಐಸ್ ಕ್ರೀಂ ಸೇವನೆಯಿಂದ ಸೋಂಕು ಹರಡುತ್ತದೆ ಎಂಬ ವದಂತಿ ಸಾಮಾಜಿಕ ಮಾಧ್ಯಮಗಳಲ್ಲಿ ಹಬ್ಬಿತ್ತು. ಐಸ್ ಕ್ರೀಂನಿಂದ ಕೋವಿಡ್ ಹರಡುವುದಿಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ ನೀಡಿದ ಸ್ಪಷ್ಟನೆಯನ್ನು ಭಾರತೀಯ ಐಸ್ ಕ್ರೀಂ ತಯಾರಕರ ಸಂಘ ತನ್ನ ವೆಬ್‌ಸೈಟ್‌ನಲ್ಲೂ ಪ್ರಕಟಿಸಿದೆ. ಆದರೂ ಜನರಲ್ಲಿ ಭೀತಿ ಜೀವಂತವಾಗಿದೆ. ಐಸ್‌ಕ್ರೀಂ ತಣ್ಣನೆಯ ಉತ್ಪನ್ನವಾದರೂ ದೇಹದಲ್ಲಿ ತಾಪ ಹೆಚ್ಚಿಸುತ್ತದೆ. ಜನರಿಗೆ ವೈಜ್ಞಾನಿಕ ಅರಿವು ಅಗತ್ಯ' ಎಂದರು.

ಗ್ರಾಹಕರಿಗೆ ಆನ್‌ಲೈನ್ ಸೇವೆ

'ಲಾಕ್‌ಡೌನ್ ಅವಧಿಯಲ್ಲಿ ಆನ್‌ಲೈನ್ ಮೂಲಕ ಐಸ್ ಕ್ರೀಂ ಖರೀದಿಸಲು ಗ್ರಾಹಕರು ಒಲವು ತೋರಿದರು. ಹಾಗಾಗಿ, ಡೆಲಿವರಿ ಸಂಸ್ಥೆಗಳ ಪಾಲುದಾರಿಕೆಯಲ್ಲಿ ಆನ್‌ಲೈನ್ ಸೇವೆ ನೀಡುತ್ತಿದ್ದೇವೆ' ಎಂದು ಬನಶಂಕರಿ ಮೂರನೇ ಹಂತದ ಕೆಇಬಿ ಬಡಾವಣೆಯ ಗೋಪಿ ಐಸ್‌ಕ್ರೀಂ ಮಳಿಗೆಯ ಸುಧೀಂದ್ರ ತಿಳಿಸಿದರು.

'ಬೇಸಿಗೆಯ ಸಾಮಾನ್ಯ ದಿನಗಳಲ್ಲಿ ಒಂದು ದಿನಕ್ಕೆ ಗರಿಷ್ಠ 70 ಗ್ರಾಹಕರು ಬರುತ್ತಿದ್ದರು. ಈಗ ವಾರದ ದಿನಗಳಲ್ಲಿ 7 ಹಾಗೂ ವಾರಾಂತ್ಯದಲ್ಲಿ ಗರಿಷ್ಠ 15 ಮಂದಿ ಆನ್‌ಲೈನ್ ಮೂಲಕ ಐಸ್ ಕ್ರೀಂ ಖರೀದಿಸುತ್ತಿದ್ದಾರೆ. ಆದರೂ ಸರಿಯಾದ ವ್ಯಾಪಾರವಿಲ್ಲದೆ ಜೀವನ ಸಂಕಷ್ಟದಲ್ಲಿದೆ' ಎಂದರು.

ಸರ್ಕಾರದ ನೆರವೂ ಇಲ್ಲ

ರಾಮಮೂರ್ತಿ

'ಐಸ್ ಕ್ರೀಂ ಮಳಿಗೆಗಳು ಬಾಡಿಗೆ ಕಟ್ಟಡಗಳಲ್ಲೇ ಕಾರ್ಯನಿರ್ವಹಿಸುತ್ತವೆ. ಕೋವಿಡ್‌ನಿಂದ ಮಳಿಗೆ ತೆರೆಯದಿದ್ದರೂ ಬಾಡಿಗೆ ಪಾವತಿಸಲೇಬೇಕು. ಐಸ್ ಕ್ರೀಂ ವ್ಯಾಪಾರಿಗಳಿಗೆ ಸರ್ಕಾರ ಯಾವುದೇ ಆರ್ಥಿಕ ನೆರವೂ ನೀಡಿಲ್ಲ' ಎಂದು ಶ್ರೀನಗರದ ಕೂಲ್ ಹಟ್ಸ್ ಐಸ್ ಕ್ರೀಂ ಅಂಗಡಿ ಮಾಲೀಕ ರಾಮಮೂರ್ತಿ ಬೇಸರ ವ್ಯಕ್ತಪಡಿಸಿದರು.

'ತಿಂಗಳ ಬಾಡಿಗೆ ₹15 ಸಾವಿರ ಹಾಗೂ ಐಸ್ ಕ್ರೀಂ ತಂಪಾಗಿ ಇಡುವ ಫ್ರಿಜ್ ನಿರ್ವಹಣೆಗೆ ತಿಂಗಳಿಗೆ ₹3 ಸಾವಿರ ವಿದ್ಯುತ್ ಬಿಲ್ ಕಟ್ಟಬೇಕು. ಬೇಸಿಗೆಯಲ್ಲಿ ಮಾತ್ರ ನಮ್ಮ ಜೀವನ ಸುಗಮ. ಈಗ ವ್ಯಾಪಾರ ಇಲ್ಲದಿದ್ದರೂ ಖರ್ಚು ನಿಂತಿಲ್ಲ. ಸರ್ಕಾರ ಐಸ್‌ಕ್ರೀಂ ವ್ಯಾಪಾರಿಗಳಿಗೆ ಬಾಡಿಗೆ ಹಾಗೂ ವಿದ್ಯುತ್ ಶುಲ್ಕವನ್ನಾದರೂ ಮನ್ನಾ ಮಾಡಬೇಕು' ಎಂದೂ ಮನವಿ ಮಾಡಿದರು.

ಕಾಡುಗೋಡಿ, ಗುಂಜೂರು ಪ್ರದೇಶದಲ್ಲಿ ರೂಪುಗೊಳ್ಳುತ್ತಿದೆ 'ಮರಗಳ ಉದ್ಯಾನ'

ಪ್ರಜಾವಾಣಿ ವಾರ್ತೆ

ಕಾಡುಗೋಡಿಯ ಮರಗಳ ಉದ್ಯಾನದಲ್ಲಿ ನಿರ್ಮಿಸಲಾದ ಗುಡಿಸಲನ್ನು ಅರವಿಂದ ಲಿಂಬಾವಳಿ ವೀಕ್ಷಿಸಿದರು

ಬೆಂಗಳೂರು: 'ಬೆಂಗಳೂರು ಮಿಷನ್-2022' ಯೋಜನೆ ಅಡಿಯಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಾಡುಗೋಡಿ ಹಾಗೂ ಗುಂಜೂರಿನಲ್ಲಿ ಮರಗಳ ಉದ್ಯಾನ ಅಭಿವೃದ್ಧಿಪಡಿಸುವ ಕಾರ್ಯ ಭರದಿಂದ ಸಾಗಿದೆ.

ಕಾಡುಗೋಡಿಯಲ್ಲಿ ಬೆಂಗಳೂರು–ಚಿಕ್ಕತಿರುಪತಿ ರಸ್ತೆಗೆ ಹೊಂದಿಕೊಂಡಂತೆ ಇರುವ ಅರಣ್ಯ ಇಲಾಖೆ ಜಾಗದಲ್ಲಿ ನೆಡುತೋಪು ಬೆಳೆಸಲಾಗಿದೆ. ಇಲ್ಲಿ ಕೆಲವು ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ನಡಿಗೆ ಪಥ, ಪುಟ್ಟ ಗುಡಿಸಲುಗಳು (ಗಾಜೆಬೊ) ಹಾಗೂ ಮುಖ್ಯದ್ವಾರದ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಉದ್ಯಾನದ ಸುತ್ತ ಕಲ್ಲಿನ ಆವರಣ ಗೋಡೆ ಇರಲಿದೆ.

ಕಲ್ಲಿನಿಂದ ನಿರ್ಮಿಸಿದ 22 ಆಸನಗಳನ್ನು ಕಾಂಡ್ಯೂಯೆಂಟ್ ಸಂಸ್ಥೆಯು ಕೊಡುಗೆಯಾಗಿ ನೀಡಿದೆ. ಅಲ್ಲದೇ ಹಕ್ಕಿಗಳನ್ನು ಸೆಳೆಯುವುದಕ್ಕೆ ಪುಟ್ಟ ಕೊಳ, ಪ್ರಾಣಿಗಳನ್ನು ಸೆಳೆಯಲು ಮೂರು ಕಿರುಗೊಳಗಳು ಹಾಗೂ ಕರ್ಬ್ ಸ್ಟೋನ್ ಅಳವಡಿಸಿರುವ 500 ಮೀ. ಉದ್ದದ ನಡಿಗೆ ಪಥವನ್ನು ನಿರ್ಮಿಸಿಕೊಟ್ಟಿದೆ.

ರೋಟರಿ ಸಂಸ್ಥೆಯು ಒಂದು ಪುಟ್ಟ ಗುಡಿಸಲನ್ನು ಒದಗಿಸಿದೆ. ಎರಡು ಕೊಳವೆಬಾವಿಗಳನ್ನು ಕೊರೆಯುವ ವೆಚ್ಚವನ್ನು ಭರಿಸಿದೆ. 80 ಮೀ. ಉದ್ದದ ಆವರಣ ಗೋಡೆ ಹಾಗೂ 2 ಕಿ.ಮೀ. ಉದ್ದದ ಕಚ್ಚಾ ರಸ್ತೆ, ಪ್ರವೇಶದ್ವಾರ ಹಾಗೂ ಟಿಕೆಟ್ ಕೌಂಟರ್‌ಗಳನ್ನು ನಿರ್ಮಿಸಲಿದೆ. ಸುಮಧುರ ಪ್ರತಿಷ್ಠಾನವು ಐದು ವೀಕ್ಷಣಾ ಗೋಪುರ, ಹುಲ್ಲುಹಾಸು ಹಾಗೂ ಸೌರ ದೀಪಗಳನ್ನು ಒದಗಿಸಲಿದೆ.

ವಾಹನ ನಿಲುಗಡೆ ತಾಣ, ಕಲ್ಲಿನ 20 ಆಸನಗಳು, ಮಕ್ಕಳ ಆಟದ ಮೈದಾನ, ಆಟದ ಸಾಮಗ್ರಿ ಅಳವಡಿಕೆ, ಕರ್ಬ್ ಸ್ಟೋನ್ ಅಳವಡಿಸಿದ ನಡಿಗೆ ಪಥ, ಶೌಚಾಲಯ, ಬಯಲು ವ್ಯಾಯಾಮ ಶಾಲೆ, ಸಿ.ಸಿ.ಟಿವಿ ಕ್ಯಾಮೆರಾ ಅಳವಡಿಕೆ ಮುಂತಾದ ಕಾಮಗಾರಿಗಳನ್ನು ಸರ್ಕಾರದ ಅನುದಾನದಲ್ಲಿ ನಡೆಸಲಾಗುತ್ತದೆ.

ವರ್ತೂರು ಹೋಬಳಿಯ ಗುಂಜೂರು ಪ್ರದೇಶದ ಡೀಮ್ಡ್ ಅರಣ್ಯದಲ್ಲಿ ಮರಗಳ ಉದ್ಯಾನ ಅಭಿವೃದ್ಧಿಪಡಿಸಲಾಗುತ್ತಿದ್ದು, ನೆಡುತೋಪು ಬೆಳೆಸಲಾಗಿದೆ. ಇಲ್ಲಿ ವಾಹನ ನಿಲುಗಡೆ ತಾಣ, ಕಲ್ಲಿನ ಆಸನಗಳು, ಆಟದ ಸಲಕರಣೆಗಳನ್ನು ಒಳಗೊಂಡ ಮಕ್ಕಳ ಉದ್ಯಾನ ನಿರ್ಮಾಣವಾಗಲಿದೆ. ಇಲ್ಲೂ ಕರ್ಬ್ ಸ್ಟೋನ್ ಬಳಸಿ ನಡಿಗೆ ಪಥ ನಿರ್ಮಿಸಲಾಗುತ್ತದೆ ಎಂದು ಅರಣ್ಯ ಇಲಾಖೆ ತಿಳಿಸಿದೆ.

ಅಂಕಿ ಅಂಶ

22 ಎಕರೆ **08** ಗುಂಟೆ
ಕಾಡುಗೋಡಿ ಮರಗಳ ಉದ್ಯಾನದ ವಿಸ್ತೀರ್ಣ

₹69 ಕೋಟಿ
ಈ ಯೋಜನೆಯ ಅಂದಾಜು ವೆಚ್ಚ

136 ಎಕರೆ **35** ಗುಂಟೆ
ಗುಂಜೂರು ಪ್ರದೇಶದಲ್ಲಿ ನಿರ್ಮಾಣವಾಗಲಿರುವ ಮರಗಳ ಉದ್ಯಾನದ ವಿಸ್ತೀರ್ಣ

ಸ್ಥಳ ಪರಿಶೀಲಿಸಿದ ಸಚಿವ ಲಿಂಬಾವಳಿ

ಕಾಡುಗೋಡಿ ಹಾಗೂ ಗುಂಜೂರುಗಳಲ್ಲಿ ಅಭಿವೃದ್ಧಿಪಡಿಸುತ್ತಿರುವ ಮರಗಳ ಉದ್ಯಾನಗಳಿಗೆ ಅರಣ್ಯ ಸಚಿವ ಹಾಗೂ ಸ್ಥಳೀಯ ಶಾಸಕ ಅರವಿಂದ ಲಿಂಬಾವಳಿ ಅವರು ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕಾಮಗಾರಿಗಳ ಪ್ರಗತಿಯ ಬಗ್ಗೆ ಅಧಿಕಾರಿಗಳಿಂದ ವಿವರಗಳನ್ನು ಪಡೆದುಕೊಂಡರು.

ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸಂದೀಪ್ ದವೆ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್ ಮೋಹನ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ,) ಆರ್.ಕೆ. ಸಿಂಗ್, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಯೋಜನೆ) ಅನಿತಾ ಅರೆಕ್ಕಲ್, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ವೆಂಕಟೇಶ್ ಅವರು ಕಾಮಗಾರಿಗಳ ವಿವರ ಮತ್ತು ಅನುಷ್ಠಾನದ ಬಗ್ಗೆ ಸಚಿವರಿಗೆ ಮಾಹಿತಿ ಒದಗಿಸಿದರು.

ವಾಹನ ತೆರಿಗೆ ವಿನಾಯಿತಿ

ಬೆಂಗಳೂರು: ರಾಜ್ಯದಲ್ಲಿ ಈಗಾಗಲೇ ನೋಂದಣಿಯಾಗಿರುವ ಎಲ್ಲ ಬಗೆಯ ಪ್ರಯಾಣಿಕ ವಾಹನಗಳಿಗೆ ಮೇ ತಿಂಗಳ (ಒಂದು ತಿಂಗಳ) ಅವಧಿಗೆ ಮೋಟಾರು ವಾಹನ ತೆರಿಗೆ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

'ಲಾಕ್‌ಡೌನ್ ಜಾರಿಯಲ್ಲಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಹೊಸದಾಗಿ ನೋಂದಣಿ ಆಗುವ ವಾಹನಗಳಿಗೆ ಈ ವಿನಾಯಿತಿ ಅನ್ವಯಿಸುವುದಿಲ್ಲ' ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ನಗರದಲ್ಲಿ ಇಂದು



ಎಚ್.ಎಸ್. ದೊರೆಸ್ವಾಮಿ

ಎಚ್.ಎಸ್.ದೊರೆಸ್ವಾಮಿ ಅವರಿಗೆ ಶ್ರದ್ಧಾಂಜಲಿ: ನೇತೃತ್ವ–ತರಳಬಾಳು ಬೃಹನ್ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ನುಡಿನಮನ–ಬಿ.ಎಲ್.ಶಂಕರ್, ಗೊ.ರು.ಚನ್ನಬಸಪ್ಪ, 'ಮುಖ್ಯಮಂತ್ರಿ' ಚಂದ್ರು, ವೈ.ಎಸ್.ವಿ.ದತ್ತ, ಎಸ್.ಜಿ.ಸಿದ್ದರಾಮಯ್ಯ, ಬಿ.ಸುರೇಶ, ಇಂದಿರಾ ಕೃಷ್ಣಪ್ಪ, ಶ್ರೀನಿವಾಸ ಜಿ.ಕಪ್ಪಣ್ಣ, ಕೆ.ಎಸ್.ನಾಗರಾಜ್, ನಾಗೇಶ್ ಬೆಟ್ಟಕೋಟೆ, ಆಯೋಜನೆ–ಭಾರತ ಯಾತ್ರಾ ಕೇಂದ್ರ, ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಎಚ್.ಎಸ್.ದೊರೆಸ್ವಾಮಿ ಅವರಿಗೆ ನಮನ: ಭಾಗವಹಿಸುವವರು–ರಾಮಚಂದ್ರ ಗುಹ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಬಿ.ಎಲ್. ಶಂಕರ್, ಎ.ಜೆ.ಸದಾಶಿವ, ಚಿರಂಜೀವಿ ಸಿಂಗ್,ಬರಗೂರು ರಾಮಚಂದ್ರಪ್ಪ, ಸಿ.ಸೋಮಶೇಖರ್, ಎಸ್.ಜಿ.ಸಿದ್ದರಾಮಯ್ಯ, ಚಂದನ್ ಗೌಡ, ಟಿ.ಎಸ್.ನಾಗಾಭರಣ, ಎ.ಟಿ. ರಾಮಸ್ವಾಮಿ, ಮಾವಳ್ಳಿ ಶಂಕರ್, ಕೋಡಿಹಳ್ಳಿ ಚಂದ್ರಶೇಖರ್, ರವಿಕೃಷ್ಣಾ ರೆಡ್ಡಿ, ಬಿ.ವಿ.ರಾಜಾರಾಂ, ರಾಜು ದೊರೆಸ್ವಾಮಿ, ಗೀತನಮನ–ಪುತ್ತೂರು ನರಸಿಂಹ ನಾಯಕ್, ರತ್ನಮಾಲಾ ಪ್ರಕಾಶ್, ಸಂಗೀತಾ ಕಟ್ಟಿ, ಮಂಗಳಾ ರವಿ, ಪಂಚಮ್ ಹಳಬಂಡಿ, ಸವಿತಾ ಗಣೇಶ್ ಪ್ರಸಾದ್, ಸಂಜೆ 5ಕ್ಕೆ (**'ಪ್ರಜಾವಾಣಿ' ಫೇಸ್‌ಬುಕ್ ನೇರಪ್ರಸಾರ**)

ಬಿಬಿಎಂಪಿ ಚುನಾವಣೆ ತಯಾರಿ ಸಮಿತಿ ರಚಿಸಿದ ಜೆಡಿಎಸ್

ಬೆಂಗಳೂರು: ಬಿಬಿಎಂಪಿ ಚುನಾವಣೆಗೆ ಪೂರಕವಾಗಿ ಪಕ್ಷ ಸಂಘಟಿಸಲು ಮತ್ತು ಚುನಾವಣಾ ಸಿದ್ಧತೆಗಳನ್ನು ನಡೆಸಲು ಜೆಡಿಎಸ್ ರಾಜ್ಯಸಭೆಯ ಮಾಜಿ ಸದಸ್ಯ ಕುಪೇಂದ್ರ ರೆಡ್ಡಿ ನೇತೃತ್ವದಲ್ಲಿ ಒಂಬತ್ತು ಸದಸ್ಯರ ಸಮಿತಿ ರಚಿಸಿದೆ.

ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷ ಆರ್.ಪ್ರಕಾಶ್ ಸಮಿತಿಯ ಸಂಚಾಲಕರಾಗಿದ್ದು, ದಾಸರಹಳ್ಳಿ ಕ್ಷೇತ್ರದ ಶಾಸಕ ಆರ್. ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಕೆ.ವಿ. ನಾರಾಯಣ ಸ್ವಾಮಿ, ಎಚ್.ಎಂ. ರಮೇಶ್ ಗೌಡ, ಮಾಜಿ ಸದಸ್ಯ ಟಿ.ಎ. ಶರವಣ, ಪಕ್ಷದ ರಾಜ್ಯ 'ಕೋರ್' ಸಮಿತಿ ಸದಸ್ಯ ವಿ. ನಾರಾಯಣಸ್ವಾಮಿ, ಪಕ್ಷದ ಬೆಂಗಳೂರು ಮಹಾನಗರ ಮಹಿಳಾ ಘಟಕದ ಅಧ್ಯಕ್ಷೆ ರುತ್ ಮನೋರಮಾ ಮತ್ತು ಬಿಬಿಎಂಪಿ ಮಾಜಿ ಸದಸ್ಯ ಇಮ್ರಾನ್ ಪಾಷ ಸದಸ್ಯರಾಗಿದ್ದಾರೆ ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಕೆ. ಕುಮಾರಸ್ವಾಮಿ ತಿಳಿಸಿದ್ದಾರೆ.

FOR SALE
PPE KIT HOT SEAM SEALING MACHINE
READY FOR SALE
NEWLY IMPORTED HOT SEAM SEALING MACHINE - 8 No's
GOOD PRICE
Contact: 9842248499
Mail id: info@cossmotex.com

ಆಟೊ ಚಾಲಕರಿಗೆ ಪರಿಹಾರ: ಆನ್‌ಲೈನ್ ನೋಂದಣಿಗೆ ನೆರವು

ಬೆಂಗಳೂರು: ಲಾಕ್‌ಡೌನ್ ಸಂದರ್ಭದಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಆಟೊ, ಟ್ಯಾಕ್ಸಿ ಹಾಗೂ ಮ್ಯಾಕ್ಸಿ ಕ್ಯಾಬ್ ಚಾಲಕರಿಗೆ ರಾಜ್ಯ ಸರ್ಕಾರವು ತಲಾ ₹3 ಸಾವಿರ ಪರಿಹಾರದ ಪ್ಯಾಕೇಜ್ ಪ್ರಕಟಿಸಿದೆ. ಇದಕ್ಕೆ ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಬೇಕಿದ್ದು, ಈ ಕಾರ್ಯದಲ್ಲಿ ಚಾಲಕರಿಗೆ ನೆರವಾಗಲು 'ಬೆಂಗಳೂರು ಹುಡುಗರು' ತಂಡವು ಮುಂದಾಗಿದೆ.

ರಾಜರಾಜೇಶ್ವರಿ ನಗರದ ಕಮಾನು ಮತ್ತು ಯಶವಂತಪುರ ಮಾರುಕಟ್ಟೆ ಬಳಿ ಬೆಳಿಗ್ಗೆ 7.30 ರಿಂದ 8.30ರವರೆಗೆ ಹಾಗೂ ಮೆಜೆಸ್ಟಿಕ್ ರೈಲ್ವೆ ನಿಲ್ದಾಣದ ಎದುರು ಬೆಳಿಗ್ಗೆ 8 ರಿಂದ 9ರವರೆಗೆ ಈ ತಂಡದವರು ಪ್ರತಿದಿನ ಕಾರ್ಯನಿರ್ವಹಿಸಲಿದ್ದಾರೆ.

ಹೆಸರು ನೋಂದಾಯಿಸಲು ಇಚ್ಛಿಸುವವರು ಆಧಾರ್ ಗುರುತಿನ ಪತ್ರದೊಂದಿಗೆ ತಮ್ಮ ಮೊಬೈಲ್ ಸಂಖ್ಯೆಯನ್ನು ಲಿಂಕ್ ಮಾಡಿರಬೇಕು. ಚಾಲನಾ ಪರವಾನಗಿ (ಡಿಎಲ್), ಆರ್‌ಸಿ ಮತ್ತು ಬ್ಯಾಂಕ್ ಪಾಸ್ ಪುಸ್ತಕವನ್ನು ತರಬೇಕು. ಆಧಾರ್ ಮತ್ತು ಡಿಎಲ್‌ನಲ್ಲಿ ನಮೂದಿಸಿರುವ ಹೆಸರು ಒಂದೇ ರೀತಿ ಇರಬೇಕು. ಹೆಚ್ಚಿನ ಮಾಹಿತಿಗೆ 9611733032.

'ಜೀವ ಉಳಿಸಲು ಲಸಿಕೆ ಸಹಕಾರಿ'

ಬೆಂಗಳೂರು: 'ಕೋವಿಡ್‌ನಿಂದ ಜೀವ ಉಳಿಸಲು ಲಸಿಕೆ ಸಹಕಾರಿ. ಹೀಗಾಗಿ ಎಲ್ಲರೂ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು' ಎಂದು ಅಮೀರ್–ಈ–ಷರಿಯತ್ ಕರ್ನಾಟಕದ ಮೌಲಾನಾ ಸಗೀರ್ ಅಹ್ಮದ್ ಶನಿವಾರ ಹೇಳಿದ್ದಾರೆ.

'ಕೋವಿಡ್ ಮಾರಣಾಂತಿಕ ರೂಪ ಪಡೆದುಕೊಂಡಿದೆ. ಲಸಿಕೆ ಹಾಕಿಸಿಕೊಳ್ಳುವ ಮೂಲಕ ಈ ಪಿಡುಗನ್ನು ತಡೆಯಬಹುದಾಗಿದೆ. ಕೊರೊನಾ ಮಾತ್ರವಲ್ಲ ಇತರ ರೋಗಗಳಿಂದ ಮುಕ್ತವಾಗಲೂ ಲಸಿಕೆ ಪ್ರಯೋಜನಕಾರಿ. ವ್ಯವಸ್ಥೆ ಮಾಡಿರುವಲ್ಲಿಗೆ ಹೋಗಿ ಸ್ವಯಂಪ್ರೇರಣೆಯಿಂದ ಲಸಿಕೆ ಪಡೆದುಕೊಳ್ಳಬೇಕು' ಎಂದು ಹೇಳಿದ್ದಾರೆ.

ಮರಣ ಪ್ರಮಾಣ ಶೇ 2.38ರಷ್ಟು ಹೆಚ್ಚಳ ● ನಗರದಲ್ಲಿ ಹೊಸ ಪ್ರಕರಣಗಳಲ್ಲಿ ಮತ್ತಷ್ಟು ಇಳಿಕೆ

ಕೋವಿಡ್: ಮರಣ ಪ್ರಮಾಣ ದರ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮೂರು ದಿನಗಳಿಂದ ತಗ್ಗಿದ್ದ ಕೋವಿಡ್ ಮರಣ ಪ್ರಮಾಣ ದರ ಮತ್ತೆ ಏರಿಕೆ ಕಂಡಿದೆ. ಸೋಂಕಿತರಲ್ಲಿ ಮತ್ತೆ 492 ಮಂದಿ ಮೃತಪಟ್ಟಿರುವುದು ದೃಢಪಟ್ಟಿದ್ದು, ಮರಣ ಪ್ರಮಾಣ ದರ ಶೇ 2.38ಕ್ಕೆ ಏರಿದೆ.

24 ಗಂಟೆಗಳ ಅವಧಿಯಲ್ಲಿ 20,628 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಒಂದು ದಿನದ ಅವಧಿಯಲ್ಲಿ 1.37 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 14.95ಕ್ಕೆ ಇಳಿಕೆಯಾಗಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 25.67 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಮತ್ತೆ 42,444 ಮಂದಿ ಗುಣಮುಖರಾಗಿದ್ದಾರೆ. ಕೆಲ ದಿನಗಳಿಂದ ಚೇತರಿಸಿಕೊಳ್ಳುವವರ ಸಂಖ್ಯೆಯಲ್ಲಿ ಏರಿಕೆ ಕಂಡಿದ್ದು, ಈ ತಿಂಗಳು 29 ದಿನಗಳ ಅವಧಿಯಲ್ಲಿ 10.64 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖ ಹೊಂದಿದವರ ಸಂಖ್ಯೆ 21.89 ಲಕ್ಷ ದಾಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 3.50 ಲಕ್ಷಕ್ಕೆ ಇಳಿಕೆಯಾಗಿದೆ.

ಬೆಂಗಳೂರಿನಲ್ಲಿ ಮತ್ತೆ 278 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮೈಸೂರಿನಲ್ಲಿ 28 ಮಂದಿ, ಧಾರವಾಡದಲ್ಲಿ 19 ಮಂದಿ, ಬೆಂಗಳೂರು ಗ್ರಾಮಾಂತರದಲ್ಲಿ 16 ಮಂದಿ, ಉತ್ತರ ಕನ್ನಡದಲ್ಲಿ 15 ಮಂದಿ, ಶಿವಮೊಗ್ಗ ಹಾಗೂ ಬಳ್ಳಾರಿಯಲ್ಲಿ ತಲಾ 14 ಮಂದಿ, ತುಮಕೂರಿನಲ್ಲಿ 13 ಮಂದಿ ಸಾವಿಗೀಡಾಗಿರುವುದು ಖಚಿತಪಟ್ಟಿದೆ. ಈವರೆಗೆ ಕೋವಿಡ್‌ಗೆ ಮೃತಪಟ್ಟವರ ಸಂಖ್ಯೆ 28,298ಕ್ಕೆ ತಲುಪಿದೆ.

ಬೆಂಗಳೂರಿನಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಮತ್ತಷ್ಟು ಇಳಿಕೆಯಾಗಿದ್ದು, 24 ಗಂಟೆಗಳ ಅವಧಿಯಲ್ಲಿ 4,889 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (1,720), ತುಮಕೂರು (1,102), ಬೆಳಗಾವಿ (1,027), ಹಾಸನ (1,024) ಜಿಲ್ಲೆಯಲ್ಲಿ ಅಧಿಕ ಪ್ರಕರಣ ವರದಿಯಾಗಿವೆ. ಉಳಿದ ಜಿಲ್ಲೆಗಳಲ್ಲಿ ಸಾವಿರಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ದೃಢಪಟ್ಟಿವೆ.

ಲಾಕ್‌ಡೌನ್ ಸಂಪೂರ್ಣ ತೆರವು ಸದ್ಯಕ್ಕಿಲ್ಲ?

ಬೆಂಗಳೂರು: 'ಲಾಕ್‌ಡೌನ್ ಮುಂದುವರಿಸಿದರೆ ಸೂಕ್ತ ಎಂಬ ವರದಿಯನ್ನು ತಜ್ಞರ ಸಮಿತಿ ನೀಡಿದೆ. ಮುಖ್ಯಮಂತ್ರಿ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

'ದೆಹಲಿಯಲ್ಲಿ ಹೊಸ ಪ್ರಕರಣಗಳ ಸಂಖ್ಯೆ 1 ಸಾವಿರಕ್ಕಿಂತ ಕಡಿಮೆಯಾಗಿದೆ. ಬೆಂಗಳೂರಿನಲ್ಲಿ ನಿತ್ಯ 22 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿದ್ದವು. ಈ ಸಂಖ್ಯೆ ಈಗ 5 ಸಾವಿರಕ್ಕ ಇಳಿದಿದೆ. ಅದು 1 ಸಾವಿರಕ್ಕಿಂತ ಕಡಿಮೆಯಾದರೆ ಲಾಕ್‌ಡೌನ್ ಸಂಪೂರ್ಣ ತೆರವು ಮಾಡಬಹುದು' ಎಂದು ಅಭಿಪ್ರಾಯಪಟ್ಟರು.

'ಜೂನ್ 7ರ ತನಕ ಲಾಕ್‌ಡೌನ್ ಮುಂದುವರಿಯಲಿದೆ. ಒಮ್ಮೆಲೆ ಲಾಕ್‌ಡೌನ್ ತೆರವುಗೊಳಿಸಿದರೆ ಮತ್ತೆ ಕೋವಿಡ್ ಹರಡುವಿಕೆ ಹೆಚ್ಚಾಗುವ ಸಾಧ್ಯತೆ ಇದೆ. ಹೀಗಾಗಿ, ಹಂತ-ಹಂತವಾಗಿ ಸಡಿಲ ಮಾಡುವಂತೆ ಮುಖ್ಯಮಂತ್ರಿ ಅವರಿಗೆ ಸಲಹೆ ನೀಡಿದ್ದೇವೆ. ಅಂತಿಮವಾಗಿ ಅವರು ತೀರ್ಮಾನ ಕೈಗೊಳ್ಳಲಿದ್ದಾರೆ. ಮೂರು ದಿನ ಮುಂಚೆಯೇ ನಿರ್ಧಾರ ಕೈಗೊಳ್ಳಲಾಗುವುದು' ಎಂದರು.

ಕಪ್ಪು ಶಿಲೀಂಧ್ರ: 30 ಮಂದಿಗೆ ಸೋಂಕು

ಬೆಂಗಳೂರು: ನಗರದಲ್ಲಿ 30 ಮಂದಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದು ಶನಿವಾರ ದೃಢಪಟ್ಟಿದೆ.

ಸೋಂಕಿಗೆ ಒಳಗಾದವರಲ್ಲಿ ಇಬ್ಬರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಕೋವಿಡ್‌ನಿಂದ ಚೇತರಿಸಿಕೊಂಡು ಶಿಲೀಂಧ್ರ ಸೋಂಕಿಗೆ ಒಳಗಾದ 24 ಮಂದಿ ಬೌರಿಂಗ್ ಆಸ್ಪತ್ರೆಗೆ ಹಾಗೂ 6 ಮಂದಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದವರಲ್ಲಿ ಇಬ್ಬರು ಚೇತರಿಸಿಕೊಂಡು ಮನೆಗೆ ತೆರಳಿದ್ದಾರೆ. ಸದ್ಯ ಅಲ್ಲಿ 100ಕ್ಕೂ ಅಧಿಕ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಸೋಂಕಿತನಾಗಿದ್ದ ಮೈಸೂರಿನ 11 ವರ್ಷದ ಬಾಲಕ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯಿಂದ (ನಿಮ್ಹಾನ್ಸ್) ಬೌರಿಂಗ್ ಆಸ್ಪತ್ರೆಗೆ ಶನಿವಾರ ವಾಪಸ್ ಆಗಿದ್ದಾನೆ. ಮಿದುಳಿಗೆ ಸೋಂಕು ಹರಡಿರುವ ಶಂಕೆ ವ್ಯಕ್ತವಾದ ಕಾರಣ ಬೌರಿಂಗ್ ಆಸ್ಪತ್ರೆಯ ವೈದ್ಯರು ನಿಮ್ಹಾನ್ಸ್‌ಗೆ ಸ್ಥಳಾಂತರ ಮಾಡಿದ್ದರು. ಇಎನ್‌ಟಿ ತಜ್ಞರು ಬಾಲಕನಿಗೆ ಶಸ್ತ್ರಚಿಕಿತ್ಸೆ ನೆರವೇರಿಸಲು ನಿರ್ಧರಿಸಿದ್ದಾರೆ.

ಸುದ್ದಿ 2 ನಿಮಿಷ

ವಿದ್ಯಾರ್ಥಿಗಳಿಗೆ ಆದ್ಯತೆ ಮೇಲೆ ಲಸಿಕೆ ಕೊಡಿ: ಎಚ್‌ಡಿಕೆ

ಬೆಂಗಳೂರು: ಉನ್ನತ ಶಿಕ್ಷಣ ಪಡೆಯಲು ವಿದೇಶಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ರಾಜ್ಯದಲ್ಲೂ ಆದ್ಯತೆಯ ಮೇಲೆ ಕೋವಿಡ್ ಲಸಿಕೆ ನೀಡಬೇಕು ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಕುರಿತು ಶನಿವಾರ ಸರಣಿ ಟ್ವೀಟ್ ಮಾಡಿರುವ ಅವರು, 'ಕೇರಳ, ಮಹಾರಾಷ್ಟ್ರ ಸೇರಿದಂತೆ ಕೆಲವು ರಾಜ್ಯಗಳು ವಿದೇಶಗಳಿಗೆ ತೆರಳುವ ವಿದ್ಯಾರ್ಥಿಗಳಿಗೆ ಆದ್ಯತೆ ಮೇಲೆ ಲಸಿಕೆ ನೀಡುತ್ತಿವೆ. ರಾಜ್ಯದಲ್ಲೂ ಈ ರೀತಿಯ ವ್ಯವಸ್ಥೆ ಮಾಡಬೇಕು. ಇಲ್ಲವಾದರೆ ಲಸಿಕೆ ಪಡೆಯದ ಕಾರಣಕ್ಕೆ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯಲು ವಿದೇಶಕ್ಕೆ ತೆರಳುವ ಅವಕಾಶ ತಪ್ಪಿಸಿಕೊಳ್ಳುವ ಸಾಧ್ಯತೆ ಇದೆ' ಎಂದಿದ್ದಾರೆ.

ರಾಜ್ಯದ ಹಲವು ಕಡೆಗಳಲ್ಲಿ ಕೋವಿಡ್ ಚಿಕಿತ್ಸಾ ಕೇಂದ್ರಗಳಲ್ಲೇ ಲಸಿಕೆ ವಿತರಣೆಯೂ ನಡೆಯುತ್ತಿದೆ. ಲಸಿಕಾ ಕೇಂದ್ರಗಳಲ್ಲೇ ಕೊರೊನಾ ವೈರಾಣು ಸೋಂಕು ಹರಡುವ ಅಪಾಯದ ಸ್ಥಿತಿ ಇದೆ. ಅಂತಹ ಸ್ಥಳಗಳನ್ನು ಗುರುತಿಸಿ ಲಸಿಕಾ ಕೇಂದ್ರಗಳನ್ನು ಶಾಲೆ, ಕಾಲೇಜುಗಳಿಗೆ ಸ್ಥಳಾಂತರಿಸಬೇಕು ಎಂದು ಒತ್ತಾಯಿಸಿದ್ದಾರೆ.

'ಲಸಿಕೆ ಹಂಚಿಕೆಯಲ್ಲಿ ಅನ್ಯಾಯ' ಟ್ವಿಟರ್ ಅಭಿಯಾನ ಇಂದು

ಬೆಂಗಳೂರು: 'ಆಮ್ಲಜನಕ ಹಾಗೂ ಔಷಧಗಳ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವೆಸಗಿದ್ದ ಕೇಂದ್ರ ಸರ್ಕಾರ ಈಗ ಲಸಿಕೆ ವಿಚಾರದಲ್ಲೂ ತಾರತಮ್ಯ ನೀತಿ ಅನುಸರಿಸುತ್ತಿದೆ. ಇದನ್ನು ಖಂಡಿಸಿ 'ಲಸಿಕೆಯಲ್ಲೂಮೋಸ' ಎಂಬ ಹ್ಯಾಷ್‌ಟ್ಯಾಗ್ ಅಡಿಯಲ್ಲಿ ಕೇಂದ್ರ ಸರ್ಕಾರದ ವಿರುದ್ಧ ಭಾನುವಾರ ಸಂಜೆ 5 ಗಂಟೆಗೆ ಟ್ವಿಟರ್ ಅಭಿಯಾನ ಹಮ್ಮಿಕೊಳ್ಳಲಾಗಿದೆ' ಎಂದು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಟಿ.ಎ.ನಾರಾಯಣಗೌಡ ತಿಳಿಸಿದ್ದಾರೆ.

'ರೆಮ್‌ಡಿಸಿವಿರ್ ಹಂಚಿಕೆಯಲ್ಲೂ ಗುಜರಾತ್, ಉತ್ತರಪ್ರದೇಶ ಹಾಗೂ ಇತರ ರಾಜ್ಯಗಳಿಗೆ ಸಿಂಹಪಾಲು ನೀಡಿ ಕರ್ನಾಟಕಕ್ಕೆ ಅನ್ಯಾಯವೆಸಗಲಾಯಿತು. ಈಗ ಕಪ್ಪು ಶಿಲೀಂಧ್ರ ಪೀಡಿತ ರೋಗಿಗಳಿಗೆ ನೀಡಲಾಗುವ ಔಷಧ ವಿತರಣೆಯಲ್ಲೂ ಮಲತಾಯಿ ಧೋರಣೆ ಅನುಸರಿಸಲಾಗುತ್ತಿದೆ' ಎಂದಿದ್ದಾರೆ.

ನಗರದ ಕೋವಿಡ್ ಅಂಕಿ–ಅಂಶ

11,54,503 ▲	ಒಟ್ಟು ಪ್ರಕರಣಗಳು
1,64,182 ▼	ಸಕ್ರಿಯ ಪ್ರಕರಣಗಳು
9,77,429 ▲	ಗುಣಮುಖರಾದವರು
12,891 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	4,889	▼
ಗುಣಮುಖ	21,126	▼
ಸಾವು	278	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಶಾಸಕರಿಗೆ 'ಲಸಿಕೆ' ಕಮಿಷನ್: ದೂರು

ಒಂದನೇ ಪುಟದಿಂದ...

'ಸಾರ್ವಜನಿಕರಿಗೆ ಉಚಿತವಾಗಿ ಲಸಿಕೆ ಕೊಡಿಸಬೇಕಾದ ಸಂಸದ ಹಾಗೂ ಶಾಸಕ, ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳ ಮೂಲಕ ಮಾರಾಟ ಮಾಡಿ ಕಮಿಷನ್ ಪಡೆಯುತ್ತಿದ್ದಾರೆ. ಈ ಬಗ್ಗೆ ತನಿಖೆ ನಡೆಸಬೇಕು' ಎಂದೂ ದೂರಿನಲ್ಲಿ ಕೋರಲಾಗಿದೆ. 'ದೂರು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು' ಎಂದು ಡಿಸಿಪಿ ಈ ಬಗ್ಗೆ ಪ್ರತಿಕ್ರಿಯಿಸಿದ್ದಾರೆ.

ಆಡಿಯೊ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಎ.ವಿ. ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಆಡಳಿತ ಮಂಡಳಿ, 'ಸ್ವತಂತ್ರವಾಗಿ ಲಸಿಕೆ ಅಭಿಯಾನ ನಡೆಸುತ್ತಿದ್ದೇವೆ. ಇದಕ್ಕೂ ಶಾಸಕ ರವಿ ಸುಬ್ರಹ್ಮಣ್ಯ ಅವರಿಗೂ ಸಂಬಂಧವಿಲ್ಲ. ಲಸಿಕೆಗಳನ್ನು ನಾವೇ ಖರೀದಿಸಿದ್ದೇವೆ. ಸರ್ಕಾರ ನಿಗದಿಪಡಿಸಿರುವ ದರವನ್ನಷ್ಟೇ ಜನರಿಂದ ಪಡೆಯುತ್ತಿದ್ದೇವೆ. ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಆಡಿಯೊ ಆಸ್ಪತ್ರೆಯ ಹಾಗೂ ರವಿ ಸುಬ್ರಹ್ಮಣ್ಯ ಅವರ ಹೆಸರು ಕೆಡಿಸುವ ದುರುದ್ದೇಶದಿಂದ ಕೂಡಿದೆ. ಈ ಬಗ್ಗೆ ಆಸ್ಪತ್ರೆಯಿಂದಲೂ ಪೊಲೀಸರಿಗೆ ದೂರು ನೀಡಲಾಗುವುದು' ಎಂದಿದೆ.

ಬಾಷ್‌ನಿಂದ ಉಚಿತವಾಗಿ ವೆಂಟಿಲೇಟರ್ ದುರಸ್ತಿ

ಬೆಂಗಳೂರು: 'ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಟ್ಟುಹೋಗಿರುವ ವೆಂಟಿಲೇಟರ್‌ಗಳನ್ನು ಬಾಷ್ ಕಂಪನಿ ಉಚಿತವಾಗಿ ದುರಸ್ತಿ ಮಾಡಿಕೊಡಲಿದೆ' ಎಂದು ರಾಜ್ಯ ಕೋವಿಡ್ ಕಾರ್ಯಪಡೆಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

'ಬಾಷ್ ಕಂಪನಿಯ ಉಪಾಧ್ಯಕ್ಷ ರಮೇಶ್ ಸಾಲಿಗ್ರಾಮ ಅವರೊಂದಿಗೆ ಈ ಕುರಿತು ಮಾತುಕತೆ ನಡೆಸಲಾಗಿದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಸಿ ಸರ್ಕಾರಿ ಆಸ್ಪತ್ರೆಗಳ ವೆಂಟಿಲೇಟರ್‌ಗಳನ್ನು ದುರಸ್ತಿ ಮಾಡಿಕೊಡಲು ಬಾಷ್ ಕಂಪನಿ ಆಸಕ್ತಿ ತೋರಿಸಿದೆ' ಎಂದು ಹೇಳಿದರು.

'ಕಾಂಗ್ರೆಸ್‌ನಿಂದ ದಿಕ್ಕು ತಪ್ಪಿಸುವ ಯತ್ನ'

ಬೆಡ್ ಬ್ಲಾಕಿಂಗ್: ಸಂಸದ ತೇಜಸ್ವಿ ಸೂರ್ಯ ಆಕ್ರೋಶ ● 50 ಹಾಸಿಗೆಗಳ ಆರೈಕೆ ಕೇಂದ್ರ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೊಮ್ಮನಹಳ್ಳಿ: 'ಕೊರೊನಾ ಸೋಂಕಿನಿಂದ ಸಾವಿರಾರು ಜನರು ಬಲಿಯಾಗುತ್ತಿದ್ದರು. ಇಂತಹ ಸಂದರ್ಭದಲ್ಲಿ ಬೆಡ್ ಬ್ಲಾಕಿಂಗ್ ಹಗರಣವನ್ನು ನಾವು ಹೊರ ತಂದಿದ್ದೇವೆ. ಆದರೆ, ಇಂತಹ ಸಮಯದಲ್ಲಿ ಕಾಂಗ್ರೆಸ್ ಪ್ರಕರಣದ ದಾರಿ ತಪ್ಪಿಸುವ ಕೆಲಸ ಮಾಡುತ್ತಿದೆ' ಎಂದು ಸಂಸದ ತೇಜಸ್ವಿ ಸೂರ್ಯ ಆಕ್ರೋಶ ವ್ಯಕ್ತಪಡಿಸಿದರು.

ಬೊಮ್ಮನಹಳ್ಳಿಯ ಆರ್.ಎಂ.ಆರ್ ಪಾರ್ಕ್ ಬಳಿ ಪಂಡಿತ್ ದೀನದಯಾಳ್ ಉಪಾಧ್ಯಾಯ 50 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರಕ್ಕೆ ಶನಿವಾರ ಚಾಲನೆ ನೀಡಿ ಮಾತನಾಡಿದರು.

'ಹಾಸಿಗೆ ಬ್ಲಾಕ್ ಪ್ರಕರಣವನ್ನು ಸಿಸಿಬಿ ತನಿಖೆ ಮಾಡುತ್ತಿದೆ. ತನಿಖೆ ಬಳಿಕ ಸಾಕಷ್ಟು ಮಂದಿ ಬಂಧನ ಆಗುವ ಸಾಧ್ಯತೆ ಇದೆ' ಎಂದರು.

ಕೋವಿಡ್ ಆರೈಕೆ ಕೇಂದ್ರದ ಉದ್ಘಾಟನೆ ವೇಳೆ ಬಡವರಿಗೆ ಆಹಾರ ಧಾನ್ಯ ಕಿಟ್ ಅನ್ನು ಸಂಸದ ತೇಜಸ್ವಿ ಸೂರ್ಯ ಹಾಗೂ ಎಂ. ಸತೀಶ್ ರೆಡ್ಡಿ ವಿತರಿಸಿದರು.

ಶಾಸಕ ಎಂ.ಸತೀಶ್ ರೆಡ್ಡಿ ಮಾತನಾಡಿ, 'ಕ್ಷೇತ್ರದ ಸೋಂಕಿತರಿಗೆ ಸರಿಯಾದ ಬೆಡ್ ಸಿಗುತ್ತಿಲ್ಲ ಎಂಬ ಕಾರಣಕ್ಕೆ ಪ್ರಕರಣವನ್ನು ಭೇದಿಸಲು ಹೊರಟಾಗ ಪ್ರಶಂಸೆ ವ್ಯಕ್ತವಾಗಿತ್ತು. ಆದರೆ, ಬಳಿಕ ನಮ್ಮ ಮೇಲೆಯೇ ಆರೋಪ ಮಾಡುತ್ತಿರುವುದು ನೋವು ತಂದಿದೆ' ಎಂದರು.

'ಬೊಮ್ಮನಹಳ್ಳಿಯಲ್ಲಿ ದಾನಿಗಳ ನೆರವಿನಿಂದ ₹50 ಲಕ್ಷ ವೆಚ್ಚದಲ್ಲಿ ಆಮ್ಲಜನಕ ಸಹಿತ ಆರೈಕೆ ಕೇಂದ್ರ ಆರಂಭಿಸಲಾಗಿದೆ. ಮಕ್ಕಳಿಗೂ ಪ್ರತ್ಯೇಕ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಅಪೊಲೊ ಆಸ್ಪತ್ರೆ, ನ್ಯಾನೊ ಆಸ್ಪತ್ರೆ ಹಾಗೂ ಕೋಡಿಚಿಕ್ಕನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಇಲ್ಲಿ ಚಿಕಿತ್ಸೆ ನೀಡುವರು. ಎಚ್‌ಎಸ್‌ಆರ್ ಬಡಾವಣೆ, ಹೊಂಗಸಂದ್ರದಲ್ಲಿ ಆರೈಕೆ ಕೇಂದ್ರಗಳನ್ನು ಆರಂಭಿಸಲಾಗಿದ್ದು, 400 ಬೆಡ್‌ಗಳು ಲಭ್ಯವಾಗಿವೆ' ಎಂದರು.

'ಈಗಾಗಲೇ ಗಾರ್ಮೆಂಟ್ಸ್‌ಗಳ 10 ಸಾವಿರ ನೌಕರರಿಗೆ ಆಹಾರದ ಕಿಟ್ ನೀಡಲಾಗಿದೆ. ಕ್ಷೇತ್ರದ 50 ಸಾವಿರ ಮಂದಿಗೆ ವಾರದಲ್ಲಿ ಕಿಟ್ ನೀಡಲಾಗುವುದು. ಪ್ರತಿ ವಾರ್ಡ್‌ನ 6 ಸಾವಿರ ಬಡವರಿಗೆ ಕಿಟ್ ವಿತರಿಸಲಾಗುವುದು' ಎಂದು ಅವರು ಹೇಳಿದರು.

ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡಿರುವ 20 ಮಕ್ಕಳಿಗೆ ತಲಾ ₹25 ಸಾವಿರ ಧನಸಹಾಯವನ್ನು ನೀಡಲಾಯಿತು.

ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತ ರಾಮಕೃಷ್ಣ, ಮಾಜಿ ಉಪ ಮೇಯರ್ ರಾಮ್‌ಮೋಹನ್ ರಾಜ್, ಬಿಜೆಪಿ ಮುಖಂಡರಾದ ಶ್ರೀನಿವಾಸ್, ಜಲ್ಲಿ ರಮೇಶ್, ಭಾಗ್ಯಲಕ್ಮಿ ಮುರಳಿ, ಮುನಿರಾಮು, ರಾಮಚಂದ್ರ ಇದ್ದರು.

ಪ್ರೋತ್ಸಾಹಧನ: ಗುತ್ತಿಗೆ ನೌಕರರ ಆಗ್ರಹ

ಬೆಂಗಳೂರು: ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ಅರೆವೈದ್ಯಕೀಯ ಸಿಬ್ಬಂದಿಗೆ ನೀಡಿರುವಂತೆ ತಮಗೂ ಕೋವಿಡ್ ಪ್ರೋತ್ಸಾಹಧನ ನೀಡಬೇಕು ಎಂದು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ (ಎನ್‌ಎಚ್‌ಎಂ) ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರು ಆಗ್ರಹಿಸಿದ್ದಾರೆ.

ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಗುತ್ತಿಗೆ ಹಾಗೂ ಹೊರಗುತ್ತಿಗೆ ನೌಕರರ ಸಂಘದ ಗೌರವಾಧ್ಯಕ್ಷ ಆಯನೂರು ಮಂಜುನಾಥ್ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರಿಗೆ ಈ ಕುರಿತು ಪತ್ರ ಬರೆದಿದ್ದಾರೆ.

ಪುಣ್ಯ ಕ್ಷೇತ್ರಗಳ ಸೇವೆ ಶ್ಲಾಘನೀಯ: ಮುಖ್ಯಮಂತ್ರಿ

ಶ್ರೀಕ್ಷೇತ್ರ ಧರ್ಮಸ್ಥಳದಿಂದ ವೆಂಟಿಲೇಟರ್, ಕಾನ್ಸೆಂಟ್ರೇಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ರೋಗಿಗಳ ಆರೈಕೆಗಾಗಿ ಶ್ರೀಕ್ಷೇತ್ರ ಧರ್ಮಸ್ಥಳದ ವತಿಯಿಂದ ಉಚಿತವಾಗಿ ನೀಡಲಾದ ಆಮ್ಲಜನಕ ವೆಂಟಿಲೇಟರ್, ಆಮ್ಲಜನಕ ಕಾನ್ಸೆಂಟ್ರೇಟರ್ ಮತ್ತು ಹೈಪ್ಲೋ ಯಂತ್ರಗಳನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಶನಿವಾರ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, 'ಕೊರೊನಾ ಸೋಂಕಿತರ ಆರೈಕೆಗೆ ಸರ್ಕಾರದ ಜೊತೆ ಮಠಗಳು, ಪುಣ್ಯ ಕ್ಷೇತ್ರಗಳು ಸೇರಿ ನಿರ್ವಹಿಸುತ್ತಿರುವ ಕಾರ್ಯ ಶ್ಲಾಘನೀಯ. ಶ್ರೀಕ್ಷೇತ್ರ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರ ಸೇವೆ ಸ್ಮರಣೀಯ' ಎಂದರು.

'ರಾಜ್ಯಕ್ಕೆ ಶ್ರೀಕ್ಷೇತ್ರ ಧರ್ಮಸ್ಥಳದ ವತಿಯಿಂದ 300 ಆಮ್ಲಜನಕ ವೆಂಟಿಲೇಟರ್ ನೀಡಲಾಗಿದೆ. ಈ ಉದ್ದೇಶಕ್ಕೆ ₹2 ಕೋಟಿಯಷ್ಟು ವೆಚ್ಚವಾಗಿದೆ. ನೆಲಮಂಗಲದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಎರಡು ವೆಂಟಿಲೇಟರ್ ಮತ್ತು ಹತ್ತು ಆಮ್ಲಜನಕ ಕಾನ್ಸೆಂಟ್ರೇಟರ್ ನೀಡಲಾಗಿದೆ. ತಲಾ 20 ಕಾನ್ಸೆಂಟ್ರೇಟರ್‌ಗಳನ್ನು ದೇವನಹಳ್ಳಿ ಮತ್ತು ಆನೇಕಲ್ ಗ್ರಾಮಗಳಿಗೆ ನೀಡಲಾಗಿದೆ. ದೇವನಹಳ್ಳಿ ಮತ್ತು ಆನೇಕಲ್‌ನಲ್ಲಿ ಕಾನ್ಸೆಂಟ್ರೇಟರ್ ಬ್ಯಾಂಕ್ ತೆರೆಯಲಾಗಿದ್ದು, ಅಗತ್ಯವಿರುವವರಿಗೆ ಇಲ್ಲಿನ ಸಿಬ್ಬಂದಿ ಒದಗಿಸುತ್ತಾರೆ' ಎಂದು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಲ್.ಎಚ್. ಮಂಜುನಾಥ್ ತಿಳಿಸಿದರು.

ಶ್ರೀಕ್ಷೇತ್ರ ಧರ್ಮಸ್ಥಳದ ವತಿಯಿಂದ ನೀಡಿದ ಆಮ್ಲಜನಕ ವೆಂಟಲೇಟರ್, ಕಾನ್ಸೆಂಟ್ರೇಟರ್ ಮತ್ತು ಹೈಪ್ಲೋ ಯಂತ್ರಗಳನ್ನು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಿಡುಗಡೆ ಮಾಡಿದರು. ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಲ್.ಎಚ್. ಮಂಜುನಾಥ್, ಬೆಂಗಳೂರು ನಗರ ಪ್ರಾದೇಶಿಕ ನಿರ್ದೇಶಕ ಶೀನಪ್ಪ, ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ಗಣೇಶ್ ಆಚಾರ್ ಇದ್ದರು.

'ಆಮ್ಲಜನಕ ನೀಡುವ ಕುರಿತು ಅನೇಕ ಸಿಬ್ಬಂದಿಗೆ ಶ್ರೀಕ್ಷೇತ್ರದ ವತಿಯಿಂದ ತರಬೇತಿ ನೀಡಲಾಗಿದೆ. ಕೊರೊನಾ ಸೋಂಕಿನಿಂದ ಮುಕ್ತರಾದ ಮೇಲೆ ಕಪ್ಪು ಶಿಲೀಂಧ್ರ ಸೋಂಕು ಕಾಣಿಸಿಕೊಂಡರೆ ಆಮ್ಲಜನಕದ ಅವಶ್ಯಕತೆ ಇರುತ್ತದೆ. ಅಂಥವರಿಗೆ ದೇವನಹಳ್ಳಿ ಮತ್ತು ಆನೇಕಲ್‌ನಲ್ಲಿ ಉಚಿತವಾಗಿ ಆಮ್ಲಜನಕ ನೀಡಲಾಗುವುದು. ಬೆಂಗಳೂರು ಗ್ರಾಮಾಂತರ ಪ್ರದೇಶದವರು ಈ ಸೌಲಭ್ಯ ಪಡೆದುಕೊಳ್ಳಬಹುದು' ಎಂದೂ ಹೇಳಿದರು.

ಮುಖ್ಯಾಂಶಗಳು

- ₹2 ಕೋಟಿಯಷ್ಟು ವೆಚ್ಚದಲ್ಲಿ 300 ಆಮ್ಲಜನಕ ವೆಂಟಿಲೇಟರ್
- ಆಮ್ಲಜನಕ ನೀಡುವ ಕುರಿತು ಶ್ರೀಕ್ಷೇತ್ರದಿಂದ ಸಿಬ್ಬಂದಿಗೆ ತರಬೇತಿ

ಬಹಿಷ್ಕಾರ: ಆಯುಷ್ ವೈದ್ಯಾಧಿಕಾರಿಗಳಿಂದ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ನಿಯಂತ್ರಣಕ್ಕೆ ಶ್ರಮಿಸುತ್ತಿರುವ ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳಿಗೂ ವಿಶೇಷ ಭತ್ಯೆಯನ್ನು ವಿಸ್ತರಿಸಬೇಕು. ಇಲ್ಲದಿದ್ದರೆ ಜೂನ್ 7ರಿಂದ ಕೋವಿಡ್ ನಿರ್ವಹಣೆಯ ಎಲ್ಲ ಕೆಲಸಗಳನ್ನು ಬಹಿಷ್ಕರಿಸಲಿದ್ದೇವೆ' ಎಂದು ಕರ್ನಾಟಕ ಸರ್ಕಾರಿ ಆಯುಷ್ ವೈದ್ಯಾಧಿಕಾರಿಗಳ ಸಂಘವು ಸರ್ಕಾರವನ್ನು ಎಚ್ಚರಿಸಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಸಂಘವು, 'ಆರೋಗ್ಯ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆಯನ್ನು ಹೆಚ್ಚಿಸಿ, ಆದೇಶಿಸಲಾಗಿದೆ. ಕಾಲಕಾಲಕ್ಕೆ ನೀಡಲಾಗುವ ವೇತನ, ಭತ್ಯೆ ಮತ್ತು ಸ್ಥಾನಮಾನವನ್ನು ಆಯುಷ್ ವೈದ್ಯಾಧಿಕಾರಿಗಳಿಗೂ ವಿಸ್ತರಿಸಬೇಕೆಂದು ಸಚಿವ ಸಂಪುಟದಲ್ಲಿ ನಿರ್ಣಯಿಸಲಾಗಿದೆ. ಹೀಗಿದ್ದರೂ ಆಯುಷ್ ವೈದ್ಯಾಧಿಕಾರಿಗಳನ್ನು ಹೊರತುಪಡಿಸಿ ವಿಶೇಷ ಭತ್ಯೆಯನ್ನು ನೀಡಿರುವುದು ಅಸಮಂಜಸ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಡಾ.ಜೆ. ಈರಣ್ಣ ಬೇಸರ ವ್ಯಕ್ತಪಡಿಸಿದ್ದಾರೆ.

'ಕೋವಿಡ್ ವಿರುದ್ಧದ ಹೋರಾಟದಲ್ಲಿ ಪ್ರತಿ ವೈದ್ಯರೂ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸುತ್ತಿದ್ದಾರೆ. ಸರ್ಕಾರವು ನೀಡಿರುವ ಹೊಣೆಯಿಂದ ಯಾವೊಬ್ಬ ಆಯುಷ್ ವೈದ್ಯಾಧಿಕಾರಿಯೂ ನುಣುಚಿಕೊಂಡಿಲ್ಲ. ಕೋವಿಡ್ ಆರೈಕೆ ಕೇಂದ್ರ, ತಪಾಸಣಾ ಕೇಂದ್ರ ಸೇರಿದಂತೆ ವಿವಿಧೆಡೆ ದಕ್ಷತೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರವು ಅಲೋಪಥಿ-ಆಯುಷ್ ವೈದ್ಯಾಧಿಕಾರಿಗಳ ನಡುವೆ ತಾರತಮ್ಯ ಮಾಡದೆ ವಿವಿಧ ಸೇವೆಗಳಿಗೆ ನಿಯೋಜಿಸುತ್ತಿದೆ. ಆದರೆ, ವಿಶೇಷ ಭತ್ಯೆ ಪರಿಷ್ಕರಣೆ ವಿಚಾರದಲ್ಲಿ ತಾರತಮ್ಯ ಮಾಡಲಾಗಿದೆ. ಆರ್ಥಿಕ ಸೌಲಭ್ಯವನ್ನು ಕೆಲವರಿಗೆ ಮಾತ್ರ ವಿಸ್ತರಿಸಲಾಗಿದೆ' ಎಂದು ಖೇದ ವ್ಯಕ್ತಪಡಿಸಿದ್ದಾರೆ.

'ಎಂ.ಬಿ.ಬಿ.ಎಸ್ ಮತ್ತು ಬಿ.ಡಿ.ಎಸ್ ವೈದ್ಯಾಧಿಕಾರಿಗಳಿಗೆ ವಿಶೇಷ ಭತ್ಯೆ ನೀಡಿರುವಂತೆ ಆಯುಷ್ ವೈದ್ಯಾಧಿಕಾರಿಗಳಿಗೂ ಇದೇ 31ರೊಳಗೆ ಭತ್ಯೆ ಮಂಜೂರು ಆದೇಶ ಹೊರಡಿಸಬೇಕು. ಇಲ್ಲದಿದ್ದಲ್ಲಿ ಜೂನ್ 1ರಿಂದ ಕಪ್ಪು ಪಟ್ಟಿ ಧರಿಸಿ, ಕರ್ತವ್ಯ ನಿರ್ವಹಿಸುತ್ತಲೇ ಪ್ರತಿಭಟನೆ ನಡೆಸುತ್ತೇವೆ. ಜೂನ್ 7ರಿಂದ ಎಲ್ಲ ರೀತಿಯ ಕೋವಿಡ್ ಕೆಲಸಕಾರ್ಯಗಳನ್ನು ಬಹಿಷ್ಕರಿಸಿ, ಮಾತ್ರ ಇಲಾಖೆಯ ಚಿಕಿತ್ಸಾಲಯ ಮತ್ತು ಆಸ್ಪತ್ರೆಗಳಿಗೆ ಸೀಮಿತವಾಗಿ ಕರ್ತವ್ಯ ನಿರ್ವಹಿಸಲಾಗುವುದು' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕೋವಿಡ್ ಮೂರನೇ ಅಲೆ: ಮಕ್ಕಳಿಗಾಗಿ ವಿಶೇಷ ಆಸ್ಪತ್ರೆ

ಬೆಂಗಳೂರು: 'ಕೋವಿಡ್ ಮೂರನೇ ಅಲೆ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವ ಸಾಧ್ಯತೆ ಇರುವ ಕಾರಣ ಮಕ್ಕಳ ಚಿಕಿತ್ಸೆಗೆಗಾಗಿ ವಿಶೇಷ ಆಸ್ಪತ್ರೆಗಳನ್ನು ನಿರ್ಮಿಸಲು ಕ್ರಿಯಾಯೋಜನೆ ಸಿದ್ಧವಾಗುತ್ತಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

'ತಾಂತ್ರಿಕ ಸಲಹಾ ಸಮಿತಿ ಸಭೆ ಶುಕ್ರವಾರ ನಡೆದಿದ್ದು, ಮಕ್ಕಳಿಗಾಗಿ ವಿಶೇಷ ಆಸ್ಪತ್ರೆ, ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳ ವ್ಯವಸ್ಥೆ ಕಲ್ಪಿಸುವ ಬಗ್ಗೆ ಚರ್ಚೆಯಾಗಿದೆ' ಎಂದು ಅವರು ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

'ಲಾಕ್‌ಡೌನ್ ವಿಸ್ತರಣೆ ಮಾಡಿದ್ದರಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದೆ. ಈ ಸಂಖ್ಯೆ 5 ಸಾವಿರಕ್ಕೆ ಇಳಿಕೆಯಾಗಿರುವುದು ದೊಡ್ಡ ವಿಷಯ. ಸರ್ಕಾರದ ಜತೆ ಜನ ಸ್ಪಂದಿಸಿ ಮನೆಯಲ್ಲೇ ಇದ್ದುದ್ದರಿಂದ ಇದು ಸಾಧ್ಯವಾಗಿದೆ. ಇದೇ ರೀತಿಯ ಶಿಸ್ತು ಮುಂದುವರಿಸಿದರೆ ಸುರಕ್ಷಿತವಾಗಿ ಇರಬಹುದು. ಲಾಕ್‌ಡೌನ್ ಮುಂದುವರಿಸುವುದು ಸರ್ಕಾರಕ್ಕೆ ಬಿಟ್ಟ ವಿಚಾರ' ಎಂದರು.

'ಕೋವಿಡ್ ಲಸಿಕೆ ಪ್ರಮಾಣವೂ ಹೆಚ್ಚಳವಾಗಿದೆ. ನಗರದಲ್ಲಿ ಶುಕ್ರವಾರ ಒಂದೇ ದಿನ 1.10 ಲಕ್ಷ ಜನರಿಗೆ ಲಸಿಕೆ ನೀಡಿರುವುದು ದೊಡ್ಡ ಸಾಧನೆ. ಬೇಡಿಕೆಗೆ ತಕ್ಕಷ್ಟು ಲಸಿಕೆ ಪೂರೈಕೆಯಾದರೆ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಲು ಸಾಧ್ಯವಾಗಲಿದೆ' ಎಂದು ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ
ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	17.04 ಕೋಟಿ ▲	2.78 ಕೋಟಿ ▲
ಸಕ್ರಿಯ ಪ್ರಕರಣ	1.44 ಕೋಟಿ ▼	21.10 ಲಕ್ಷ ▼
ಗುಣಮುಖ	15.23 ಕೋಟಿ ▲	2.54 ಕೋಟಿ ▲
ಸಾವು	35.43 ಲಕ್ಷ ▲	3.25 ಲಕ್ಷ ▲

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.06 ಲಕ್ಷ ▼	1.64 ಲಕ್ಷ ▼
ಗುಣಮುಖ	6.29 ಲಕ್ಷ ▼	2.62 ಲಕ್ಷ ▼
ಸಾವು	11,977 ▲	3,450 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)

ಬ್ರೆಜಿಲ್	ಅಮೆರಿಕ	ಫ್ರಾನ್ಸ್
50,495 ▼	22,813 ▼	11,268 ▼

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)

ಅಮೆರಿಕ	ಬ್ರೆಜಿಲ್	ಫ್ರಾನ್ಸ್
56.46 ▼	11.22 ▲	2.33 ▼

(*ರಾತ್ರಿ 12.00ರ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು

94,030 ▲	ಮಹಾರಾಷ್ಟ್ರ
24,073 ▲	ದೆಹಲಿ
23,261 ▲	ತಮಿಳುನಾಡು

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)

57.13	ಮಹಾರಾಷ್ಟ್ರ ▲
24.94	ಕೇರಳ
20.39	ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

40 ದಿನಗಳು, ₹20 ಕೋಟಿ ವೆಚ್ಚ, 400 ಹಾಸಿಗೆ ಲಭ್ಯ

ಯಶವಂತಪುರದಲ್ಲಿ ಸುಸಜ್ಜಿತ ಕೋವಿಡ್ ಆಸ್ಪತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾಳು ಬಿದ್ದಿದ್ದ ಕಟ್ಟಡವೀಗ ಸುಸಜ್ಜಿತ ಕೋವಿಡ್ ಆಸ್ಪತ್ರೆ. ಇದಕ್ಕೆ ತಗಲಿದ್ದು ನಲವತ್ತೇ ದಿನಗಳು. ₹20 ಕೋಟಿ ವೆಚ್ಚದಲ್ಲಿ 400 ಹಾಸಿಗೆಗಳ ಆಸ್ಪತ್ರೆ ಯಶವಂತಪುರದಲ್ಲಿ ನಿರ್ಮಾಣವಾಗಿದೆ.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಈ ಆಸ್ಪತ್ರೆ ಯಶವಂತಪುರ ರೈಲು ನಿಲ್ದಾಣದ ಪಕ್ಕದಲ್ಲೇ ಇದೆ. ಖಾಲಿ ಇದ್ದ ಶಾಲೆ ಮತ್ತು ಪಾಳು ಬಿದ್ದಿದ್ದ ಆಸ್ಪತ್ರೆಯ ಹೊಸ ಕಟ್ಟಡ ಬಳಸಿಕೊಂಡು ಸುಸಜ್ಜಿತ ಕೋವಿಡ್ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ.

'ಶಾಲೆಯಲ್ಲಿ ಆಮ್ಲಜನಕ ಪೂರೈಕೆ ವ್ಯವಸ್ಥೆ ಇರುವ 300 ಹಾಸಿಗೆಗಳ ಸೌಕರ್ಯ ಒದಗಿಸಲಾಗಿದೆ. ಪಕ್ಕದಲ್ಲೇ ಹೆರಿಗೆ ಆಸ್ಪತ್ರೆ ಸಲುವಾಗಿ ನಿರ್ಮಿಸಿದ್ದ ಕಟ್ಟಡದಲ್ಲಿ 32 ವೆಂಟಿಲೇಟರ್ ಸೌಕರ್ಯಗಳಿರುವ ಹಾಸಿಗೆಗಳು, ತಲಾ 25 ಬೈಪಾಪ್ ಮತ್ತು ಹೈಫ್ಲೊ ಆಮ್ಲಜನಕ ಪೂರೈಕೆ ವ್ಯವಸ್ಥೆಯ ಹಾಸಿಗೆಗಳನ್ನು ಅಳವಡಿಸಲಾಗಿದೆ. ಒಟ್ಟು 400 ಹಾಸಿಗೆಗಳ ಕೋವಿಡ್ ಆಸ್ಪತ್ರೆ ಈಗ ಜನರ ಸೇವೆಗೆ ಸಜ್ಜಾಗಿದೆ' ಎಂದು ಶಾಸಕ ಮುನಿರತ್ನ 'ಪ್ರಜಾವಾಣಿ'ಗೆ ವಿವರಿಸಿದರು.

ಯಶವಂತಪುರದಲ್ಲಿ ನಿರ್ಮಾಣವಾಗಿರುವ ಕೋವಿಡ್ ಆಸ್ಪತ್ರೆ

'ಕೋವಿಡ್ ಲಕ್ಷಣ ಇದ್ದರೂ ಮನೆಯಲ್ಲೇ 8ರಿಂದ 10 ದಿನ ದೂಡಿ ಸ್ಥಿತಿ ಗಂಭೀರವಾದ ಬಳಿಕ ಜನ ಆಸ್ಪತ್ರೆಗೆ ಬಂದು ಐಸಿಯು ಹಾಸಿಗೆಗಾಗಿ ಹುಡುಕಾಡುತ್ತಾರೆ. ಆ ಸಂದರ್ಭದಲ್ಲಿ ಚಿಕಿತ್ಸೆ ಫಲಿಸದೆ ಸಾಕಷ್ಟು ಜನರು ಮೃತಪಟ್ಟಿದ್ದಾರೆ. ಇದನ್ನು ತಪ್ಪಿಸಲು ಹೆಚ್ಚುವರಿಯಾಗಿ 200 ಹಾಸಿಗೆಗಳ ಆರೈಕೆ ಕೇಂದ್ರವನ್ನೂ ನಿರ್ಮಿಸಲಾಗಿದೆ' ಎಂದು ಅವರು ತಿಳಿಸಿದರು.

'ಕೋವಿಡ್ ದೃಢಪಟ್ಟ ಕೂಡಲೇ ಈ ಆರೈಕೆ ಕೇಂದ್ರಕ್ಕೆ ದಾಖಲಾಗಬಹುದು. ಉಸಿರಾಟದ ತೊಂದರೆ ಇರುವವರನ್ನು ಆಮ್ಲಜನಕ ಪೂರೈಕೆ ವ್ಯವಸ್ಥೆ ಇರುವ ಹಾಸಿಗೆಗೆ ಸ್ಥಳಾಂತರಿಸಲಾಗುತ್ತದೆ. ಇನ್ನೂ ಅಗತ್ಯ ಇದ್ದರೆ ವೆಂಟಿಲೇಟರ್ ವ್ಯವಸ್ಥೆ ಮಾಡಲಾಗುತ್ತಿದೆ. ಯಶವಂತಪುರದಲ್ಲಿ ಕೋವಿಡ್ ಸೋಂಕಿತರಿಗಾಗಿ ಒಟ್ಟು 600 ಹಾಸಿಗೆಗಳ ಕ್ರಿಟಿಕಲ್ ಕೋವಿಡ್ ಆರೈಕೆ ಕೇಂದ್ರವು ಸೇವೆಗೆ ಲಭ್ಯವಾಗಿದೆ' ಎಂದು ಹೇಳಿದರು.

'ರೋಗ ಲಕ್ಷಣ ಇದ್ದವರಿಗೆ ಕೋವಿಡ್ ಪರೀಕ್ಷೆ ನಡೆಸಿ 6 ಗಂಟೆಯಲ್ಲೇ ವರದಿ ಪಡೆಯುತ್ತೇವೆ. ಕೂಡಲೇ ಆರೈಕೆ ಕೇಂದ್ರಕ್ಕೆ ಕರೆಸಿ ಅವರ ಶ್ವಾಸಕೋಶ ಎಕ್ಸ್-ರೇ ತೆಗೆಸಲಾಗುತ್ತದೆ. ವಾರದ ಬಳಿಕ ಸಿಟಿ ಸ್ಕ್ಯಾನ್ ಮಾಡಿಸಿ ಸಮಸ್ಯೆ ಇದ್ದವರಿಗೆ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗುತ್ತಿದೆ' ಎಂದೂ ಅವರು ವಿವರಿಸಿದರು.

'40 ದಿನಗಳಲ್ಲಿ ₹20 ಕೋಟಿ ವೆಚ್ಚದಲ್ಲಿ ಈ ಸುಸಜ್ಜಿತ ಆಸ್ಪತ್ರೆ ನಿರ್ಮಾಣ ಮಾಡಲಾಗಿದೆ. ಈ ರೀತಿಯ ಆಸ್ಪತ್ರೆಗಳನ್ನು ಬೆಂಗಳೂರಿನಲ್ಲಿ ಐದು ಕಡೆ ನಿರ್ಮಿಸಿದರೆ ಜನ ಪ್ರಾಣ ಕಳೆದುಕೊಳ್ಳುವುದನ್ನು ತಪ್ಪಿಸಬಹುದು' ಎಂದು ಅವರು ಅಭಿಪ್ರಾಯಪಟ್ಟರು.

'10 ಸಾವಿರ ಲೀ. ಸಾಮರ್ಥ್ಯದ ಘಟಕ'

'10 ಸಾವಿರ ಲೀಟರ್ ಆಮ್ಲಜನಕ ಸಂಗ್ರಹಿಸಬಹುದಾದ ಟ್ಯಾಂಕ್ ತರಿಸಲಾಗಿದೆ. ವಿಕ್ಟೋರಿಯಾ, ಕೆ.ಸಿ. ಜನರಲ್, ಬೌರಿಂಗ್ ಆಸ್ಪತ್ರೆಗಳಲ್ಲಿ ತಲಾ 6 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕ್ ಇದೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಮೊದಲ ಬಾರಿಗೆ ಇಷ್ಟು ದೊಡ್ಡ ಟ್ಯಾಂಕ್ ಅಳವಡಿಸಿರುವ ಆಸ್ಪತ್ರೆ ಇದಾಗಿದೆ' ಎಂದು ಮುನಿರತ್ನ ಮಾಹಿತಿ ನೀಡಿದರು.

ಶೌಚಾಲಯದಲ್ಲೂ ಆಮ್ಲಜನಕ ವ್ಯವಸ್ಥೆ

'ಸೋಂಕಿತರಿಗೆ ಉಸಿರಾಟದ ತೊಂದರೆ ಇದ್ದರೆ ಎಡಬಿಡದೆ ಆಮ್ಲಜನಕ ಪೂರೈಸಬೇಕಾಗುತ್ತದೆ. ಕೋವಿಡ್ ಆಸ್ಪತ್ರೆಗಳಲ್ಲಿ ಸೋಂಕಿತರು ಶೌಚಾಲಯಕ್ಕೆ ಹೋಗಿ ಬರುವಷ್ಟರಲ್ಲಿ ಸುಸ್ತಾಗುತ್ತಿದ್ದಾರೆ. ಇದನ್ನು ತಪ್ಪಿಸಲು ಶೌಚಾಲಯಗಳಿಗೂ ಆಮ್ಲಜನಕ ಪೂರೈಕೆ ವ್ಯವಸ್ಥೆ ಮಾಡಲಾಗಿದೆ' ಎಂದು ಮುನಿರತ್ನ ಹೇಳಿದರು.

'ಆಸ್ಪತ್ರೆಯಲ್ಲಿ ಒಟ್ಟು 80 ಶೌಚ ಕೊಠಡಿಗಳಿವೆ. ಶೌಚಾಲಯದಲ್ಲಿ ಕುಳಿತವರೂ ಆಮ್ಲಜನಕ ಪಡೆದುಕೊಳ್ಳಲು ಇಲ್ಲಿ ಸಾಧ್ಯವಾಗಲಿದೆ' ಎಂದರು.

ಕೋವಿಡ್ ಜಾಗೃತಿಗೆ ಹಳ್ಳಿಯತ್ತ ವೈದ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಬಗ್ಗೆ ಜನರು, ಆರೋಗ್ಯ ಕಾರ್ಯಕರ್ತರಲ್ಲಿ ಅರಿವು ಮೂಡಿಸಲು ಇಬ್ಬರು ಶ್ವಾಸಕೋಶ ತಜ್ಞರು ಸ್ವಂತ ಖರ್ಚಿನಿಂದ ಹಳ್ಳಿಗಳ ಕಡೆಗೆ ಹೆಜ್ಜೆ ಹಾಕಿದ್ದಾರೆ.

ನಗರದ ಬಿಜಿಎಸ್ ಆಸ್ಪತ್ರೆಯ ಡಾ. ಸಂದೀಪ್ ಎಚ್.ಎಸ್. ಮತ್ತು ಟ್ರಿನಿಟಿ ಆಸ್ಪತ್ರೆಯ ಡಾ. ಚೇತನ್‌ಕುಮಾರ್ ಎನ್.ಜಿ. ಈ ಕಾರ್ಯಕ್ಕೆ ಇಳಿದವರು. ಕೋವಿಡ್ ಪ್ರಕರಣಗಳು ಹೆಚ್ಚು ದೃಢಪಟ್ಟ ಜಿಲ್ಲೆಗಳ ಹಳ್ಳಿಗಳಿಗೆ ವಾರಾಂತ್ಯದ ಎರಡು ದಿನ ತೆರಳಿ, ಸೋಂಕಿತರ ಆರೈಕೆಯ ವಿಧಾನದ ಬಗ್ಗೆ ಸ್ಥಳೀಯ ವೈದ್ಯರಿಗೆ, ಆಶಾ ಕಾರ್ಯಕರ್ತೆಯರಿಗೆ, ಆರೋಗ್ಯ ಕಾರ್ಯಕರ್ತರಿಗೆ ತಿಳಿಹೇಳಲು ಮುಂದಾಗಿದ್ದಾರೆ.

ಕೊಡಗು ಜಿಲ್ಲೆಯ ಗೌಡರಹಳ್ಳಿಯಲ್ಲಿ ಶನಿವಾರ (ಮೇ 29) ಈ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ. ಜಿಲ್ಲೆಯ ಕೆಲವು ಪಿಎಚ್‌ಸಿಗಳಿಗೆ ತೆರಳಿ, ಕೋವಿಡ್ ರೋಗಿಗಳಲ್ಲಿ ಆತ್ಮವಿಶ್ವಾಸ ತುಂಬುವ ಕೆಲಸ ಮಾಡಿದ್ದಾರೆ. ಲಸಿಕೆ ಹಾಕಿಸಿಕೊಳ್ಳಲು ಬಂದವರಿಗೆ ಧೈರ್ಯ ಹೇಳಿದ್ದಾರೆ. ಚಿತ್ರದುರ್ಗ, ದಾವಣಗೆರೆ, ಕೊಪ್ಪಳ ಜಿಲ್ಲೆಗಳಿಗೆ ತೆರಳಿ ಜಾಗೃತಿ ಮೂಡಿಸಲು ನಿರ್ಧರಿಸಿದ್ದಾರೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಡಾ. ಸಂದೀಪ್, 'ಸ್ವಯಂ ಇಚ್ಛೆಯಿಂದ ಕೆಲವು ಹಳ್ಳಿಗಳಿಗೆ ಹೋಗಲಿದ್ದೇವೆ. ಸೋಂಕು ತಗಲಿ ತಡವಾಗಿ ಆಸ್ಪತ್ರೆ ಸೇರಿದವರು ಮೃತಪಟ್ಟಿದ್ದೇ ಹೆಚ್ಚು. ಲಘು ರೋಗಲಕ್ಷಣದಿಂದ ಗಂಭೀರಾವಸ್ಥೆಗೆ ಬದಲಾಗುವ (ಟ್ರಾನ್ಸಿಟ್) ಅವಧಿಯಲ್ಲಿ ಯಾವ ರೀತಿ ಸ್ಪಂದಿಸಬೇಕು ಎಂದು ಆರೋಗ್ಯ ಕಾರ್ಯಕರ್ತರಲ್ಲಿ ಅರಿವು ಮೂಡಿಸುತ್ತೇವೆ' ಎಂದರು.

ಡಾ. ಚೇತನ್‌ಕುಮಾರ್ ಮಾತನಾಡಿ, 'ಸೋಂಕಿತರಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿಯೇ ಚಿಕಿತ್ಸೆ ನೀಡಬಹುದು. ಈ ಬಗ್ಗೆ ವೈಜ್ಞಾನಿಕ ಮಾಹಿತಿ ನೀಡುವುದು ನಮ್ಮ ಉದ್ದೇಶ' ಎಂದರು.

ಡಾ. ಸಂದೀಪ್

ಡಾ. ಚೇತನ್ ಕುಮಾರ್

ಮುಖ್ಯಾಂಶಗಳು

- ವಾರಾಂತ್ಯದಲ್ಲಿ ಸೋಂಕಿತರ ಆರೈಕೆ ವಿಧಾನ ಬಗ್ಗೆ ತರಬೇತಿ ನೀಡುವ ಯೋಜನೆ
- ಕೋವಿಡ್ ಪ್ರಕರಣಗಳು ಹೆಚ್ಚು ದೃಢಪಟ್ಟ ಜಿಲ್ಲೆಗಳ ಹಳ್ಳಿಗಳಿಗೆ ಪ್ರವಾಸ

ಸಂಕ್ಷಿಪ್ತ ಸುದ್ದಿ

ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣ: 31ಕ್ಕೆ ತೀರ್ಪು

ಉಡುಪಿ: ಉದ್ಯಮಿ ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣದ ಅಂತಿಮ ತೀರ್ಪನ್ನು ಉಡುಪಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಇದೇ 31ಕ್ಕೆ ಮುಂದೂಡಿ ಶನಿವಾರ ಆದೇಶ ನೀಡಿದೆ.

ಪ್ರಕರಣದ ವಾದ, ಪ್ರತಿವಾದದ ಪ್ರಕ್ರಿಯೆಗಳು ಪೂರ್ಣಗೊಂಡ ಹಿನ್ನೆಲೆಯಲ್ಲಿ ಅಂತಿಮ ತೀರ್ಪನ್ನು ಮೇ 29ರಂದು ಪ್ರಕಟಿಸುವುದಾಗಿ ಉಡುಪಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಸುಬ್ರಹ್ಮಣ್ಯ ಜೆ.ಎನ್. ಏ.20 ರಂದು ಆದೇಶ ನೀಡಿದ್ದರು.

ಆದರೆ, ಕೋವಿಡ್ ಲಾಕ್‌ಡೌನ್ ಹಿನ್ನೆಲೆಯಲ್ಲಿ ಹೈಕೋರ್ಟ್ ಆದೇಶದಂತೆ ನ್ಯಾಯಾಲಯಕ್ಕೆ ರಜೆ ಇರುವ ಕಾರಣದಿಂದ ಈ ತೀರ್ಪನ್ನು ಮುಂದೂಡಲಾಗಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕಂಗನಾ ರನೌತ್ ಅಂಗರಕ್ಷಕನ ಬಂಧನ

ಕುಮಾರ್ ಹೆಗ್ಡೆ

ಮಂಡ್ಯ: ಬಾಲಿವುಡ್ ನಟಿ ಕಂಗನಾ ರನೌತ್ ಅವರ ಅಂಗರಕ್ಷಕ ಎನ್ನಲಾದ ಯುವಕನೊಬ್ಬನನ್ನು ಮುಂಬೈ ಅಂಧೇರಿ ಪೊಲೀಸರು ಕೆ.ಆರ್.ಪೇಟೆ ತಾಲ್ಲೂಕು, ಕಿಕ್ಕೇರಿ ಠಾಣೆ ಪೊಲೀಸರ ಸಹಕಾರದೊಂದಿಗೆ ಶನಿವಾರ ಬಂಧಿಸಿದ್ದಾರೆ.

ಕಿಕ್ಕೇರಿ ಸಮೀಪದ ಹೆಗ್ಗಡಹಳ್ಳಿ ಗ್ರಾಮದ ಕುಮಾರ್ ಹೆಗ್ಡೆ ಬಂಧಿತ ಆರೋಪಿ. ಈತ ಹಲವು ವರ್ಷಗಳಿಂದ ಮುಂಬೈನಲ್ಲಿ ನಟಿ ಕಂಗನಾ ರನೌತ್‌ಗೆ ಅಂಗರಕ್ಷಕನಾಗಿ ಕೆಲಸ ಮಾಡುತ್ತಿದ್ದ. ಅಲ್ಲಿ ಯುವತಿಯೊಬ್ಬರನ್ನು ಪ್ರೀತಿಸಿ, ಮದುವೆಯಾಗುವುದಾಗಿ ನಂಬಿಸಿ, ಅತ್ಯಾಚಾರ ಎಸಗಿದ್ದಾನೆ. ಕೊನೆಗೆ ಬೇರೆ ಯುವತಿಯನ್ನು ವಿವಾಹವಾಗಲು ಸಿದ್ಧನಾಗಿದ್ದಾನೆ ಎಂದು ಆರೋಪಿಸಿ ಯುವತಿಯು ಮುಂಬೈನ ಅಂಧೇರಿ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು.

ಅರ್ಧದಲ್ಲೇ ಬಿಟ್ಟು ಹೋದ ಚಾಲಕ: ಸೋಂಕಿತ ಆರೋಪ

ರಾಮನಗರ: ಸುಗ್ಗನಹಳ್ಳಿ ಕೋವಿಡ್ ಕೇಂದ್ರಕ್ಕೆ ಕರೆದೊಯ್ಯುವುದಾಗಿ ಹೇಳಿ ತಮ್ಮನ್ನು ರಸ್ತೆಯ ಮಧ್ಯದಲ್ಲಿಯೇ ಇಳಿಸಿ ಚಾಲಕ ಪರಾರಿಯಾಗಿದ್ದಾನೆ ಎಂದು ಸೋಂಕಿತರೊಬ್ಬರು ಆರೋಪಿಸಿದ್ದಾರೆ. ಆದರೆ, ಆರೋಗ್ಯ ಇಲಾಖೆ ಅಧಿಕಾರಿಗಳು ಇದನ್ನು ನಿರಾಕರಿಸಿದ್ದು, ಸೋಂಕಿತನೇ ಗಲಾಟೆ ಮಾಡಿ ಮಧ್ಯದಲ್ಲೇ ಇಳಿದಿದ್ದಾರೆ ಎಂದು ಸ್ಪಷ್ಟನೆ ನೀಡಿದ್ದಾರೆ.

'ಡಾರ್ಕ್‌ನೆಟ್' ಮೂಲಕ ಖರೀದಿ • ₹ 35 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ

ಡ್ರಗ್ಸ್ ಜಾಲ ಭೇದಿಸಿದ ಸಿಸಿಬಿ

ಪ್ರಜಾವಾಣಿ ವಾರ್ತೆ

ಜಪ್ತಿ ಮಾಡಲಾದ ಡ್ರಗ್ಸ್

ಅಪರಾಧ ಸುದ್ದಿ

ಬೆಂಗಳೂರು: ಬಿಟ್ ಕಾಯಿನ್ ಬಳಸಿ 'ಡಾರ್ಕ್‌ನೆಟ್' ಮೂಲಕ ಡ್ರಗ್ಸ್ ಖರೀದಿಸಿ ತಂದು ನಗರದಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ನೈಜೀರಿಯಾ ಪ್ರಜೆ ಸೇರಿ ಆರು ಮಂದಿಯನ್ನು ಬಂಧಿಸಿದ್ದಾರೆ.

'ನೈಜೀರಿಯಾದ ಜಾನ್ ಚುಕ್ವಾಕ್ (30), ಕೇರಳದ ಆದಿತ್ಯನ್ (29), ಸಿ.ಎಸ್. ಅಖಿಲ್ (25), ಬೆಂಗಳೂರಿನ ಶೆರ್ವಿನ್ ಸುಪ್ರಿತ್ ಜಾನ್ (26), ಅನಿಕೇತ್ ಎ. ಕೇಶವ್ (26) ಹಾಗೂ ಡಾನ್ನಿಕ್ ಪೌಲ್ (30) ಬಂಧಿತರು. ಅವರಿಂದ 400 ಎಂಡಿಎಂಎ ಹಾಗೂ ಎಕ್ಸ್‌ಟೆಸಿ ಮಾತ್ರೆಗಳು, 76 ಎಲ್‌ಎಸ್‌ಡಿ ಕಾಗದ ಚೂರುಗಳು, ಗಾಂಜಾ ಜಪ್ತಿ ಮಾಡಲಾಗಿದೆ. ಇದರ ಮೌಲ್ಯದ ₹ 35 ಲಕ್ಷವೆಂದು ಅಂದಾಜಿಸಲಾಗಿದೆ' ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಾಡುಗೋಡಿ ಠಾಣೆ ವ್ಯಾಪ್ತಿಯ ಕನ್ನಮಂಗಲದ ಮನೆಯೊಂದರಲ್ಲಿ ಡ್ರಗ್ಸ್ ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳದ ಅಧಿಕಾರಿಗಳು ಮನೆಗೆ ದಾಳಿ ಮಾಡಿ ಆರೋಪಿಗಳನ್ನು ಸೆರೆಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳ ಮೊಬೈಲ್‌ಗಳು, ಕಾರು ಹಾಗೂ ಬೈಕ್ ವಶಕ್ಕೆ ಪಡೆಯಲಾಗಿದೆ' ಎಂದೂ ತಿಳಿಸಿದರು.

'ತಂತ್ರಜ್ಞಾನ ಬಳಸುವುದರಲ್ಲಿ ನಿಪುಣರಾಗಿದ್ದ ಆರೋಪಿಗಳು, ಡಾರ್ಕ್‌ನೆಟ್ ಮೂಲಕ ಅಂತರರಾಷ್ಟ್ರೀಯ ಡ್ರಗ್ಸ್ ಪೆಡ್ಲರ್‌ಗಳನ್ನು ಸಂಪರ್ಕಿಸುತ್ತಿದ್ದರು. ಬಿಟ್ ಕಾಯಿನ್ ರೂಪದಲ್ಲಿ ಹಣ ಸಂದಾಯ ಮಾಡಿ ಡ್ರಗ್ಸ್ ಖರೀದಿಸುತ್ತಿದ್ದರು. ಕೊರಿಯರ್ ಮೂಲಕವೇ ಡ್ರಗ್ಸ್ ನಗರಕ್ಕೆ ಬರುತ್ತಿತ್ತು' ಎಂದು ಹೇಳಿದರು.

ಲಾಕ್‌ಡೌನ್‌ನಲ್ಲೂ ಮಾರಾಟ: 'ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ನಗರದಲ್ಲಿ ಲಾಕ್‌ಡೌನ್ ಜಾರಿಯಾಗಿದ್ದು, ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ ಅವಕಾಶ ನೀಡಲಾಗಿದೆ. ಇದೇ ಸಮಯದಲ್ಲೇ ಆರೋಪಿಗಳು, ನಗರದಲ್ಲಿ ಕಾರಿನಲ್ಲಿ ಸಂಚರಿಸಿ ಡ್ರಗ್ಸ್ ಮಾರುತ್ತಿದ್ದರು' ಎಂದು ಅಧಿಕಾರಿ ಹೇಳಿದರು.

'ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಐಟಿ-ಬಿಟಿ ಕಂಪನಿ ಉದ್ಯೋಗಿಗಳು ಡ್ರಗ್ಸ್ ಖರೀದಿ ಮಾಡುತ್ತಿದ್ದರು. ಎಕ್ಸ್‌ಟೆಸಿ ಒಂದು ಮಾತ್ರೆಯನ್ನು ₹ 4 ಸಾವಿರದಿಂದ ₹5 ಸಾವಿರಕ್ಕೆ ಮಾರುತ್ತಿದ್ದರು. ಎಲ್‌ಎಸ್‌ಡಿಯ ಕಾಗದ ಚೂರು ಒಂದಕ್ಕೂ ಅಷ್ಟೇ ದರವಿತ್ತು' ಎಂದೂ ತಿಳಿಸಿದರು.

ಚಿನ್ನಾಭರಣ ಕಳವು: ಬಂಧನ

ಬೆಂಗಳೂರು: ನಂದಿನಿ ಬಡಾವಣೆ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಕಳವು ಮಾಡಿ ಪರಾರಿಯಾಗಿದ್ದ ಆರೋಪಿ ದಿಲೀಪ್ ಅಲಿಯಾಸ್ ಕುಟ್ಟ (21) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ನಂದಿನಿ ಬಡಾವಣೆಯ ಲಕ್ಷ್ಮಿದೇವಿನಗರದ ದಿಲೀಪ್, ಲಗ್ಗೆರೆ ಪ್ರೀತಿನಗರದ ನಿವಾಸಿಯೊಬ್ಬರ ಮನೆಯಲ್ಲಿ ಕೃತ್ಯ ಎಸಗಿ ಪರಾರಿಯಾಗಿದ್ದ. ಆತನಿಂದ 194 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರು ಕುಟುಂಬ ಸಮೇತ ಕನಕಪುರದ ಕೆರೆ ಮೇಗಲದೊಡ್ಡಿಗೆ ಮೇ 23ರಂದು ಬೆಳಿಗ್ಗೆ ಹೋಗಿದ್ದರು. ಅಂದು ರಾತ್ರಿಯೇ ಮನೆಯ ಬಾಗಿಲು ಮೀಟಿ ಒಳನುಗ್ಗಿದ್ದ ಆರೋಪಿ, ಬೀರುವಿನಲ್ಲಿದ್ದ ಚಿನ್ನಾಭರಣ ಕದ್ದೊಯ್ದಿದ್ದ. ದೂರುದಾರರು ಮರುದಿನ ಮನೆಗೆ ಬಂದಾಗ ವಿಷಯ ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು. ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ದಾಖಲಾದ ದೃಶ್ಯ ಆಧರಿಸಿ ಆರೋಪಿಯನ್ನು ಸೆರೆಹಿಡಿಯಲಾಗಿದೆ' ಎಂದೂ ತಿಳಿಸಿದರು.

'ಧೂಮಪಾನಿಯಾಗಿದ್ದ ಆರೋಪಿ, ಸಿಗರೇಟ್ ಸೇದಲೆಂದು ಸ್ಥಳೀಯ ಅಂಗಡಿಯೊಂದಕ್ಕೆ ಹೋಗಿದ್ದ. ಅದೇ ಅಂಗಡಿಗೆ ಮನೆ ಮಾಲೀಕ ಸಹ ಬಂದಿದ್ದರು. ನಿತ್ಯವೂ ಒಂದೇ ಸಿಗರೇಟ್ ಖರೀದಿಸುತ್ತಿದ್ದ ಮಾಲೀಕ, ಅಂದು ಬಹಳ ಸಿಗರೇಟ್ ಪಡೆದಿದ್ದರು. ಅದನ್ನು ಅಂಗಡಿಯವರು ಪ್ರಶ್ನಿಸಿದ್ದರು. ಆಗ ಮಾಲೀಕ, 'ಮನೆಯವರೆಲ್ಲ ಊರಿಗೆ ಹೊರಟಿದ್ದೇವೆ. ಅಲ್ಲಿ ನನಗೆ ಸಿಗರೇಟ್ ಸಿಗುವುದಿಲ್ಲ. ಹೀಗಾಗಿ, ಇಲ್ಲಿಂದಲೇ ಖರೀದಿಸಿ ತೆಗೆದುಕೊಂಡು ಹೋಗುತ್ತಿದ್ದೇನೆ' ಎಂದು ಹೇಳಿದ್ದರು.'

'ಮಾಲೀಕನ ಮಾತು ಕೇಳಿದ್ದ ಆರೋಪಿ, ಮನೆಯಲ್ಲಿ ಕಳ್ಳತನ ಮಾಡಲು ಸಂಚು ರೂಪಿಸಿದ್ದ' ಎಂದೂ ಪೊಲೀಸರು ತಿಳಿಸಿದರು.

ಬಾಯಲ್ಲಿ ಬೂಟು ಇಟ್ಟು ಹೊಡೆದ ಪಿಎಸ್‌ಐ: ಆರೋಪ

ಆರೋಪ ಅಲ್ಲಗಳೆದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಪ್ರಜಾವಾಣಿ ವಾರ್ತೆ

ವಿಜಯಪುರ: ಇಂಡಿ ತಾಲ್ಲೂಕಿನ ಹಿರೇಮಸಳಿ ಗ್ರಾಮದಲ್ಲಿ ಜೂಜಾಡುತ್ತಿದ್ದವರ ಬಗ್ಗೆ ಫೋನ್ ಮಾಡಿ ಮಾಹಿತಿ ನೀಡಿದ ಯುವಕನನ್ನೇ ಪೊಲೀಸರು ಠಾಣೆಗೆ ಕರೆದೊಯ್ದು, ಬಾಯಲ್ಲಿ ಬೂಟು ಇಟ್ಟು ಹೊಡೆದು, ಬಳಿಕ ಚರಂಡಿಯಲ್ಲಿ ಎಸೆದು ಹೋಗಿದ್ದಾರೆ ಎಂಬ ಆರೋಪ ಕೇಳಿಬಂದಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅನುಪಮ್ ಅಗರವಾಲ್, 'ಯುವಕನ ಆರೋಪ ಸಂಪೂರ್ಣ ಸುಳ್ಳು' ಎಂದರು.

'ಯುವಕನೊಬ್ಬ ಕುಡಿದು ಗಲಾಟೆ ಮಾಡುತ್ತಿದ್ದಾನೆ' ಎಂದು ಪೊಲೀಸ್ ಕಂಟ್ರೋಲ್ ರೂಂಗೆ ದೂರು ಬಂದಿತ್ತು. ಈ ಸಂಬಂಧ ಪೊಲೀಸರು ಆತನನ್ನು ಠಾಣೆಗೆ ಕರೆದು ವಿಚಾರಣೆ ನಡೆಸಿ ಕಳುಹಿಸಿದ್ದಾರೆ' ಎಂದು ಇಂಡಿ ಡಿಎಸ್‌ಪಿ ಶ್ರೀಧರ ದೊಡ್ಡಿ ಹೇಳಿದರು.

ಯುವಕನ ಆರೋಪ: 'ಗ್ರಾಮದಲ್ಲಿ ಜೂಜಾಟ ನಡೆಯುತ್ತಿರುವ ಬಗ್ಗೆ ನಾನೇ ಫೋನ್ ಮಾಡಿ ತಿಳಿಸಿದ್ದೆ. ಆದರೆ, ಇಂಡಿ ಗ್ರಾಮೀಣ ಠಾಣೆ ಪಿಎಸ್‌ಐ ಮಾಳಪ್ಪ ಪೂಜಾರಿ ಹಾಗೂ ಬೀಟ್ ಪೊಲೀಸ್ ಮಹೇಶ ಪವಾರ ಎಂಬುವವರು ನನ್ನನ್ನೇ ಠಾಣೆಗೆ ಕರೆದೊಯ್ದು ಬಾಯಿಗೆ ಬೂಟು ಇಟ್ಟು, ಹಿಗ್ಗಾಮುಗ್ಗ ಥಳಿಸಿದರು. ಬಳಿಕ ರಾತ್ರಿ 11ರ ಸುಮಾರಿಗೆ ಖಾಸಗಿ ವಾಹನದಲ್ಲಿ ಕರೆತಂದು ಗ್ರಾಮದ ಹೊರವಲಯದಲ್ಲಿ ಚರಂಡಿಗೆ ಎಸೆದು ಹೋಗಿದ್ದಾರೆ' ಎಂದು ಯುವಕ ಸಂತೋಷ ನಂದ್ಯಾಳ ಆರೋಪಿಸಿದ್ದಾರೆ.

'ಪೊಲೀಸರ ಥಳಿತದಿಂದ ಅಸ್ವಸ್ಥನಾಗಿದ್ದ ಸಂತೋಷನನ್ನು ಅಂಬುಲೆನ್ಸ್ ಮೂಲಕ ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ಕೊಡಿಸಿದ್ದೇವೆ. ಈ ಸಂಬಂಧ ದೂರು ನೀಡಲು ಠಾಣೆಗೆ ಹೋದರೆ ಪೊಲೀಸರು ಹೆದರಿಸಿ ಕಳುಹಿಸಿದ್ದಾರೆ' ಎಂದು ಯುವಕನ ಪೋಷಕರು ಆರೋಪಿಸಿದ್ದಾರೆ.

3 ರೀತಿಯ ಶಿಲೀಂಧ್ರ ರೋಗಿ ಸಾವು

ಗಾಜಿಯಾಬಾದ್ (ಪಿಟಿಐ): ಒಬ್ಬರಲ್ಲಿಯೇ ಕಪ್ಪು, ಹಳದಿ ಮತ್ತು ಬಿಳಿ ಶಿಲೀಂಧ್ರ ಪತ್ತೆಯಾಗುವ ಮೂಲಕ ವಿಭಿನ್ನ ಪ್ರಕರಣವಾಗಿ ಗಮನಸೆಳೆದಿದ್ದ ಇಲ್ಲಿನ 59 ವರ್ಷದ ಕೋವಿಡ್ ರೋಗಿಯೊಬ್ಬರು ಶನಿವಾರ ಮೃತಪಟ್ಟರು.

ಟಾಕ್ಸಿಮಿಯಾ (ರಕ್ತ ಕಲುಷಿತಗೊಳ್ಳುವುದು) ಕಾರಣದಿಂದ ಕುನ್ವರ್ ಸಿಂಗ್ ಹೆಸರಿನ ರೋಗಿ ಮೃತಪಟ್ಟರು ಎಂದು ಇಲ್ಲಿನ ಹರ್ಷ್ ಆಸ್ಪತ್ರೆಯ ಡಾ. ಬಿ.ಪಿ. ತ್ಯಾಗಿ ತಿಳಿಸಿದರು.

ವೃತ್ತಿಯಿಂದ ವಕೀಲರಾಗಿದ್ದ ರೋಗಿಯು ಇತ್ತೀಚೆಗೆ ಕೋವಿಡ್ ಲಕ್ಷಣಗಳಿಂದಾಗಿ ಆಸ್ಪತ್ರೆಗೆ ದಾಖಲಾಗಿದ್ದರು.

ಅರಣ್ಯ ಇಲಾಖೆ ಸಿಬ್ಬಂದಿಗೆ ಕೋವಿಡ್ ಲಸಿಕೆ ನೀಡಿದ್ದಕ್ಕೆ ಕ್ರಮ

ವೈದ್ಯಾಧಿಕಾರಿಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು): ಅರಣ್ಯ ಇಲಾಖೆ ಸಿಬ್ಬಂದಿಗೆ ಕೋವಿಡ್ ಲಸಿಕೆ ನೀಡಿದ್ದಕ್ಕಾಗಿ ನಂಜನಗೂಡು ಹಾಗೂ ಎಚ್.ಡಿ.ಕೋಟೆ ತಾಲ್ಲೂಕು ವೈದ್ಯಾಧಿಕಾರಿಗಳಿಗೆ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಟಿ.ಅಮರನಾಥ್ ನೋಟಿಸ್ ನೀಡಿದ್ದಾರೆ.

'ಮೇ 28ರಂದು, ಎರಡೂ ತಾಲ್ಲೂಕಿನಲ್ಲಿ ನಡೆದ ಲಸಿಕಾ ಅಭಿಯಾನದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಯನ್ನು ಮುಂಚೂಣಿ ಕಾರ್ಯಕರ್ತರೆಂದು ಪರಿಗಣಿಸಿ ಲಸಿಕೆ ನೀಡಿರುವುದು ಕಂಡು ಬಂದಿದೆ. ಈ ಕ್ರಮಕ್ಕೆ ಆರೋಗ್ಯ ಇಲಾಖೆಯ ರಾಜ್ಯ ಮಟ್ಟದ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಹೀಗಾಗಿ, ಕೂಡಲೇ ಸಮಜಾಯಿಷಿ ನೀಡಬೇಕು. ಮುಂದಿನ ದಿನಗಳಲ್ಲಿ ಸರ್ಕಾರ ಮಾರ್ಗಸೂಚಿಯಂತೆ ಲಸಿಕೆ ನೀಡಬೇಕು' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಈ ಕ್ರಮಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ನಮ್ಮ ಸಿಬ್ಬಂದಿ ಕಾಡಂಚಿನ ಪ್ರದೇಶಗಳಲ್ಲಿ, ಸುತ್ತಲಿನ ಗ್ರಾಮಗಳಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿರುತ್ತಾರೆ. ಗ್ರಾಮಸ್ಥರ ಸಂಪರ್ಕಕ್ಕೆ ಬರುತ್ತಿರುತ್ತಾರೆ. ಮುನ್ನೆಚ್ಚರಿಕೆ ಕ್ರಮವಾಗಿ ಲಸಿಕೆ ಹಾಕಬೇಕು. ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಬೇಕು. ಅರಣ್ಯ ಇಲಾಖೆ ಸಿಬ್ಬಂದಿಗೆ ಆತ್ಮಸ್ಥೈರ್ಯ ತುಂಬಬೇಕು' ಎಂದು ಡಿಸಿಎಫ್ ಪ್ರಶಾಂತಕುಮಾರ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ನಾಗರಹೊಳೆ ಹುಲಿ ಯೋಜನಾ ನಿರ್ದೇಶಕ ಮಹೇಶ್ ಕುಮಾರ್, 'ಇಲಾಖೆಯ ಸಿಬ್ಬಂದಿಯನ್ನು ಕೊರೊನಾ ವಾರಿಯರ್ಸ್ ಎಂದು ಪರಿಗಣಿಸಿದ್ದು, ಸಿಬ್ಬಂದಿಗೆ ಲಸಿಕೆ ನೀಡಿರುವುದರಲ್ಲಿ ತಪ್ಪೇನಿದೆ' ಎಂದು ಪ್ರಶ್ನಿಸಿದರು.

'ಸಿಬ್ಬಂದಿಗೆ ಸೋಂಕು ತಗುಲಿದರೆ ಪ್ರಾಣಿಗಳಿಗೂ ತೊಂದರೆಯಾಗಬಹುದು.ಹೀಗಾಗಿ, ಅವರಿಗೂ ಲಸಿಕೆ ನೀಡಬೇಕು' ಎಂದು ಮನವಿ ಮಾಡಿದರು.

ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ಲಸಿಕಾ ನೋಡಲ್ ಅಧಿಕಾರಿ ಡಾ.ಎಲ್. ರವಿ, 'ಸದ್ಯಕ್ಕೆ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲು ಮಾತ್ರ ಸೂಚನೆ ಇದೆ. ಅರಣ್ಯ ಇಲಾಖೆಯ ಸಿಬ್ಬಂದಿ ಆದ್ಯತಾ ಪಟ್ಟಿಯಲ್ಲಿ ಬರುತ್ತಾರೆ. ನಂತರದ ದಿನಗಳಲ್ಲಿ ಅವರಿಗೆ ಲಸಿಕೆ ನೀಡಲಾಗುವುದು' ಎಂದರು.

ಬಾಂಗ್ಲಾ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಪ್ರಕರಣ

ಸಂತ್ರಸ್ತೆ ಸಮ್ಮುಖದಲ್ಲಿ ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಗ್ಲಾದೇಶದ ಯುವತಿ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣದ ತನಿಖೆಯನ್ನು ಚುರುಕುಗೊಳಿಸಿರುವ ಪೂರ್ವ ವಿಭಾಗದ ಪೊಲೀಸರು, ಕೃತ್ಯದ ಬಳಿಕ ನಾಪತ್ತೆಯಾಗಿದ್ದ ಸಂತ್ರಸ್ತೆಯನ್ನು ಕೇರಳದಲ್ಲಿ ಪತ್ತೆ ಮಾಡಿ ನಗರಕ್ಕೆ ಕರೆತಂದಿದ್ದಾರೆ.

ಕೃತ್ಯದ ವಿಡಿಯೊ ಆಧರಿಸಿ ಇಬ್ಬರು ಮಹಿಳೆಯರು ಸೇರಿ ಆರು ಮಂದಿಯನ್ನು ಪೊಲೀಸರು ಬಂಧಿಸಿದ್ದರು. ಸಂತ್ರಸ್ತೆ ಪತ್ತೆಗಾಗಿ ಮಹಿಳಾ ಇನ್‌ಸ್ಪೆಕ್ಟರ್ ನೇತೃತ್ವದ ತಂಡ ಕೇರಳಕ್ಕೆ ತೆರಳಿತ್ತು.

'ಸಂತ್ರಸ್ತೆಯನ್ನು ಬಿಗಿ ಭದ್ರತೆಯಲ್ಲಿ ನಗರಕ್ಕೆ ಶನಿವಾರ ಬೆಳಿಗ್ಗೆ ಕರೆತರಲಾಗಿದೆ. ಘಟನೆ ಬಗ್ಗೆ ಸಂತ್ರಸ್ತೆ ಹೇಳಿಕೆ ಪಡೆದು ವೈದ್ಯಕೀಯ ಪರೀಕ್ಷೆ ಮಾಡಿಸಲಾಗಿದೆ. ಘಟನಾ ಸ್ಥಳಕ್ಕೆ ಕರೆದೊಯ್ದು ಮಹಜರು ಪ್ರಕ್ರಿಯೆಯನ್ನೂ ಪೂರ್ಣಗೊಳಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ರಾಮಮೂರ್ತಿನಗರ ಠಾಣೆ ವ್ಯಾಪ್ತಿಯ ಕೆ. ಚನ್ನಸಂದ್ರ ಬಳಿಯ ಮನೆಯೊಂದರಲ್ಲಿ ಕೃತ್ಯ ನಡೆದಿತ್ತು. ಮನೆಯನ್ನು ಸಂತ್ರಸ್ತೆ ಗುರುತಿಸಿದ್ದು, ಆರೋಪಿಗಳ ವರ್ತನೆ ಬಗ್ಗೆ ವಿವರವಾಗಿ ಮಾಹಿತಿ ನೀಡಿದ್ದಾರೆ.'

'ಸಂತ್ರಸ್ತೆ ಬಂಧಿತ ಆರೋಪಿಗಳ ಗುರುತನ್ನು ಇನ್ನಷ್ಟೇ ಪತ್ತೆ ಹಚ್ಚಬೇಕಿದೆ. ಆ ಬಳಿಕ, ಆಕೆಯನ್ನು ನ್ಯಾಯಾಧೀಶರ ಎದುರು ಹಾಜರುಪಡಿಸಿ ಹೇಳಿಕೆ ದಾಖಲಿಸಿಕೊಳ್ಳಲಾಗುವುದು' ಎಂದೂ ಮೂಲಗಳು ಹೇಳಿವೆ.

ಸಂತ್ರಸ್ತೆ, ಬಂಧಿತರು ಅಕ್ರಮ ವಾಸಿಗಳು: ಸುದ್ದಿಗಾರರ ಜೊತೆ ಮಾತನಾಡಿದ ಎಸ್.ಡಿ. ಶರಣಪ್ಪ, 'ವಿಡಿಯೊ ಮೂಲಕ ಕೃತ್ಯ ಬಯಲಿಗೆ ಬಂದಿದೆ. ಸಂತ್ರಸ್ತೆ ಹಾಗೂ ಆರೋಪಿಗಳು, ಬಾಂಗ್ಲಾದೇಶದಿಂದ ಬಂದು ಇಲ್ಲಿ ಅಕ್ರಮವಾಗಿ ವಾಸವಿದ್ದರು ಎಂಬುದು ಗೊತ್ತಾಗಿದೆ' ಎಂದರು.

'ಆರೋಪಿಗಳ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ. ಅವರೆಲ್ಲರೂ ಸೇರಿ ಒಂದೇ ವೃತ್ತಿ ಮಾಡುತ್ತಿದ್ದ ಸಂಗತಿ ಗೊತ್ತಾಗಿದೆ. ವೃತ್ತಿ ಬಗ್ಗೆ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದ್ದು, ತನಿಖೆ ಪ್ರಗತಿಯಲ್ಲಿದೆ' ಎಂದೂ ತಿಳಿಸಿದರು.

ಅಕ್ರಮ ಬಂಧನ: ಪೊಲೀಸರ ವಿರುದ್ಧ ವಿಚಾರಣೆ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸರಗಳ್ಳತನ ಆರೋಪದಲ್ಲಿ ವ್ಯಕ್ತಿಯನ್ನು ಅಕ್ರಮ ಬಂಧನದಲ್ಲಿ ಇರಿಸಲಾಗಿತ್ತು ಎಂಬ ಆರೋಪದ ಪ್ರಕರಣದಲ್ಲಿ ಏಳು ಪೊಲೀಸರ ವಿರುದ್ಧ ನಡೆಯುತ್ತಿರುವ ವಿಚಾರಣೆ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

'ಮುಗ್ಧರನ್ನು ಅಕ್ರಮವಾಗಿ ಬಂಧಿಸುವುದು ಮತ್ತು ಅವರನ್ನು ಕ್ರೂರವಾಗಿ ನಡೆಸಿಕೊಳ್ಳುವುದು ಪೊಲೀಸ್ ಅಧಿಕಾರಿಗಳ ಕರ್ತವ್ಯದ ಭಾಗ ಎಂದು ಪರಿಗಣಿಸಲು ಕಾನೂನಿನಲ್ಲಿ ಅವಕಾಶ ಇಲ್ಲ' ಎಂದು ನ್ಯಾಯಮೂರ್ತಿ ಎಚ್.ಪಿ. ಸಂದೇಶ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.

'ಒಬ್ಬ ವ್ಯಕ್ತಿಯನ್ನು 24 ಗಂಟೆಗಳಿಗೂ ಹೆಚ್ಚು ಕಾಲ ಲಾಕಪ್‌ನಲ್ಲಿ ಇಟ್ಟುಕೊಳ್ಳಲು ಅವಕಾಶ ಇಲ್ಲ. ಅದು ಕರ್ತವ್ಯ ಲೋಪ ಆಗಲಿದೆ' ಎಂಬ ಸುಪ್ರೀಂ ಕೋರ್ಟ್ ಆದೇಶವನ್ನು ಪೀಠ ಉಲ್ಲೇಖಿಸಿತು.

ದೊಡ್ಡಬಳ್ಳಾಪುರ ನಿವಾಸಿ ಮನು ಅವರನ್ನು 2010ರ ಮೇ ತಿಂಗಳಿನಲ್ಲಿ ಪೊಲೀಸರು ಕರೆದೊಯ್ದು ಎರಡು ದಿನಗಳ ನಂತರ ಬಿಡುಗಡೆ ಮಾಡಿದ್ದರು. ಈ ಸಂಬಂಧ ಎಫ್‌ಐಆರ್ ದಾಖಲಿಸಲು ಪೊಲೀಸರು ನಿರಾಕರಿಸಿದ ನಂತರ ಮನು ಅವರ ತಂದೆ ಖಾಸಗಿ ದೂರು ದಾಖಲಿಸಿದ್ದರು. 'ಮಗನನ್ನು ಪೊಲೀಸರು ಥಳಿಸಿ ಅಮಾನವೀಯವಾಗಿ ನಡೆಸಿಕೊಂಡಿದ್ದಾರೆ. ಸಂಬಂಧ ಇಲ್ಲದಿದ್ದರೂ ಪ್ರಕರಣದಲ್ಲಿ ಸೇರಿಸಿ ಅವನ ಜೀವನ ಹಾಳು ಮಾಡಲು ಪ್ರಯತ್ನಿಸಿದ್ದಾರೆ' ಎಂದು ಆರೋಪಿಸಿದ್ದರು.

ಈ ಸಂಬಂಧ ಚಿಕ್ಕಬಳ್ಳಾಪುರ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ವಿಚಾರಣೆ ನಡೆಸುತ್ತಿದೆ. ಇದನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಡಿವೈಎಸ್‌ಪಿ ಎಸ್. ಶಿವಕುಮಾರ್, ಪೊಲೀಸ್ ಇನ್‌ಸ್ಪೆಕ್ಟರ್ ಮುನಿರೆಡ್ಡಿ, ಕಾನ್‌ಸ್ಟೆಬಲ್‌ಗಳಾದ ಬಾಲಾಜಿ ಸಿಂಗ್, ಆನಂದ್, ಟಿ. ವೆಂಕಟೇಶ್, ಮುನಿಯಪ್ಪ(ನಿವೃತ್ತ), ಚಾಲಕ ಮೋಹನ್ ಅರ್ಜಿ ಸಲ್ಲಿಸಿದ್ದಾರೆ.

'ಸಂತ್ರಸ್ತರ ತಂದೆ ನೀಡಿದ ಖಾಸಗಿ ದೂರು ಆಧರಿಸಿ ಪ್ರಕರಣ ದಾಖಲಿಸಲಾಗಿದೆ. ಸಿಆರ್‌ಪಿಸಿ ಸೆಕ್ಷನ್ 197ರ ಪ್ರಕಾರ ಯಾವುದೇ ಪೂರ್ವಾನುಮತಿ ಪಡೆದಿಲ್ಲ' ಎಂದು ಅರ್ಜಿದಾರರು ತಿಳಿಸಿದ್ದರು.

ಚಿತ್ರಾವಳಿ

ಚಿಕ್ಕಬಾಣಾವರದ ಇಡಿಐಎಫ್‌ವೈ ಶಾಲೆಯಲ್ಲಿ ಏಳನೇ ತರಗತಿ ವಿದ್ಯಾರ್ಥಿ ಮಯಾಂಕ್ ಜೈನ್ ತಾನು ಕೂಡಿಟ್ಟಿದ್ದ ₹4,190 ನಗದನ್ನು ಕೋವಿಡ್ ರೋಗಿಗಳ ಚಿಕಿತ್ಸೆಗಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಸಮರ್ಪಿಸಲು ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರಿಗೆ ಶನಿವಾರ ಹಸ್ತಾಂತರಿಸಿದರು. ಇವರು ದಾವಣಗೆರೆಯ ಅಭಿನಂದನ್ ಹಾಗೂ ಸ್ವಪ್ನ ದಂಪತಿಯ ಪುತ್ರ.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಅರ್ಚಕರಿಗೆ ಶಾಸಕ ಆರ್.ಮಂಜುನಾಥ್ ಅವರು ದಿನಸಿ ಸಾಮಗ್ರಿಗಳ ಕಿಟ್‌ಗಳನ್ನು ಶನಿವಾರ ವಿತರಿಸಿದರು

ಜಯನಗರದ ಕಿತ್ತೂರು ರಾಣಿ ಚನ್ನಮ್ಮ ಆಟದ ಮೈದಾನದಲ್ಲಿ ಬಾಂಧವ ಸಂಸ್ಥೆಯ ವತಿಯಿಂದ ಆಟೊ ಚಾಲಕರಿಗೆ ಪಡಿತರ ಕಿಟ್‌ಗಳನ್ನು ಶಾಸಕಿ ಆರ್.ಸೌಮ್ಯಾ ರೆಡ್ಡಿ ಶನಿವಾರ ವಿತರಿಸಿದರು. ಸ್ಥಳೀಯ ಮುಖಂಡ ಎನ್.ನಾಗರಾಜ್ ಇದ್ದರು.

ಶಂಕರ ಪಾರ್ಕ್‌ನ ರೋಟರಿ ಬೆಂಗಳೂರು' ವತಿಯಿಂದ ರೊಟೇರಿಯನ್ ನಾಗೇಂದ್ರ ಪ್ರಸಾದ್ ಅವರ ಸಮ್ಮುಖದಲ್ಲಿ ಅರ್ಚಕರು ಹಾಗೂ ಹಿರಿಯ ನಾಗರಿಕರಿಗೆ ದವಸ– ಧಾನ್ಯಗಳ ಕಿಟ್‌ಗಳನ್ನು ಶನಿವಾರ ವಿತರಿಸಲಾಯಿತು. ರೋಟರಿ ಸಂಸ್ಥೆಯ ಪದಾಧಿಕಾರಿಗಳು ಇದ್ದರು

ಮಕ್ಕಳಿಗೆ ಹಬ್ಬಿದ ಕೊರೊನಾ ಸೋಂಕು

ಘಟ್ಟರಾಗಡಹಳ್ಳಿ: 12 ಮಕ್ಕಳು ಕೋವಿಡ್ ಕೇರ್ ಸೆಂಟರ್‌ಗೆ

ಕೆಜಿಎಫ್: ನಗರದ ಹೊರವಲಯದ ಘಟ್ಟರಾಗಡಹಳ್ಳಿಯಲ್ಲಿ ವ್ಯಾಪಕವಾಗಿ ಕೊರೊನಾ ಸೋಂಕು ಹರಡಿದ್ದು, ಗ್ರಾಮದ 12 ಮಕ್ಕಳನ್ನು ಕೋವಿಡ್ ಕೇರ್ ಸೆಂಟರ್‌ಗೆ ಕಳಿಸಲಾಗಿದೆ.

ಗ್ರಾಮದಲ್ಲಿ ಈಚೆಗೆ ನಡೆದ ರ್‍ಯಾಪಿಡ್ ಆ್ಯಂಟಿಜೆನ್ ಪರೀಕ್ಷೆಯಲ್ಲಿ ಗ್ರಾಮದ ಬಹುತೇಕ ಮಂದಿ ಸೋಂಕಿಗೆ ತಗುಲಿರುವುದು ಪತ್ತೆಯಾಯಿತು. ಅದರ ಜೊತೆಗೆ ಅವರ ಕುಟುಂಬದಲ್ಲಿರುವ ಮಕ್ಕಳಿಗೂ ಸೋಂಕು ತಗಲಿರುವುದು ಕಂಡು ಬಂದಿತು. ಗ್ರಾಮದಲ್ಲಿ ಒಟ್ಟು 36 ಮಂದಿಯನ್ನು ಈವರೆಗೆ ಕೋವಿಡ್ ಕೇರ್ ಸೆಂಟರ್‌ಗೆ ಕಳಿಸಲಾಗಿದ್ದು, ಅವರ ಪೈಕಿ 12 ಮಕ್ಕಳು ಇದ್ದಾರೆ.

ಕೆಜಿಎಫ್ ಹೊರವಲಯದ ಘಟ್ಟರಾಗಡಹಳ್ಳಿಯಲ್ಲಿ ಕೋವಿಡ್ ಸೋಂಕು ತಗಲಿದ ಮಕ್ಕಳನ್ನು ಆಂಬುಲೆನ್ಸ್ ಮೂಲಕ ಕೋವಿಡ್ ಕೇರ್ ಸೆಂಟರ್‌ಗೆ ಕಳಿಸಲಾಯಿತು.

ಮಕ್ಕಳು ಚಟುವಟಿಕೆಯಿಂದ ಇದ್ದಾರೆ. ಹೊರನೋಟಕ್ಕೆ ಯಾವುದೇ ಕೋವಿಡ್ ಲಕ್ಷಣಗಳು ಕಂಡುಬಂದಿಲ್ಲ. ಗ್ರಾಮವನ್ನು ಸಂಪೂರ್ಣವಾಗಿ ಕಂಟೈನ್ಮೆಂಟ್ ವಲಯ ಎಂದು ಘೋಷಿಸಲಾಗಿದೆ. ಸೋಂಕಿತರನ್ನು ಬಿಜಿಎಂಎಲ್ ಆಸ್ಪತ್ರೆ ಮತ್ತು ಸಂಭ್ರಂ ಮೆಡಿಕಲ್ ಕಾಲೇಜಿಗೆ ಸೇರಿಸಲಾಗಿದೆ. ಪೆದ್ದಪಲ್ಲಿ ಗ್ರಾಮದಲ್ಲಿ ಶನಿವಾರ ಲಸಿಕೆ ಅಭಿಯಾನವನ್ನು ಪ್ರಾರಂಭಿಸಲಾಗಿದೆ ಎಂದು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮಂಜುನಾಥ್ ತಿಳಿಸಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ್ ವೆಂಕಟರಮಣಪ್ಪ, ಸಬ್ ಇನ್‌ಸ್ಪೆಕ್ಟರ್ ಸೋಮಶೇಖರ್ ಗ್ರಾಮಕ್ಕೆ ಭೇಟಿ ನೀಡಿದರು.

12 ನೇ ತರಗತಿ ಪರೀಕ್ಷೆ: ಪರ್ಯಾಯ ವ್ಯವಸ್ಥೆಗೆ ಚಿಂತನೆ

ನವದೆಹಲಿ(ಪಿಟಿಐ): ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು 12ನೇ ತರಗತಿಯ ಬಾಕಿ ಉಳಿದಿರುವ ಬೋರ್ಡ್ ಪರೀಕ್ಷೆಗಳನ್ನು ರದ್ದುಗೊಳಿಸುವ ಅಥವಾ ಪರ್ಯಾಯ ಮೌಲ್ಯಮಾಪನ ಮಾರ್ಗವನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಸಿಬಿಎಸ್‌ಇ ಮತ್ತು ಐಸಿಎಸ್‌ಸಿಇ ಚಿಂತನೆ ನಡೆಸಿವೆ ಎಂದು ಮೂಲಗಳು ಹೇಳಿವೆ.

ಪ್ರಮುಖ ವಿಷಯಗಳಿಗೆ ಕಡಿಮೆ ಅವಧಿಯ ಪರೀಕ್ಷೆಗಳನ್ನು ಆಗಸ್ಟ್‌ನಲ್ಲಿ ನಡೆಸುವ ಸಿಬಿಎಸ್‌ಇ ಪ್ರಸ್ತಾವವನ್ನು ಬಹುಪಾಲು ರಾಜ್ಯಗಳು ಬೆಂಬಲಿಸಿದರೂ ಕೋವಿಡ್ ಪರಿಸ್ಥಿತಿ ಇನ್ನೂ ಮುಂದುವರಿದ ಕಾರಣ ಪರೀಕ್ಷೆಗಳನ್ನು ರದ್ದುಗೊಳಿಸುವುದು ಮತ್ತು ಹಿಂದಿನ ಪರೀಕ್ಷೆಗಳ ಆಧಾರದ ಮೇಲೆ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ಗುರುತಿಸುವ ಆಯ್ಕೆಗಳ ಬಗ್ಗೆಯೂ ಚಿಂತನೆ ನಡೆದಿದೆ ಎಂದೂ ತಿಳಿಸಿವೆ.

12ನೇ ತರಗತಿ ವಿದ್ಯಾರ್ಥಿಗಳು 11ನೇ ತರಗತಿಯಲ್ಲಿ ಪಡೆದ ಸರಾಸರಿ ಅಂಕಗಳ ಮಾಹಿತಿ ನೀಡುವಂತೆ, ಈ ನಡುವೆ ಸಿಐಸಿಎಸ್‌ಇ ಮಂಡಳಿ ತನ್ನ ಅಧೀನ ಶಾಲೆಗಳಿಗೆ ಸೂಚಿಸಿದೆ.

ಕೋವಿಡ್: ಅನಾಥ ಮಕ್ಕಳಿಗೆ ಹಿರೇಕಲ್ಮಠದಲ್ಲಿ ಆಶ್ರಯ

ಪ್ರಜಾವಾಣಿ ವಾರ್ತೆ

ಹೊನ್ನಾಳಿ: ರಾಜ್ಯದಲ್ಲಿ ಕೋವಿಡ್‌ನಿಂದ ತಂದೆ, ತಾಯಿ ಮತ್ತು ಕುಟುಂಬಸ್ಥರನ್ನು ಕಳೆದುಕೊಂಡು ಅನಾಥರಾಗಿರುವ ಮಕ್ಕಳಿಗೆ ಹಿರೇಕಲ್ಮಠ ಆಶ್ರಯ ನೀಡಲಿದೆ ಎಂದು ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

'ರಾಜ್ಯದಲ್ಲಿ ಅನಾಥರಾಗಿರುವ ಮಕ್ಕಳನ್ನು ನಮ್ಮ ಮಠ ಪೋಷಣೆ ಮಾಡಲಿದೆ. ಅಂತಹ ಮಕ್ಕಳಿಗೆ ಎಲ್‌ಕೆಜಿಯಿಂದ ಪದವಿವರೆಗೆ ಶಿಕ್ಷಣ, ಊಟ, ವಸತಿ, ವಸ್ತ್ರ ನೀಡಿ ಪೋಷಿಸಲಾಗುವುದು. ಅಂತಹ ಮಕ್ಕಳು ರಾಜ್ಯದಲ್ಲಿ ಎಲ್ಲಿಯೇ ಇದ್ದರೂ ಸಂಬಂಧಿಸಿದವರು ಮಠವನ್ನು ಸಂಪರ್ಕಿಸಬಹುದು' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾಹಿತಿ ನೀಡಿದರು.

'ಕೋವಿಡ್ ಸೋಂಕಿತರ ಸಂಖ್ಯೆ ಹೆಚ್ಚಾದರೆ ಅವರ ಆರೈಕೆಗಾಗಿ ಮಠದಿಂದ ಕೋವಿಡ್ ಕೇಂದ್ರಗಳನ್ನು ತೆರೆಯಲಾಗುವುದು. ಮಠದ ಕಟ್ಟಡಗಳನ್ನು ಮತ್ತು ನಮ್ಮ ಸಂಸ್ಥೆಯ ಎರಡು ವಾಹನಗಳನ್ನು ತಾಲ್ಲೂಕು ಆಡಳಿತ ಇದಕ್ಕಾಗಿ ಬಳಸಿಕೊಳ್ಳಬಹುದು' ಎಂದು ಹೇಳಿದರು.

ವಿಳಾಸ: ಡಾ.ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ, ಹಿರೇಕಲ್ಮಠದ ಪೀಠಾಧ್ಯಕ್ಷರು, ಹೊನ್ನಾಳಿ, ದಾವಣಗೆರೆ ಜಿಲ್ಲೆ, (9916322247, 9448154536).

ಮಠದ ವ್ಯವಸ್ಥಾಪಕ ಚನ್ನಬಸವಯ್ಯ ಸುದ್ದಿಗೋಷ್ಠಿಯಲ್ಲಿ ಇದ್ದರು.

ಗೂಂಡಾ ಕಾಯ್ದೆಯಡಿ ರೌಡಿ ಲೀ ಬಂಧನ

ಬೆಂಗಳೂರು: ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಜೈಲಿಗೂ ಹೋಗಿ ಬಂದು ಸಮಾಜದ ಶಾಂತಿಗೆ ಧಕ್ಕೆ ತರುತ್ತಿದ್ದ ಆರೋಪದಡಿ ರೌಡಿ ಅರವಿಂದ್ ಅಲಿಯಾಸ್ ಲೀ (26) ಎಂಬಾತನನ್ನು ಗೂಂಡಾ ಕಾಯ್ದೆಯಡಿ ಸೆರೆ ಹಿಡಿದು ಜೈಲಿಗಟ್ಟಲಾಗಿದೆ.

'ಭಾರತಿನಗರ ಠಾಣೆಯ ರೌಡಿ ಪಟ್ಟಿಯಲ್ಲಿ ಅರವಿಂದ್ ಹೆಸರಿತ್ತು. ಆತನ ವಿರುದ್ಧ ಪುಲಿಕೇಶಿನಗರ, ಭಾರತಿನಗರ, ಹಲಸೂರು, ಕೆ.ಜಿ.ಹಳ್ಳಿ, ಕೆ.ಆರ್.ಪುರ, ಎಚ್‌ಎಎಲ್ ಠಾಣೆಗಳಲ್ಲಿ ಒಟ್ಟು 13 ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸರು ಹೇಳಿದರು.

'20ನೇ ವಯಸ್ಸಿನಿಂದಲೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುತ್ತಿದ್ದ ಆರೋಪಿ, ಸಹಚರರ ಗ್ಯಾಂಗ್ ಕಟ್ಟಿಕೊಂಡಿದ್ದ. ಕೊಲೆ ಯತ್ನ, ಜೀವ ಬೆದರಿಕೆ ಪ್ರಕರಣದಲ್ಲೂ ಆರೋಪಿ ಆಗಿದ್ದ. ಹಲವು ಪ್ರಕರಣಗಳಲ್ಲಿ ಜಾಮೀನು ಪಡೆದು ಹೊರಬಂದಿದ್ದ ಆತ, ಪುನಃ ಅಪರಾಧ ಕೃತ್ಯ ಎಸಗಲಾರಂಭಿಸಿದ್ದ ' ಎಂದು ತಿಳಿಸಿದರು.

ಆನ್‌ಲೈನ್‌ನಲ್ಲಿ ಆಹಾರ ತಲುಪಿಸುವ ಸಿಬ್ಬಂದಿ ಪ್ರತಿಭಟನೆ • ಬೇಡಿಕೆಗಳ ಫಲಕ ಪ್ರದರ್ಶನ

ಪ್ಯಾಕೇಜ್ ಘೋಷಣೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ವ್ಯಾಪಕವಾಗಿರುವ ಪರಿಸ್ಥಿತಿಯಲ್ಲೂ ಜನರಿಗೆ ಆಹಾರ ತಲುಪಿಸುತ್ತಿರುವ ಸಿಬ್ಬಂದಿಗೆ ಸರ್ಕಾರ ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ಒತ್ತಾಯಿಸಿ ಯುನೈಟೆಡ್ ಫುಡ್ ಡೆಲಿವರಿ ಪಾರ್ಟ್‌ನರ್ಸ್ ಯೂನಿಯನ್ ವತಿಯಿಂದ ಶನಿವಾರ ಆನ್‌ಲೈನ್ ಪ್ರತಿಭಟನೆ ನಡೆಯಿತು.

ಆಹಾರ ತಲುಪಿಸುವ ಸಿಬ್ಬಂದಿ ಬೇಡಿಕೆಗಳ ಫಲಕ ಹಿಡಿದು ಆನ್‌ಲೈನ್‌ನಲ್ಲಿ ಹಂಚಿಕೊಂಡರು. ಮುಖ್ಯಮಂತ್ರಿ ಹಾಗೂ ಕಾರ್ಮಿಕ ಸಚಿವರಿಗೆ ಮನವಿ ಪತ್ರ ಸಲ್ಲಿಸಿದರು.

'ಆಹಾರ ಸರಬರಾಜಿನ ಪ್ರಾಮುಖ್ಯ ಅರಿತ ಸರ್ಕಾರ ಲಾಕ್‌ಡೌನ್ ಸಮಯದಲ್ಲಿ ಅಗತ್ಯ ಸೇವೆಯಡಿ ಆಹಾರ ತಲುಪಿಸುವುದಕ್ಕೆ ವಿಶೇಷ ಅವಕಾಶ ಕಲ್ಪಿಸಿದೆ. ಸ್ವಿಗ್ಗಿ, ಜೊಮ್ಯಾಟೊ ಸೇರಿದಂತೆ ಹಲವು ಸಂಸ್ಥೆಗಳ ಮೂಲಕ ಲಕ್ಷಾಂತರ ಜನ ಆಹಾರ ತಲುಪಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಆರ್ಥಿಕ ಸಮಸ್ಯೆ ಇರುವುದರಿಂದ ಈ ದುರಿತ ಕಾಲಘಟ್ಟದಲ್ಲೂ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಒಕ್ಕೂಟದ ಅಧ್ಯಕ್ಷ ವಿನಯ್ ಸಾರಥಿ ತಿಳಿಸಿದರು.

ಆಹಾರ ವಿತರಣೆ ಸಂಸ್ಥೆಗಳ ಸಿಬ್ಬಂದಿ ಬೇಡಿಕೆಯ ಫಲಕಗಳನ್ನು ಪ್ರದರ್ಶಿಸಿ ಆನ್‌ಲೈನ್‌ನಲ್ಲಿ ಹಂಚಿಕೊಳ್ಳುವ ಮೂಲಕ ಶನಿವಾರ ಪ್ರತಿಭಟನೆ ನಡೆಸಿದರು.

'ಎರಡನೇ ಅಲೆಯಿಂದ ಆಹಾರ ಖರೀದಿದಾರರ ಸಂಖ್ಯೆ ಕಡಿಮೆಯಾಗಿದೆ. ಮತ್ತೊಂದೆಡೆ ಪೆಟ್ರೋಲ್ ದರ ದುಬಾರಿಯಾಗಿದೆ. ಆಹಾರ ವಿತರಣೆಗಾಗಿ ಹೊರಗಡೆ ಸಂಚರಿಸುವ ಇವರಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚು. ಕಳೆದ ಬಾರಿಯ ಲಾಕ್‌ಡೌನ್ ಅವಧಿಯಲ್ಲೂ ಕಾರ್ಯನಿರ್ವಹಿಸಿದ್ದ ಕಾರ್ಮಿಕರಿಗೆ ಪ್ಯಾಕೇಜ್ ಘೋಷಿಸುವಂತೆ ಒತ್ತಾಯಿಸಿದ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಈವರೆಗೂ ಯಾವುದೇ ಬೇಡಿಕೆ ಈಡೇರಿಲ್ಲ' ಎಂದರು.

'ಸರ್ಕಾರ ಈ ಕೂಡಲೇ ಆಹಾರ ತಲುಪಿಸುವ ಸಿಬ್ಬಂದಿಗಾಗಿ ಪರಿಹಾರ ಪ್ಯಾಕೇಜ್ ಘೋಷಿಸಬೇಕು. ಅವರ ಕುಟುಂಬದವರಿಗೆ ಆದ್ಯತೆ ಮೇರೆಗೆ ಕೋವಿಡ್ ಲಸಿಕೆಯನ್ನು ಉಚಿತವಾಗಿ ಒದಗಿಸಬೇಕು. ಇವರ ರಕ್ಷಣೆಗಾಗಿ ಮಾಸ್ಕ್, ಸ್ಯಾನಿಟೈಸರ್ ಹಾಗೂ ಇನ್ನಿತರ ಸುರಕ್ಷತಾ ಸಾಮಗ್ರಿಗಳನ್ನು ಉಚಿತವಾಗಿ ವಿತರಿಸಬೇಕು' ಎಂದು ಒತ್ತಾಯಿಸಿದರು.

ನಿರ್ಮಾಣ ಹಂತದಲ್ಲಿರುವ ಕೋವಿಡ್ ಆರೈಕೆ ಕೇಂದ್ರಕ್ಕೆ ಶನಿವಾರ ಭೇಟಿ ನೀಡಿದ ಸಚಿವ ವಿ. ಸೋಮಣ್ಣ ಅವರು ಅಧಿಕಾರಿಗಳೊಂದಿಗೆ ಚರ್ಚಿಸಿದರು

'ಡಯಾಲಿಸಿಸ್ ಘಟಕ ಈಗ ಆರೈಕೆ ಕೇಂದ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮಾರುತಿ ಮಂದಿರ ವಾರ್ಡ್‌ನಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಡಯಾಲಿಸಿಸ್ ಘಟಕವನ್ನು ಕೋವಿಡ್ ಆರೈಕೆ ಕೇಂದ್ರವನ್ನಾಗಿ ಪರಿವರ್ತಿಸಲಾಗುತ್ತಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ತಿಳಿಸಿದರು.

ಕ್ಷೇತ್ರದ ಶಾಸಕರೂ ಆಗಿರುವ ಅವರು ಶನಿವಾರ ಸ್ಥಳಕ್ಕೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದರು.

ಬಳಿಕ ಮಾತನಾಡಿ 'ಈ ಕೇಂದ್ರದಲ್ಲಿ ಸಾಮಾನ್ಯ ಹಾಸಿಗೆ, ಆಮ್ಲಜನಕ ಪೂರೈಕೆ ಹಾಸಿಗೆ ಹಾಗೂ ತೀವ್ರ ನಿಗಾ ಘಟಕಗಳ (ಐಸಿಯು) ಸೌಲಭ್ಯಗಳಿರುವ ಹಾಸಿಗೆಗಳು ಸೇರಿ ಒಟ್ಟು 60 ಹಾಸಿಗೆಗಳ ವ್ಯವಸ್ಥೆ ಮಾಡಲಾಗುತ್ತದೆ. ಮಕ್ಕಳಿಗಾಗಿ 10 ಹಾಸಿಗೆಗಳನ್ನು ಮೀಸಲಿಡಲಾಗಿದೆ. ಜೂನ್ 6ರಂದು ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಈ ಕೇಂದ್ರವನ್ನು ಉದ್ಘಾಟಿಸಲಿದ್ದಾರೆ' ಎಂದರು.

ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥ್ ಗೌಡ, ಮುಖಂಡ ವಾಗೀಶ ಹಾಗೂ ಬಿಬಿಎಂಪಿ ಅಧಿಕಾರಿಗಳು ಇದ್ದರು.

'ಕ್ರಿಯಾ ಯೋಜನೆಗೆ ತ್ವರಿತ ಅನುಮೋದನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆಯ (ಟಿಎಸ್‌ಪಿ) ಕ್ರಿಯಾ ಯೋಜನೆಗೆ ತ್ವರಿತವಾಗಿ ರಾಜ್ಯ ಪರಿಷತ್ತ ಅನುಮೋದನೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಮಾಜ ಕಲ್ಯಾಣ ಸಚಿವ ಬಿ. ಶ್ರೀರಾಮುಲು ತಿಳಿಸಿದ್ದಾರೆ.

ಕ್ರಿಯಾ ಯೋಜನೆ ಅನುಮೋದನೆ ವಿಳಂಬದಿಂದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುಷ್ಠಾನಕ್ಕೆ ಅಡ್ಡಿಯಾಗಿರುವ ಕುರಿತು 'ಪ್ರಜಾವಾಣಿ'ಯ ಶನಿವಾರದ ಸಂಚಿಕೆಯಲ್ಲಿ '₹26 ಸಾವಿರ ಕೋಟಿ ಬಳಕೆಗೆ ಅಡ್ಡಿ' ಶೀರ್ಷಿಕೆಯಲ್ಲಿ ಪ್ರಕಟವಾದ ವಿಶೇಷ ವರದಿಗೆ ಪ್ರತಿಕ್ರಿಯಿಸಿರುವ ಅವರು, 'ವರ್ಚುವಲ್ ಆಗಿ ರಾಜ್ಯ ಪರಿಷತ್ ಸಭೆ ನಡೆಸುವುದು ಅಥವಾ ಕೋವಿಡ್ ಕಾರಣದಿಂದ ನೇರವಾಗಿ ಮುಖ್ಯಮಂತ್ರಿಯವರ ಮೂಲಕ ಒಪ್ಪಿಗೆ ಪಡೆದು ಈ ಅನುದಾನದ ಬಳಕೆಗೆ ಅವಕಾಶ ಕಲ್ಪಿಸಲು ಪ್ರಯತ್ನ ನಡೆಯುತ್ತಿದೆ' ಎಂದಿದ್ದಾರೆ.

ನಿಧನ ವಾರ್ತೆ

ನಿವೃತ್ತ ನ್ಯಾಯಾಧೀಶ ವಾಸುದೇವ ಮೂರ್ತಿ

ಬೆಂಗಳೂರು: ಪ್ರಥಮ ಬಾರಿಗೆ ಕನ್ನಡದಲ್ಲಿ ತೀರ್ಪನ್ನು ಬರೆಯುವ ಜತೆಗೆ ನ್ಯಾಯಾಲಯದಲ್ಲಿ ಕನ್ನಡ ಅನುಷ್ಠಾನಕ್ಕೆ ಶ್ರಮಿಸಿದ್ದ ನಿವೃತ್ತ ಜಿಲ್ಲಾ ನ್ಯಾಯಾಧೀಶ ಕೆ.ವಿ. ವಾಸುದೇವ ಮೂರ್ತಿ (83) ಅವರು ಹೃದಯಾಘಾತದಿಂದ ಶನಿವಾರ ನಿಧನರಾದರು.

ಅವರು ವಯೋಸಹಜ ಅನಾರೋಗ್ಯ ಸಮಸ್ಯೆ ಎದುರಿಸುತ್ತಿದ್ದರು. ಹನುಮಂತನಗರದಲ್ಲಿ ವಾಸವಾಗಿದ್ದ ಅವರು, ತಮ್ಮ ನಿವಾಸದಲ್ಲಿ ಮೃತಪಟ್ಟಿದ್ದಾರೆ. ಇವರು ಪತ್ನಿಯನ್ನು ಅಗಲಿದ್ದಾರೆ. ಸಂಜೆ 6.30ಕ್ಕೆ ಚಾಮರಾಜಪೇಟೆಯ ಟಿಆರ್ ಮಿಲ್ ಚಿತಾಗಾರದಲ್ಲಿ ಅವರ ಅಂತ್ಯಸಂಸ್ಕಾರ ನೆರವೇರಿದೆ.

ವೆಂಕಟರಮಣ ಶ್ರೇಷ್ಠಿ ಮತ್ತು ವೆಂಕಟಲಕ್ಷ್ಮಮ್ಮ ಅವರ ನಾಲ್ಕನೇ ಪುತ್ರರಾದ ವಾಸುದೇವ ಅವರು, ಸಮಾಜಸೇವೆ, ಸಾಹಿತ್ಯ ಮತ್ತು ಕ್ರೀಡಾ ಕ್ಷೇತ್ರದಲ್ಲಿ ಸಕ್ರಿಯರಾಗಿದ್ದರು. ಕಾನೂನು ಪದವಿ ಪಡೆದ ಬಳಿಕ ಅವರು, ಶಿವಮೊಗ್ಗದ ನ್ಯಾಯವಾದಿ ವೆಂಕಟರಾಮಶಾಸ್ತ್ರಿಗಳ ಕಚೇರಿಯಲ್ಲಿ ಕಾರ್ಯನಿರ್ವಹಿಸಿ, ತರೀಕೆರೆಯಲ್ಲಿ ನ್ಯಾಯವಾದಿಯಾಗಿ ಜನಮನ್ನಣೆ ಪಡೆದರು. 1971ರಲ್ಲಿ ನ್ಯಾಯಾಧೀಶರಾಗಿ ನೇಮಕವಾದ ಅವರು, ನ್ಯಾಯಾಂಗ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಕನ್ನಡದಲ್ಲಿ ತೀರ್ಪನ್ನು ಬರೆದರು. ಅತ್ಯುತ್ತಮ ತೀರ್ಪು ಬರೆಹಕ್ಕಾಗಿ ರಾಜ್ಯ ಸರ್ಕಾರದಿಂದ ಎರಡು ವರ್ಷ ಪುರಸ್ಕೃತರಾಗಿದ್ದರು.

ಕರ್ನಾಟಕ ಕಾನೂನು ಮಂಡಳಿಯ ಕಾರ್ಯದರ್ಶಿಯಾಗಿ ಕೂಡ ಸೇವೆ ಸಲ್ಲಿಸಿದ್ದರು. ಲಕ್ಷಾಂತರ ಪ್ರಕರಣಗಳನ್ನು ಜನತಾ ನ್ಯಾಯಾಲಯದಲ್ಲಿ ಇತ್ಯರ್ಥ ಮಾಡಿಸಿ, ₹200 ಕೋಟಿಗೂ ಅಧಿಕ ಪರಿಹಾರದ ಹಣವನ್ನು ಜನರಿಗೆ ಕೊಡಿಸಿದ್ದರು.

ದೆಹಲಿಯ ರಾಷ್ಟ್ರೀಯ ಪರಿಸರ ಮೇಲ್ಮನವಿ ಪ್ರಾಧಿಕಾರದ ರಿಜಿಸ್ಟ್ರಾರ್ ಆಗಿದ್ದ ಅವರು, ಬಳಿಕ ಕರ್ನಾಟಕ ಲೋಕಾಯುಕ್ತ ಇಲಾಖೆಯಲ್ಲಿ ವಿಜಿಲೆನ್ಸ್ ನಿರ್ದೇಶಕರಾಗಿದ್ದರು. ತಿಂಗಳಿಗೆ ಕೇವಲ ₹1 ವೇತನ ಪಡೆಯುತ್ತಿದ್ದರು. ನಾಲ್ಕೂವರೆ ವರ್ಷ ಕಾರ್ಯನಿರ್ವಹಿಸಿದ ಅವರು, ಆ ವೇಳೆ ಮಹಾನಗರ ಪಾಲಿಕೆಯ ಅನೇಕ ಭ್ರಷ್ಟಾಚಾರವನ್ನು ಬಯಲಿಗೆಳೆದರು.

ಕೋವಿಡ್–19 ಲಸಿಕೆ: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪ

'ಖಾಸಗಿ ಆಸ್ಪತ್ರೆ ಪರ ಸಚಿವರ ಪ್ರಚಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಆಸ್ಪತ್ರೆಗಳಲ್ಲಿ ಲಸಿಕೆಗೆ ₹900ರಿಂದ ₹1,250ವರೆಗೆ ದರ ನಿಗದಿ ಮಾಡಲಾಗಿದ್ದು, ಅಲ್ಲಿಗೆ ಹೋಗಿ ಲಸಿಕೆ ಹಾಕಿಸಿಕೊಳ್ಳುವಂತೆ ಸಚಿವರು, ಸಂಸದರು, ಶಾಸಕರು ಪ್ರಚಾರ ಮಾಡುತ್ತಿದ್ದಾರೆ. ಹೀಗಾದರೆ ಬಡವರ ಪರಿಸ್ಥಿತಿ ಏನು' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದರು.

ಕೋವಿಡ್ ಮೂರನೇ ಅಲೆ ಮುನ್ಸೂಚನೆ ಇರುವುದರಿಂದ ಮಕ್ಕಳಿಗೆ ವಿಶೇಷ ಕೆಪಿಸಿಸಿ ಮಹಿಳಾ ಘಟಕ ಸಿದ್ಧಪಡಿಸಿರುವ ಪೌಷ್ಟಿಕಾಂಶಯುಕ್ತ ಆಹಾರ ಪದಾರ್ಥ ಹಾಗೂ ಔಷಧ ಮಾತ್ರೆಗಳನ್ನು ಒಳಗೊಂಡ ಕಿಟ್‌ಗಳನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಜೊತೆ ಸೇರಿ ಶನಿವಾರ ವಿತರಿಸಿದ ಬಳಿಕ ಅವರು ಮಾತನಾಡಿದರು.

ಸಿದ್ದರಾಮಯ್ಯ

'ಕೋವಿಡ್ ಲಸಿಕೆ ಹೆಸರಲ್ಲಿ ಖಾಸಗಿ ಆಸ್ಪತ್ರೆಗಳು ಜನರಿಂದ ಹಣ ದೋಚುತ್ತಿವೆ. ಲಸಿಕೆ ನೀಡುವ ನೆಪದಲ್ಲಿ ನಡೆಯುತ್ತಿರುವ ಈ ದಂಧೆಯಲ್ಲಿ ಬಿಜೆಪಿ ಶಾಸಕರೂ ಶಾಮೀಲಾಗಿದ್ದಾರೆ. ದುಬಾರಿ ಹಣ ಕೊಟ್ಟು ಲಸಿಕೆ ಪಡೆಯಲು ಬಡವರಿಂದ ಸಾಧ್ಯವೇ' ಎಂದು ಪ್ರಶ್ನಿಸಿದ ಅವರು, 'ಲಸಿಕೆಗೆ ಸರ್ಕಾರ ಏಕರೂಪದ ದರ ನಿಗದಿ ಮಾಡಬೇಕು' ಎಂದು ಒತ್ತಾಯಿಸಿದರು.

'ಸರ್ಕಾರಿ ಆಸ್ಪತ್ರೆಗಳಿಗೆ ಸಿಗದ ಲಸಿಕೆ, ಖಾಸಗಿಯವರಿಗೆ ಹೇಗೆ ಸಿಗುತ್ತಿದೆ. ಅಪೋಲೋ ಆಸ್ಪತ್ರೆಯಲ್ಲಿ ಸ್ಪುಟ್ನಿಕ್ ಲಸಿಕೆ ಲಭ್ಯವಿದೆ ಎಂದು ಆರೋಗ್ಯ ಸಚಿವರೇ ಹೇಳುತ್ತಾರೆ. ಹಣ ನೀಡಿ ಲಸಿಕೆ ಹಾಕಿಸಿಕೊಳ್ಳಿ ಎಂದು ಸಚಿವರೇ ಹೇಳುವುದಾದರೆ ಸರ್ಕಾರ ಏನು ಮಾಡುತ್ತಿದೆ' ಎಂದು ಪ್ರಶ್ನಿಸಿದರು.

'ಕೊರೊನಾ ಮೂರನೇ ಅಲೆ ಮಕ್ಕಳನ್ನು ಬಾಧಿಸುತ್ತದೆ ಎಂದು ತಜ್ಞರು ಹೇಳುತ್ತಿದ್ದರೂ ರಾಜ್ಯ ಸರ್ಕಾರ ಯಾವುದೇ ಸಿದ್ಧತೆ ಮಾಡಿಕೊಂಡಿಲ್ಲ. ಎರಡನೇ ಅಲೆ ನಿಯಂತ್ರಣಕ್ಕೂ ಯಾವುದೇ ತಯಾರಿ ಮಾಡಿಕೊಂಡಿರಲಿಲ್ಲ' ಎಂದೂ ಆರೋಪಿಸಿದರು.

'ಹೈಕೋರ್ಟ್ ಸಿಜೆ ಮಧ್ಯಪ್ರವೇಶಿಸಬೇಕು'

ಶಿವಕುಮಾರ್

'ರಾಜ್ಯ ಸರ್ಕಾರ ಖರೀದಿಸಿದ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಿಗೆ ಸರಬರಾಜು ಮಾಡಿ, ದುಬಾರಿ ಬೆಲೆಗೆ ಮಾರುತ್ತಿರುವ ಹಗರಣದ ಬಗ್ಗೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮಧ್ಯಪ್ರವೇಶಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮನವಿ ಮಾಡಿದರು.

'ಸರ್ಕಾರ ಖರೀದಿಸಿದ ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ ಆಡಳಿತ ಪಕ್ಷದವರು ಶಾಮೀಲಾಗಿದ್ದಾರೆ. ಈ ಬಗ್ಗೆ ದೂರು ದಾಖಲಿಸಿ ವಿಚಾರಣೆ ನಡೆಸಬೇಕು' ಎಂದೂ ಕೋರಿದರು.

'ಮಕ್ಕಳ ಸುರಕ್ಷತೆಗೆ ಮಹಿಳಾ ಕಾಂಗ್ರೆಸ್ ವತಿಯಿಂದ ಕಿಟ್‌ಗಳನ್ನು ನೀಡಲಾಗುತ್ತಿದೆ. ಕೋವಿಡ್ ಮೂರನೇ ಅಲೆ ಮಕ್ಕಳಿಗೆ ಅಪಾಯ ತರುವ ಆತಂಕ ಇರುವುದರಿಂದ ಮಹಿಳೆಯರು ತಮ್ಮ ಮಕ್ಕಳ ರಕ್ಷಣೆ ಮಾಡಿಕೊಳ್ಳಬೇಕು ಎಂದು ಈ ಕಾರ್ಯಕ್ರಮ ರೂಪಿಸಲಾಗಿದೆ' ಎಂದರು.

ಹಿರಿಯ ನಿರ್ದೇಶಕ ತಿಪಟೂರು ರಘು ಇನ್ನಿಲ್ಲ

ಬೆಂಗಳೂರು: ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದ ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ತಿಪಟೂರು ರಘು ಅವರು ಶನಿವಾರ ಬೆಳಗ್ಗೆ ನಿಧನರಾಗಿದ್ದಾರೆ. ಅವರಿಗೆ 83 ವರ್ಷ ವಯಸ್ಸಾಗಿತ್ತು.

ಮೂರು ವರ್ಷದ ಹಿಂದೆ ಪಾರ್ಶ್ವವಾಯುಗೆ ಒಳಗಾಗಿದ್ದ ರಘು ಅವರಿಗೆ ಶ್ವಾಸಕೋಶದಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಹೀಗಾಗಿ ಕೆಲ ತಿಂಗಳ ಹಿಂದೆ ಆಸ್ಪತ್ರೆಯಲ್ಲಿದ್ದುಕೊಂಡೇ ಚಿಕಿತ್ಸೆ ಪಡೆದಿದ್ದರು. 'ಅನಾರೋಗ್ಯದಿಂದ ಗುಣಮುಖರಾಗಿ ಇತ್ತೀಚೆಗೆ ಮನೆಗೆ ಮರಳಿದ್ದರು. ಆದರೆ ಉಸಿರಾಟದ ಸಮಸ್ಯೆ ಮತ್ತೆ ಕಾಣಿಸಿಕೊಂಡಿತು. ಶನಿವಾರ ಮುಂಜಾನೆ 4.45ರ ವೇಳೆಗೆ ಅವರು ಮೃತಪಟ್ಟರು' ಎಂದು ರಘು ಅವರ ಮಗ, ನಟ ನವೀನ್ ತಿಳಿಸಿದರು.

ನಾಗಪೂಜಾ ಸಿನಿಮಾದಲ್ಲಿ ಸಹಾಯಕ ನಿರ್ದೇಶಕರಾಗಿ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ರಘು ಅವರು, 'ಬೆಟ್ಟದ ಹುಲಿ' ಚಿತ್ರದಲ್ಲಿಯೂ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ವಿಷ್ಣುವರ್ಧನ್ ಹಾಗೂ ಶಂಕರ್‌ನಾಗ್ ಅಭಿನಯದ 'ಬೆಂಕಿ ಬಿರುಗಾಳಿ' ಇವರಿಗೆ ಮತ್ತಷ್ಟು ಖ್ಯಾತಿ ತಂದ ಸಿನಿಮಾವಾಗಿತ್ತು. ಜೊತೆಗೆ ವಿಷ್ಣುವರ್ಧನ್ ಅವರು ಅಭಿನಯಿಸಿದ್ದ 'ಕಲ್ಲುವೀಣೆ ನುಡಿಯಿತು', ಶಂಕರ್‌ನಾಗ್ ಅಭಿನಯಿಸಿದ್ದ 'ಆಕ್ರೋಶ', 'ಹಳ್ಳಿಯ ಸುರಾಸುರರು' ಚಿತ್ರದ ಚಿತ್ರಕಥೆ ಹಾಗೂ ನಿರ್ದೇಶನ ಮಾಡಿದ್ದರು. 'ನಾಗಕಾಳ ಭೈರವ', 'ವೀಣೆ' ಹೀಗೆ ಹಲವು ಹಿಟ್ ಸಿನಿಮಾಗಳು ಅವರು ನಿರ್ದೇಶನದಲ್ಲಿ ಮೂಡಿಬಂದಿತ್ತು.

ನಿರ್ದೇಶನದ ಜೊತೆಗೆ ಹಲವು ಸಿನಿಮಾಗಳಲ್ಲಿ ಅವರು ನಟಿಸಿದ್ದರು. ಭಗವಾನ್ ಅವರ ಜೊತೆಗೂಡಿ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಿಲ್ಮ್ ಟೆಕ್ನಾಲಜಿ'ಯನ್ನು ಆರಂಭಿಸುವಲ್ಲಿ ರಘು ಅವರ ಪಾತ್ರ ಮಹತ್ವದ್ದಾಗಿತ್ತು.

ಲಾಕ್‌ಡೌನ್ ವಿಸ್ತರಣೆ ಬೇಡ: ಸೋಮಶೇಖರ್

ಮೈಸೂರು: 'ಜೂನ್ 7ರ ನಂತರ ಯಾವುದೇ ಕಾರಣಕ್ಕೂ ಲಾಕ್‌ಡೌನ್ ವಿಸ್ತರಣೆ ಮಾಡುವುದು ಸೂಕ್ತವಲ್ಲ' ಎಂದು ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ಇಲ್ಲಿ ಹೇಳಿದರು.

'ಮುಖ್ಯಮಂತ್ರಿ ಕೇಳಿದರೂ ಇದೇ ವಿಚಾರ ಹೇಳುತ್ತೇನೆ' ಎಂದರು.

ಧಾರಾಕಾರ ಮಳೆ: ರಸ್ತೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಮಂಗಳೂರು: ಜಿಲ್ಲೆಯಲ್ಲಿ ಶುಕ್ರವಾರ ರಾತ್ರಿಯಿಂದ ಧಾರಾಕಾರ ಮಳೆ ಸುರಿದಿದ್ದು, ಹಲವೆಡೆ ನೀರು ನಿಂತು ವಾಹನ ಸವಾರರು ಪರದಾಡುವಂತಾಯಿತು. ಶನಿವಾರ ಬೆಳಿಗ್ಗೆಯೂ ಮಳೆ ಮುಂದುವರಿದಿತ್ತು. ಸತತ ಸುರಿದ ಮಳೆಯಿಂದಾಗಿ ಪಂಪ್‌ವೆಲ್ ಫ್ಲೈಓವರ್‌ನ ಸರ್ವಿಸ್ ರಸ್ತೆ ಜಲಾವೃತಗೊಂಡಿತ್ತು. ಡೊಂಗರಕೇರಿಯ ರಸ್ತೆಗಳಲ್ಲಿ ನೀರು ಹರಿಯಿತು. ಮಧ್ಯಾಹ್ನದ ನಂತರ ಮಳೆ ಬಿಡುವು ನೀಡಿತು.

ಚರಂಡಿಗಳ ಹೂಳು ತೆರವು ಮಾಡದೇ ಇರುವುದರಿಂದ ನೀರು ಸರಾಗವಾಗಿ ಹರಿಯದೇ ರಸ್ತೆಯ ಮೇಲೆ ಬಂದಿತ್ತು. ರಥಬೀದಿ, ಟಿ.ವಿ. ರಮಣ ಪೈ ಹಾಲ್‌ವರೆಗಿನ ರಸ್ತೆಯಲ್ಲಿ ಅಲ್ಲಲ್ಲಿ ಕಾಮಗಾರಿ ನಡೆಯುತ್ತಿದ್ದು, ನೀರು ಸಂಗ್ರಹವಾಗಿತ್ತು. ಬಿಜೈ, ಕೆ.ಎಸ್. ರಾವ್ ರಸ್ತೆ, ಕೊಟ್ಟಾರಚೌಕಿ ಸೇರಿದಂತೆ ಹಲವೆಡೆ ರಸ್ತೆಗಳು ಜಲಾವೃತಗೊಂಡಿದ್ದವು.

ಶ್ರೀಕಾಂತ್ ತಿಂಗಳಾಯ ಅವರಿಗೆ ಸೇರಿದ ಜನಶ್ರೀ ಮೀನುಗಾರಿಕೆ ಬೋಟ್ ನೀರಿನಲ್ಲಿ ಮುಳುಗಿದೆ. ಅತ್ತಾವರ ಬಾಬುಗುಡ್ಡೆಯಲ್ಲಿ ಮನೆಯೊಂದು ಕುಸಿದಿದೆ. ಹಲವು ಮನೆಗಳಿಗೆ ನೀರು ನುಗ್ಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಮುನ್ನೂರಿನಲ್ಲಿ 10.2, ಕೆರ್ಮಾಳ್‌ನಲ್ಲಿ 10 ಹಾಗೂ ಮಂಗಳೂರು ನಗರದಲ್ಲಿ 9.8 ಸೆಂ.ಮೀ ಮಳೆ ಸುರಿದಿದೆ.

ಉತ್ತಮ ಮಳೆ (ಮಡಿಕೇರಿ ವರದಿ): ಕೊಡಗು ಜಿಲ್ಲೆಯ ಮಡಿಕೇರಿ, ಕಾಟಕೇರಿ, ಅಪ್ಪಂಗಳ, ಚೆಯ್ಯಂಡಾಣೆ, ಬಕ್ಕ, ನಾಪೋಕ್ಲು ವ್ಯಾಪ್ತಿಯಲ್ಲಿ ಶನಿವಾರ ಸಂಜೆ ಬಿರುಸಿನ ಮಳೆಯಾಗಿದೆ.

ಮಂಗಳೂರಿನ ಅತ್ತಾವರದಲ್ಲಿ ಜಲಾವೃತಗೊಂಡ ಮನೆಗೆ ಎಐಸಿಸಿ ಕಾರ್ಯದರ್ಶಿ ಐವನ್ ಡಿಸೋಜ ಭೇಟಿ ನೀಡಿದರು

ಸಿಡಿಲು ಬಡಿದು ಮಹಿಳೆ ಸಾವು

ಬಸವನಬಾಗೇವಾಡಿ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಸಿಂಧಗೇರಿ ಗ್ರಾಮದಲ್ಲಿ ಶನಿವಾರ ಸಿಡಿಲು ಬಡಿದು ಮುರಗೆಮ್ಮ ಬಾಬು ಚನ್ನಪಟ್ಟಣ (29) ಮೃತಪಟ್ಟಿದ್ದಾರೆ.

ಸಿಡಿಲು ಬಡಿದು 11 ಮೇಕೆಗಳು ಸಾವು: ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ಹೂವಿನಭಾವಿ ಹಾಗೂ ಹೂಡದಳ್ಳಿ ಗ್ರಾಮದ ಬಳಿ ಜಾಡರ್ ಕೊಳ್ಳದಲ್ಲಿ ಸಿಡಿಲು ಬಡಿದು 11 ಮೇಕೆಗಳು ಸಾವನ್ನಪ್ಪಿವೆ.

ಐದು ಜಿಲ್ಲೆಗಳಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ಉತ್ತರ ಒಳನಾಡಿನಲ್ಲಿ ಮೇ 30ರಂದು ಗುಡುಗು ಸಿಡಿಲು ಸಹಿತ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ರಾಜ್ಯದಲ್ಲಿ ಪೂರ್ವ ಮುಂಗಾರು ಶುರುವಾಗಿದ್ದು, ಜೂನ್ ಮೊದಲ ವಾರದಲ್ಲಿ ನೈರುತ್ಯ ಮಾರುತಗಳು ರಾಜ್ಯವನ್ನು ಪ್ರವೇಶಿಸಲಿವೆ. ಹಾಗಾಗಿ, ಮುಂದಿನ ಐದು ದಿನಗಳವರೆಗೆ ರಾಜ್ಯದಲ್ಲಿ ಮಳೆಯಾಗುವ ಮುನ್ಸೂಚನೆಗಳಿವೆ ಎಂದು ಮಾಹಿತಿ ನೀಡಿದೆ.

ಕರಾವಳಿ ಭಾಗದ ದಕ್ಷಿಣ ಕನ್ನಡ, ಉಡುಪಿ, ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ ಜಿಲ್ಲೆಗಳಲ್ಲಿ ಭಾನುವಾರ (ಮೇ 30) ಹೆಚ್ಚು ಮಳೆಯಾಗುವ ಮುನ್ಸೂಚನೆ ಇರುವುದರಿಂದ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿ ಜಿಲ್ಲೆಗಳು ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಶಿವಮೊಗ್ಗದಲ್ಲಿ ಮೇ 3ರಂದು ಮಳೆ ಹೆಚ್ಚಾಗಲಿದೆ ಎಂದು ಇಲಾಖೆ ತಿಳಿಸಿದೆ.

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–2/.ಟೆಂಡರ್.ಅಧಿಸೂಚನೆ/2021–22/578 ದಿನಾಂಕ:27–05–2021

ಟೆಂಡರ ತಿದ್ದುಪಡಿ ಅಧಿಸೂಚನೇ

ವಿಷಯ: ಟೆಂಡರ ದಿನಾಂಕ ತಿದ್ದುಪಡಿ ಪ್ರಕಟಣೆ ಅಧಿಸೂಚನೆ–ಬಗ್ಗೆ

ಉಲ್ಲೇಖ:1) ಈ ಕಚೇರಿ ಟೆಂಡರ ಪ್ರಕಟಣೆ ಸಂ: ಕಾನಿಅ/ಲೋಇ/ಕವಿ/ತಾಶಾ–2/ಟೆಂಡರ್.ಅಧಿಸೂಚನೆ/2020–21/ 542 ದಿನಾಂಕ 19.05.2021

ಈ ಕಚೇರಿಯ ಉಲ್ಲೇಖಿತ ಅಧಿಸೂಚನೆಯಲ್ಲಿ ಕರೆಯಲಾದ ಟೆಂಡರ ವೇಳಾಪಟ್ಟಿ ಈ ಕೆಳಗಿನಂತೆ ವಿಸ್ತರಿಸಲಾಗಿದೆ. 1) ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : **14.06..2021 (17.30 ಗಂಟೆ)**, 2) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : **15.06.2021 (16.00 ಗಂಟೆ)**, 3) ತಾಂತ್ರಿಕ ಬಿಡ ತೆರೆಯುವ ದಿನಾಂಕ : **16.06.2021 (16.30 ಗಂಟೆ)**, 4) ಆರ್ಥಿಕ ಬಿಡ ತೆರೆಯುವ ದಿನಾಂಕ: **18.06.2021 (11.00 ಗಂಟೆ)**,

ಉಳಿದಂತೆ ಯಾವುದೇ ಷರತ್ತುಗಳಲ್ಲಿ ಬದಲಾವಣೆ ಇರುವುದಿಲ್ಲ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/211/ಎಂ.ಸಿ.&ಎ/2021–22

ಕರ್ನಾಟಕ ಸರ್ಕಾರ

ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಯೋಜನಾ ವಿಭಾಗ,

1–11–264 ಎರಡನೇ ಮಹಡಿ, ಎ.ಟಿ.ಎಂ. ಸರ್ಕಲ್, ನಿಜಲಿಂಗಪ್ಪ ಕಾಲೋನಿ, ರಾಯಚೂರು–584101,
e-mail: eekrrdarcr@gmail.com

ಸಂ.:ಕಾನಿಅ/ಯೋ.ವಿ.ರಾ/ಪಿ.ಬಿ/2021–22/131 ದಿನಾಂಕ: 26–5–2021

:: ಅಲ್ಪಾವಧಿ ಟೆಂಡರ ಪ್ರಕಟಣೆ ::

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆಯಿಂದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, Micro ಯೋಜನೆಗಳ ಅಡಿಯಲ್ಲಿ ರಾಯಚೂರು ತಾಲೂಕಿನ ಕಾಮಗಾರಿಗಳನ್ನು KW-3, ಮಾನದಂಡಗಳನ್ನು ಅನುಸರಿಸಿ ಐಟಂ ರೇಟ್ ದರಗಳನ್ನು ಇ–ಪ್ರೋಕ್ಯೂರ್‌ಮೆಂಟ್ ಮುಖಾಂತರ ಟೆಂಡರ್‌ಗಳನ್ನು ಕರೆಯಲಾಗಿದೆ.

ಟೆಂಡರ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ

1) E.M.D. : As per e-proc portal, 2) ಟೆಂಡರ್ ಇಂಡೆಂಟ್ ನಂಬರಗಳು : 5129 - Improvements to road from J.Venktapur to Aralappanahuda in Raichur Taluk, 3) e-procurement portal ನಲ್ಲಿ ಟೆಂಡರ್ ಬಿಡ್ ದಾಖಲಾತಿಗಳನ್ನು ನೋಡಬಹುದಾದ ದಿನಾಂಕ, Date of commencement of downloading of bidding document : 29-05-2021, 4) ತಾಂತ್ರಿಕ ಬಿಡ್‌ಗಳನ್ನು online ಆನ್‌ಲೈನ ಮುಖಾಂತರ ಸಲ್ಲಿಸುವ ಕೊನೆಯ ದಿನಾಂಕ: Last date to submit bid on E-portal : **18-06-2021 (16.00 Hours)**, 5) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ : **19-06-2021 (16:30 Hours)**, 6) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ : ನಂತರ ತಿಳಿಸಲಾಗುವುದು, 7) ಟೆಂಡರ್ ಗುತ್ತಿಗೆದಾರರ ದರ್ಜೆ: 1ನೇ ದರ್ಜೆ, 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ ರಾಯಚೂರು, 9) ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್ ನೋಡಬಹುದು: https://www.eproc.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು ಯೋಜನಾ ವಿಭಾಗ, ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/66/ಎಂ.ಸಿ.&ಎ/2021–22

PUBLIC CAUTION NOTICE

On instructions from our clients, Nandi Infrastructure Corridor Enterprise Limited and Nandi Economic Corridor Enterprises Limited, having their registered offices at No.1, Midford House, Midford Gardens, off M.G. Road, Bangalore, we hereby notify that Mr. Manjunath Nayaker and Mr. Hanumant Raj, have ceased to be associated with our clients with effect from 13.05.2021 and consequently the said persons have no authority to represent or in any manner act for or on behalf of our clients before any person or authority. The public are hereby cautioned not to deal with the said persons in any matter relating to our clients or the Project known as the Bangalore Mysore Infrastructure Corridor Project, which is presently under implementation by our clients.

KING & PARTRIDGE
ADVOCATES
No.48, LAVELLE ROAD, BANGALORE.
BANGALORE DATE: 30.05.2021

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ– ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ನರಸಿಂಹರಾಜ ಚೌಕ, ಬೆಂಗಳೂರು – 02.

ಸಂಖ್ಯೆ: ಕಾಪಾಅ/ರಮೂ–ಟಿಇಸಿ/ಟೆಂಡರ್/11–3/2020–21 ದಿನಾಂಕ: 31.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆಗಾಗಿ ಆಹ್ವಾನ (ಐಎಫ್‌ಬಿ)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್–ರಸ್ತೆ ಮೂಲಭೂತಸೌಕರ್ಯ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಹೆಸರಾಂತ ಸಂಸ್ಥೆ/ಏಜೆನ್ಸಿಗಳಿಂದ ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ರಸ್ತೆ ಸುರಕ್ಷತೆ ಕಾಮಗಾರಿಗಳಿಗಾಗಿ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.
ಈ ಕೆಳಕಂಡ ಪ್ರತಿ ವಲಯಗಳಿಗೆ ಸಂಬಂಧಿತ ಇಎಂಡಿ ಮತ್ತು ಅರ್ಜಿ ಶುಲ್ಕಗಳೊಂದಿಗೆ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷ ಗಳಲ್ಲಿ)	ಇಎಂಡಿ (₹. ಲಕ್ಷ ಗಳಲ್ಲಿ)
ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯ ಪೂರ್ವ, ಮಹದೇವಪುರ, ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿರುವ ಪ್ರಧಾನ ಮತ್ತು ಉಪ ಪ್ರಧಾನ ರಸ್ತೆಗಳಲ್ಲಿ ರಸ್ತೆ ಸುರಕ್ಷತೆ ಕಾಮಗಾರಿಗಳು ಮಾರ್ಗ ಗುರುತು ಮಾಡುವುದು, ಜಂಕ್ಷನ್ ಗುರುತು ಮಾಡುವುದು, ಕರ್ಬ್ ಬಣ್ಣ ಬಳಿಯುವಿಕೆ, ಅಪಾಯ ಸೂಚಕ ಫಲಕಗಳು, ರಸ್ತೆ ಮೀಡಿಯನ್ಸ್ ಮತ್ತು ಮೀಡಿಯನ್ ಗುರುತು ಮಾಡುವುದು, ಸೂಚನಾ ಫಲಕಗಳು ಹಾಗೂ ದಿಕ್ಸೂಚಕ ನಾಮಫಲಕಗಳನ್ನು ಒದಗಿಸುವುದು. (3ನೇ ಕರೆ)	756.99	11.36

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ:**31.05.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ **07.06.2021**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್ಡನ್ನು ದಿನಾಂಕ: **09.06.2021**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವುದನ್ನು **ಟೆಂಡರುದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು (ರ.ಮೂ.ಸೌ–ಟಿ.ಇ.ಸಿ)

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ,
ಚಾವಿಸನಿನಿ, ಮೈಸೂರು–570017.

CHAMUNDESHWARI ELECTRICITY SUPPLY CORPORATION LIMITED
(A Government of Karnataka Undertaking)
Corporate Office, Procurement Section,
CESC, Mysuru-570017.

Telephone No: 9448994705 Website: www.cescmysore.org E-mail ID: gmpurc@cescmysore.org
Company Identity Number(CIN): U40109KA2004SGC035177

ಚಾವಿಸನಿನಿ/ಪ್ರವ್ಯ(ಖ)/ಉ.ಪ್ರವ್ಯ(ಖ)/ಸ.ಪ್ರ.ವ್ಯ(ಖ)–2/21–22/3019 ದಿನಾಂಕ: 28.05.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ಯು ಈ ಕೆಳಕಂಡ ಕಾಮಗಾರಿ ಟೆಂಡರ್‌ಗಳಿಗೆ ಅರ್ಹ ಬಿಡ್ಡುದಾರರಿಂದ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದೆ.

1. ಕಾಮಗಾರಿ:

ಕ್ರ.ಸಂ.	ವಿವರ	ವಿಚಾರಣಾ ಸಂಖ್ಯೆ	ತಾಲ್ಲೂಕು
1	11 ಕಿ ವೋ ದರ್ಜೆಯ 25, 63, 100 ಕೆವಿಎ ಸಾಮರ್ಥ್ಯದ 3&4 ಸ್ಟಾರ್ ರೇಟೆಡ್ ಮತ್ತು ಕನ್ವೆನ್ಷನಲ್ ಪರಿವರ್ತಕಗಳನ್ನು ಬೈ ಬ್ಯಾಕ್ ಆಧಾರದಲ್ಲಿ ಮೂಲ ಸೌಕರ್ಯ ಒದಗಿಸುವುದರೊಂದಿಗೆ ದುರಸ್ತಿಗೊಳಿಸುವುದು ಮತ್ತು ರೀಕಂಡಿಷನಿಂಗ್ ಮಾಡುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4942/ 26.04.2021	ಚಾಮರಾಜನಗರ
2		ಚಾವಿಸನಿನಿ/ಪ್ರವ್ಯ(ಖ)/ಸಿ2–4943/ 26.04.2021	ಗುಂಡ್ಲುಪೇಟೆ
3		ಚಾವಿಸನಿನಿ/ಪ್ರವ್ಯ(ಖ)/ಸಿ2–4944/ 26.04.2021	ಕೊಳ್ಳೆಗಾಲ
4		ಚಾವಿಸನಿನಿ/ಪ್ರವ್ಯ(ಖ)/ಸಿ2–4945/ 26.04.2021	ಕೆ.ಆರ್.ನಗರ
5		ಚಾವಿಸನಿನಿ/ಪ್ರವ್ಯ(ಖ)/ಸಿ2–4946/ 26.04.2021	ದೊಡ್ಡ ಮೇಟಿ ಕುರ್ಕೆ
6	ಚಾವಿಸನಿನಿ ಹೊಳೆನರಸೀಪುರ ವಿಭಾಗ, ಕಾ ಮತ್ತು ಪಾ ಶಾಖೆ–1ರ ವ್ಯಾಪ್ತಿಯ ಕೋಟೆ ಹಾಗೂ ಪೇಟೆ ಮೇನ್ ರೋಡ್‌ನಲ್ಲಿರುವ ಫೀಡರ್ ಪಿಲ್ಲರ್ ಬಾಕ್ಸ್‌ಗಳ ಬದಲಾವಣೆ ಕಾಮಗಾರಿ	ಚಾವಿಸನಿನಿ/ಪ್ರವ್ಯ(ಖ)/ಸಿ2–4947/ 18.05.2021	ಹೊಳೆನರಸೀಪುರ
7	Uninhibited (U) Type-2, conforming to IS: 335 ಇ ಹೆಚ್ ವಿ ಗ್ರೇಡ್ ನ ಹೊಸ ಪರಿವರ್ತಕ ತೈಲ ಸರಬರಾಜು	ಚಾವಿಸನಿನಿ/ಪ್ರವ್ಯ(ಖ)/ಸಿ2–4948/ 18.05.2021	ಚಾವಿಸನಿನಿ ವ್ಯಾಪ್ತಿ
8	ಒಂದು ವರ್ಷದ ಅವಧಿಗೆ ಕಚ್ಚಾ ಪರಿವರ್ತಕ ತೈಲ ಶುದ್ಧೀಕರಣ ಕಾಮಗಾರಿ	ಚಾವಿಸನಿನಿ/ಪ್ರವ್ಯ(ಖ)/ಸಿ2–4949/ 18.05.2021	ಚಾವಿಸನಿನಿ ವ್ಯಾಪ್ತಿ

2. ಸೇವಾ ಟೆಂಡರ್‌ಗಳು:

ಕ್ರ.ಸಂ.	ಕಾಮಗಾರಿ ವಿವರ	ವಿಚಾರಣೆ ಸಂಖ್ಯೆ
1	ಕಾ ಮತ್ತು ಪಾ ವಲಯ ಚಾ.ವಿ.ಸ.ನಿ.ನಿ., ಹಾಸನ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4950/ 21.05.2021
2	ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4951/ 21.05.2021
3	ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹಾಸನ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4952/ 21.05.2021
4	ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4953/ 21.05.2021
5	ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಚನ್ನರಾಯಪಟ್ಟಣ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4954/ 21.05.2021
6	ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಅರಸೀಕೆರೆ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4955/ 21.05.2021
7	ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹೊಳೆನರಸೀಪುರ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ವಾಹನ ಸೌಲಭ್ಯ ಒದಗಿಸುವುದು.	ಚಾವಿಸನಿನಿ/ಪ್ರವ್ಯ(ಖ)/ಸಿ2–4956/ 21.05.2021

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **htt//www.eproc.karnataka.gov.in**ನಲ್ಲಿ ದಿನಾಂಕ **01.06.2021**ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ 080–46010000/22631200/68948777ಗೆ ಅಥವಾ ಇ–ಮೇಲ್ ವಿಳಾಸ support@eprochelpdesk.com ವ್ಯವಹರಿಸಲು ಕೋರಲಾಗಿದೆ.
ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ), ಚಾವಿಸನಿನಿ ಮೈಸೂರು.

DIPR/DDMYS/MCA/174/2021-22

ಪುರಸಭಾ ಕಾರ್ಯಾಲಯ, ಹೊಳೆನರಸೀಪುರ
ದೂರವಾಣಿ ಮತ್ತು ಫ್ಯಾಕ್ಸ್ ಸಂಖ್ಯೆ:08175–273229
email:itstaff_ulb_holenarasipur@yahoo.co.in

ನಂ:ಪುಸ.ಹೊನಪು/ಪಿ.ಆರ್02/2021–22 ದಿನಾಂಕ:28.05.2021

ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಮುಖಾಂತರ)

ಹೊಳೆನರಸೀಪುರ ಪಟ್ಟಣದ ವ್ಯಾಪ್ತಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಉದ್ದಿಮೆ ನಿಧಿ/ಪುರಸಭಾ ನಿಧಿಯಡಿ ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 2017 ನಿಯಮಗಳಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರು/ಸಂಸ್ಥೆಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ–ಪ್ರೊಕೂರ್‌ಮೆಂಟ್ Visit:https://www.eproc.karnataka.gov.in/ಪೋರ್ ಟೆಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಸಲ್ಲಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತಿದೆ. ಕ್ರಸಂ: 1)ಕಾಮಗಾರಿಯ ವಿವರ: **Installation of 1 no lift and other civil works in Municipal commercial complex builing Indent No: DMA/2021-22/OW/WORK_INDENT116811** ಅಂದಾಜು ಮೊತ್ತ ರೂ. **19.50** ಲಕ್ಷ, ಇಎಂಡಿ ಮೊತ್ತ ರೂ. 48750-00 2)**Installation of 2 no lift and other civil works in Housing Board commercial complex builing Kote main road, Holenarasipura Indent No: DMA/2021-22/OW/WORK_INDENT116812** ಅಂದಾಜು ಮೊತ್ತ ರೂ. **25.00** ಲಕ್ಷ, ಇಎಂಡಿ ಮೊತ್ತ ರೂ. 62500-00 ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 14.06.2021 ಸಂಜೆ 4.30 ಗಂಟೆವರೆಗೆ ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ ದಿನಾಂಕ:16.06.2021 ಬೆಳ್ಳಿಗ್ಗೆ 11.00 ಕ್ಕೆ

ಸಹಿ/– ಅಧ್ಯಕ್ಷರು, ಪುರಸಭೆ, ಹೊಳೆನರಸೀಪುರ. ಸಹಿ/– ಮುಖ್ಯಾಧಿಕಾರಿ, ಪುರಸಭೆ, ಹೊಳೆನರಸೀಪುರ.

ವಾಸಾಸಂಇ/ಹಿಸನಿ/ಹಾಸನ/ಎಂಸಿಎ/111/2020–21

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
Ph: 08195-222228, e-Mail: apmcchallakeresec@gmail.com
ಕ್ರ.ಸಂ:ಕೃಉಮಾಸ(ಚ):ಭದ್ರತಾ–82/ಸ್ವಚ್ಛತಾ–83/2021–22 ದಿನಾಂಕ: 19.05.2021

ಇ–ಪ್ರೊಕ್ಯೂರ್‌ಮೆಂಟ್ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಚಳ್ಳಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರಾಂಗಣದ ಸ್ಥಿರ ಮತ್ತು ಚರಾಸ್ಥಿಗಳ ರಕ್ಷಣೆ, ಭದ್ರತೆ, ತನಿಖಾ ಠಾಣೆಯಲ್ಲಿ ಸಂಚಾರ ನಿಯಂತ್ರಣ, ಕಛೇರಿ ಕಾರ್ಯನಿರ್ವಹಣೆಗೆ 06 ಜನ ಭದ್ರತಾ ಸಿಬ್ಬಂದಿ (ಒಬ್ಬ ಎಲೆಕ್ಟ್ರಿಷಿಯನ್ ಒಳಗೊಂಡಂತೆ) ಹಾಗೂ ಒಬ್ಬ ವಾಹನ ಚಾಲಕರು ಮತ್ತು ಕಂಪ್ಯೂಟರ್ ಅನುಭವವುಳ್ಳ ಒಬ್ಬ ಬೆರಳಚ್ಚುಗಾರರು ಒಟ್ಟು 08 ಹಾಗೂ ಈ ಸಮಿತಿಯ ವತಿಯಿಂದ ರಾಂಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಒಬ್ಬ ಭದ್ರತಾ ಸಿಬ್ಬಂದಿ ಸೇರಿ ಒಟ್ಟು 09 ಜನ ಭದ್ರತಾ ಸಿಬ್ಬಂದಿಯವರ ಸೇವೆ ಹಾಗೂ ಸ್ವಚ್ಛತಾ ಸಿಬ್ಬಂದಿ ಸೇವೆಯನ್ನು ಹಾಗೂ ಪ್ರಾಂಗಣದ ಸ್ವಚ್ಛತಾ ಸೇವೆಯನ್ನು ಒದಗಿಸಲು ಕಾರ್ಮಿಕ ಇಲಾಖೆಯಿಂದ ಮಾನ್ಯತೆ ಪಡೆದ ಏಜೆನ್ಸಿಯವರಿಂದ 2021–22ನೇ ಸಾಲಿನ (ಕಾರ್ಯಾದೇಶ ನೀಡಿದ ದಿನಾಂಕದಿಂದ ದಿನಾಂಕ: 31.05.2022ರ ವರೆಗೆ) ಅವಧಿಗೆ ಗುತ್ತಿಗೆ ಆಧಾರದ ಮೇಲೆ ಸಮಿತಿಯು ನಿಗದಿಪಡಿಸಿರುವ ಕರಾರುಗಳಿಗೆ ಒಳಪಟ್ಟು ಭದ್ರತಾ/ಸ್ವಚ್ಛತಾ ಏಜೆನ್ಸಿ ಹಾಗೂ ಖಾಸಗಿ ಸಂಘ–ಸಂಸ್ಥೆಗಳಿಂದ ಭದ್ರತಾ ಹಾಗೂ ಸ್ವಚ್ಛತಾ ಟೆಂಡರ್‌ಗಳನ್ನು ಪ್ರತ್ಯೇಕವಾಗಿ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ.ಯನ್ನು ಇ–ಪೇಮೆಂಟ್ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ಇವರಿಗೆ ಪಾವತಿಸತಕ್ಕದ್ದು. ಸದರಿ ಹಣವನ್ನು ಪಾವತಿಸದೇ ಇರುವ ಏಜೆನ್ಸಿರವರ ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ನಮ್ಮ ಕಛೇರಿಯಿಂದ ಅಥವಾ ಸರ್ಕಾರಿ ವೆಬ್‌ಸೈಟ್ http://www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. (1) ಇ–ಟೆಂಡರ್ ಮೂಲಕ ಟೆಂಡರ್‌ನ್ನು ಭರ್ತಿ ಮಾಡಿ ಸಲ್ಲಿಸುವ ಅಂತಿಮ ದಿನಾಂಕ: 31.05.2021ರ ಸಂಜೆ 4:30ರ ವರೆಗೆ. (2) ತಾಂತ್ರಿಕ/ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: 02.06.2021ರ ಸಾಯಂಕಾಲ 4:00 ಗಂಟೆಗೆ. (3) ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೇ ಸ್ವೀಕರಿಸುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. (4) ಸಮಿತಿಗೆ ನೇಮಿಸಿಕೊಳ್ಳುವ ಭದ್ರತಾ/ಸ್ವಚ್ಛತಾ ಸಿಬ್ಬಂದಿಗಳ ಸಂಖ್ಯೆಯನ್ನು ಮಂಜೂರಾತಿಗೆ ಅನುಗುಣವಾಗಿ ಮತ್ತು ಸಮಿತಿಯ ಆದಾಯದ ಅನುಗುಣವಾಗಿ ಕಡಿತಗೊಳಿಸುವ/ಹೆಚ್ಚಿಸುವ ಅಧಿಕಾರವನ್ನು ಸಮಿತಿಯು ಹೊಂದಿದ್ದು, ಈ ಬಗ್ಗೆ ಸಮಿತಿಯ ಸೂಚನೆಗೆ ಭದ್ರತಾ ಏಜೆನ್ಸಿಯು ಬದ್ಧರಾಗಿರತಕ್ಕದ್ದು.

ಸಹಿ/– ಕಾರ್ಯದರ್ಶಿ, ಕೃಉಮಾಸ, ಚಳ್ಳಕೆರೆ. ಸಹಿ/– ಆಡಳಿತಾಧಿಕಾರಿ, ಕೃಉಮಾಸ, ಚಳ್ಳಕೆರೆ.

RO No. 148: DIPR/CTA/MCA/2021-22

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ
ಸರ್ ಸಿದ್ದಪ್ಪ ಕಂಬಳಿ ರಸ್ತೆ ದೂರವಾಣಿ : 2213898, 2213888 website : www.hdmc.gov.in

ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ)

ಪತ್ರ ಸಂಖ್ಯೆ ನಂ. ಎಚ್‌ಡಿಎಮ್‌ಸಿ/61/12/2021–22 ದಿನಾಂಕ : 29–05–2021

ಅಲ್ಪಾವಧಿ ಇ–ಟೆಂಡರ ಅಧಿಸೂಚನೆ

ಉಲ್ಲೇಖ : ಜಾಹೀರಾತು ನಂ : 79 ದಿನಾಂಕ : 28–04–2021
ಜಾಹೀರಾತು ನಂ : 542 ದಿನಾಂಕ : 19–12–2020

ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸನ್ 2019–20, 2020–21, 2021–22 ನೇ ಸಾಲಿನ ಪಾಲಿಕೆಯ ಸಾಮಾನ್ಯ ನಿಧಿಯ ಅನುದಾನ, ಅಡಿಯಲ್ಲಿ ಮಂಜೂರಾದ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದೇಶ 1999–2000ರ ಪ್ರಕಾರ ಆ್ಯಕ್ಟ್ 2000 ನಿಯಮದನ್ವಯ PWD/HDMC/ಇತರೇ ಸರ್ಕಾರಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರು ಇ–ಪ್ರೋಕ್ಯೂರಮೆಂಟ ಪೋರ್ಟಲ್ ಮುಖಾಂತರ ಐಟಂವಾರು ಟೆಂಡರಗಳನ್ನು ಆಹ್ವಾನಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಯಾವುದಾದರೂ ಬದಲಾವಣೆಯಾದಲ್ಲಿ, ಸದರಿ ಬದಲಾವಣೆಯ ವಿವರಗಳನ್ನು ಇ–ಪ್ರೊಕ್ಯೂರಮೆಂಟನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಾಮಾನ್ಯ ವರ್ಗದ ಗುತ್ತಿಗೆದಾರರಿಗೆ ಮೀಸಲಿರುವ ಕಾಮಗಾರಿಗಳು :
ಮರು ಕರೆ ಕಾಮಗಾರಿಗಳು :

(1) ಇಂಡೆಂಟ್ ನಂ–115984 ರೂ. **28.00** ಲಕ್ಷ (2ನೇ ಕರೆ) (2) ಇಂಡೆಂಟ್ ನಂ–115429 ರೂ. **49.88** ಲಕ್ಷ (2ನೇ ಕರೆ) (3) ಇಂಡೆಂಟ್ ನಂ–101341 ರೂ. **10.00** ಲಕ್ಷ (2ನೇ ಕರೆ) (4) ಇಂಡೆಂಟ್ ನಂ–86735 ರೂ. **5.20** ಲಕ್ಷ (2ನೇ ಕರೆ)

ಇ.ಎಂ.ಡಿ, ಕಾಮಗಾರಿ ಅವಧಿ ಹಾಗೂ ಇತರ ವಿವರಗಳನ್ನು ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಇವರ ಕಚೇರಿಯ ಕೆಲಸದ ವೇಳೆಯಲ್ಲಿ ಮಾಹಿತಿಯನ್ನು ಪಡೆಯಬಹುದಾಗಿದೆ. ಕಚೇರಿಯ ದೂರವಾಣಿ ಸಂಖ್ಯೆ : **0836:2213834** ನ್ನು ಸಂಪರ್ಕಿಸಬಹುದಾಗಿದೆ ಮತ್ತು ಅಂತರ್‌ಜಾಲದ ವೆಬ್‌ಸೈಟ್ ವಿಳಾಸ **http:/www.eproc.karnataka.gov.in** ರಲ್ಲಿ ಪಡೆಯಬಹುದು. ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರ ಇ–ಪ್ರೋಕ್ಯೂರಮೆಂಟ್‌ನಲ್ಲಿ ದಿ : **31–05–2021** ರಿಂದ ಪಡೆಯಬಹುದಾಗಿದೆ.

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **08–06–2021** ರಂದು ಸಾಯಂಕಾಲ 4.00 ಘಂಟೆಯವರೆಗೆ. ಟೆಂಡರ್ ತೆರೆಯುವ ದಿನಾಂಕ : **09–06–2021** ಸಾಯಂಕಾಲ 4.30 ಘಂಟೆಯ ನಂತರ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಉತ್ತರ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ

ವಾಸಾಸಂಇ/ಧಾ/ಎಂಸಿಎ/144/2021–22

ಪಿಎಚ್‌ಸಿಗಳಲ್ಲಿ ನೆಪಕ್ಕಷ್ಟೇ ಲಸಿಕೆ ವಿತರಣೆ, ತಾಲ್ಲೂಕು ಕೇಂದ್ರದಲ್ಲಿ ನೂಕುನುಗ್ಗಲು, ಗೊಂದಲ

ಲಸಿಕೆಗಾಗಿ ನಸುಕಿನಿಂದಲೇ ಧಾವಂತ

• ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನೆಪಕ್ಕಷ್ಟೇ ಕೋವಿಡ್ ಲಸಿಕೆ ಸರಬರಾಜಾಗುತ್ತಿದ್ದು, ತಾಲ್ಲೂಕು ಕೇಂದ್ರದಲ್ಲಿ ಹಳ್ಳಿಯ ಜನರು ನಸುಕಿನ 5 ಗಂಟೆಯಿಂದಲೇ ಸರದಿಯಲ್ಲಿ ನಿಲ್ಲುತ್ತಾರೆ. ನಾಮುಂದು, ತಾಮುಂದು ಎನ್ನುತ್ತಾ ಅಂತರ ಮರೆತು ಜಗಳಕ್ಕಿಳಿಯುತ್ತಾರೆ. ಒಂದೆರಡು ತಾಸಿನಲ್ಲೇ ಲಸಿಕೆ ಮುಗಿಯುತ್ತದೆ. ಬಂದವರಲ್ಲಿ ಹೆಚ್ಚಿನವರು ನಿರಾಸೆಯಿಂದ ಊರಿಗೆ ಮರಳುತ್ತಾರೆ. ಮರುದಿನ ಇದೇ ಪ್ರಕ್ರಿಯೆ ಪುನರಾವರ್ತನೆಯಾಗುತ್ತದೆ.

ಜಿಲ್ಲೆಯಲ್ಲಿ ಕೋವಿಡ್ ಲಸಿಕೆಗೆ ಹಾಹಾಕಾರ ಉಂಟಾಗಿದೆ. ಪ್ರತಿ ಲಸಿಕಾ ಕೇಂದ್ರದಲ್ಲಿ ನಿತ್ಯ ತಲಾ 200 ಡೋಸ್ ನಿಗದಿಗೊಳಿಸಲಾಗಿದ್ದು ಅದಕ್ಕೆ ಸಾವಿರಾರು ಜನ ಕಾಯುತ್ತಾರೆ. ಕೋವಿಶೀಲ್ಡ್ ಲಸಿಕೆಯ ಮೊದಲ ಹಾಗೂ ಎರಡನೇ ಡೋಸ್ ನಡುವಿನ ಅಂತರವನ್ನು 12ರಿಂದ 16 ವಾರಕ್ಕೆ ಹೆಚ್ಚಳ ಮಾಡಿರುವ ವಿಚಾರದ ಬಗ್ಗೆ ಗ್ರಾಮೀಣರಿಗೆ ಅರಿವಿಲ್ಲ. ಹೀಗಾಗಿ, ಅವರೂ ಲಸಿಕೆಗೆ ಒತ್ತಾಯ ಮಾಡುತ್ತಿದ್ದು, ಲಸಿಕಾ ಕೇಂದ್ರಗಳು ಗೊಂದಲದ ಗೂಡಾಗಿವೆ.

ಪಾಂಡವಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ಲಸಿಕಾ ಕೇಂದ್ರಕ್ಕೆ ಶುಕ್ರವಾರ 'ಪ್ರಜಾವಾಣಿ' ಭೇಟಿ ನೀಡಿದ್ದ ಸಂದರ್ಭದಲ್ಲಿ ಲಸಿಕಾ ವಾಹನ ಇನ್ನೂ ಬಂದಿರಲಿಲ್ಲ. ಆದರೂ ಸಾವಿರಕ್ಕೂ ಹೆಚ್ಚು ಜನರು ಸಾಲುಗಟ್ಟಿ ನಿಂತಿದ್ದರು. 10 ಗಂಟೆ ವೇಳೆಗೆ ಲಸಿಕೆ ವಾಹನ ಬರುತ್ತಿದ್ದಂತೆ ಜನರಲ್ಲಿ ಧಾವಂತ ಸೃಷ್ಟಿಯಾಯಿತು. ನೂಕುನುಗ್ಗಲು ಶುರುವಾಯಿತು. '200 ಜನರಿಗೆ ಮಾತ್ರ ಲಸಿಕೆ ನೀಡಲು ಸಾಧ್ಯ' ಎಂದು ಸಿಬ್ಬಂದಿ ತಿಳಿಸಿದಾಗ ಜನರ ಆಕ್ರೋಶ ತಾರಕಕ್ಕೇರಿತು.

'ಮಧುಮೇಹದಿಂದ ಬಳಲುತ್ತಿರುವ ನಾನು ಬೆಳಿಗ್ಗೆ 5 ಗಂಟೆಯಿಂದಲೂ ಸಾಲಿನಲ್ಲಿ ನಿಂತಿದ್ದೇನೆ. ಆದರೂ ಟೋಕನ್ ನೀಡಿಲ್ಲ. ನಿಂತಲ್ಲೇ ನಿಂತಿರುವ ಕಾರಣ ನನ್ನ ಎರಡೂ ಕಾಲುಗಳು ಊದಿಕೊಂಡಿವೆ. ಈಗ, ಮತ್ತೆ ನಾಳೆ ಬರಬೇಕು ಎನ್ನುತ್ತಿದ್ದಾರೆ' ಎಂದು ಪಾಂಡವಪುರದ ಶಾಹಿನಾ ಬೇಗಂ ಊದಿಕೊಂಡಿದ್ದ ತಮ್ಮ ಕಾಲು ತೋರಿಸಿದರು.

ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿ, ಕೆ.ಆರ್.ಪೇಟೆ ತಾಲ್ಲೂಕಿನ ತೆಂಡೇಕೆರೆ, ನಾಗಮಂಗಲ ತಾಲ್ಲೂಕಿನ ದೇವಲಾಪುರ, ಮಳವಳ್ಳಿ ತಾಲ್ಲೂಕಿನ ತಳಗವಾದಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಅಲ್ಲಿ ಲಸಿಕೆಗಾಗಿ ಸಾಲು ಇಲ್ಲ, ಗೊಂದಲವಿಲ್ಲ. ಏಕೆಂದರೆ ಅಲ್ಲಿಗೆ ಬಂದಿದ್ದು ಕೇವಲ 10–20 ಡೋಸ್ ಮಾತ್ರ, ಪಿಎಚ್‌ಸಿಗಳಲ್ಲಿ ಹೆಸರಿಗಷ್ಟೇ ಲಸಿಕೆ ಪೂರೈಸುತ್ತಿದ್ದು ಜನರು ತಾಲ್ಲೂಕು ಕೇಂದ್ರಗಳ ಮೇಲೆ ಅವಲಂಬಿತರಾಗಿದ್ದಾರೆ.

'ಪಿಎಚ್‌ಸಿಗಳಿಗೆ ನಿತ್ಯವೂ ಲಸಿಕೆ ಬರುವುದಿಲ್ಲ, ಐದಾರು ದಿನಕ್ಕೊಮ್ಮೆ ಮಾತ್ರ ಬರುತ್ತದೆ. ಕಡಿಮೆ ಡೋಸ್ ಬರುವ ಕಾರಣ ಮುಂಚೂಣಿ ಕಾರ್ಯಕರ್ತರಿಗೆ, ಅಂಗವಿಕಲರಿಗೆ, ಬೀದಿಬದಿ ವ್ಯಾಪಾರಿಗಳಿಗೆ ಕೊಟ್ಟು ಮುಗಿಸುತ್ತೇವೆ' ಎಂದು ಹೆಸರು ಬಹಿರಂಗ ಪಡಿಸದ ಷರತ್ತಿನಲ್ಲಿ ಪಿಎಚ್‌ಸಿಯೊಂದರ ವೈದ್ಯಾಧಿಕಾರಿ ಹೇಳಿದರು.

ನಾಗಮಂಗಲ, ಮದ್ದೂರು, ಮಳವಳ್ಳಿಯಲ್ಲೂ ಇದೇ ಪರಿಸ್ಥಿತಿ, ಮಧ್ಯಾಹ್ನ 2 ಗಂಟೆ ವೇಳೆಗೆ ಲಸಿಕೆ ಖಾಲಿ. ಜನ ಗಲಾಟೆ ಮಾಡುತ್ತಿರುವ ಕಾರಣ ಪೊಲೀಸ್ ಭದ್ರತೆಯೊಂದಿಗೆ ಲಸಿಕೆ ಹಾಕಲಾಗುತ್ತಿದೆ. ಪರೀಕ್ಷಾ ಕೇಂದ್ರ, ಲಸಿಕಾ ಕೇಂದ್ರದಲ್ಲಿ ನೀರು, ನೆರಳಿಲ್ಲದೇ ನಿತ್ರಾಣಗೊಂಡ ಜನರ ಚಿತ್ರಣ ಕಂಡುಬರುತ್ತದೆ.

ಕೋವಿಡ್ ಪರೀಕ್ಷೆಯನ್ನೂ ತಾಲ್ಲೂಕು ಕೇಂದ್ರಗಳಿಗೆ ಸೀಮಿತಗೊಳಿಸಲಾಗಿದೆ. ಪಾಂಡವಪುರ ಟಿಎಪಿಸಿಎಂಎಸ್ ಆವರಣದಲ್ಲಿ ವೃದ್ಧೆಯೊಬ್ಬರು ಬಿಸಿಲಿನಿಂದ ನಿತ್ರಾಣಗೊಂಡು ಅಲ್ಲಿ ನಿಂತಿದ್ದ ಲಾರಿಯ ಕೆಳಗಿನ ನೆರಳಲ್ಲಿ ಮಲಗಿದ್ದ ದೃಶ್ಯ ಮನಕಲಕುವಂತಿತ್ತು. ಕೆ.ಆರ್.ಪೇಟೆ ಮತ್ತು ನಾಗಮಂಗಲದಲ್ಲಿ, ಜನರು ಬೇಸರದಿಂದ ವಾಪಸ್ ತೆರಳುತ್ತಿದ್ದರು.

ಮದ್ದೂರು ತಾಲ್ಲೂಕು ಆಸ್ಪತ್ರೆಯ ಆವರಣದಲ್ಲಿ ಗೊರವನಹಳ್ಳಿ ಗ್ರಾಮದ ಶಿವಮ್ಮ ಚೀಟಿ ತೋರಿಸಿ, 'ಸಿ.ಟಿ ಸ್ಕ್ಯಾನ್‌ಗಾಗಿ ಖಾಸಗಿ ಆಸ್ಪತ್ರೆಗೆ ಚೀಟಿ ಬರೆದುಕೊಟ್ಟಿದ್ದಾರೆ, ₹ 3 ಸಾವಿರ ಕೇಳುತ್ತಿದ್ದಾರೆ. ಕೂಲಿ ಕೆಲಸ ಮಾಡುವ ನಾನು ₹ 3 ಸಾವಿರ ಎಲ್ಲಿಂದ ತರಲಿ?. ಹೇಗಾದರೂ ಮಾಡಿ ನನ್ನ ಗಂಡನನ್ನು ಉಳಿಸಿಕೊಡಿ' ಎಂದು ಅಂಗಲಾಚುತ್ತಿದ್ದರು.

ಆರಂಭದಲ್ಲಿ ಜಿಲ್ಲೆಯಲ್ಲಿ ಆಮ್ಲಜನಕಕ್ಕೆ ಹಾಹಾಕಾರ ಇತ್ತು. ಈಗ ಪರಿಸ್ಥಿತಿ ಸುಧಾರಿಸಿದೆ. ದಾನಿಗಳೂ ಅಪಾರ ಪ್ರಮಾಣದಲ್ಲಿ ಆಮ್ಲಜನಕ ಪೂರೈಸುತ್ತಿದ್ದಾರೆ. ತಿಂಗಳ ಹಿಂದೆ ಶವ ಸಾಗಿಸಲೂ ಆಂಬುಲೆನ್ಸ್ ಇರಲಿಲ್ಲ. ಆದರೆ ದಾನಿಗಳ ಸಹಕಾರದಿಂದ ಜಿಲ್ಲಾಸ್ಪತ್ರೆಯಲ್ಲಿ 3 ಆಂಬುಲೆನ್ಸ್, ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ ಒಂದು ಆಂಬುಲೆನ್ಸ್ ಇವೆ.

ಶವ ಸಾಗಿಸಲು, ಚಾಲಕರು ಹಣಕ್ಕೆ ಒತ್ತಾಯಿಸುತ್ತಾರೆ ಎಂಬ ಆರೋಪವಿದೆ. 'ಆಂಬುಲೆನ್ಸ್ ಚಾಲಕರು ಹಣ ಕೇಳಿದರೆ ದೂರು ನೀಡಿ' ಎಂದು ಜಿಲ್ಲಾಸ್ಪತ್ರೆ ಆವರಣದಲ್ಲಿ ಫಲಕ ಅಳವಡಿಸಲಾಗಿದೆ.

'ಹಳ್ಳಿಯ ಕಡೆಗೆ ವೈದ್ಯರ ನಡಿಗೆ' ಕಾರ್ಯಕ್ರಮ ಕೇವಲ ಘೋಷಣೆಗಷ್ಟೇ ಸೀಮಿತವಾಗಿದೆ. ಹಲವು ಹಳ್ಳಿಗಳಿಗೆ ಭೇಟಿ ನೀಡಿದರೂ ಅಲ್ಲಿ ವೈದ್ಯರು ಇರಲಿಲ್ಲ. ಆಶಾ ಕಾರ್ಯಕರ್ತೆಯರು ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿ ಇದ್ದರು.

'ಜಿಲ್ಲೆಗೆ ಸರಬರಾಜಾಗುವ ಲಸಿಕೆಯನ್ನು ವಿಂಗಡಣೆ ಮಾಡಿ ನೀಡಲಾಗುತ್ತಿದೆ. ಎಲ್ಲಾ ಕಡೆಯೂ ಲಸಿಕೆ ಕೊರತೆ ಇದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಎಚ್.ಪಿ.ಮಂಚೇಗೌಡ ತಿಳಿಸಿದರು.

ಪಾಂಡವಪುರ ಲಸಿಕಾ ಕೇಂದ್ರದ ಮುಂದೆ, ಜನರು ಅಂತರ ಮರೆತು ಸರತಿ ಸಾಲಿನಲ್ಲಿ ನಿಂತಿದ್ದರು
ಚಿತ್ರ: ಸಂತೋಷ ಚಂದ್ರಮೂರ್ತಿ

10 ಡೋಸ್ ಲಸಿಕೆ ಮಾತ್ರ ಬಂದಿವೆ, ಅವುಗಳನ್ನು ಅಂಗವಿಕಲರಿಗೆ ಮಾತ್ರ ಹಾಕುವಂತೆ ವೈದ್ಯರು ಸೂಚಿಸಿದ್ದಾರೆ. ಅಂಗವಿಕಲ ಸಂಘದ ಸದಸ್ಯರು ಬರುವುದಾಗಿ ತಿಳಿಸಿದ್ದಾರೆ
ಸುಮಾ, ಶುಶ್ರೂಷಕಿ, ತೆಂಡೇಕೆರೆ ಪಿಎಚ್‌ಸಿ

ವೆಂಟಿಲೇಟರ್‌ಗೆ ಹೋದವರು ಬದುಕಿ ಬರುತ್ತಿಲ್ಲ. ಕಡೇ ಕ್ಷಣದಲ್ಲಿ ಅಂಥವರ ಜೊತೆ ಮಾತನಾಡಲು ಸಂಬಂಧಿಕರನ್ನು ಬಿಡಬೇಕು
ಟಿ.ಎಚ್.ಆನಂದ್
ತಳಗವಾದಿ, ಮಳವಳ್ಳಿ ತಾಲ್ಲೂಕು

ಕೋವಿಡ್ ಕೇಂದ್ರದಲ್ಲಿ ಯಾವುದೇ ಸೌಲಭ್ಯಗಳಿಲ್ಲ, ಊಟ ಸೇರುತ್ತಿಲ್ಲ. ಹೀಟರ್ ಕೆಟ್ಟಿದೆ. ಬಿಸಿನೀರನ್ನೇ ಕೊಡದಿದ್ದರೆ ನಾವು ಗುಣಮುಖರಾಗುವುದು ಹೇಗೆ?
ಮಂಜುಳಾ, ಸೋಂಕಿತೆ

ಮಂಡ್ಯ ಜಿಲ್ಲಾ
ಕೋವಿಡ್ ಅಂಕಿ–ಅಂಶ

59,470 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,636 ▼	53,390 ▲	442 ▲

ದಿನದ ಏರಿಕೆ

ಹೊಸ ಪ್ರಕರಣ	460 ▼
ಗುಣಮುಖ	444 ▼
ಸಾವು	04

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮುಗಿಬಿದ್ದ ಸೋಂಕಿತರು

ಕೆ.ಆರ್.ಪೇಟೆ ತಾಲ್ಲೂಕು ಹೊಸಹೊಳಲು ಕೋವಿಡ್ ಕೇರ್ ಕೇಂದ್ರಕ್ಕೆ ತೆರಳಿದ್ದಾಗ ಸೋಂಕಿತರು ಸಮಸ್ಯೆಗಳ ಮಳೆ ಸುರಿಸಿದರು.

'ಹಳಬರ ಜೊತೆ ಹೊಸ ರೋಗಿಗಳನ್ನು ಬಿಡುತ್ತಿದ್ದಾರೆ. ಇದರಿಂದ ನಮ್ಮ ಕೋವಿಡ್ ಪರೀಕ್ಷಾ ವರದಿ ನೆಗೆಟಿವ್ ಬರುತ್ತಿಲ್ಲ. ಟಾಯ್ಲೆಟ್ ಕಟ್ಟಿಕೊಂಡು ವಾರ ಕಳೆದಿದ್ದರೂ ಸ್ವಚ್ಛ ಮಾಡಿಲ್ಲ. ಬೆಡ್‌ಶೀಟ್ ರಾಶಿ ಹಾಕಿದ್ದಾರೆ. ಸೊಳ್ಳೆ ಕಾಟ ತಡೆಯಲಾಗುತ್ತಿಲ್ಲ' ಎಂದು ಸೋಂಕಿತ ರಮೇಶ್ ತಿಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಉತ್ತರ ಕನ್ನಡ: ಕುಗ್ರಾಮಕ್ಕೆ ತಲುಪದ ಆರೋಗ್ಯ ಭಾಗ್ಯ

ಒಂದನೇ ಪುಟದಿಂದ

ಶಿರಸಿ ತಾಲ್ಲೂಕು ಕೇಂದ್ರದಿಂದ 35 ಕಿ.ಮೀ. ದೂರದ ಜಡ್ಡಿಗದ್ದೆಯಲ್ಲಿ (ಮೆಣಸಿ) ಕಳೆದ ವರ್ಷವಷ್ಟೇ 10 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆ ನಿರ್ಮಾಣವಾಗಿದೆ. ಆದರೆ, ಚಿಕಿತ್ಸೆಗೆ ಅಲ್ಲಿ ವೈದ್ಯರಿಲ್ಲ. ಶುಶ್ರೂಷಕರೇ ಜನರಿಗೆ ಔಷಧ ಉಪಚಾರ ಮಾಡುತ್ತಿದ್ದಾರೆ. ಇದು ಹಲವು ಕಡೆ ಸಾಮಾನ್ಯವಾಗಿ ಕಾಣಸಿಗುತ್ತದೆ. ಯಲ್ಲಾಪುರದ ವಜ್ರಳ್ಳಿ, ಮಂಚಿಕೇರಿಯಲ್ಲಿ ಸ್ಥಿತಿ ಭಿನ್ನವಾಗೇನೂ ಇಲ್ಲ.

ಸಿದ್ದಾಪುರದ ಕ್ಯಾದಗಿ, ಮನ್ಮನೆ, ಕೋಲಸಿರ್ಸಿ ಮತ್ತಿತರ ಕಡೆ ಕೋವಿಡ್ ಸಂಖ್ಯೆ ಹೆಚ್ಚಳವಾಗಿದೆ. ಪಕ್ಕದ ಜಿಲ್ಲೆಗಳಿಂದ ಸದ್ದಿಲ್ಲದೆ ರಾತ್ರೋರಾತ್ರಿ ಊರೊಳಗೆ ಬಂದವರಿಂದ ಸೋಂಕು ಹೆಚ್ಚಿತ್ತು ಎಂಬ ಆರೋಪ ಸ್ಥಳೀಯರದ್ದು. ಈಗಲೂ ಸೋಂಕು ಹರಡುವಿಕೆ ಪ್ರಮಾಣ ಆ ಭಾಗದಲ್ಲಿ ಹೆಚ್ಚಿದೆ. ಶಿರಸಿಯ ಬನವಾಸಿ, ಭಾಶಿ, ಮುಂಡಗೋಡ ತಾಲ್ಲೂಕಿನ ಗುಂಜಾವತಿ, ಮೈನಳ್ಳಿ ಸೇರಿದಂತೆ ಹಲವು ಕಡೆ ಕೋವಿಡ್ ಪ್ರಕರಣಗಳು ವ್ಯಾಪಕವಾಗಿ ಹರಡಿವೆ.

'ಸೋಂಕಿತರು ಪತ್ತೆಯಾದ ನಂತರ ಅವರ ಪ್ರಾಥಮಿಕ ಸಂಪರ್ಕಕ್ಕೆ ಬಂದವರನ್ನು ಪರೀಕ್ಷೆಗೊಳಪಡಿಸುವುದೇ ಸವಾಲಾಗಿತ್ತು. ಮೂರು ತಿಂಗಳಿನಿಂದ ವೇತನ, ಸುರಕ್ಷತಾ ಸಲಕರಣೆ ಇಲ್ಲದಿದ್ದರೂ ಸೇವೆ ಎಂದು ಭಾವಿಸಿ ಕೆಲಸ ಮಾಡುತ್ತಿದ್ದೇವೆ' ಎಂದು ಮುಂಡಗೋಡ ತಾಲ್ಲೂಕಿನ ಕೊಪ್ಪ ಗ್ರಾಮದ ಆಶಾ ಕಾರ್ಯಕರ್ತೆ ಮೇಘಾ ಬಸವರಾಜ ಹೇಳುತ್ತಾರೆ.

'ಸೋಂಕಿತರು ಕ್ವಾರಂಟೈನ್ ಆದ ಮನೆಗೆ ಮತ್ತು ಕಂಟೈನ್ಮೆಂಟ್ ವಲಯದೊಳಗೆ ಮನೆಗಳಿಗೆ ಅಗತ್ಯ ಸಾಮಗ್ರಿಗಳನ್ನು ಪೂರೈಸುವ ಜವಾಬ್ದಾರಿಯನ್ನು ಮಾಡಲಾಗಿದೆ. ಸಹಾಯವಾಣಿ ತೆರೆದು ಅದರಿಂದ ಜನರ ಬೇಡಿಕೆ ಸಂಗ್ರಹಿಸಿ ಅದನ್ನು ಪೂರೈಸಲು ಸಹಾಯವಾಗಿದೆ' ಎನ್ನುತ್ತಾರೆ ಕ್ಯಾದಗಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆ ರುಕ್ಮಿಣಿ ಗೌಡ, ಉಪಾಧ್ಯಕ್ಷ ಎಸ್.ಎನ್.ಹೆಗಡೆ, ಇಂದೂರು ಗ್ರಾಮ ಪಂಚಾಯ್ತಿ ಉಪಾಧ್ಯಕ್ಷ ಸಿಕಂದರ್ ಬಂಕಾಪುರ.

ಅಂಕಿ ಅಂಶ

12 ತಾಲ್ಲೂಕುಗಳು
96 ಪ್ರಾಥಮಿಕ ಆರೋಗ್ಯ ಕೇಂದ್ರಗಳು
16 ಕೋವಿಡ್ ಆರೈಕೆ ಕೇಂದ್ರಗಳು

ಉತ್ತರ ಕನ್ನಡ ಜಿಲ್ಲಾ
ಕೋವಿಡ್ ಅಂಕಿ–ಅಂಶ

44,115 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
5,757 ▼	37,800 ▲	558 ▲

ದಿನದ ಏರಿಕೆ

ಹೊಸ ಪ್ರಕರಣ	536 ▲
ಗುಣಮುಖ	655 ▼
ಸಾವು	15 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ನಮ್ಮ ಆರೋಗ್ಯ ಕೇಂದ್ರಕ್ಕೆ ಬರಲು ಜನರಿಗೆ ಸಾರಿಗೆ ಸಮಸ್ಯೆಯಿದೆ. ಚಿಕಿತ್ಸೆ, ಸೌಲಭ್ಯಗಳು ಚೆನ್ನಾಗಿದ್ದು, ಕೋವಿಡ್ ಸೋಂಕಿತರಿಗೂ ಚಿಕಿತ್ಸೆ ನೀಡಲು ಸಿದ್ಧರಿದ್ದೇವೆ.
ವಿನಾಯಕ ನಾಯ್ಕ, ಲ್ಯಾಬ್ ಟೆಕ್ನಿಷಿಯನ್
ಹೊನ್ನಾವರದ ಖರ್ವಾ ಪ್ರಾಥಮಿಕ ಆರೋಗ್ಯ ಕೇಂದ್ರ

ನಮ್ಮ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ 17,200 ಜನಸಂಖ್ಯೆಯಿದೆ. ಐಗಳಕೂರ್ವೆ ನಡುಗಡ್ಡೆಗೆ ತೂಗು ಸೇತುವೆ ಕಾಮಗಾರಿ ಆಗುತ್ತಿದೆ. ಬಳಿಕ ಆ ಭಾಗದ ಸಮಸ್ಯೆ ಬಗೆಹರಿಯಬಹುದು.
ಅನಸೂಯಾ, ಶುಶ್ರೂಷಕಿ ಮಿರ್ಜಾನ್
ಪ್ರಾಥಮಿಕ ಆರೋಗ್ಯ ಕೇಂದ್ರ

ಬೈಕ್‌ಗಳೇ ಆಧಾರ

'ಗ್ರಾಮೀಣ ಭಾಗದಲ್ಲೇ ಸೋಂಕಿನ ಪ್ರಮಾಣ ಹೆಚ್ಚಿತ್ತು. ಆದರೂ ಸಕಾಲಕ್ಕೆ ವೈದ್ಯಕೀಯ ಸೇವೆ ಸಿಗುವುದು ಕಷ್ಟವಿತ್ತು. ಬೈಕ್‌ಗಳಲ್ಲಿ ಸೋಂಕಿತರನ್ನು ಕರೆದೊಯ್ಯಬೇಕಾದ ಸ್ಥಿತಿಯೂ ಹಲವು ಕಡೆ ಉಂಟಾಗಿತ್ತು' ಎನ್ನುತ್ತಾರೆ ಶಿರಸಿ ತಾಲ್ಲೂಕಿನ ಕೊಡ್ನಗದ್ದೆ ಗ್ರಾಮ ಪಂಚಾಯ್ತಿ ಸದಸ್ಯ ಪ್ರವೀಣ ಹೆಗಡೆ.

'ಸೋಂಕಿತರ ಪ್ರಾಥಮಿಕ ಸಂಪರ್ಕಕ್ಕೆ ಬಂದವರ ಗಂಟಲುದ್ರವ ಸಂಗ್ರಹಣೆಗೆ ಪ್ರತ್ಯೇಕ ವಾಹನ ಬೇಕಿತ್ತು. ಆದರೆ, ಆ ಸೌಲಭ್ಯ ಇಲ್ಲದ ಕಾರಣ ಇಬ್ಬರು ಸಿಬ್ಬಂದಿ ಬೈಕ್‌ನಲ್ಲಿಯೇ ಮನೆ ಮನೆಗೆ ತೆರಳಿ ಪರೀಕ್ಷೆ ನಡೆಸಬೇಕಿದೆ. ಕೆಲವು ಮನೆಗಳಿಗೆ ತೆರಳಲು ಸರಿಯಾದ ದಾರಿಯೂ ಇರಲಿಲ್ಲ. ಪಿ.ಪಿ.ಇ ಕಿಟ್ ಧರಿಸಿ ಕಿಲೋಮೀಟರ್ ನಡೆದ ಸಾಹಸ ಮರೆಯಲಾಗುತ್ತಿಲ್ಲ' ಎನ್ನುತ್ತಾರೆ ಮೆಣಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ನವೀನ ಹುಲಸ್ವಾರ, ಶ್ವೇತಾ ಪೂಜಾರಿ.

'ಹೊಸ ಜೀವನದಂಥ ಖುಷಿ'

'ಪತ್ನಿಗೆ ಪಾಸಿಟಿವ್ ಎಂದಾಗ ಒಮ್ಮೆ ಆತಂಕ ಉಂಟಾಗಿತ್ತು. ಅಕ್ಕಪಕ್ಕದ ಜನರು ನಮ್ಮ ಮನೆ ಸಮೀಪವೂ ಸುಳಿಯಲಿಲ್ಲ. ಅಗತ್ಯ ವಸ್ತುಗಳ ಖರೀದಿಗೂ ಕಷ್ಟಪಡಬೇಕಿತ್ತು. ಹೆದರದೆ ಹದಿನೈದು ದಿನ ಮನೆಯಲ್ಲೇ ಕಳೆದೆವು. ಸೋಂಕುಮುಕ್ತರಾಗಿ ಹೊರಬಂದಾಗ ಹೊಸಜೀವನ ಆರಂಭಿಸಿದಷ್ಟು ಸಂತಸ ಉಂಟಾಯಿತು' ಎಂದು ಸಿದ್ದಾಪುರ ತಾಲ್ಲೂಕಿನ ಹೊನ್ನೆಬಿಡಾರ ರಾಜಾರಾಮ ನಾಯ್ಕ, ಸೀತಾ ಲಕ್ಷ್ಮಣ ನಾಯ್ಕ ಹೇಳುತ್ತಿದ್ದರೆ ಇಂತಹ ನೂರಾರು ಜನರು ಮೌನವಾಗಿ ಸೋಂಕು ಗೆದ್ದದ್ದು ಸ್ಪಷ್ಟವಾಗುತ್ತದೆ.

ಕೋವಿಡ್ ಪರೀಕ್ಷೆಗೆ ನೆಟ್‌ವರ್ಕ್ ತೊಡಕು

• ಚಂದ್ರಕಾಂತ ಮಸಾನಿ

ಬೀದರ್: ತೆಲಂಗಾಣ ಹಾಗೂ ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಜಿಲ್ಲೆಯ ಔರಾದ್, ಕಮಲನಗರ, ಬಸವಕಲ್ಯಾಣ ತಾಲ್ಲೂಕಿನ ಗಡಿ ಗ್ರಾಮಗಳಲ್ಲಿ ಮೊಬೈಲ್ ನೆಟ್‌ವರ್ಕ್ ಇಲ್ಲದ ಕಾರಣ ಜನರಿಗೆ ವೈದ್ಯಕೀಯ ಸೌಲಭ್ಯ ಸಕಾಲದಲ್ಲಿ ದೊರೆಯುತ್ತಿಲ್ಲ.

'ಪ್ರಜಾವಾಣಿ' ತಂಡ ಜಿಲ್ಲೆಯ ಮಧ್ಯಭಾಗದ ಹಳ್ಳಿಗಳು, ಗಡಿಗೆ ಹೊಂದಿಕೊಂಡಿರುವ ಗ್ರಾಮಗಳಿಗೆ ಭೇಟಿ ನೀಡಿದಾಗ, ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಜನ ಪರದಾಟುತ್ತಿರುವುದು ಕಂಡುಬಂತು.

'ಆರ್‌ಟಿಪಿಸಿಆರ್ ಪರೀಕ್ಷೆಗೆ ಜನರ ವಿವರವನ್ನು ಆ್ಯಪ್‌ನಲ್ಲಿ ದಾಖಲು ಮಾಡಬೇಕು. ನೆಟ್‌ವರ್ಕ್ ಬಂದ ಮೇಲೆಯೇ ನೋಂದಣಿ ಆಗುತ್ತಿರುವ ಕಾರಣ ಪರೀಕ್ಷೆಯೂ ತಡವಾಗುತ್ತಿದೆ. ನಮ್ಮೂರಿನವರು ಕೋವಿಡ್ ಪರೀಕ್ಷೆಗೆ 7 ಕಿ.ಮೀ. ದೂರದ ಚಿಂತಾಕಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಬೇಕು. ಗ್ರಾಮದಲ್ಲಿ ಒಬ್ಬರಿಗೆ ಮಾತ್ರ ಸೋಂಕು ತಗುಲಿತ್ತು. ತಕ್ಷಣ ಅವರಿಗೆ ಚಿಕಿತ್ಸೆ ಕೊಡಲಾಗಿದೆ. ಆದರೆ, ಉಳಿದವರ ಪರೀಕ್ಷೆಯೇ ನಡೆದಿಲ್ಲ' ಎಂದು ಔರಾದ್ ತಾಲ್ಲೂಕಿನ ಗುಡಪಳ್ಳಿ ನಿವಾಸಿ ಬಂಡೆಪ್ಪ ನಾಗಲಗೆತ್ತೆ ಬೇಸರ ವ್ಯಕ್ತಪಡಿಸಿದರು.

'ನೆಟ್‌ವರ್ಕ್ ಸಮಸ್ಯೆಯಿಂದಾಗಿ ದಿನಕ್ಕೆ 20 ಜನರ ಹೆಸರು ನೋಂದಣಿ ಮಾಡಲೂ ಕಷ್ಟವಾಗುತ್ತಿದೆ. ಕೆಲ ಗ್ರಾಮಗಳಲ್ಲಿ ದಿನವಿಡೀ ಕುಳಿತರೂ ನೆಟ್‌ವರ್ಕ್ ಬರುವುದಿಲ್ಲ' ಎಂದು ವೈದ್ಯಕೀಯ ಸಿಬ್ಬಂದಿ ಅಳಲು ತೋಡಿಕೊಂಡರು.

'ಈ ಸಮಸ್ಯೆ ಮಧ್ಯೆಯೂ ನಮ್ಮ ಸಿಬ್ಬಂದಿ ಪ್ರಯಾಸಪಟ್ಟು ನೋಂದಣಿ ಮಾಡಿಕೊಂಡು ಕೋವಿಡ್ ಪರೀಕ್ಷೆ ಮಾಡುತ್ತಿದ್ದಾರೆ. ಶೇ 60ರಷ್ಟು ಜನ ಸ್ವಯಂ ಪ್ರೇರಣೆಯಿಂದ ಕೋವಿಡ್ ಪರೀಕ್ಷೆಗೆ ಬರುತ್ತಿದ್ದಾರೆ. ಉಳಿದವರಿಗೆ ತಿಳಿವಳಿಕೆ ನೀಡಲು ಹರಸಾಹಸ ಮಾಡಬೇಕಾಗಿದೆ' ಎಂದು ಕಮಲನಗರ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಗಾಯತ್ರಿ ವಿವರಿಸಿದರು.

'ಆಯಾ ಪ್ರದೇಶದಲ್ಲಿ ಯಾವ ನೆಟ್‌ವರ್ಕ್ ಸರಿ ಇರುತ್ತದೆಯೋ ಆ ಕಂಪನಿಗಳ ಸಿಮ್ ಕಾರ್ಡ್ ಬಳಸಲು ಅವಕಾಶ ನೀಡಿದ್ದೇವೆ. ತುರ್ತು ವೇಳೆ 'ರ‍್ಯಾಟ್' (ರ‍್ಯಾಪಿಡ್ ಆ್ಯಂಟಿಜೆನ್ ಟೆಸ್ಟ್) ಮೂಲಕ ಸ್ಥಳದಲ್ಲಿಯೇ ಕೋವಿಡ್ ಪರೀಕ್ಷೆ ನಡೆಸುವಂತೆ ಸೂಚನೆ ನೀಡಲಾಗಿದೆ' ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವಿ.ಜಿ.ರೆಡ್ಡಿ ಹೇಳುತ್ತಾರೆ.

'ಲಾಕ್‌ಡೌನ್ ಇರುವ ಕಾರಣ ಜನ ಪಿಎಚ್‌ಸಿಗೆ ಬಂದು ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಗ್ರಾಮದಲ್ಲಿಯ ಆರ್‌ಎಂಪಿ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕೆಲವರು ವೈದ್ಯರ ಸಲಹೆ ಇಲ್ಲದೇ ಔಷಧಿ ಅಂಗಡಿಗಳಲ್ಲಿ ಮಾತ್ರೆ ಖರೀದಿಸುತ್ತಿದ್ದಾರೆ. ಈ ಕಾರಣಕ್ಕೆ ಸೋಂಕು ತೀವ್ರಗೊಳ್ಳುತ್ತಿದೆ. ನಾಲ್ವರಲ್ಲಿ ಒಬ್ಬರಿಗೆ ಲಕ್ಷಣ ರಹಿತ ಕೋವಿಡ್ ಬಂದು ಹೋಗಿದೆ' ಎನ್ನುತ್ತಾರೆ ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು.

ಬೀದರ್ ಸಮೀಪದ ಜನವಾಡ, ಕೊಳಾರ (ಕೆ), ಆಣದೂರ, ಬುಧೇರಾ ಗ್ರಾಮದಲ್ಲಿ ಏಪ್ರಿಲ್‌ನಲ್ಲಿ ಸೋಂಕಿತರ ಪ್ರಮಾಣ ಅಧಿಕ ಇತ್ತು. ಈಗ ಕಡಿಮೆಯಾಗಿದೆ. 'ಜನವಾಡ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿ 15 ಜನರಿಗೆ ಕೋವಿಡ್ ತಗುಲಿತ್ತು. ಈಗ ಎಲ್ಲರೂ ಗುಣಮುಖರಾಗಿದ್ದಾರೆ' ಎಂದು ಜನವಾಡ ಪಿಎಚ್‌ಸಿ ನರ್ಸ್ ಸುಲ್ತಾನಾ ಬೇಗಂ ಹೇಳಿದರು.

ಎಚ್ಚರ ವಹಿಸದ ಗ್ರಾಮಸ್ಥರು: ಭಾಲ್ಕಿ ತಾಲ್ಲೂಕಿನ ನಾವದಗಿ, ಬೀದರ್ ತಾಲ್ಲೂಕಿನ ಅಮಲಾಪುರ, ಔರಾದ್ ತಾಲ್ಲೂಕಿನ ಸಂತಪುರ, ಕಮಲನಗರ ತಾಲ್ಲೂಕಿನ ಬಳತ (ಕೆ), ಬಸವಕಲ್ಯಾಣ ತಾಲ್ಲೂಕಿನ ರಾಜೇಶ್ವರ, ಹುಮನಾಬಾದ್ ತಾಲ್ಲೂಕಿನ ಕುಮಾರಚಿಂಚೋಳಿ, ಚಿಟಗುಪ್ಪ ತಾಲ್ಲೂಕಿನ ತಾಳಮಡಗಿ ಸೇರಿದಂತೆ ಅನೇಕ ಗ್ರಾಮಗಳಲ್ಲಿ ಜನ ಅಲ್ಲಲ್ಲಿ ಗುಂಪು ಗುಂಪಾಗಿ ಸೇರಿರುವುದು ಕಂಡು ಬಂತು.

ಬೀದರ್ ಜಿಲ್ಲೆ ಕಮಲನಗರ ತಾಲ್ಲೂಕಿನ ಠಾಣಾಕುಶನೂರಿನ ಪ್ರಾಥಮಿಕ ಆರೋಗ್ಯ ಕೇಂದ್ರ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ಸಂಪರ್ಕ ಕಲ್ಪಿಸುವ ಪ್ರತಿ ಮಾರ್ಗದಲ್ಲಿ ಚೆಕ್‌ಪೋಸ್ಟ್ ಸ್ಥಾಪಿಸಿ ಸೋಂಕಿತರು ಜಿಲ್ಲೆಯೊಳಗೆ ಪ್ರವೇಶಿಸದಂತೆ ನಿಗಾ ವಹಿಸಲಾಗಿದೆ
ರಮೇಶ ಪೆದ್ದೆ, ಕಮಲನಗರ ತಹಶೀಲ್ದಾರ್

ಬೀದರ್ ಜಿಲ್ಲಾ
ಕೋವಿಡ್ ಅಂಕಿ–ಅಂಶ

23,784 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
399 ▼	23,007 ▲	374 ▼

ದಿನದ ಏರಿಕೆ

ಹೊಸ ಪ್ರಕರಣ	42 ▼
ಗುಣಮುಖ	101 ▲
ಸಾವು	03

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಿಬ್ಬಂದಿ ಕೊರತೆ

ಔರಾದ್, ಕಮಲನಗರ ಗಡಿಯಲ್ಲೇ ಎಂಟು ಚೆಕ್‌ಪೋಸ್ಟ್ ಸ್ಥಾಪಿಸಿ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯನ್ನು ತಪಾಸಣೆಗೆ ನಿಯೋಜಿಸಲಾಗಿದೆ. ಈ ಸಿಬ್ಬಂದಿ ಚೆಕ್‌ಪೋಸ್ಟ್‌ಗಳಲ್ಲಿ ತಪಾಸಣೆ ಹಾಗೂ ಆರ್‌ಟಿ–ಪಿಸಿಆರ್‌ಗೆ ಮಾದರಿ ಸಂಗ್ರಹಿಸಬೇಕಿರುವ ಕಾರಣ ಪಿಎಚ್‌ಸಿಗಳಲ್ಲಿ ಗ್ರಾಮೀಣ ಜನತೆಗೆ ಸಕಾಲದಲ್ಲಿ ವೈದ್ಯಕೀಯ ಸೇವೆ ದೊರಕುತ್ತಿಲ್ಲ ಎಂದು ವನಮಾರಪಳ್ಳಿ ಗ್ರಾಮಸ್ಥರು ಹೇಳುತ್ತಾರೆ. ಇದನ್ನು ಆರೋಗ್ಯ ಇಲಾಖೆಯ ಅಧಿಕಾರಿಗಳೂ ಒಪ್ಪಿಕೊಳ್ಳುತ್ತಾರೆ.

ಜಿಲ್ಲೆಯಲ್ಲಿ ಐದೇ ಸಿಟಿಸ್ಕ್ಯಾನ್ ಯಂತ್ರ

ಬ್ರಿಮ್ಸ್ ಹಾಗೂ ನಗರದ ನಾಲ್ಕು ಖಾಸಗಿ ಆಸ್ಪತ್ರೆಗಳಲ್ಲಿರುವ ಸ್ಕ್ಯಾನಿಂಗ್ ಸೆಂಟರ್‌ಗಳಲ್ಲಿ ಮಾತ್ರ ಎಚ್‌ಆರ್‌ಸಿಟಿ (ಹೈ-ರೆಸಲ್ಯೂಷನ್ ಕಂಪ್ಯೂಟೆಡ್ ಟೊಮೊಗ್ರಫಿ) ಮಾಡುವ ಸಾಮರ್ಥ್ಯ ಇದೆ. ಬ್ರಿಮ್ಸ್‌ನಲ್ಲಿ ನಿತ್ಯ ಸರಾಸರಿ 60 ರೋಗಿಗಳ ಸ್ಕ್ಯಾನಿಂಗ್ ಮಾಡಲಾಗುತ್ತಿದೆ.

'ಜಿಲ್ಲೆಯ ನಾಲ್ಕು ತಾಲ್ಲೂಕು ಆಸ್ಪತ್ರೆ, ಎಂಟು ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಪ್ರತ್ಯೇಕ ವಾರ್ಡ್ ಆರಂಭಿಸಲಾಗಿದೆ. ಆಮ್ಲಜನಕ ಹಾಗೂ ಮಾತ್ರೆಗಳ ಕೊರತೆ ಇಲ್ಲ. ಗುಣಮುಖ ಪ್ರಮಾಣ ಶೇ 95ರಷ್ಟಿದೆ' ಎನ್ನುತ್ತಾರೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಕೃಷ್ಣಾರೆಡ್ಡಿ.

ಕೋವಿಡ್ ಪೀಡಿತ ನನ್ನ ತಾಯಿಯನ್ನು ಹುಮನಾಬಾದ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದ್ದೆ. 25 ದಿನ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ. ವೈದ್ಯರು ಉತ್ತಮ ಸೇವೆ ನೀಡಿದ್ದಾರೆ
ನಾಗಾರೆಡ್ಡಿ, ಬೇನ್‌ಚಿಂಚೋಳಿ ಗ್ರಾಮಸ್ಥ

ಭಾಲ್ಕಿ ತಾಲ್ಲೂಕಿನ ನಾವದಗಿಯಲ್ಲಿ ಏಪ್ರಿಲ್‌ನಲ್ಲಿ 20 ಮಂದಿ ಸಾವಿಗೀಡಾಗಿದ್ದಾರೆ. ಇಬ್ಬರು ಕೋವಿಡ್‌ನಿಂದ ಮೃತಪಟ್ಟಿದ್ದಾರೆ. ಒಂದು ಸಮುದಾಯದವರು ಕೋವಿಡ್ ಲಸಿಕೆ ಪಡೆದಿದ್ದಾರೆ. ಇನ್ನೊಂದು ಸಮುದಾಯದವರು ಲಸಿಕೆ ಪಡೆದಿಲ್ಲ
ರೇವಣಯ್ಯ ಸ್ವಾಮಿ, ಗ್ರಾಮದ ಹಿರಿಯ

ಬಿಜೆಪಿ ಸೇವಾ ಚಟುವಟಿಕೆ ಇಂದು

ಪ್ರಜಾವಾಣಿ ವಾರ್ತೆ


ರವಿಕುಮಾರ್

ಬೆಂಗಳೂರು: ರಾಜ್ಯದ 29,000 ಹಳ್ಳಿಗಳ 58,000 ಮತಗಟ್ಟೆಗಳಲ್ಲಿ ಬಿಜೆಪಿ ವತಿಯಿಂದ ಭಾನುವಾರ 'ಸೇವಾ ಹೀ ಸಂಘಟನ್' ಹೆಸರಿನಲ್ಲಿ ಕೋವಿಡ್ ಸಂಬಂಧಿ ಸೇವಾ ಚಟುವಟಿಕೆಗಳನ್ನು ನಡೆಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಡವರಿಗೆ ಅಕ್ಕಿ ಮತ್ತು ಪಡಿತರ ವಸ್ತುಗಳ ವಿತರಣೆ, ವಿದ್ಯಾರ್ಥಿಗಳ ಶುಲ್ಕ ಪಾವತಿ ಸೇರಿದಂತೆ ಹಲವು ಚಟುವಟಿಕೆಗಳನ್ನು ನಡೆಸಲಾಗುವುದು. 25 ಲಕ್ಷ ಕಾರ್ಯಕರ್ತರು ಭಾಗವಹಿಸಲಿದ್ದು, ಒಂದು ಕೋಟಿ ಜನರಿಗೆ ನೆರವು ತಲುಪಿಸುವ ಗುರಿ ಇದೆ' ಎಂದು ಅವರು ಹೇಳಿದರು.

ಪಕ್ಷದ ಮತಗಟ್ಟೆ ಹಂತದ ಸಮಿತಿಗಳ ಅಧ್ಯಕ್ಷರು ಮತ್ತು ಕಾರ್ಯದರ್ಶಿ ನೆರವು ಪಡೆಯಲು ಅರ್ಹರಾದ ವ್ಯಕ್ತಿಗಳು ಮತ್ತು ಕುಟುಂಬಗಳನ್ನು ಗುರುತಿಸಿದ್ದಾರೆ. ಅವರಿಗೆ ಭಾನುವಾರ ಏಕಕಾಲದಲ್ಲಿ ನೆರವು ತಲುಪಿಸಲಾಗುವುದು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಸಚಿವರು, ಸಂಸದರು, ಶಾಸಕರು, ಪಕ್ಷದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಈ ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ವಿವರ ನೀಡಿದರು.

'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಏಳು ವರ್ಷಗಳನ್ನು ಪೂರೈಸಿದೆ. ಈ ಅವಧಿಯಲ್ಲಿ ಸಂವಿಧಾನದ 370ನೇ ವಿಧಿಯ ರದ್ಧತಿ, ಅಯೋಧ್ಯೆ ರಾಮ ಮಂದಿರ ನಿರ್ಮಾಣಕ್ಕೆ ಚಾಲನೆ, ಪಾಕಿಸ್ತಾನದ ಭಯೋತ್ಪಾದಕರ ಮೇಲೆ ನಿಶ್ಚಿತ ದಾಳಿ ಸೇರಿದಂತೆ ಹಲವು ಮಹತ್ವದ ಕೆಲಸಗಳನ್ನು ಮಾಡಿದೆ. ಸಂಕಷ್ಟದ ಕಾಲದಲ್ಲಿ ದೇಶವನ್ನು ಕಾಪಾಡುವ ಕೆಲಸವನ್ನು ಮೋದಿ ಸರ್ಕಾರ ಮಾಡಿದೆ' ಎಂದರು.

ಬಿಜೆಪಿ ಬೆಂಗಳೂರು ಕೇಂದ್ರ ಜಿಲ್ಲಾ ಘಟಕದ ಅಧ್ಯಕ್ಷ ಮಂಜುನಾಥ್ ಪತ್ರಿಕಾಗೋಷ್ಠಿಯಲ್ಲಿದ್ದರು.

ಲಾಕ್‌ಡೌನ್: ಅರಣ್ಯ ನಾಶ ಹೆಚ್ಚಳ

ಒಂದನೇ ಪುಟದಿಂದ...

ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ವಗರೆಹಳ್ಳಿಯ 'ಪಾರಂಪರಿಕ ಜೀವವೈವಿಧ್ಯ ತಾಣ'ವಾಗಿರುವ ಹೊಗರೆಕಾನುಗಿರಿ ಬೆಟ್ಟದ ಬುಡದಲ್ಲಿ 12ಕ್ಕೂ ಹೆಚ್ಚು ಸ್ಥಳಗಳಲ್ಲಿ 480 ಎಕರೆಯಷ್ಟು ಅರಣ್ಯ ನಾಶ ನಡೆದಿದೆ. ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರ ಸಮೀಪದ ಬಾಳೂರು ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ 472ಕ್ಕೂ ಹೆಚ್ಚು ಬೃಹತ್ ಮರಗಳನ್ನು ಎರಡು ವಾರಗಳ ಅವಧಿಯಲ್ಲಿ ಕತ್ತರಿಸಲಾಗಿದೆ. ಕೊಪ್ಪ ತಾಲ್ಲೂಕಿನ ಹರಿಹರಪುರ ಸಮೀಪದ ಸೂರಳಿ ಎಂಬಲ್ಲಿ 42 ಎಕರೆಗೂ ಹೆಚ್ಚು ಅರಣ್ಯ ನಾಶ ಮಾಡಲಾಗಿದೆ. ಕೊಪ್ಪ ತಾಲ್ಲೂಕಿನ ಬಸರಿಕಟ್ಟೆ, ದೇವಗೋಡು ಗ್ರಾಮಗಳಲ್ಲೂ ವ್ಯಾಪಕ ಅರಣ್ಯ ನಾಶ ನಡೆದಿದೆ ಎಂದು ವರದಿಯಲ್ಲಿ ಉಲ್ಲೇಖಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹಳೆ ಸೊರಬ ದೇವರಕಾನು ಅರಣ್ಯದಲ್ಲಿ ಏಪ್ರಿಲ್ ತಿಂಗಳಿನಲ್ಲಿ 140ಕ್ಕೂ ಹೆಚ್ಚು ಮರಗಳನ್ನು ಕಡಿಯಲಾಗಿದೆ. 300 ವರ್ಷಕ್ಕೂ ಹೆಚ್ಚು ಹಳೆಯ ದೇವದಾರು, ನೇರಳೆ, ಬರಣಿಗೆ, ತೇಗದ ಮರಗಳನ್ನು ಕತ್ತರಿಸಲಾಗಿದೆ. ಆನವಟ್ಟಿಯ ಬಳಿಯ ದುಗ್ಗಿ ಹೊಸೂರು, ಚೌಡಿಕಾನು, ತೆಕ್ಕೂರು, ನಿಟ್ಟಕ್ಕಿ ಹಳ್ಳಿಗಳಲ್ಲಿ ಶುಂಠಿ ಮಾಫಿಯಾದ ಹಲವರು ಅರಣ್ಯ ನಾಶದಲ್ಲಿ ನಿರತರಾಗಿದ್ದಾರೆ. ಮಟಗುಪ್ಪೆ, ಕಾರಹೊಂಡ, ಬೀರದೇವರ ವನ, ಎಲಸಿ ಗ್ರಾಮಗಳಲ್ಲೂ ಒಂದೂವರೆ ತಿಂಗಳಿನಿಂದ ವ್ಯಾಪಕ ಅರಣ್ಯ ನಾಶ ನಡೆಯುತ್ತಿದೆ ಎಂದು ಮಂಡಳಿ ಹೇಳಿದೆ.

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಬಿಳಿಸಿರಿ, ಮಂಚಾಲೆ, ಬೊಮ್ಮತ್ತಿ, ಚಿತ್ರಟ್ಟಿ ಪ್ರದೇಶದಲ್ಲಿ ಅವ್ಯಾಹತವಾಗಿ ಅರಣ್ಯ ನಾಶ ನಡೆಯುತ್ತಿದೆ. ಹೊಸನಗರ ತಾಲ್ಲೂಕಿನ ಹುಂಚ ಹೋಬಳಿಯ ಗುಡ್ಡೆಕೊಪ್ಪದಲ್ಲಿ ಮೈಸೂರು ಕಾಗದ ಕಾರ್ಖಾನೆಗೆ ಸೇರಿದ 50 ಎಕರೆಗೂ ಹೆಚ್ಚು ವಿಸ್ತೀರ್ಣದ ನೆಡುತೋಪನ್ನು ಅತಿಕ್ರಮಣ ಮಾಡಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ ಕೋಣಂದೂರು ಬಳಿ 40 ಎಕರೆ ಅರಣ್ಯವನ್ನು ಖಾಸಗಿಯವರು ಕಟಾವು ಮಾಡಲು ಪ್ರಯತ್ನಿಸಿದ್ದು, ಸ್ಥಳೀಯರು ತಡೆದಿದ್ದಾರೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕೆಎಟಿ ಆದೇಶ ಪ್ರಶ್ನಿಸಿ ಮೇಲ್ಮನವಿ: ಸುರೇಶ್‌ಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾಥಮಿಕ ಶಾಲೆಯ ಶಿಕ್ಷಕರು ಪ್ರೌಢಶಾಲಾ ಸಹ ಶಿಕ್ಷಕ ಹುದ್ದೆಗೆ ಬಡ್ತಿ ಪಡೆಯಲು ಅನರ್ಹರೆಂದು ಕೆಎಟಿ ನೀಡಿರುವ ಆದೇಶದ ಬಗ್ಗೆ ಇನ್ನಷ್ಟು ತಾಂತ್ರಿಕವಾಗಿ ಆಲೋಚಿಸಬೇಕಾದ ಅಗತ್ಯವಿದೆ. ಈ ಹಂತದಲ್ಲಿ ಶಿಕ್ಷಕರು ಗೊಂದಲಕ್ಕೀಡಾಗುವುದು ಬೇಡ' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ತಿಳಿಸಿದರು.

ಇಲಾಖೆಯ ಅಧಿಕಾರಿಗಳ ಜತೆ ಚರ್ಚಿಸಿದ ಬಳಿಕ ಪ್ರತಿಕ್ರಿಯಿಸಿದ ಅವರು, 'ಈ ಬಗ್ಗೆ ಪರಿಶೀಲಿಸಿ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು' ಎಂದರು.

'ಪ್ರೌಢಶಾಲಾ ಶಿಕ್ಷಕರ ವೃಂದ ನಿಯಮಗಳಂತೆ ನೇರ ನೇಮಕಾತಿಯ ಜೊತೆಗೆ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದದಿಂದ ಬಡ್ತಿಗೆ ನಿಗದಿಪಡಿಸಿರುವ ಅನುಪಾತದಂತೆ ಬಡ್ತಿ ನೀಡಿಯೂ ಪ್ರೌಢಶಾಲಾ ಶಿಕ್ಷಕ ಹುದ್ದೆಗಳನ್ನು ತುಂಬಲು ಅವಕಾಶ ಇದೆ' ಎಂದರು.

'1ರಿಂದ 7ನೇ ತರಗತಿವರೆಗಿನ ಶಿಕ್ಷಕ ವೃಂದವನ್ನು ಪ್ರಾಥಮಿಕ ಶಾಲಾ ಶಿಕ್ಷಕರೆಂದು ಕರೆಯಲಾಗುತ್ತಿತ್ತು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕ ಹುದ್ದೆಗೆ ಇರಬೇಕಾದ ವಿದ್ಯಾರ್ಹತೆಯನ್ನು ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ತು ನಿಗದಿಪಡಿಸುತ್ತದೆ. ಅದರ ಪ್ರಕಾರ 6ರಿಂದ 8ನೇ ತರಗತಿಗಳಿಗೆ ಪ್ರತ್ಯೇಕವಾದ ಪದವಿ ವಿದ್ಯಾರ್ಹತೆ ಹೊಂದಬೇಕಾಗಿದೆ. ಅದರಂತೆ, 2017ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ನಿಯಮಗಳನ್ನು ಪರಿಷ್ಕರಿಸಿ ಪ್ರಾಥಮಿಕ ಶಿಕ್ಷಕರನ್ನು 1ರಿಂದ 7ನೇ ತರಗತಿಯ ಒಟ್ಟಾರೆ 1.88 ಲಕ್ಷ ವೃಂದ ಬಲದಲ್ಲಿಯೇ ಕಡಿತಗೊಳಿಸಿ, ಹಿರಿಯ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಿರುವಂತೆ ಒಟ್ಟಾರೆ 52 ಸಾವಿರ ಬಲದ 6ರಿಂದ 8ನೇ ತರಗತಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ ವೃಂದವನ್ನು ಅಸ್ತಿತ್ವಕ್ಕೆ ತರಲಾಗಿದೆ. ಆದರೆ, ಮೂಲ ವೃಂದದಲ್ಲಿಯೂ ಪದವಿ ಪಡೆದಿರುವ ಶಿಕ್ಷಕರಿದ್ದು, ಅವರಿಗೆ 6ರಿಂದ 8ನೇ ತರಗತಿ ವೃಂದಕ್ಕೆ ಪರೀಕ್ಷೆ ಮೂಲಕ ಸೇರಲು ಈ ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ' ಎಂದರು.

'ಪ್ರೌಢಶಾಲಾ ಶಿಕ್ಷಕ ವೃಂದಕ್ಕೆ ಇರುವ ಬಡ್ತಿ ನಿಯಮಗಳಲ್ಲಿ 1ರಿಂದ 5ನೇ ತರಗತಿ ಪ್ರಾಥಮಿಕ ಶಾಲಾ ಶಿಕ್ಷಕ ವೃಂದ ಮತ್ತು 6ರಿಂದ 8ನೇ ತರಗತಿ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ವೃಂದವರಿಗೆ ಎಷ್ಟು ಪ್ರಮಾಣದಲ್ಲಿ ಬಡ್ತಿ ನೀಡಬೇಕೆಂದು ನಿರ್ಧರಿಸಬೇಕಾಗಿದೆ. ಈ ಪ್ರಕ್ರಿಯೆ ನಡೆಯುತ್ತಿರುವಾಗ ಕೆಎಟಿ ಆದೇಶ ಹೊರಬಿದ್ದಿದೆ. ವೃಂದ ನಿಯಮಗಳಿಗೆ ತಿದ್ದುಪಡಿ ತಂದು 1ರಿಂದ 5ನೇ ತರಗತಿ ವೃಂದದಲ್ಲಿ ಅರ್ಹರಿಗೆ ಬಡ್ತಿ ನೀಡಬಹುದು ಎಂದು ಆದೇಶ ಹೇಳಿದೆ. ಜಾರಿಯಲ್ಲಿರುವ ವೃಂದ ನಿಯಮಗಳಲ್ಲಿ 1ರಿಂದ 5 ಮತ್ತು 6 ರಿಂದ 8 ಎಂಬ ಪ್ರತ್ಯೇಕತೆಯನ್ನು ಪ್ರಸ್ತಾಪಿಸಿಲ್ಲ. ಹೀಗಾಗಿ 6ರಿಂದ 8 ವೃಂದದಿಂದ ಮಾತ್ರ ಬಡ್ತಿ ಸೂಕ್ತ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ. ಈ ಬಗ್ಗೆ ಪರಿಶೀಲಿಸಿ, ಮೇಲ್ಮನವಿ ಸಲ್ಲಿಸಲಾಗುವುದು ಎಂದರು.

ಪ್ರೌಢಶಾಲೆ ಬಡ್ತಿಗೆ ಪ್ರಾಥಮಿಕ ಶಿಕ್ಷಕರು ಅರ್ಹರಲ್ಲ: ಕೆಎಟಿ

ಬೆಂಗಳೂರು: ಪ್ರಾಥಮಿಕ ಶಾಲೆಯಲ್ಲಿ ಬೋಧಿಸಿರುವ ಶಿಕ್ಷಕರು ಪ್ರೌಢಶಾಲೆಯ ಗ್ರೇಡ್–2 ಸಹ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ಪಡೆಯಲು ಅರ್ಹರಲ್ಲ ಎಂದು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಅಭಿಪ್ರಾಯಪಟ್ಟಿದೆ.

6ರಿಂದ 8ನೇ ತರಗತಿ ತನಕ ಬೋಧಿಸಿರುವ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕರು ಪ್ರೌಢಶಾಲೆಗೆ ಬಡ್ತಿ ಪಡೆಯಲು ಅರ್ಹರು. ಪ್ರಾಥಮಿಕ ಶಾಲೆ ಶಿಕ್ಷಕರಿಗೆ (1ರಿಂದ 5ನೇ ತರಗತಿ) ಈಗಾಗಲೇ ಬಡ್ತಿ ನೀಡಿದ್ದರೆ ರದ್ದುಪಡಿಸಬೇಕು ಎಂದು ಆದೇಶಿಸಿದೆ.

ಶಿಕ್ಷಕ ನಾರಾಯಣ ಬಾಲಪ್ಪ ಹುರುಗೇರಿ ಮತ್ತು 100ಕ್ಕೂ ಹೆಚ್ಚು ಶಿಕ್ಷಕರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೆಎಟಿ ಹಂಗಾಮಿ ಅಧ್ಯಕ್ಷ ನ್ಯಾಯಮೂರ್ತಿ ಆರ್. ಬಿ.ಬೂದಿಹಾಳ್ ನೇತೃತ್ವದ ಪೀಠ ಈ ಆದೇಶ ನಿಡಿದೆ.

ಪ್ರಾಥಮಿಕ ಶಾಲಾ ಶಿಕ್ಷಕರಾಗಿ(1ರಿಂದ 5ನೇ ತರಗತಿ) ಬೋಧನೆ ಮಾಡಿದವರಿಗೆ ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ಪಡೆಯಲು ಅವಕಾಶ ಇದೆ. ನೇರವಾಗಿ ಪ್ರೌಢಶಾಲಾ ಸಹ ಶಿಕ್ಷಕರಾಗಲು ಅವಕಾಶ ಇಲ್ಲ. ಶಿಕ್ಷಕರ ಬಡ್ತಿಗೆ ಸಂಬಂಧಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದಪಡಿ ಅಗತ್ಯವಿದೆ ಎಂದು ಆದೇಶದಲ್ಲಿ ಪೀಠ ಉಲ್ಲೇಖಿಸಿದೆ. ಈಗಾಗಲೇ ಪ್ರೌಢಶಾಲೆಗೆ ಬಡ್ತಿ ಪಡೆದಿರುವ 7 ಸಾವಿರದಿಂದ 8 ಸಾವಿರ ಶಿಕ್ಷಕರಿಗೆ ಹಿಂಬಡ್ತಿಯಾಗುವ ಸಾಧ್ಯತೆ ಇದೆ.

ಹೋಮ–ಹವನ: ಪ್ರಕರಣ ದಾಖಲು

ಬೆಳಗಾವಿ: 'ಇಲ್ಲಿನ ದಕ್ಷಿಣ ಮತಕ್ಷೇತ್ರದ ಶಹಾಪುರದ ಹೊಸೂರ–ಬಸವನ ಗಲ್ಲಿಯಲ್ಲಿ ಮೇ 24ರಂದು ಹೋಮ–ಹವನ ನಡೆಸಿ ಕೋವಿಡ್-19 ನಿಯಂತ್ರಣ ಮಾರ್ಗಸೂಚಿ ಉಲ್ಲಂಘಿಸಲಾಗಿದೆ' ಎಂದು ಶಹಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಾನಗರ ಪಾಲಿಕೆ ಕಿರಿಯ ಆರೋಗ್ಯ ಇನ್‌ಸ್ಪೆಕ್ಟರ್ ಶಿವಾನಂದ ಭೋಸಲೆ ಶುಕ್ರವಾರ ನೀಡಿದ ದೂರಿನ ಅನ್ವಯ, ಸುನೀಲ ಮುತಗೇಕರ, ಕಲ್ಲಪ್ಪ ಶಹಾಪುರಕರ, ಜಯಂತ್ ಜಾಧವ ಹಾಗೂ ಗಿರೀಶ ಧೊಂಗಡಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

'ಈ ನಾಲ್ವರು ಮಾರ್ಗಸೂಚಿ ಉಲ್ಲಂಘಿಸಿ ಸಾರ್ವಜನಿಕರನ್ನು ಗುಂಪುಗೂಡಿಸಿದ್ದಾರೆ ಅವರ ವಿರುದ್ಧ ಕರ್ನಾಟಕ ಸಾಂಕ್ರಾಮಿಕ ರೋಗ ತಡೆ ಕಾಯ್ದೆ ಉಲ್ಲಂಘನೆ ಅಡಿ ಕ್ರಮ ಜರುಗಿಸಬೇಕು ಎಂದು ಪಾಲಿಕೆ ಅಧಿಕಾರಿ ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ದಾಖಲಾಗಿದೆ' ಎಂದು ಡಿಸಿಪಿ ವಿಕ್ರಂ ಅಮಟೆ ತಿಳಿಸಿದರು.

ಕೈಗಾರಿಕೆಗೆ ಪೆಟ್ಟು: ಉತ್ಪಾದನೆ ಸ್ಥಗಿತ

• ಜೆ.ಆರ್. ಗಿರೀಶ್

ಕೋಲಾರ: ಕೈಗಾರಿಕೆಗಳಿಗೆ ಕೋವಿಡ್ ಎರಡನೇ ಅಲೆ ದೊಡ್ಡ ಪೆಟ್ಟು ನೀಡಿದೆ. ಜಿಲ್ಲೆಯಲ್ಲಿ ನರಸಾಪುರ ಮತ್ತು ವೇಮಗಲ್ ಸೇರಿದಂತೆ 8 ಕೈಗಾರಿಕಾ ಪ್ರದೇಶಗಳಿವೆ. ಹೋಂಡಾ, ಮಿಟ್ಸುಬಿಷಿ, ಸ್ಕ್ಯಾನಿಯಾ, ವಿಸ್ಟ್ರಾನ್ ಇನ್ಫೋಕಾಮ್ ಇಂಡಿಯಾ, ಮಹೀಂದ್ರ ಏರೋಸ್ಪೇಸ್, ನಹಾರ್ಸ್, ಎಕ್ಸಿಡಿ, ಬಡ್ವೆ ಎಂಜಿನಿಯರಿಂಗ್ ಲಿಮಿಟೆಡ್ ಸೇರಿದಂತೆ ಹಲವು ಪ್ರತಿಷ್ಠಿತ ಕೈಗಾರಿಕೆಗಳಿವೆ.

ಜಿಲ್ಲೆಯ 19,261 ಕೈಗಾರಿಕೆಗಳಲ್ಲಿ ₹ 7,477 ಕೋಟಿ ಬಂಡವಾಳ ಹೂಡಿಕೆಯಾಗಿದ್ದು, ಸುಮಾರು 1.64 ಲಕ್ಷ ಮಂದಿಗೆ ಕೆಲಸ ನೀಡಿದೆ. ಸ್ಥಳೀಯರ ಜತೆಗೆ ಅಕ್ಕಪಕ್ಕದ ಜಿಲ್ಲೆಗಳ ಹಾಗೂ ಹೊರರಾಜ್ಯಗಳ ಕಾರ್ಮಿಕರು ಜಿಲ್ಲೆಗೆ ವಲಸೆ ಬಂದು ಇಲ್ಲಿಯೇ ಬದುಕು ಕಟ್ಟಿಕೊಂಡಿದ್ದಾರೆ.

ಲಾಕ್‌ಡೌನ್ ಪರಿಣಾಮ ಜಿಲ್ಲೆಯಿಂದ ಕಾರ್ಮಿಕರ ಮಹಾವಲಸೆಯಾಗಿದ್ದು, ಕೈಗಾರಿಕೆಗಳಿಗೆ ಮಾನವ ಸಂಪನ್ಮೂಲದ ಕೊರತೆ ಎದುರಾಗಿದೆ. ಸರಕು ಸಾಗಣೆ ಸೇವೆಯಲ್ಲಿ ವ್ಯತ್ಯಯವಾಗಿರುವುದರಿಂದ ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳು ಪೂರೈಕೆಯಾಗುತ್ತಿಲ್ಲ. ಇಷ್ಟೆಲ್ಲಾ ಸಮಸ್ಯೆಯ ನಡುವೆಯೂ ಕೈಗಾರಿಕೆಗಳು ಉತ್ಪಾದನಾ ಚಟುವಟಿಕೆ ನಡೆಸಿದರೂ ಮಾರುಕಟ್ಟೆ ಬಂದ್ ಆಗಿರುವುದು ಸಮಸ್ಯೆಯನ್ನು ಇಮ್ಮಡಿಗೊಳಿಸಿದೆ.

ನರಸಾಪುರ ಕೈಗಾರಿಕಾ ಪ್ರದೇಶದಲ್ಲಿರುವ ಹೋಂಡಾ ಮೋಟಾರ್ ಸೈಕಲ್ ಮತ್ತು ಸ್ಕೂಟರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಘಟಕವು ಜಗತ್ತಿನಲ್ಲೇ ಅತಿದೊಡ್ಡ ಘಟಕವಾಗಿದೆ. ಈ ಘಟಕದಲ್ಲಿ 10 ಸಾವಿರ ಮಂದಿ ಕೆಲಸ ಮಾಡುತ್ತಿದ್ದು, ಲಾಕ್‌ಡೌನ್ ಜಾರಿಯಾದ ನಂತರ 6 ಸಾವಿರಕ್ಕೂ ಹೆಚ್ಚು ಕಾರ್ಮಿಕರು ತಮ್ಮ ಊರುಗಳಿಗೆ ಹಿಂತಿರುಗಿದ್ದಾರೆ.

'ಲಾಕ್‌ಡೌನ್‌ಗೂ ಮುನ್ನ ಘಟಕದಲ್ಲಿ ದಿನಕ್ಕೆ 9,600 ಬೈಕ್ ಉತ್ಪಾದನೆ ಯಾಗುತ್ತಿದ್ದವು. ಕಳೆದೊಂದು ತಿಂಗಳಿಂದ ಘಟಕವನ್ನು ಬಂದ್ ಮಾಡಲಾಗಿತ್ತು. ನಾಲ್ಕೈದು ದಿನದಿಂದ ಉತ್ಪಾದನೆ ಆರಂಭವಾಗಿದ್ದು, ಅರ್ಧದಷ್ಟು ಕಾರ್ಮಿಕರನ್ನು ಕೆಲಸಕ್ಕೆ ಬಳಸಿಕೊಳ್ಳಲಾಗುತ್ತಿದೆ. ಈಗ ದಿನಕ್ಕೆ ಕೇವಲ 450 ಬೈಕ್ ಉತ್ಪಾದನೆಯಾಗುತ್ತಿವೆ' ಎಂದು ಹೋಂಡಾ ಘಟಕದ ಮಾನವ ಸಂಪನ್ಮೂಲ ವಿಭಾಗದ ವ್ಯವಸ್ಥಾಪಕ ಜಿ.ಬಿ. ವಿನೋದ್ 'ಪ್ರಜಾವಾಣಿ'ಗೆ ತಿಳಿಸಿದರು.

ಗೊಂಬೆ ಉದ್ಯಮ ಕುಸಿತ

• ಆರ್. ಜಿತೇಂದ್ರ

ರಾಮನಗರ: ಪ್ರವಾಸೋದ್ಯಮವನ್ನೇ ನೆಚ್ಚಿಕೊಂಡ ಚನ್ನಪಟ್ಟಣದ ಗೊಂಬೆ ಉದ್ಯಮ ಲಾಕ್‌ಡೌನ್ ಕಾರಣಕ್ಕೆ ನೆಲಕಚ್ಚುತ್ತಿದೆ. ಕಳೆದೊಂದು ವರ್ಷದಲ್ಲಿ ಸಾವಿರಾರು ಕರಕುಶಲಕರ್ಮಿಗಳ ಬದುಕು ಬೀದಿಗೆ ಬಿದ್ದಿದೆ.

ಮೂರು ಶತಮಾನಕ್ಕೂ ಹೆಚ್ಚು ಅವಧಿಯಿಂದ ಚನ್ನಪಟ್ಟಣದಲ್ಲಿ ಗೊಂಬೆ ತಯಾರಿಕೆ ಕಲೆ ಮನೆಮನೆಗೆ ಪಸರಿಸಿದೆ. ಚೀನಿ ಆಟಿಕೆಗಳ ಆಮದಿನಿಂದ ಏಟು ತಿಂದಿದ್ದ ಈ ಉದ್ಯಮ ಈಗ ಲಾಕ್‌ಡೌನ್‌ನಿಂದ ಮತ್ತಷ್ಟು ನಷ್ಟ ಅನುಭವಿಸುತ್ತಿದೆ. ಜನಸಂಚಾರವೇ ಇಲ್ಲದ ಕಾರಣ ಬೆಂಗಳೂರು–ಮೈಸೂರು ಹೆದ್ದಾರಿ ಬದಿಯ ಟಾಯ್ಸ್ ಎಂಪೋರಿಯಂಗಳ ಬಾಗಿಲು ಮುಚ್ಚಿವೆ. ಕಲಾವಿದರು ಪರ್ಯಾಯ ವೃತ್ತಿ ಹುಡುಕಿಕೊಳ್ಳುತ್ತಿದ್ದಾರೆ. ಹತ್ತಾರು ಸಾವಿರದಷ್ಟಿದ್ದ ಕರಕುಶಲಿಗರ ಸಂಖ್ಯೆ 2–3 ಸಾವಿರಕ್ಕೆ ಇಳಿದಿದೆ.

ಬಿಡದಿ ಹಾಗೂ ಹಾರೋಹಳ್ಳಿ ಕೈಗಾರಿಕಾ ಪ್ರದೇಶದಲ್ಲೂ ಹಿಂದಿನ ಲವಲವಿಕೆ ಇಲ್ಲ. ಅದರಲ್ಲೂ ದೊಡ್ಡ ಕಾರ್ಖಾನೆಗಳು ಉತ್ಪಾದನೆಯ ಪುನರಾರಂಭಕ್ಕೆ ತಿಣುಕಾಡುತ್ತಿವೆ. ಜಿಲ್ಲೆಯ ಹತ್ತಾರು ಗಾರ್ಮೆಂಟ್ಸ್ ಕಾರ್ಖಾನೆಗಳು ಮುಚ್ಚಿದ್ದು, ಬಡ ಮತ್ತು ಮಧ್ಯಮ ವರ್ಗದ ಮಹಿಳೆಯರ ಉದ್ಯೋಗ ಕಸಿದಿದೆ.

ತೂಗುಯ್ಯಾಲೆಯಲ್ಲಿ ಗೋಡಂಬಿ, ಹೆಂಚು ಉದ್ಯಮ

ಬೀಡಿ ಸುತ್ತುವ ಕೈಗಳಿಗೆ ಪೂರ್ಣ ಉದ್ಯೋಗವಿಲ್ಲ!

• ಪ್ರದೀಶ್ ಎಚ್. ಮರೋಡಿ

ಮಂಗಳೂರು: 'ಬೀಡಿಯ ಆದಾಯ ನಂಬಿ ಸ್ವಸಹಾಯ ಸಂಘದಿಂದ ಸಾಲ ಪಡೆದಿದ್ದೇನೆ. ಪ್ರತಿ ವಾರ ಸಾಲದ ಕಂತು ಕಟ್ಟಬೇಕು. ಆದರೆ, ಈಗ ಕೆಲಸವಿಲ್ಲದೆ ಕೈಕಟ್ಟಿದಂತಾಗಿದೆ. ಇತರ ವರ್ಗಗಳ ಕಾರ್ಮಿಕರಿಗೆ ನೆರವು ಘೋಷಿಸಿದ ಸರ್ಕಾರ, ಬೀಡಿ ಕಾರ್ಮಿಕರನ್ನು ಮರೆತಿದೆ...' ಇದು ಬೀಡಿ ಕಾರ್ಮಿಕರಾದ ಬೆಳ್ತಂಗಡಿಯ ಭಾರತಿ ಅವರ ಮಾತು.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ 2.5 ಲಕ್ಷಕ್ಕೂ ಅಧಿಕ ಬೀಡಿ ಕಾರ್ಮಿಕರಿದ್ದು, ಬಹುತೇಕ ಅವರೆಲ್ಲರ ಕೊರಗು ಇದೇ ಆಗಿದೆ. ಸಂಸಾರದ ನಿರ್ವಹಣೆಯ ನೊಗ ಹೊತ್ತ ಮಹಿಳೆಯರು, ವಿಧವೆಯರು ಬೀಡಿ ಸುತ್ತುವುದನ್ನು ಕಾಯಕ ಮಾಡಿಕೊಂಡಿದ್ದಾರೆ. ಅವಿಭಜಿತ ಜಿಲ್ಲೆಯಲ್ಲಿ 20ಕ್ಕೂ ಅಧಿಕ ಬೀಡಿ ಕಂಪನಿಗಳು ಇದ್ದು, ಕೋವಿಡ್ ಸಂದರ್ಭದಲ್ಲಿ ಉತ್ಪನ್ನಕ್ಕೆ ಬೇಡಿಕೆ ಕುಗ್ಗಿದೆ. ಹೀಗಾಗಿ, ಕಾರ್ಮಿಕರಿಗೆ ಬೇಡಿಕೆಯಷ್ಟು ಕೆಲಸವನ್ನು ನೀಡಲು ಕಂಪನಿಗಳಿಗೆ ಸಾಧ್ಯವಾಗುತ್ತಿಲ್ಲ.

ಬೀಡಿ ಸುತ್ತುವ ಕೆಲಸದಲ್ಲಿ ತಲ್ಲೀನರಾಗಿರುವ ಬೆಳ್ತಂಗಡಿ ತಾಲ್ಲೂಕಿನ ಕಾಶಿಪಟ್ಣದ ಕಾರ್ಮಿಕ ಮಹಿಳೆ ಸುಜಾತಾ

'ಕಳೆದ ವರ್ಷದ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದ ಬೀಡಿ ಉದ್ಯಮ ಚೇತರಿಕೆಯ ಹಾದಿಯಲ್ಲಿತ್ತು. ಈ ಬಾರಿ ಜಿಲ್ಲಾಡಳಿತಗಳು ಷರತ್ತುಬದ್ಧ ಅವಕಾಶ ಕಲ್ಪಿಸಿದರೂ, ಕಂಪನಿಗಳು ವಾರಕ್ಕೆ ಒಂದೆರಡು ದಿನ ಮಾತ್ರ ಕೆಲಸ ನೀಡುತ್ತಿವೆ' ಎನ್ನುತ್ತಾರೆ ಸಿಐಟಿಯು ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಜೆ. ಬಾಲಕೃಷ್ಣ ಶೆಟ್ಟಿ.

'ಕಾರ್ಮಿಕರು ಒಂದು ದಿನ ಸಾವಿರ ಬೀಡಿ ಕಟ್ಟಿದರೆ ₹ 215.22 ಸಂಪಾದನೆ. ಇದಕ್ಕೆ ಹನ್ನೆರಡು ಗಂಟೆ ದುಡಿಯಬೇಕು. ಇಂಥ ಸಂದರ್ಭದಲ್ಲಿ ನಿಯಮಗಳನ್ನು ಪಾಲಿಸಿ, ಬೀಡಿ ಕಾರ್ಮಿಕರಿಗೆ ಕೆಲಸ ಒದಗಿಸಬೇಕು. ಎಲ್ಲ ಕಾರ್ಮಿಕರಿಗೆ ತಿಂಗಳಿಗೆ 10 ಕೆ.ಜಿ. ಉಚಿತ ಆಹಾರ ಧಾನ್ಯ ನೀಡಬೇಕು. ಬೀಡಿ ಕಾರ್ಮಿಕರು ಕೋವಿಡ್‌ಗೆ ತುತ್ತಾದಲ್ಲಿ ಅವರಿಗೆ ಉಚಿತ ವೈದ್ಯಕೀಯ ಸೌಲಭ್ಯ ನೀಡಬೇಕು. ಬೀಡಿ ಕಾರ್ಮಿಕರ ಕ್ಷೇಮ ನಿಧಿಯಲ್ಲಿ ಇರುವ ಸಾವಿರಾರು ಕೋಟಿ ಹಣವನ್ನು ಅವರ ಕಲ್ಯಾಣಕ್ಕಾಗಿ ಉಪಯೋಗಿಸಬೇಕು' ಎಂದು ಅವರು ಒತ್ತಾಯಿಸುತ್ತಾರೆ.

ಹೆಂಚು, ಗೋಡಂಬಿ ಉದ್ಯಮ: ಹಿಂದೆ ಕರಾವಳಿಯ ಉದ್ಯಮಕ್ಕೆ ಬಲ ತುಂಬಿದ್ದು ಹೆಂಚು ಮತ್ತು ಗೋಡಂಬಿ ಕಾರ್ಖಾನೆಗಳು. ಉಭಯ ಜಿಲ್ಲೆಯಲ್ಲಿ ಸುಮಾರು 20 ಹೆಂಚು ಕಾರ್ಖಾನೆಗಳಿದ್ದು, 2 ಸಾವಿರದಷ್ಟು ಕಾರ್ಮಿಕರು ದುಡಿಯುತ್ತಿದ್ದಾರೆ. ಲಾಕ್‌ಡೌನ್ ಸಂದರ್ಭ ಈ ಕಾರ್ಖಾನೆಗಳು ಕಾರ್ಯ ಸ್ಥಗಿತಗೊಳಿಸಿವೆ.

ಪ್ರಸ್ತುತ ಗೋಡಂಬಿ ಉದ್ಯಮವೂ ತೊಂದರೆಯಲ್ಲಿದೆ. ದಕ್ಷಿಣ ಕನ್ನಡ, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ 50 ಸಾವಿರಕ್ಕೂ ಅಧಿಕ ಕಾರ್ಮಿಕರು ಈ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದಾರೆ. ಇದೀಗ ಅವರೆಲ್ಲರೂ ಅತಂತ್ರರಾಗಿದ್ದಾರೆ.

'ಕಳೆದ ವರ್ಷ ಕೆಲ ಹೆಂಚು ಕಾರ್ಖಾನೆಗಳ ಮಾಲೀಕರು ಕಾರ್ಮಿಕರಿಗೆ ನೆರವು ನೀಡಿದ್ದರು. ಹಾಗೆಯೇ ಈ ವರ್ಷವೂ ಕಾರ್ಮಿಕರ ಕಷ್ಟಕ್ಕೆ ಸ್ಪಂದಿಸಬೇಕು. ರಾಜ್ಯದಾದ್ಯಂತ ಇರುವ ಬೀಡಿ, ಹೆಂಚು ಮತ್ತು ಗೋಡಂಬಿ ಕಾರ್ಮಿಕರಿಗೆ ಸರ್ಕಾರ ಪರಿಹಾರ ಘೋಷಣೆ ಮಾಡಬೇಕು' ಎಂದು ಒತ್ತಾಯಿಸುತ್ತಾರೆ ಸಿಐಟಿಯು ರಾಜ್ಯ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಉಡುಪಿ.

ಕಬ್ಬಿಣ– ಉಕ್ಕು ಗಣಿ ಉದ್ಯಮ ಅಬಾಧಿತ

• ಕೆ.ನರಸಿಂಹಮೂರ್ತಿ/ ಜಿ.ಬಿ.ನಾಗರಾಜ್

ಚಿತ್ರದುರ್ಗ/ಬಳ್ಳಾರಿ: ಗಣಿ ಚಟುವಟಿಕೆ ಅಗತ್ಯ ವಸ್ತುಗಳ ವ್ಯಾಪ್ತಿಗೆ ಒಳಪಟ್ಟ ಪರಿಣಾಮ ಲಾಕ್‌ಡೌನ್ ನಡುವೆಯೂ ಕಬ್ಬಿಣ ಮತ್ತು ಉಕ್ಕಿನ ಅದಿರು ಉತ್ಪಾದನೆ ಹಾಗೂ ಸಾಗಣೆ ನಿರಾತಂಕವಾಗಿ ನಡೆಯುತ್ತಿದೆ. ಆದರೆ, ಅದಿರಿನ ಮೌಲ್ಯವರ್ಧಿತ ಉತ್ಪನ್ನಗಳಿಗೆ ಭವಿಷ್ಯದಲ್ಲಿ ಬೇಡಿಕೆ ಕುಸಿಯುವ ಅಳುಕು ಉದ್ಯಮವನ್ನು ಕಾಡುತ್ತಿದೆ.

ಹಿಂದಿನ ವರ್ಷ ಏಕಾಏಕಿ ಘೋಷಣೆಯಾದ ಲಾಕ್‌ಡೌನ್ ಕಾರಣಕ್ಕೆ ಗಣಿ ಉದ್ಯಮ ಸ್ಥಗಿತಗೊಂಡಿತ್ತು. ಅಗತ್ಯ ವಸ್ತು ವ್ಯಾಪ್ತಿಗೆ ತಂದು ಗಣಿ ಚಟುವಟಿಕೆಗೆ ಅವಕಾಶ ಕಲ್ಪಿಸಿದ್ದರಿಂದ ಎರಡನೇ ಅಲೆಯು ಉದ್ಯಮವನ್ನು ಕಾಡಿದ್ದು ಕಡಿಮೆ.

ಚಿತ್ರದುರ್ಗ ಜಿಲ್ಲೆಯಲ್ಲಿ ವೇದಾಂತ ಸೇಸಾಗೋವಾ ಲಿಮಿಟೆಡ್, ಆರ್.ಪ್ರವೀಣಚಂದ್ರ ಗಣಿ ಕಂಪನಿ ಹಾಗೂ ಜೆಎಸ್‌ಡಬ್ಲ್ಯು ಕಂಪನಿ ಅದಿರು ಗಣಿಗಾರಿಕೆ ನಡೆಸುತ್ತಿವೆ. ಮೂರೂ ಕಂಪನಿಗಳಿಂದ ಮಾಸಿಕ ಸರಾಸರಿ ಎರಡು ಲಕ್ಷ ಟನ್ ಅದಿರು ಉತ್ಪಾದನೆಯಾಗುತ್ತಿದೆ. ಇ–ಹರಾಜು, ಅದಿರು ಸಾಗಣೆ, ಪರವಾನಗಿಗೆ ಮುಕ್ತ ಅವಕಾಶ ಸಿಕ್ಕಿದೆ.

ಗಣಿ ಸುತ್ತಲಿನ ಗ್ರಾಮದ ಜನರೇ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವುದರಿಂದ ತೊಂದರೆ ಉಂಟಾದಂತಿಲ್ಲ. ಕಾರ್ಮಿಕರನ್ನು ನಿಯಮಿತವಾಗಿ ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಸೋಂಕು ಕಾಣಿಸಿಕೊಂಡವರ ಚಿಕಿತ್ಸೆಗೆ ಪ್ರತ್ಯೇಕವಾಸ ವ್ಯವಸ್ಥೆಗಳನ್ನು ಕಂಪನಿಗಳು ಮಾಡಿವೆ. ಬಳ್ಳಾರಿಯ ಜೆಎಸ್‌ಡಬ್ಲ್ಯು ಸ್ಟೀಲ್ಸ್‌ನಲ್ಲಿ ಉತ್ಪಾದನೆ ಶೇ 10ರಿಂದ 15ರಷ್ಟು ಕುಸಿದಿದೆ. ಆದರೆ, ಎಷ್ಟು ಉತ್ಪಾದನೆ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ನೀಡಲು ಸಂಸ್ಥೆ ನಿರಾಕರಿಸಿದೆ.

'ಉಕ್ಕು ಉತ್ಪಾದನೆಗೆ ಬಳಸುವ ಆಮ್ಲಜನಕವನ್ನು ಕೋವಿಡ್ ನಿರ್ವಹಣೆಗೆ ನೀಡಲಾಗುತ್ತಿದೆ. ಇದರಿಂದಾಗಿ ಸದ್ಯ ಉತ್ಪಾದನೆ ಕುಸಿದಿದೆ. ಆಮ್ಲಜನಕವನ್ನು ಕಾರ್ಖಾನೆಯ ಹೊರಗೆ ಪೂರೈಸುವುದು ನಿಲ್ಲುವವರೆಗೂ ಇದೇ ಸ್ಥಿತಿ ಮುಂದುವರಿಯಲಿದೆ' ಎಂದು ಮೂಲಗಳು ತಿಳಿಸಿವೆ.

ಜಿಲ್ಲೆಯಲ್ಲಿ ಗಣಿ ಕಾರ್ಮಿಕರ ಪರಿಸ್ಥಿತಿಯೂ ಶೋಚನೀಯವಾಗಿದೆ. 'ಎ' ಮತ್ತು 'ಬಿ' ಕೆಟಗರಿಯ ಬಹಳಷ್ಟು ಪ್ರದೇಶದಲ್ಲಿ ಹಾಗೂ 'ಸಿ' ಕೆಟಗರಿಯ ಕೆಲವೆಡೆ ಗಣಿಗಾರಿಕೆ ನಡೆಯುತ್ತಿದೆ. ಮುಂಚೆ ಇದ್ದ ಕಾರ್ಮಿಕರ ಪೈಕಿ ಹಲವರನ್ನು ಕೆಲಸದಿಂದ ತೆಗೆದು, ಗುತ್ತಿಗೆ ಆಧಾರದಲ್ಲಿ ಹೊಸಬರನ್ನು ನೇಮಿಸಲಾಗಿದೆ.

'ಕೆಲಸ ಕಳೆದುಕೊಂಡು ಹೊರ ಜಿಲ್ಲೆಗಳಿಗೆ ಗುಳೆ ಹೋಗಿದ್ದ ಕಾರ್ಮಿಕರು ಕೋವಿಡ್ ಮೊದಲ ಅಲೆಯ ಅಂತ್ಯದಲ್ಲಿ ವಾಪಸಾಗಿದ್ದರು. ಎರಡನೇ ಅಲೆ ಬಂದು ಎಲ್ಲರೂ ಸಾಲಗಾರರಾಗಿದ್ದಾರೆ. ಸ್ತ್ರೀಶಕ್ತಿ ಸಂಘಗಳಿಂದ ಪಡೆದ ಸಾಲವನ್ನು ತೀರಿಸಲೂ ಆಗುತ್ತಿಲ್ಲ' ಎಂದು ಬಳ್ಳಾರಿ ಜಿಲ್ಲಾ ಗಣಿ ಕಾರ್ಮಿಕರ ಸಂಘದ ಅಧ್ಯಕ್ಷ ವೈ.ಗೋಪಿನಾಥ್ ಅಳಲು ತೋಡಿಕೊಂಡರು.

ಉದ್ಯಮಕ್ಕೆ ಕೋವಿಡ್ ಉರುಳು

ಒಂದನೇ ಪುಟದಿಂದ

'ದಿಢೀರ್ ಲಾಕ್‌ಡೌನ್ ಬೇಡ': ಎರಡು ಲಾಕ್‌ಡೌನ್‌ಗಳನ್ನು ಕಂಡಿರುವ ಉದ್ಯಮ ವಲಯ, 'ಇದನ್ನು ದಿಢೀರ್ ಎಂದು ಜಾರಿಗೊಳಿಸಬಾರದು' ಎಂದು ಹೇಳುತ್ತಿದೆ. 'ಲಾಕ್‌ಡೌನ್ ಜಾರಿಗೊಳಿಸಿದ ನಂತರ, ಅದರಿಂದಾಗುವ ಸಮಸ್ಯೆಗಳಿಗೆ ಪರಿಹಾರ ಕೊಡಬೇಕು' ಎಂದು ಎಫ್‌ಕೆಸಿಸಿಐನ ತೆರಿಗೆ ಸಮಿತಿ ಅಧ್ಯಕ್ಷ ಎನ್. ನಿತ್ಯಾನಂದ ಅಭಿಪ್ರಾಯಪಟ್ಟರು.

'ಲಾಕ್‌ಡೌನ್‌ನಿಂದಾಗಿ ಕಾರ್ಮಿಕರಿಗೆ ವೇತನ ಕೊಡುವುದೂ ಕಷ್ಟವಾಗುತ್ತದೆ. ಅದರಿಂದ ಕಾನೂನು ಸಮಸ್ಯೆ ಸೃಷ್ಟಿಯಾಗುತ್ತದೆ. ಚಟುವಟಿಕೆ ನಿಂತ ಕಾರಣಕ್ಕೆ ಉತ್ಪನ್ನಗಳಿಗೆ ದೊಡ್ಡ ಉದ್ಯಮಗಳಿಂದ ಬಂದಿದ್ದ ಬೇಡಿಕೆ ರದ್ದಾಗಬಹುದು. ಬ್ಯಾಂಕ್‌ಗಳಿಗೆ ಮಾಡಬೇಕಿರುವ ಪಾವತಿ, ಪೂರೈಕೆದಾರರಿಗೆ ಕೊಡಬೇಕಿರುವ ಹಣಕ್ಕೆ ತೊಂದರೆ ಆಗುತ್ತದೆ' ಎಂದು ಅವರು ಸಮಸ್ಯೆಗಳು ಹನುಮಂತನ ಬಾಲದಂತೆ ಬೆಳೆಯುವುದನ್ನು ವಿವರಿಸಿದರು.

ಸಿಮೆಂಟ್ ಉತ್ಪಾದನೆ ಶೇ 50ರಷ್ಟು ಕಡಿತ

• ಮನೋಜಕುಮಾರ್ ಗುದ್ದಿ

ಕಲಬುರ್ಗಿ: ರಾಜ್ಯದ ಸಿಮೆಂಟ್ ಕಾಶಿ ಎಂದು ಕರೆಸಿಕೊಳ್ಳುವ ಕಲಬುರ್ಗಿ ಜಿಲ್ಲೆಯಲ್ಲಿ ಉತ್ಪಾದನೆ ಕುಂಠಿತಗೊಂಡಿದೆ. ಇಲ್ಲಿನ ಕಾರ್ಖಾನೆಗಳ ಬಹುದೊಡ್ಡ ಮಾರುಕಟ್ಟೆ ಬೆಂಗಳೂರು, ಮುಂಬೈ ಹಾಗೂ ಪುಣೆ. ಮುಂಬೈ ಸೇರಿದಂತೆ ಮಹಾರಾಷ್ಟ್ರದ ಹಲವೆಡೆ ತಿಂಗಳುಗಳಿಂದ ಕಠಿಣ ಲಾಕ್‌ಡೌನ್ ಜಾರಿಯಲ್ಲಿದೆ. ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಅನುಮತಿ ನೀಡಿದ್ದರೂ, ಕೊರೊನಾ ಭೀತಿಯಿಂದಾಗಿ ಕಾರ್ಮಿಕರು ತಮ್ಮ ಊರುಗಳಿಗೆ ಮರಳಿದ್ದರಿಂದ ನಿರೀಕ್ಷಿಸಿದಷ್ಟು ಉತ್ಪಾದನೆ ಆಗುತ್ತಿಲ್ಲ.

ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ವಾಡಿಯಲ್ಲಿ ಎಸಿಸಿ ಸಿಮೆಂಟ್, ಚಿತ್ತಾಪುರ ಬಳಿ ಓರಿಯೆಂಟ್ ಸಿಮೆಂಟ್, ಸೇಡಂ ತಾಲ್ಲೂಕಿನಲ್ಲಿ ವಾಸವದತ್ತಾ ಸಿಮೆಂಟ್, ರಾಜಶ್ರೀ ಸಿಮೆಂಟ್, ಶ್ರೀ ಸಿಮೆಂಟ್, ಚಿಂಚೋಳಿಯಲ್ಲಿ ಚೆಟ್ಟಿನಾಡ್ ಸಿಮೆಂಟ್, ಕಲಬುರ್ಗಿ ಸಿಮೆಂಟ್ ಕಾರ್ಖಾನೆಗಳಿವೆ. ಪ್ರತಿ ಕಾರ್ಖಾನೆಯೂ ಶೇ 30ರಿಂದ 50ರಷ್ಟು ಉತ್ಪಾದನೆ ಕಡಿತಗೊಳಿಸಿದೆ. ಬಾಗಲಕೋಟೆಯ ಮುಧೋಳ ತಾಲ್ಲೂಕಿನ ಜೆ.ಕೆ. ಸಿಮೆಂಟ್ ಸಹ ಉತ್ಪಾದನೆಯನ್ನು ಶೇ 60ರಿಂದ 70ರಷ್ಟು ಕಡಿತಗೊಳಿಸಿದೆ.

ಕೋವಿಡ್ ಎರಡನೇ ಅಲೆಯಿಂದಾಗಿ ನಿರ್ಮಾಣ ವಲಯವೂ ತತ್ತರಿಸಿದೆ. ಭಾರಿ ಪ್ರಮಾಣದ ವಸತಿ ಸಂಕೀರ್ಣ ಯೋಜನೆಗಳು ಅನುಷ್ಠಾನಗೊಳ್ಳುತ್ತಿಲ್ಲ. ಸರ್ಕಾರದ ವತಿಯಿಂದ ಅನುಷ್ಠಾನಗೊಳ್ಳಬೇಕಿದ್ದ ವಸತಿ ಯೋಜನೆಗಳು, ಸರ್ಕಾರಿ ಕಟ್ಟಡಗಳು ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ ಎನ್ನುತ್ತಾರೆ ಕಲಬುರ್ಗಿಯ ಲೋಕೋಪಯೋಗಿ ಇಲಾಖೆಯ ಎಂಜಿನಿಯರ್ ಒಬ್ಬರು.

ಈ ಕುರಿತು ಪ್ರತಿಕ್ರಿಯೆ ನೀಡಿದ ಕ್ರೆಡಾಯ್ ಜಿಲ್ಲಾ ಅಧ್ಯಕ್ಷ ಮೊಹಮ್ಮದ್ ಅಬ್ದುಲ್ ನಜೀಬ್, 'ಕಟ್ಟಡ ಕೆಲಸಗಳು ಬಹುತೇಕ ಸ್ಥಗಿತಗೊಂಡಿದ್ದರಿಂದ ಸಿಮೆಂಟ್ ಕಾರ್ಖಾನೆಗಳು ಉತ್ಪಾದನೆ ಕಡಿತಗೊಳಿಸಿವೆ. ಜಿಲ್ಲೆಯ ಮೂರು ಪ್ರಮುಖ ಕಾರ್ಖಾನೆಗಳು ಎರಡು ಘಟಕಗಳನ್ನು ಬಂದ್ ಮಾಡಿ ಒಂದು ಘಟಕದಲ್ಲಷ್ಟೇ ಸಿಮೆಂಟ್ ಉತ್ಪಾದಿಸುತ್ತಿವೆ' ಎಂದರು.

ಗಾರ್ಮೆಂಟ್ಸ್ ಉದ್ಯಮಕ್ಕೆ ಕೋವಿಡ್ ಬರೆ

ಪ್ರಜಾವಾಣಿ ವಾರ್ತೆ

ಮೈಸೂರು: ಲಾಕ್‌ಡೌನ್‌ನಿಂದಾಗಿ ಗಾರ್ಮೆಂಟ್ಸ್ ಉದ್ಯಮದ ಮೇಲೆ ಬಿದ್ದಿರುವ ಹೊಡೆತವು ಕಾರ್ಮಿಕರನ್ನೂ ಉದ್ಯಮಿಗಳನ್ನೂ ಕಂಗಾಲು ಮಾಡಿದೆ.

ಎಲ್ಲ ಸಂಕಷ್ಟ ಕಳೆದು ಮತ್ತೆ ಕೆಲಸ ಸಿಕ್ಕೀತೇ ಎಂಬುದು ಕಾರ್ಮಿಕರ ಪ್ರಶ್ನೆಯಾದರೆ, ಆಗಿರುವ ನಷ್ಟ ಸರಿದೂಗಿಸುವ, ನುರಿತ ಕಾರ್ಮಿಕರನ್ನು ಮತ್ತೆ ವಾಪಸ್ ಕರೆತರುವ, ಅವರು ಬಾರದಿದ್ದರೆ ಹೊಸ ಕಾರ್ಮಿಕರನ್ನು ಸಜ್ಜುಗೊಳಿಸುವ ಸವಾಲು ಗಾರ್ಮೆಂಟ್ಸ್ ಉದ್ಯಮಿಗಳದ್ದು.

'ಮೈಸೂರು ಜಿಲ್ಲೆಯಲ್ಲಿ ನೂರಕ್ಕೂ ಹೆಚ್ಚು ಗಾರ್ಮೆಂಟ್ಸ್‌ಗಳಿವೆ. ಇವು 27 ಸಾವಿರಕ್ಕೂ ಹೆಚ್ಚು ಜನರಿಗೆ ಉದ್ಯೋಗ ನೀಡಿವೆ. ಪ್ರತಿಷ್ಠಿತ ಕಂಪನಿಗಳು ಇಲ್ಲಿವೆ. ಆದರೆ, ಕೋವಿಡ್‌ನ ಎರಡನೇ ಅಲೆಯ ತೀವ್ರತೆ ಮತ್ತು ಲಾಕ್‌ಡೌನ್ ಹೊಡೆತಕ್ಕೆ ಉದ್ಯಮವೇ ತತ್ತರಿಸಿದೆ' ಎನ್ನುತ್ತಾರೆ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಡಿ.ಕೆ. ಲಿಂಗರಾಜು.

ಕಾರ್ಯನಿರ್ವಹಿಸಲು ಅವಕಾಶವಿದ್ದರೂ, ಉದ್ಯೋಗಿಗಳಲ್ಲೇ ಹೆಚ್ಚು ಕೋವಿಡ್ ಪ್ರಕರಣಗಳು ವರದಿಯಾಗಿದ್ದರಿಂದ 'ರೀಡ್ ಅಂಡ್ ಟೇಲರ್' ಬಾಗಿಲು ಮುಚ್ಚಿದೆ. ಪ್ರಸ್ತುತ ಶೇ 30ರಿಂದ ಶೇ 40ರಷ್ಟು ಗಾರ್ಮೆಂಟ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಆದರೆ, ವೈದ್ಯಕೀಯ ಪರಿಕರಗಳಾದ ಪಿಪಿಇ ಕಿಟ್, ಮಾಸ್ಕ್, ಗ್ಲೌಸ್, ಡೈಪರ್ ತಯಾರಿಸಲಷ್ಟೇ ಸೀಮಿತವಾಗಿವೆ ಎಂದರು.

'ನಮ್ಮ ಕಾರ್ಖಾನೆಯನ್ನು ತಾತ್ಕಾಲಿಕವಾಗಿ ಮುಚ್ಚಿದ್ದೇವೆ. ಕಾರ್ಮಿಕರಿಗೆ ರಜೆ ಕೊಡಲಾಗಿದೆ. ವರ್ಷದಿಂದಲೂ ಶಾಲೆ–ಕಾಲೇಜುಗಳು ನಡೆಯುತ್ತಿಲ್ಲವಾದ್ದರಿಂದ ಸಮವಸ್ತ್ರ, ಕ್ರೀಡಾ ದಿರಿಸುಗಳ ತಯಾರಿಕೆ ನಿಂತಿದ್ದು, ನಮ್ಮ ವ್ಯಾಪಾರದ ಮೇಲೆ ಕಾರ್ಮೋಡ ಕವಿದಿದೆ' ಎನ್ನುತ್ತಾರೆ ಆಲನಹಳ್ಳಿಯ ವಿಜಯಾ ಸ್ಪೋರ್ಟ್ಸ್ ವೇರ್‌ನ ಮಾಲೀಕ ಗಣೇಶ್.

ಹಾಸನದಲ್ಲಿ ಗಾರ್ಮೆಂಟ್ಸ್ ಉದ್ಯಮವನ್ನೇ ನೆಚ್ಚಿಕೊಂಡು ಹತ್ತು ಸಾವಿರಕ್ಕೂ ಹೆಚ್ಚು ಕಾರ್ಮಿಕರಿದ್ದಾರೆ. ಇದೀಗ ಕೆಲಸವೂ ಇಲ್ಲದೆ, ಸಂಬಳವೂ ಇಲ್ಲದೆ ಸಂಕಷ್ಟದಲ್ಲಿದ್ದಾರೆ. ಅಸ್ಸಾಂ, ತಮಿಳುನಾಡು, ಬಿಹಾರ, ಪಶ್ಚಿಮ ಬಂಗಾಳದ ಕಾರ್ಮಿಕರು ಇಲ್ಲಿ ದುಡಿಯುತ್ತಿದ್ದರು. ಹಿಂದಿನ ವರ್ಷದ ಲಾಕ್‌ಡೌನ್ ಅವಧಿಯಲ್ಲಿ ಊರಿಗೆ ಹೋಗಿದ್ದವರಲ್ಲಿ ಹಲವರು ಹಿಂತಿರುಗಿಲ್ಲ.

'ಲಾಕ್‌ಡೌನ್‌ನಿಂದಾಗಿ ಪೂರ್ಣ ಪ್ರಮಾಣದಲ್ಲಿ ಉದ್ಯಮ ನಡೆಯುತ್ತಿಲ್ಲ. ಇದರಿಂದ ಕೋಟ್ಯಂತರ ರೂಪಾಯಿ ನಷ್ಟವಾಗುತ್ತಿದೆ. ಸರ್ಕಾರ ಯಾವುದೇ ಪ್ಯಾಕೇಜ್ ಘೋಷಣೆ ಮಾಡಿದರೂ, ಪರಿಸ್ಥಿತಿ ಸರಿದಾರಿಗೆ ಬರುವುದು ಕಷ್ಟ' ಎನ್ನುತ್ತಾರೆ ಹಾಸನ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆ ಮಂಡಳಿ ಕಾರ್ಯದರ್ಶಿ ದಲಿಚಂದ್ ಜೈನ್.

ಉಸಿರಾದ ಪಿಪಿಇ ಕಿಟ್

ಚಿಕ್ಕಬಳ್ಳಾಪುರದಲ್ಲಿ ಶೆಲ್ ಅಪಾರೆಲ್ಸ್ ಸಂಸ್ಥೆ 2,500 ಜನರಿಗೆ ಉದ್ಯೋಗ ನೀಡಿತ್ತು. ಇದೀಗ ಇಲ್ಲಿ ಪಿಪಿಇ ಕಿಟ್ ತಯಾರಿಕೆಯಲ್ಲಿ ತಲ್ಲೀನರಾಗಿರುವವರು ಕೇವಲ 100 ಮಂದಿ. 'ಬಹಳಷ್ಟು ಕಾರ್ಮಿಕರು ಕರೆ ಮಾಡಿ ಕೆಲಸಕ್ಕೆ ಯಾವಾಗ ಬರಬೇಕು ಎಂದು ಕೇಳುತ್ತಿದ್ದಾರೆ. ನಮಗೆ ಯಾವುದೇ ಕೆಲಸ ದೊರೆತಿಲ್ಲ. ಹಾಗಾಗಿ ಕಾರ್ಮಿಕರಿಗೆ ಬನ್ನಿ ಎಂದು ಹೇಳಲು ಆಗದ ಸ್ಥಿತಿ ನಮ್ಮದಾಗಿದೆ' ಎನ್ನುತ್ತಾರೆ ಗಾರ್ಮೆಂಟ್ಸ್ ಕಂಪನಿ ಅಧಿಕಾರಿಗಳು.

ಮಾಹಿತಿ: ಡಿ.ಬಿ. ನಾಗರಾಜ್, ಕೆ.ಎಸ್. ಸುನಿಲ್, ಕೆ. ನರಸಿಂಹಮೂರ್ತಿ, ಡಿ.ಎಂ. ಕುರ್ಕೆ ಪ್ರಶಾಂತ್

ಜೀನ್ಸ್ ಗಾರ್ಮೆಂಟ್ಸ್: ₹ 10 ಕೋಟಿ ನಷ್ಟ

ಬಳ್ಳಾರಿ: 'ಜಿಲ್ಲೆಯ ಜೀನ್ಸ್ ಗಾರ್ಮೆಂಟ್ಸ್ ಉದ್ಯಮ ತಿಂಗಳ ಅವಧಿಯಲ್ಲೇ ₹ 10 ಕೋಟಿಯಿಂದ ₹ 15 ಕೋಟಿವರೆಗೆ ನಷ್ಟ ಅನುಭವಿಸಿದೆ' ಎನ್ನುತ್ತಾರೆ ಉದ್ಯಮಿ ಮಲ್ಲಿಕಾರ್ಜುನ.

'ನಗರದಲ್ಲಿ ಜೀನ್ಸ್ ಗಾರ್ಮೆಂಟ್ಸ್ ಉದ್ಯಮಿಗಳ ಸಂಖ್ಯೆ 500ಕ್ಕೂ ಹೆಚ್ಚು ಇದೆ. ಈಗ ಇಡೀ ಉದ್ಯಮ ನೆಲಕಚ್ಚಿದೆ. ಮೊದಲ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ನಮ್ಮ ಬಳಿ ಇದ್ದ ಕುಶಲ ಕೆಲಸಗಾರರು ಬೇರೆ ಕಡೆಗೆ ಸೇರಿಕೊಂಡಿದ್ದರು. ಹೊಸಬರಿಗೆ ಕೆಲಸ ಕಲಿಸಿ, ಎಲ್ಲವೂ ಸರಿಹೋಯಿತೆನ್ನುವ ಹೊತ್ತಿಗೆ ಎದುರಾದ ಎರಡನೇ ಅಲೆಯ ಲಾಕ್‌ಡೌನ್ ಮತ್ತೆ ಎಲ್ಲವನ್ನೂ ಹಾಳು ಮಾಡಿದೆ. ಮತ್ತೆ ಕೆಲಸಗಾರರು ಸಿಗುವುದಿಲ್ಲ' ಎಂದು ಅಲವತ್ತುಕೊಂಡರು.

ಬಳ್ಳಾರಿ ನಗರವೂ ಸೇರಿದಂತೆ ಸುತ್ತಮುತ್ತಲ ತಾಲ್ಲೂಕಿನ 10 ಸಾವಿರ ಕುಟುಂಬಗಳು ಈ ಉದ್ಯಮವನ್ನೇ ನೆಚ್ಚಿಕೊಂಡಿದ್ದು, ಹೆಣ್ಣುಮಕ್ಕಳೇ ಹೆಚ್ಚು ಅವಲಂಬಿತರು. ಅವರು ಬೇರೆ ಕೆಲಸಕ್ಕೂ ಹೋಗಲಾರದ ಪರಿಸ್ಥಿತಿಯಲ್ಲಿದ್ದಾರೆ.

'ಮನೆಯಲ್ಲೇ ಹೊಲಿಗೆ ಯಂತ್ರ ಇಟ್ಟುಕೊಂಡು ಪ್ಯಾಂಟ್ ಹೊಲಿದುಕೊಡುತ್ತಿದ್ದೆವು. ಈಗ ಕೆಲಸವೇ ಇಲ್ಲವಾಗಿದೆ. ಸಾಲ ಮಾಡುವುದು ಅನಿವಾರ್ಯ. ಆದರೆ ಎಲ್ಲಿಯೂ ಸಾಲ ದೊರಕುತ್ತಿಲ್ಲ' ಎಂದು ಗುತ್ತಿಗೆ ನೌಕರ ನಾಗರಾಜು ತಿಳಿಸಿದರು.

ಆಟೊಮೊಬೈಲ್ ಉದ್ಯಮಕ್ಕೆ ಲಾಕ್‌ಡೌನ್ ಪೆಟ್ಟು

• ಇ.ಎಸ್. ಸುಧೀಂದ್ರ ಪ್ರಸಾದ್

ಧಾರವಾಡ: ವಾಹನ ತಯಾರಿಕಾ ಕ್ಷೇತ್ರದ ದೊಡ್ಡ ಕೈಗಾರಿಕೆಗಳು ಭವಿಷ್ಯದ ತಂತ್ರಜ್ಞಾನ ಆಯ್ಕೆಯ ಗೊಂದಲದಲ್ಲಿರುವಾಗಲೇ ಎದುರಾದ ಲಾಕ್‌ಡೌನ್‌ನಿಂದಾಗಿ, ದೊಡ್ಡ ಮರದ ನೆರಳಿನಲ್ಲಿರುವ ಸಣ್ಣ ಕೈಗಾರಿಕೆಗಳು ತತ್ತರಿಸಿವೆ. ಮಾಲೀಕರು ನಷ್ಟದ ಸುಳಿಯಲ್ಲಿದ್ದರೆ, ನೌಕರರು ಉದ್ಯೋಗ ಕಳೆದುಕೊಳ್ಳುವ ಭೀತಿ ಎದುರಿಸುತ್ತಿದ್ದಾರೆ.

ಟಾಟಾ ಮೋಟಾರ್ಸ್, ಟಾಟಾ ಹಿಟಾಚಿ ಮತ್ತು ಟಾಟಾ ಮಾರ್ಕೊಪೋಲೊದಂತಹ ದೊಡ್ಡ ವಾಹನ ಕಾರ್ಖಾನೆಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳಿಗೆ ಪೂರಕ ಸಲಕರಣೆಗಳನ್ನು ಸಿದ್ಧಪಡಿಸಿ ನೀಡುವ ಸುಮಾರು 350ಕ್ಕೂ ಹೆಚ್ಚು ಸಣ್ಣ ಕೈಗಾರಿಕೆಗಳು ಇಲ್ಲಿನ ಬೇಲೂರು, ತಾರಿಹಾಳ ಮತ್ತು ಲಕ್ಕಮನಹಳ್ಳಿ ಕೈಗಾರಿಕಾ ಪ್ರದೇಶಗಳಲ್ಲಿವೆ.

ಸದಾ ಚಟುವಟಿಕೆಯಲ್ಲಿರುತ್ತಿದ್ದ ಇಲ್ಲಿನ ಬೇಲೂರು ಕೈಗಾರಿಕಾ ಪ್ರದೇಶ ಬಿಕೊ ಎನ್ನುತ್ತಿದೆ. ಹಲವು ಘಟಕಗಳು ಬಾಗಿಲು ಹಾಕಿವೆ. ಉಳಿದ ಕೆಲವು ವಾರದಲ್ಲಿ ಒಂದು ಅಥವಾ ಎರಡು ದಿನ ಮಾತ್ರ ತೆರೆದಿರುತ್ತವೆ. ಕಾರ್ಮಿಕರು ಉದ್ಯೋಗ ನಷ್ಟ ಮತ್ತು ವೇತನ ಕಡಿತದ ಭೀತಿಯ ನಡುವೆ 'ಎಲ್ಲವೂ ಸರಿ ಹೋಗಬಹುದು' ಎಂಬ ಆಶಾಭಾವದಲ್ಲಿದ್ದಾರೆ.

ಇಲ್ಲಿನ ಪರಿಸ್ಥಿತಿಯ ಮಾಹಿತಿ ನೀಡಿದ ಬೇಲೂರು ಕೈಗಾರಿಕಾ ಪ್ರದೇಶದಲ್ಲಿರುವ ಧಾರವಾಡ ಬೆಳವಣಿಗೆ ಕೇಂದ್ರ ಉದ್ಯಮಗಳ ಸಂಘದ ಅಧ್ಯಕ್ಷ ಶ್ರೀಕಾಂತ ಥಿಟೆ, 'ಹುಬ್ಬಳ್ಳಿ–ಧಾರವಾಡ ಕೈಗಾರಿಕಾ ಪ್ರದೇಶಗಳಲ್ಲಿರುವ ಬಹಳಷ್ಟು ಘಟಕಗಳು ಆಟೊಮೊಬೈಲ್ ಕ್ಷೇತ್ರಕ್ಕೆ ಸೇರಿವೆ. ಇವುಗಳು ಆಶ್ರಯಿಸಿರುವುದು ಟಾಟಾದಂತ ದೊಡ್ಡ ಕಂಪನಿಗಳನ್ನೇ. ಆದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಕೊರತೆ ಎದುರಾಗಿರುವುದರಿಂದ ಉತ್ಪಾದನೆಯೂ ಕಡಿಮೆಯಾಗಿದೆ. ಇದರ ನೇರ ಪರಿಣಾಮ ಸಣ್ಣ ಕೈಗಾರಿಕೆಗಳ ಮೇಲಾಗುತ್ತಿದೆ' ಎಂದರು.

'ಇಲ್ಲಿ ಕೆಲಸ ಮಾಡುತ್ತಿದ್ದ ಬಹಳಷ್ಟು ಕಾರ್ಮಿಕರು ಪಶ್ಚಿಮ ಬಂಗಾಳ ಮತ್ತು ಜಾರ್ಖಂಡ್‌ನವರು. ಅವರಲ್ಲಿ ಬಹುತೇಕರು ಮೊದಲ ಲಾಕ್‌ಡೌನ್ ನಂತರ ಹಿಂದಿರುಗಲೇ ಇಲ್ಲ. ಸ್ಥಳೀಯರನ್ನು ನೇಮಿಸಿಕೊಂಡು ಕೆಲಸ ಆರಂಭಿಸುವ ಹೊತ್ತಿಗೆ ಎರಡನೇ ಅಲೆ ಅಪ್ಪಳಿಸಿದೆ' ಎಂದು ಆತಂಕ ವ್ಯಕ್ತಪಡಿಸಿದರು.

'ಸದ್ಯದ ಪರಿಸ್ಥಿತಿಯಲ್ಲಿ ಆಟೊಮೊಬೈಲ್ ಕ್ಷೇತ್ರವೇ ಕವಲು ದಾರಿಯಲ್ಲಿದೆ. ಒಂದೊಮ್ಮೆ ವಿದ್ಯುತ್ ಚಾಲಿತ ವಾಹನಗಳೇ ಭವಿಷ್ಯ ಎಂದಾದರೆ ಈಗಿರುವ ಎಂಜಿನ್‌ಗೆ ಬಿಡಿಭಾಗ ಸಿದ್ಧಪಡಿಸುವ ಹಲವು ಕೈಗಾರಿಕೆಗಳು ಬಾಗಿಲು ಹಾಕುವುದರಲ್ಲಿ ಅನುಮಾನವೇ ಇಲ್ಲ' ಎಂಬುದು ಥಿಟೆ ಅವರ ಅಭಿಪ್ರಾಯ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 30-5-1996

• **ಸ್ಪರ್ಧೆಯಲ್ಲಿ ಸಿದ್ದರಾಮಯ್ಯ, ಪಟೇಲ್**

ಬೆಂಗಳೂರು, ಮೇ 29– ಪ್ರಧಾನಿಯಾಗಿ ನಿಯೋಜಿತರಾಗಿರುವ ಎಚ್.ಡಿ. ದೇವೇಗೌಡರು ತೆರವು ಮಾಡಲಿರುವ ಮುಖ್ಯಮಂತ್ರಿ ಪಟ್ಟಕ್ಕೆ ಏರಲು ಹಲವು ಸಚಿವ ಗಣ್ಯರು ಪೈಪೋಟಿಯನ್ನು ನಡೆಸಿದ್ದು, ರಾಜಧಾನಿಯಲ್ಲಿನ ರಾಜಕೀಯ ಚಟುವಟಿಕೆ ಒಮ್ಮೆಗೇ ಚುರುಕುಗೊಂಡಿದೆ.

ದಳ ಶಾಸಕಾಂಗದ ನೂತನ ನಾಯಕರಾಗಿ ಯಾರು ಆಯ್ಕೆ ಆಗಲಿದ್ದಾರೆ ಎನ್ನುವುದು ಈ ನಿಮಿಷದವರೆಗೂ ನಿಗೂಢವಾಗಿದೆ. ಆದರೆ, ಉಪಮುಖ್ಯಮಂತ್ರಿ ಜೆ.ಎಚ್. ಪಟೇಲ್, ಅರ್ಥ ಸಚಿವ ಸಿದ್ದರಾಮಯ್ಯ ಅವರ ನಡುವೆ ಈ ಹುದ್ದೆಗಾಗಿ ಪ್ರಬಲ ಪೈಪೋಟಿ ಸಾಗಿದೆ ಎಂದು ತಿಳಿದುಬಂದಿದೆ.

50 ವರ್ಷಗಳ ಹಿಂದೆ — ಭಾನುವಾರ, 30-5-1971

• **ನಿರಾಶ್ರಿತರ ನಿರ್ವಹಣೆ ವ್ಯವಸ್ಥೆ ಕೇಂದ್ರ ಸರ್ಕಾರ ವಹಿಸಿಕೊಳ್ಳಲು ಪಶ್ಚಿಮ ಬಂಗಾಳದ ತುರ್ತು ಸಂದೇಶ**

ಕಲ್ಕತ್ತ, ಮೇ 29– ಬಂಗ್ಲಾದೇಶದ ನಿರಾಶ್ರಿತರು ಭಾರೀ ಸಂಖ್ಯೆಯಲ್ಲಿ ಬರುತ್ತಿರುವುದರಿಂದ ಅವರ ನಿರ್ವಹಣೆಯ ವ್ಯವಸ್ಥೆಯನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳಬೇಕೆಂದು ಪಶ್ಚಿಮ ಬಂಗಾಳ ಸರ್ಕಾರ ತುರ್ತು ಸಂದೇಶವೊಂದನ್ನು ಕಳುಹಿಸಿದೆ.

ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಅಜಯಕುಮಾರ್ ಮುಖರ್ಜಿ ಅವರ ಜತೆ ಮಾತುಕತೆ ನಡೆಸಿದ ಅನಂತರ ಸುದ್ದಿಗಾರರ ಜತೆ ಮಾತನಾಡುತ್ತಿದ್ದ ಉಪಮುಖ್ಯ ಮಂತ್ರಿ ಬಿ.ಎಸ್. ನಹರ್ ಅವರು, 'ಮಳೆಗಾಲದ ಮುನ್ನಿನ ಮಳೆ ಆರಂಭವಾಗಿದೆ. ನಿರಾಶ್ರಿತರನ್ನು ನೋಡಿಕೊಳ್ಳುವುದು ನಮಗೆ ಅಸಾಧ್ಯ' ಎಂದರು.

ದಿನ ಭವಿಷ್ಯ — ಭಾನುವಾರ 30 ಮೇ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ರೋಹಿಣಿ ಚತುರ್ಥೀ ಗಂ. 5-58 (ಬೆ. 8-23) ಭಾನುವಾರ ನಿತ್ಯ ನಕ್ಷತ್ರ ಉತ್ತರಾಷಾಢ ಗಂ. 38-22 (ರಾ. 9-20) ಶುಕ್ಲ ನಾಮ ಯೋಗ ಗಂ 17-31 ಬಾಲವ ಕರಣ ಗಂ. 5-58 ವಿಷ ಶೇಷ ಗಂ. 3-35 ವಿಷ ಗಂ. 48-5 ಅಮೃತ ಗಂ. 23-22 : ರಾಹುಕಾಲ: ಮ.ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 5-58 ಸೂರ್ಯಾಸ್ತ: 6-38 ಅದೃಷ್ಟ ಸಂಖ್ಯೆ 1 6

ಮೇಷ: ಉದ್ಯೋಗ ಕ್ಷೇತ್ರದಲ್ಲಿ ಕಿರಿಕಿರಿಯುಂಟಾಗುವ ಸಾಧ್ಯತೆ. ಮಿತ್ರರಿಂದ ಆರ್ಥಿಕ ಸಹಾಯದ ಲಕ್ಷಣಗಳು ಕಂಡುಬರುತ್ತಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿ ಕಾಣುವಿರಿ.

ವೃಷಭ: ವೃತ್ತಿ ಸಮಸ್ಯೆಗಳಿಂದ ಮುಕ್ತರಾಗುವಿರಿ. ಪ್ರಯತ್ನಿಸುತ್ತಿರುವ ಕಾರ್ಯಗಳಲ್ಲಿನ ಆರ್ಥಿಕ ಸಂಪನ್ಮೂಲಗಳು ದೊರೆಯಲಿವೆ. ಹೊಸ ವ್ಯಾಪಾರ ಆರಂಭಿಸುವುದರಿಂದ ಯಶಸ್ಸನ್ನು ಸಾಧಿಸಲಿದ್ದೀರಿ.

ಮಿಥುನ: ಬಂಧುಗಳಲ್ಲಿನ ಭಿನ್ನಾಭಿಪ್ರಾಯ ಪರಿಹಾರವಾಗುವ ಸಾಧ್ಯತೆ. ವಿವೇಚನೆಯಿಂದ ಕಷ್ಟಗಳು ಪರಿಹಾರವಾಗುವವು. ಸಾಮಾಜಿಕ ಗೌರವಾದರಗಳು ಲಭಿಸಲಿವೆ. ಸಾಲಗಾರರ ಬಾಧೆಯಿಂದ ಮುಕ್ತಿ.

ಕರ್ಕಾಟಕ: ವಿನ್ಯಾಸಕಾರರು, ದರ್ಜಿಗಳು ಮುಂತಾದವರಿಗೆ ಉತ್ತಮ ದಿನ. ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ. ಮನಸ್ಸಿಗೆ ನೋವುಂಟುಮಾಡುವ ಮಾತುಗಳನ್ನು ಕೇಳಬೇಕಾದೀತು.

ಸಿಂಹ: ಗುರುಹಿರಿಯರ ಅನುಗ್ರಹ ನಿಮ್ಮದಾಗಲಿದೆ. ವಿಶೇಷ ಕಾರ್ಯವೊಂದನ್ನು ಕೈಗೆತ್ತಿಕೊಳ್ಳಲು ಸಹಕಾರದೊಂದಿಗೆ ಒತ್ತಡಗಳೂ ಬರುವ ಸಾಧ್ಯತೆ.

ಕನ್ಯಾ: ಭಾಗೀದಾರಿಯಿಂದಾಗಿ ನಷ್ಟ ಅನುಭವಿಸುವ ಸಾಧ್ಯತೆ ಇರುವುದರಿಂದ ಸ್ವತಂತ್ರವಾಗಿ ವ್ಯವಹರಿಸುವುದು ಉತ್ತಮ. ಹಿರಿಯರ ಒತ್ತಡಕ್ಕೆ ಮಣಿದು ದೂರದ ಪ್ರಯಾಣ. ಆರೋಗ್ಯದ ವಿಚಾರದಲ್ಲಿ ಸಂತಸ.

ತುಲಾ: ನಿಮ್ಮ ಪ್ರತಿಭೆಯನ್ನು ಗುರುತಿಸಿ ಮಾನ ಸಮ್ಮಾನಗಳು ದೊರಕುವ ಸಾಧ್ಯತೆ. ಚಿನ್ನ ಬೆಳ್ಳಿ ವ್ಯಾಪಾರದಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ಲಾಭ. ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಗತಿಯ ದಿನವಾಗಲಿದೆ.

ವೃಶ್ಚಿಕ: ಹಲವು ಅಡೆತಡೆಗಳ ನಡುವೆಯೂ ಹಮ್ಮಿಕೊಂಡ ಕೆಲಸದಲ್ಲಿ ಯಶಸ್ಸು. ಸಂಜೆಯ ವೇಳೆಗೆ ಹಬ್ಬದ ವಾತಾವರಣ. ಸಂಗಾತಿಯ ಸಹಕಾರದಿಂದಾಗಿ ಹೊಸ ಯೋಜನೆ ರೂಪಿಸುವಿರಿ.

ಧನು: ಸಂತಾನ ಭಾಗ್ಯ ಬಯಸುತ್ತಿರುವವರಿಗೆ ಸಂತಾನ ಪ್ರಾಪ್ತಿ. ಹಿರಿಯರೊಂದಿಗೆ ಸಂಭ್ರಮಿಸುವ ದಿನವಾಗುವುದು. ವಸ್ತ್ರಾಭರಣಗಳನ್ನು ಖರೀದಿಸುವ ಸಾಧ್ಯತೆಯೂ ಕಂಡುಬರುತ್ತಿದೆ.

ಮಕರ: ಅತಿಯಾದ ಸುತ್ತಾಟದಿಂದಾಗಿ ಬಳಲಿದವರಾಗಿ ದೈನಂದಿನ ಕಾರ್ಯಗಳಲ್ಲಿ ಉತ್ಸಾಹವನ್ನು ಕಳೆದುಕೊಳ್ಳುವಿರಿ. ಆರೋಗ್ಯದಲ್ಲಿಯೂ ಸ್ವಲ್ಪಮಟ್ಟಿನ ಏರುಪೇರಾಗುವ ಸಾಧ್ಯತೆ ಇದ್ದು ಆತಂಕಕ್ಕೆ ಕಾರಣವಿಲ್ಲ.

ಕುಂಭ: ಬಂಧುಗಳ ಆಗಮನದಿಂದಾಗಿ ಸಂತಸ. ಮಂಗಳ ಕಾರ್ಯವೇ ಮೊದಲಾದ ವಿಶೇಷ ಸಂದರ್ಭವೊಂದಕ್ಕೆ ಸಾಕ್ಷಿಯಾಗಲಿದ್ದೀರಿ. ಅವಿವಾಹಿತರಿಗೆ ಉತ್ತಮ ಸಂಬಂಧಗಳು ಕೂಡಿಬರಲಿವೆ.

ಮೀನ: ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡವರಿಗೆ ಹೆಚ್ಚಿನ ಯಶಸ್ಸು. ಸಹೋದರರಿಂದ ಸಹಾಯ ಸಹಕಾರಗಳು ದೊರಕಿ ಗೃಹ ನಿರ್ಮಾಣ ಕಾರ್ಯದಲ್ಲಿ ಯಶಸ್ಸನ್ನು ಹೊಂದುವಿರಿ.

ನಿಮ್ಮ ಜನ್ಮದಿನ 30-ಮೇ ಈ ದಿನವು ಅತ್ಯಂತ ಶುಭಕರವಾಗಿದ್ದು, ಹೊಸ ವ್ಯಾಪಾರವೊಂದನ್ನು ಪ್ರಾರಂಭಿಸುವ ಸಾಧ್ಯತೆ. ಸಾಮಾಜಿಕ ಸ್ಥಾನಮಾನಗಳು ಲಭ್ಯವಾಗಿ ವಿಶೇಷ ಗೌರವಾದರಗಳಿಗೆ ಪಾತ್ರರಾಗುವಿರಿ. ಆರೋಗ್ಯದ ಬಗ್ಗೆ ಸ್ವಲ್ಪಮಟ್ಟಿನ ಎಚ್ಚರಿಕೆ ಅಗತ್ಯ. ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಮನೆಯವರ ವಿಶ್ವಾಸಕ್ಕೆ ಪಾತ್ರರಾಗಲಿದ್ದೀರಿ.

ಪದಬಂಧ 4612 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರೂಢಿಯಲ್ಲಿರುವ ಕ್ರಮ (4)
3. ಅನ್ಯರಿಂದ ಸಲಹಲ್ಪಟ್ಟವನು! (4)
4.ಯಾವ ಧ್ವನಿಯೂ ಇರದ ಮೌನ (3)
5.ಕೊನೆಗೆ ಜಯವಿದ್ದರೂ ಇದು ಸೋಲು! (4)
7.ಆಯುಧಗಳನ್ನಿಡುವ ಕಟ್ಟಡ (4)
9.ಆಗಮಗಳನ್ನು ತಿಳಿದವನು (4)
11.ಕಸರತ್ತು ಮಾಡಿಯೇ ಹಾಕಿದ ಸಹಿ (4)
12.ವಿರಳವಾಗಿರುವ ಲಗ್ನ! (3)
14.ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು (4)
15.ಗಯ್ಯಾಳಿ ಮಾಡಿದ ನಿಂದೆ (4)

ಮೇಲಿಂದ ಕೆಳಕ್ಕೆ

1.ಎರಕಹೊಯ್ದು ಬಿಂಬವನ್ನು ಮಾಡಿಕೊಳ್ಳುವ ಸಾಧನ (2)
2.ಗೌರವಕ್ಕೆ ಪಾತ್ರನಾದವನು (4)
3.ಬೇರೆಯವರ ಅಧೀನದಲ್ಲಿರುವಿಕೆ (4)
6.ಉತ್ತರದ ಕಡೆಯವರ ಮಂಚ (3)
8.ಹಾಡುಗಾರ ಇಲ್ಲಿದ್ದಾನೆ (3)
10.ಮಧುರವಾದ ಧ್ವನಿಯಿದು (4)
11.ಈತ ಗೋಪಾಲಕ (4)
13.ಶಂಕೆಯೇ ಬೇಡ ಇದು ಹತೋಟಿ! (2)

1			2	■	3			
	■	■		■		■	■	■
■	■	■	4			■	■	■
5	6			■	7		8	
■		■	■	■	■	■		■
9			10	■	11			
■	■	■	12			■	■	■
■	■	■		■		■	■	13
14				■	15			

4611ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಲೋಹಚುಂಬಕ 3.ಪ್ರಭಾವ 5.ಪವನಸುತ 7.ವಸಂತ 8.ನಾಮಕರಣ 10.ಒನಕೆ 11.ಮೂಕರೋದನೆ 14.ಮೆಟ್ಟಿಲು 15.ರಾವುಕನ್ನಡಿ

ಮೇಲಿಂದ ಕೆಳಕ್ಕೆ:
1.ಲೋಲುಪ 2.ಚುಂಬನ 4.ವನಿತ 6.ಸುಗಮ 7.ವರುಣ 8.ನಾಚಿಕೆ 9.ರಸಿಕ 10.ಒಲುಮೆ 12.ರೋಚಕ 13.ನೆಗಡಿ

ಸುಡೊಕು 4998

					7		1	
		7	6		4	2		9
	2	9	3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4997 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಕೇಂದ್ರ ಸರ್ಕಾರ ಕರ್ನಾಟಕಕ್ಕೆ ತಾರತಮ್ಯ ಮಾಡುತ್ತಿದೆಯೆ?
ಸಂವಾದದಲ್ಲಿ ಭಾಗವಹಿಸುವವರು

ಬಂಡೆಪ್ಪ ಕಾಶೆಂಪೂರ
ಶಾಸಕ, ಜೆಡಿಎಸ್ ಶಾಸಕಾಂಗ ಪಕ್ಷದ ಉಪನಾಯಕ

ವಿ.ಎಸ್.ಉಗ್ರಪ್ಪ
ಕಾಂಗ್ರೆಸ್ ಮುಖಂಡ

ಅರವಿಂದ ಬೆಲ್ಲದ
ಶಾಸಕ, ಹುಬ್ಬಳ್ಳಿ-ಧಾರವಾಡ ನಗರ ಜಿಲ್ಲಾ ಬಿಜೆಪಿ ಅಧ್ಯಕ್ಷ

ಸೋಮವಾರ, 31-05-2021 ಸಮಯ- ಮಧ್ಯಾಹ್ನ 12 ರಿಂದ 1

ಪ್ರಜಾವಾಣಿ facebook LIVE fb.com/prajavani.net
ಕರ್ನಾಟಕದ ಸಾಕ್ಷಿ ಪ್ರಜ್ಞೆ
ಎಚ್.ಎಸ್.ದೊರೆಸ್ವಾಮಿ ಅವರಿಗೆ ನಮನ
ನುಡಿ ನಮನ



ರಾಮಚಂದ್ರ ಗುಹ, ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು, ಬಿ.ಎಲ್.ಶಂಕರ್, ಎ.ಜೆ.ಸದಾಶಿವ, ಚಿರಂಜೀವಿ ಸಿಂಗ್, ಬರಗೂರು ರಾಮಚಂದ್ರಪ್ಪ, ಸಿ. ಸೋಮಶೇಖರ್, ಎಸ್.ಜಿ. ಸಿದ್ದರಾಮಯ್ಯ, ಚಂದನ್ ಗೌಡ, ಟಿ.ಎಸ್. ನಾಗಾಭರಣ, ಎ.ಟಿ. ರಾಮಸ್ವಾಮಿ, ಮಾವಳ್ಳಿ ಶಂಕರ್, ಮುಖ್ಯಮಂತ್ರಿ ಚಂದ್ರು, ಕೋಡಿಹಳ್ಳಿ ಚಂದ್ರಶೇಖರ್, ರವಿ ಕೃಷ್ಣಾರೆಡ್ಡಿ, ಬಿ.ವಿ.ರಾಜಾರಾಂ, ರಾಜು ದೊರೆಸ್ವಾಮಿ, ಎಚ್.ಎಸ್.ವೆಂಕಟೇಶಮೂರ್ತಿ

ಗೀತ ನಮನ
ಪುತ್ತೂರು ನರಸಿಂಹ ನಾಯಕ್ • ಸುರೇಖಾ ಹೆಗಡೆ ಶಿವಮೊಗ್ಗ • ಸಂಗೀತಾ ಕಟ್ಟಿ • ಮಂಗಳಾ ರವಿ • ಪಂಚಮ್ ಹಳಬಂಡಿ • ಸವಿತಾ ಗಣೇಶ್ ಪ್ರಸಾದ್
ನಿರ್ವಹಣೆ: ಶ್ರೀನಿವಾಸ್ ಜಿ ಕಪ್ಪಣ್ಣ
ಪ್ರಜಾವಾಣಿ ಫೇಸ್‌ಬುಕ್ ಲೈವ್ ಇಂದು ಸಂಜೆ 5ರಿಂದ

ಕೇಂದ್ರ ಸರ್ಕಾರದ ದ್ವೇಷದ ರಾಜಕಾರಣಕ್ಕೆ ಮಮತಾ ಸಿಟ್ಟು

‘ಮೋದಿ ಪಾದ ಮುಟ್ಟಲೂ ಸಿದ್ಧ’

ಪ್ರಜಾವಾಣಿ ವಾರ್ತೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಮುಖ್ಯಕಾರ್ಯದರ್ಶಿ ವರ್ಗಾವಣೆ ಪ್ರಕರಣವು ಕೇಂದ್ರ ಸರ್ಕಾರ ಮತ್ತು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ನಡುವೆ ಜಟಾಪಟಿಗೆ ಕಾರಣವಾಗಿದೆ.

‘ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ದ್ವೇಷದ ರಾಜಕಾರಣದಲ್ಲಿ ತೊಡಗಿದೆ’ ಎಂದು ಮಮತಾ ಅವರು ಶನಿವಾರ ಆರೋಪಿಸಿದ್ದಾರೆ. ರಾಜ್ಯದ ಮುಖ್ಯ ಕಾರ್ಯದರ್ಶಿ ಅಲಪನ್ ಬಂಡೋಪಾಧ್ಯಾಯ ಅವರನ್ನು ವಾಪಸ್ ಕರೆಸಿಕೊಂಡ ನಿರ್ಧಾರವನ್ನು ಕೇಂದ್ರ ಸರ್ಕಾರ ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿರುವ ಅವರು, ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಹಿರಿಯ ಅಧಿಕಾರಿಯ ಸೇವೆ ರಾಜ್ಯಕ್ಕೆ ಅಗತ್ಯವಾಗಿದೆ ಎಂದು ಪ್ರತಿಪಾದಿಸಿದ್ದಾರೆ.

‘ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಬಂಗಾಳ ವಿಧಾನ ಸಭಾ ಚುನಾವಣೆಯ ಸೋಲಿನಿಂದ ಇನ್ನೂ ಹೊರಬಂದಿಲ್ಲ. ಹೀಗಾಗಿ ತಮ್ಮ ಸರ್ಕಾರಕ್ಕೆ ಪ್ರತಿ ಹಂತದಲ್ಲೂ ಸಮಸ್ಯೆಗಳನ್ನು ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ’ ಎಂದು ಮಮತಾ ದೂರಿದ್ದಾರೆ.

‘ವಾಪಸ್ ಕರೆಸಿಕೊಳ್ಳುವಂತಹ ಯಾವ ತಪ್ಪನ್ನು ಮುಖ್ಯ ಕಾರ್ಯದರ್ಶಿ ಮಾಡಿದ್ದಾರೆ. ಕೋವಿಡ್ ಬಿಕ್ಕಟ್ಟಿನ ಸಮಯದಲ್ಲಿ ಕೇಂದ್ರ ತೆಗೆದುಕೊಂಡಿರುವ ಈ ಕ್ರಮವು ದ್ವೇಷದ ರಾಜಕಾರಣವನ್ನು ತೋರಿಸುತ್ತದೆ’ ಎಂದಿದ್ದಾರೆ.

ಬಂಡೋಪಾಧ್ಯಾಯ ಅವರು ದೆಹಲಿಯಲ್ಲಿರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಮೇ 31ರಂದು ವರದಿ ಮಾಡಿಕೊಳ್ಳಬೇಕು ಎಂದು ಕೇಂದ್ರ ತಿಳಿಸಿತ್ತು. ನಿವೃತ್ತರಾಗಿದ್ದ ಬಂಡೋಪಾಧ್ಯಾಯ ಅವರ ಸೇವಾವಧಿಯನ್ನು ಮೂರು ತಿಂಗಳು ವಿಸ್ತರಿಸುವಂತೆ ಮಮತಾ ಇತ್ತೀಚೆಗೆ ಕೇಂದ್ರಕ್ಕೆ ಕೋರಿದ್ದರು. ಅದರನ್ವಯ ಕೇಂದ್ರ ಮೇ 24ರಂದು ಸೇವಾವಧಿ ವಿಸ್ತರಣೆ ಆದೇಶ ಹೊರಡಿಸಿತ್ತು.

ಪ್ರತಿಪಕ್ಷದ ಮುಖಂಡರು ಬಂದಿದ್ದೇಕೆ?

ಚಂಡಮಾರುತದಿಂದ ಆಗಿರುವ ಹಾನಿಯ ಕುರಿತು ಪ್ರಧಾನಿ ಮೋದಿಯವರು ನಡೆಸಿದ ಪರಿಶೀಲನಾ ಸಭೆಯನ್ನು ಕೈಬಿಟ್ಟದ್ದಕ್ಕೆ ಎದುರಾಗಿರುವ ಟೀಕೆಗಳಿಗೆ ಮಮತಾ ಉತ್ತರಿಸಿದ್ದಾರೆ. ‘ಸಭೆಯು ಪ್ರಧಾನಿ ಮತ್ತು ಮುಖ್ಯಮಂತ್ರಿ ನಡುವೆ ನಡೆಯಬೇಕಿತ್ತು. ಆದರೆ ಈ ಸಭೆಗೆ ಬಿಜೆಪಿ ನಾಯಕರನ್ನು ಏಕೆ ಕರೆಸಲಾಯಿತು’ ಎಂದು ಪ್ರಶ್ನಿಸಿದ್ದಾರೆ.

ಮಮತಾ ಅವರು ಒಂದು ಕಾಲದ ಆಪ್ತ ಹಾಗೂ ಈಗ ಬಿಜೆಪಿಯಲ್ಲಿರುವ ಸುವೇಂದು ಅಧಿಕಾರಿ ಅವರು ಸಭೆಯಲ್ಲಿ ಹಾಜರಿದ್ದರು.

ಕೆಲ ದಿನಗಳ ಹಿಂದೆ ಗುಜರಾತ್ ಮತ್ತು ಒಡಿಶಾದಲ್ಲಿ ನಡೆದ ಚಂಡಮಾರುತ ಹಾನಿ ಕುರಿತ ಪರಿಶೀಲನಾ ಸಭೆಗೆ ಪ್ರತಿಪಕ್ಷಗಳ ಮುಖಂಡರನ್ನು ಕರೆದಿರಲಿಲ್ಲ ಎಂದು ಮಮತಾ ನೆನಪು ಮಾಡಿದ್ದಾರೆ.

ಕಲೈಕುಂಡ ವಾಯುನೆಲೆಯಲ್ಲಿ ಪ್ರಧಾನಿ ಅವರನ್ನು ಮಮತಾ ತುಂಬಾ ಸಮಯ ಕಾಯಿಸಿದರು ಎಂಬುದಾಗಿ ಬಿಜೆಪಿ ಮಾಡುತ್ತಿರುವ ಆರೋಪಗಳನ್ನು ಮುಖ್ಯಮಂತ್ರಿ ಅಲ್ಲಗಳೆದಿದ್ದಾರೆ. ‘ನನ್ನ ಹೆಲಿಕಾಪ್ಟರ್ ಲ್ಯಾಂಡಿಂಗ್ ಆಗುವುದನ್ನು 20 ನಿಮಿಷ ಮುಂದೂಡಲಾಯಿತು. ಎಸ್‌ಪಿಜಿ ಅಧಿಕಾರಿಗಳು ಕನಿಷ್ಠ ಒಂದು ಗಂಟೆ ಕಾಯಬೇಕು ಎಂದು ತಿಳಿಸಿದ್ದರು’ ಎಂದು ಅವರು ವಿವರಣೆ ನೀಡಿದ್ದಾರೆ.

ಮುಖ್ಯ ಕಾರ್ಯದರ್ಶಿಯು ಬಂಗಾಳಿ ಆಗಿರುವುದರಿಂದ ಅವರ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುತ್ತಾರೆ ಎಂದರೆ ನನಗೆ ಅಚ್ಚರಿಯಾಗುತ್ತದೆ
ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಸಭೆಗೆ ಬಾರದೇ ಪ್ರಧಾನಿ ಅವರಿಗೆ ಮಮತಾ ಅಪಮಾನ ಮಾಡಿದ್ದಾರೆ. ತನ್ನ ನಿಲುವಿನಿಂದ ಸೊಕ್ಕು ಮತ್ತು ಸಣ್ಣತನದ ರಾಜಕೀಯ ಪ್ರದರ್ಶಿಸಿದ್ದಾರೆ
ಸುವೇಂದು ಅಧಿಕಾರಿ, ಬಿಜೆಪಿ ಮುಖಂಡ

‘ರಾಜ್ಯದ ಜನರಿಗಾಗಿ ಮೋದಿ ಅವರ ಪಾದ ಮುಟ್ಟಲೂ ಸಿದ್ಧ’ ಎಂದು ಮಮತಾ ಘೋಷಿಸಿದ್ದಾರೆ. ಕೇಂದ್ರದ ಸಂಕುಚಿತ ಮನಸ್ಥಿತಿಯಿಂದಾಗಿ ತಮಗೆ ಹಾಗೂ ಬಂಡೋಪಾಧ್ಯಾಯ ಅವರಿಗೆ ಅವಮಾನ ಆಗಿದೆ ಎಂದಿದ್ದಾರೆ.

‘ಅಹಂನಿಂದ ಲಸಿಕಾ ಅಭಿಯಾನಕ್ಕೆ ಹಿನ್ನಡೆ’

ಪ್ರಜಾವಾಣಿ ವಾರ್ತೆ

ಪ್ರಭಾಕರ

ಬೆಂಗಳೂರು: ‘ಕೋವಿಡ್ ಲಸಿಕೆ ಅಭಿಯಾನದ ವಿಚಾರದಲ್ಲಿ ಭಾರತವು ದೊಡ್ಡ ಗೊಂದಲದಲ್ಲಿದೆ. ಸುಲಲಿತವಾಗಿ ದೊಡ್ಡ ಪ್ರಮಾಣದ ಲಸಿಕಾ ಅಭಿಯಾನಗಳನ್ನು ನಡೆಸಿದ ಅನುಭವ ಹೊಂದಿರುವ ದೇಶವು ಕೆಲವರ ‘ಅಹಂ’ ಹಾಗೂ ಮುನ್ನೋಟದ ಕೊರತೆಯಿಂದಾಗಿ ಭಾರಿ ಹಿನ್ನಡೆ ಅನುಭವಿಸುದಂತಾಗಿದೆ’ ಎಂದು ಅರ್ಥಶಾಸ್ತ್ರಜ್ಞ ಪರಕಾಲ ಪ್ರಭಾಕರ ಟೀಕಿಸಿದ್ದಾರೆ. ಇವರು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ.

ತಮ್ಮ ಯೂಟ್ಯೂಬ್ ವಾಹಿನಿಯ ‘ಮಿಡ್ ವೀಕ್ ಮ್ಯಾಟರ್ಸ್’ ಕಾರ್ಯಕ್ರಮದಲ್ಲಿ ಅವರು ಈ ಬಗ್ಗೆ ಮಾತನಾಡಿದ್ದಾರೆ.

ರಾಜ್ಯಗಳಿಗೆ ಅನ್ಯಾಯ

ತಯಾರಿಕಾ ಸಂಸ್ಥೆಗಳಿಂದ ₹ 150ರ ಬೆಲೆಗೆ ಲಸಿಕೆ ಖರೀದಿಸಿದ್ದ ಕೇಂದ್ರವು ರಾಜ್ಯಗಳಿಗೆ ವಿತರಣೆಯ ಸಂದರ್ಭ ಬಂದಾಗ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಅನುಮತಿ ನೀಡಿತು. ಕಂಪನಿಗಳು ಏಕಪಕ್ಷೀಯವಾಗಿ ದರವನ್ನು ಹೆಚ್ಚಿಸಿದವು. ಜನರಿಗೆ ಉಚಿತವಾಗಿ ಲಸಿಕೆ ನೀಡಲು ತೀರ್ಮಾನಿಸಿದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಈ ಮೂಲಕ ಅನ್ಯಾಯ ಮಾಡಿದೆ ಎಂದು ಪ್ರಭಾಕರ ಆರೋಪಿಸಿದ್ದಾರೆ.

ರಾಜ್ಯಗಳೇ ಲಸಿಕೆ ಖರೀದಿಸಿ ಜನರಿಗೆ ಕೊಟ್ಟ ಬಳಿಕ, ಪ್ರಧಾನಿಯ ಚಿತ್ರವಿರುವ ಲಸಿಕೆಯ ಪ್ರಮಾಣಪತ್ರವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಕೇಂದ್ರ ಸರ್ಕಾರವು ನೈತಿಕವಾಗಿ ಇದನ್ನು ಹೇಗೆ ಸಮರ್ಥಿಸಿಕೊಳ್ಳುತ್ತದೆ, ಇವೆಲ್ಲವೂ ವಿಶ್ವಗುರು ಎನಿಸಿಕೊಳ್ಳುವವರ ಲಕ್ಷಣವೇ ಎಂದು ಅವರು ಪ್ರಶ್ನಿಸಿದ್ದಾರೆ.

‘ದೇಶವು ಲಸಿಕೆಯ ಭಾರಿ ಕೊರತೆ ಎದುರಿಸುತ್ತಿದೆ. ದಿನದಿಂದ ದಿನಕ್ಕೆ ಲಸಿಕೆ ನೀಡುವ ಸಂಖ್ಯೆ ಕಡಿಮೆಯಾಗುತ್ತಿದೆ. ಮುಂದಿನ ದಿನಗಳಲ್ಲಿ ಎಷ್ಟು ಡೋಸ್‌ಗಳು ಲಭ್ಯವಾಗಬಹುದು ಎಂಬುದರ ಬಗ್ಗೆ ಖಚಿತತೆ ಇಲ್ಲ. ಕೇಂದ್ರದ ತಪ್ಪು ನೀತಿಗಳಿಂದಾಗಿ ರಾಜ್ಯಗಳು ಪರದಾಡುವಂತಾಗಿದೆ ವಾಸ್ತವವನ್ನು ಮುಚ್ಚಿಟ್ಟು, ಸಕಾರಾತ್ಮಕತೆಯನ್ನು ತೋರಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

‘ನನ್ನ ದೃಷ್ಟಿಯಲ್ಲಿ ಕೋವಿಡ್‌ನಿಂದಾಗಿ ಸಾಯುವವರು ಬರಿಯ ಸಂಖ್ಯೆಯಲ್ಲ, ಅವರ ಕುಟುಂಬ, ಬಂಧುಗಳು, ಸ್ನೇಹಿತರು ಎಲ್ಲರನ್ನೂ ಕಣ್ಮುಂದೆ ತರಬೇಕು. ದೇಶದ ಜನರಿಗೆ ಇಂಥ ಸ್ಥಿತಿಯನ್ನು ತಂದಿಟ್ಟವರು ನಾನು ನಂಬಿದ ದೇವರೇ ಆಗಿದ್ದರೂ ಅವರನ್ನು ಹೊಣೆಯಾಗಿಸಲು ನಾನು ಬಯಸುತ್ತೇನೆ. ನಮ್ಮ ದೇಶಕ್ಕೆ ಹೀಗೇಕೆ ಮಾಡಿದಿರಿ, ನಮ್ಮನ್ನೇಕೆ ಕುಸಿಯುವಂತೆ ಮಾಡಿದಿರಿ, ಎಂಬ ಪ್ರಶ್ನೆಗೆ ಅವರು ಉತ್ತರ ಕೊಡಬೇಕು’ ಎಂದಿದ್ದಾರೆ.

‘ಅಗಾಧ ಪ್ರಮಾಣದಲ್ಲಿ ಲಸಿಕೆಯ ಅಗತ್ಯ ಇದೆ ಎಂದು ತಿಳಿದಿದ್ದರೂ ದೇಶದ ಎರಡೇ ಎರಡು ತಯಾರಿಕಾ ಸಂಸ್ಥೆಗಳ ಮುಂದೆ ಸರ್ಕಾರ ಇಟ್ಟಿರುವ ಬೇಡಿಕೆ ಸುಮಾರು 31 ಕೋಟಿ ಡೋಸ್ ಮಾತ್ರ. ಸರ್ಕಾರದ ಈ ನಡೆಯ ಉದ್ದೇಶವೇನೆಂಬುದು ಅರ್ಥವಾಗುತ್ತಿಲ್ಲ. ಫೈಝರ್ ಕಂಪನಿಯು ಭಾರತಕ್ಕೆ ಬರಲು ಆರಂಭದಲ್ಲೇ ಸಿದ್ಧವಿತ್ತು. ಹೀಗಿದ್ದರೂ ಅವಕಾಶ ನೀಡಲಿಲ್ಲವೇಕೆ? ಶೇ 80ರಷ್ಟು ಜನರಿಗೆ ಲಸಿಕೆ ನೀಡಬೇಕಾದರೂ ನಮಗೆ ಕನಿಷ್ಠ 180 ಕೋಟಿ ಡೋಸ್ ಬೇಕು. ಇದೇ ತಯಾರಕರನ್ನು ಅವಲಂಬಿಸಬೇಕಾದರೆ ಈ ವರ್ಷದಲ್ಲಿ ಎಲ್ಲರಿಗೂ ಲಸಿಕೆ ನೀಡುವುದು ಅಸಾಧ್ಯ’ ಎಂದಿದ್ದಾರೆ.

ಪ್ರಜಾವಾಣಿ DH DECCAN HERALD
ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 25 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 28 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ–ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ರಾಜ್ಯಗಳಿಗೆ ರೆಮ್‌ಡಿಸಿವಿರ್ ಹಂಚಿಕೆ ನಿಲ್ಲಿಸಿದ ಕೇಂದ್ರ

ನವದೆಹಲಿ (ಪಿಟಿಐ): ‘ಕೋವಿಡ್ ಚಿಕಿತ್ಸೆಗೆ ಬಳಸುವ ರೆಮ್‌ಡಿಸಿವಿರ್ ಔಷಧದ ಪೂರೈಕೆ ಈಗ ಬೇಡಿಕೆಗಿಂತಲೂ ಹೆಚ್ಚಾಗಿದೆ. ಹೀಗಾಗಿ ಇದನ್ನು ರಾಜ್ಯಗಳಿಗೆ ಹಂಚಿಕೆ ಮಾಡುವುದನ್ನು ನಿಲ್ಲಿಸಲಾಗಿದೆ’ ಎಂದು ಕೇಂದ್ರದ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಮನ್ಸುಖ್ ಎಲ್. ಮಾಂಡವೀಯ ಶನಿವಾರ ತಿಳಿಸಿದ್ದಾರೆ.

‘ಏ.11 ರಂದು ರೆಮ್‌ಡಿಸಿವಿರ್ ಪೂರೈಕೆ ದಿನಕ್ಕೆ ಕೇವಲ 33 ಸಾವಿರ ವಯಲ್ ಇತ್ತು. ಈಗ ದಿನಕ್ಕೆ 3.50 ಲಕ್ಷ ವಯಲ್ ರೆಮ್‌ಡಿಸಿವಿರ್ ಪೂರೈಕೆ ಆಗುತ್ತಿದೆ. ಮೊದಲು 20 ರೆಮ್‌ಡಿಸಿವಿರ್ ತಯಾರಿಕಾ ಘಟಕಗಳಿದ್ದವು ಈಗ ಅದನ್ನು 60ಕ್ಕೆ ಹೆಚ್ಚಿಸಲಾಗಿದೆ. ತುರ್ತು ಸಂದರ್ಭಗಳಿಗಾಗಿ 50 ಲಕ್ಷ ವಯಲ್‌ನಷ್ಟು ರೆಮ್‌ಡಿಸಿವಿರ್ ಔಷಧವನ್ನು ಸಂಗ್ರಹಿಸಿಡಲು ಸರ್ಕಾರ ನಿರ್ಧರಿಸಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ.

ರೆಮ್‌ಡಿಸಿವಿರ್‌ಗೆ ದೇಶದಲ್ಲಿ ಬೇಡಿಕೆ ಹೆಚ್ಚಾದ ಕಾರಣ ಏ.11ರಂದು ಅದರ ರಫ್ತನ್ನು ಕೇಂದ್ರ ಸರ್ಕಾರ ಸ್ಥಗಿತಗೊಳಿಸಿತ್ತು.

‘ಪೋಷಕರನ್ನು ಕಳೆದುಕೊಂಡ ಮಕ್ಕಳ ಮಾಹಿತಿ ನೀಡಿ’

ನವದೆಹಲಿ (ಪಿಟಿಐ): ಕೋವಿಡ್‌ನಿಂದ ಪೋಷಕರನ್ನು ಕಳೆದುಕೊಂಡಿರುವ ಮಕ್ಕಳ ಬಗೆಗಿನ ಮಾಹಿತಿಯನ್ನು ಒದಗಿಸುವಂತೆ ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಎನ್‌ಸಿಪಿಸಿಆರ್) ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದೆ.

ಇತ್ತೀಚೆಗೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವರದಿಯಾದ ಪ್ರಕಾರ ಕೋವಿಡ್‌ನಿಂದ ತಂದೆ ತಾಯಿಯನ್ನು ಕಳೆದುಕೊಂಡು ಸುಮಾರು 577 ಮಕ್ಕಳು ಅನಾಥರಾಗಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ತಿಳಿಸಿದ್ದರು.

ಆಯೋಗದ ‘ಬಾಲ ಸ್ವರಾಜ್’ ತಾಣದಲ್ಲಿ ರಾಜ್ಯಗಳ ಎಲ್ಲಾ ಜಿಲ್ಲೆಗಳ ಅಧಿಕಾರಿಗಳು ಪೋಷಕರನ್ನು ಕಳೆದುಕೊಂಡ ಮಕ್ಕಳ ಕುರಿತ ಮಾಹಿತಿಯನ್ನು ಒದಗಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿದ ಒಂದು ದಿನದ ನಂತರ ಎನ್‌ಸಿಪಿಸಿಆರ್ ಈ ಮಾಹಿತಿ ಕೇಳಿದೆ.

ಬಾಲ ಸ್ವರಾಜ್ ಎನ್‌ಸಿಪಿಸಿಆರ್‌ನ ಒಂದು ಆನ್‌ಲೈನ್ ತಾಣವಾಗಿದ್ದು, ಮಕ್ಕಳ ಆರೈಕೆ ಮತ್ತು ರಕ್ಷಣೆ ಬಗ್ಗೆ ಗಮನ ಹರಿಸುತ್ತದೆ.

‘ಸದ್ಯದ ಕೋವಿಡ್ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಪೋಷಕರನ್ನು ಕಳೆದುಕೊಂಡ ಮಕ್ಕಳನ್ನು ಪತ್ತೆ ಹಚ್ಚುವ ಜಾಲತಾಣದ ಸೇವೆಯನ್ನು ಆಯೋಗ ವಿಸ್ತರಿಸಿದೆ. ಕೋವಿಡ್ ಆರೈಕೆ ಹೆಸರಿನ ತಾಣದಲ್ಲಿ ಸಂಬಂಧಿಸಿದ ಅಧಿಕಾರಿಗಳು ಮಾಹಿತಿ ಒದಗಿಸಬೇಕು’ ಎಂದು ಎನ್‌ಸಿಪಿಸಿಆರ್ ಸೂಚಿಸಿದೆ.

ಬಹುರಾಷ್ಟ್ರೀಯ ಕಂಪನಿ ತೊರೆದು ಸೇನೆ ಸೇರಿದ ಹುತಾತ್ಮ ಯೋಧನ ಪತ್ನಿ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಪುಲ್ವಾಮದಲ್ಲಿ ಹುತಾತ್ಮರಾದ ಮೇಜರ್ ವಿಭೂತಿ ಶಂಕರ್ ಧೌಂಡಿಯಾಲ್ ಅವರ ಪತ್ನಿ ನಿಖಿತಾ ಕೌಲ್ ಸೇನೆ ಸೇರಿದ್ದಾರೆ.

ಚೆನ್ನೈನ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸೇನೆಯ ಉತ್ತರ ವಿಭಾಗದ ಕಮಾಂಡ್‌ನ ಲೆಫ್ಟಿನೆಂಟ್ ಜನರಲ್ ವೈ.ಕೆ ಜೋಶಿ ಅವರು ನಿಖಿತಾ ಅವರ ಭುಜಕ್ಕೆ ‘ಸ್ಟಾರ್’ ತೊಡಿಸಿದರು.

‘2019ರಲ್ಲಿ ಪುಲ್ವಾಮದಲ್ಲಿ ನಡೆದಿದ್ದ ದಾಳಿಯಲ್ಲಿ ಮೇಜರ್ ವಿಭೂತಿ ಶಂಕರ್ ಅವರು ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ್ದರು. ಇದೀಗ ಅವರ ಪತ್ನಿ ನಿಖಿತಾ ಕೌಲ್ ಅವರು ಭಾರತೀಯ ಸೇನೆಗೆ ಸೇರ್ಪಡೆಯಾಗುವ ಮೂಲಕ ತನ್ನ ಪತಿಗೆ ಗೌರವ ಸಲ್ಲಿಸಿದ್ದಾರೆ’ ಎಂದು ರಕ್ಷಣಾ ಸಚಿವಾಲಯದ ಉಧಂಪುರದ ಸಾರ್ವಜನಿಕ ಸಂಪರ್ಕ ಅಧಿಕಾರಿ ಟ್ವೀಟ್ ಮಾಡಿದ್ದಾರೆ.

ನಿತಿಕಾ ಕೌಲ್ ಶಾರ್ಟ್ ಸರ್ವಿಸ್ ಕಮಿಷನ್ (ಎಸ್‌ಎಸ್‌ಸಿ) ಪರೀಕ್ಷೆ ಬರೆದಿದ್ದರು. ಸೇನೆಗೆ ಸೇರಲು ದಿಲ್ಲಿಯ ಬಹುರಾಷ್ಟ್ರೀಯ ಕಂಪನಿಗೆ ರಾಜೀನಾಮೆ ನೀಡಿದ್ದರು. ಕಳೆದ ವರ್ಷ ನಡೆದ ಸಂದರ್ಶನದಲ್ಲಿ ತೇರ್ಗಡೆಗೊಂಡು ಒಂದು ವರ್ಷ ಕಠಿಣ ತರಬೇತಿಯನ್ನು ಪೂರೈಸಿದ್ದರು.

ಹುತಾತ್ಮ ಮೇಜರ್ ವಿಭೂತಿ ಶಂಕರ್ ಅವರಿಗೆ ಶೌರ್ಯ ಚಕ್ರ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಲೆಫ್ಟಿನೆಂಟ್ ಜನರಲ್ ವೈ.ಕೆ ಜೋಶಿ ಅವರು ನಿಖಿತಾ ಕೌಲ್ ಹೆಗಲಿಗೆ ಸ್ಟಾರ್ ತೊಡಿಸಿದರು

ಸಂಕ್ಷಿಪ್ತ ಸುದ್ದಿ

ಕೇರಳ ಲಾಕ್ ಡೌನ್ ವಿಸ್ತರಣೆ

ತಿರುವನಂತಪುರಂ (ಪಿಟಿಐ): ಕೋವಿಡ್ ಹಿನ್ನೆಲೆಯಲ್ಲಿ ಕೇರಳದಾದ್ಯಂತ ಲಾಕ್‌ಡೌನ್ ಅನ್ನು ಜೂನ್ 9ರವರೆಗೆ ವಿಸ್ತರಿಸಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದರು. ರಾಜ್ಯದಲ್ಲಿ ಮೇ 8ರಿಂದ ಲಾಕ್‌ಡೌನ್ ಜಾರಿಯಲ್ಲಿದೆ.

ಕೋವಿಡ್: ಶಾಸಕ ಸಾವು

ಗುವಾಹಟಿ: ಅಸ್ಸಾಂನ ಪ್ರಾದೇಶಿಕ ಪಕ್ಷ ಯುನೈಟೆಡ್ ಪೀಪಲ್ಸ್ ಪಾರ್ಟಿ ಲಿಬರಲ್‌ನ (ಯುಪಿಪಿಎಲ್) ತಮುಲ್‌ಪುರ ವಿಧಾನಸಭಾ ಕ್ಷೇತ್ರದ ಶಾಸಕ ಲೊಹೋ ರಾಮ್ ಬೊರೋ (63) ಶನಿವಾರ ಕೋವಿಡ್‌ನಿಂದ ನಿಧನರಾಗಿದ್ದಾರೆ. ಕಳೆದ ಬುಧವಾರ ಗೊಸಾಯಿಗಾಂವ್ ವಿಧಾನಸಭಾ ಕ್ಷೇತ್ರದ ಶಾಸಕ ಮಜೇಂದ್ರ ನರ್ಜರಿ ಕೋವಿಡ್‌ನಿಂದ ನಿಧನರಾಗಿದ್ದರು. ಇವರು ಬೊಡೋಲ್ಯಾಂಡ್ ಪೀಪಲ್ಸ್ ಫ್ರಂಟ್ ಪಕ್ಷಕ್ಕೆ ಸೇರಿದವರು.

ಒಎನ್‌ವಿ ಕುರುಪ್ ಸಾಹಿತ್ಯ ಪ್ರಶಸ್ತಿ ಹಿಂತಿರುಗಿಸಲು ವೈರಮುತ್ತು ನಿರ್ಧಾರ

ಚೆನ್ನೈ (ಪಿಟಿಐ): ‘ಮಿ ಟೂ’ ಆರೋಪ ಎದುರಿಸುತ್ತಿರುವ ತಮಿಳು ಚಿತ್ರರಂಗದ ಖ್ಯಾತ ಗೀತರಚನೆಕಾರ ವೈರಮುತ್ತು ಅವರು ತಮಗೆ ನೀಡಿರುವ ಒಎನ್‌ವಿ ಕುರುಪ್ ಸಾಹಿತ್ಯ ಪ್ರಶಸ್ತಿಯನ್ನು ಹಿಂತಿರುಗಿಸುವುದಾಗಿ ಹೇಳಿದ್ದಾರೆ.

‘ಕೆಲವರು ನನ್ನ ವಿರುದ್ಧ ವೈಯಕ್ತಿಕ ದ್ವೇಷ ಸಾಧಿಸುತ್ತಿದ್ದಾರೆ. ನನಗೆ ನೀಡಿರುವ ಪ್ರಶಸ್ತಿಯ ಬಗ್ಗೆ ಮರುಚಿಂತನೆ ಮಾಡುವಂತೆ ಒತ್ತಡ ಹೇರಲಾಗುತ್ತಿದೆ. ತೀರ್ಪುಗಾರರು ಮುಜುಗರ ಎದುರಿಸಬಾರದು ಎಂಬ ಕಾರಣಕ್ಕಾಗಿ ಒಎನ್‌ವಿ ಸಾಂಸ್ಕೃತಿಕ ಅಕಾಡೆಮಿಗೆ ಪ್ರಶಸ್ತಿಯನ್ನು ಹಿಂತಿರುಗಿಸುತ್ತಿದ್ದೇನೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ. ಇದರೊಂದಿಗೆ ವಿಡಿಯೊವೊಂದನ್ನು ಹಂಚಿಕೊಂಡಿದ್ದಾರೆ.

ತಮಿಳುನಾಡು, ಅಸ್ಸಾಂ ಅನಾಥ ಮಕ್ಕಳಿಗೆ ನೆರವು

ನವದೆಹಲಿ (ಪಿಟಿಐ): ತಮಿಳುನಾಡು, ಅಸ್ಸಾಂ ಸರ್ಕಾರಗಳೂ ಕೋವಿಡ್‌ನಿಂದ ಅನಾಥರಾದ ಮಕ್ಕಳಿಗೆ ನೆರವು ಘೋಷಿಸಿವೆ. ಪ್ರತಿ ಮಗುವಿಗೂ ₹5 ಲಕ್ಷ ಹಣಕಾಸು ನೆರವು ಹಾಗೂ ಪದವಿವರೆಗೆ ಉಚಿತ ಶಿಕ್ಷಣ ನೀಡುವುದಾಗಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಘೋಷಿಸಿದ್ದಾರೆ.

ಪ್ರತಿ ಮಗುವಿನ ಶಿಕ್ಷಣ ಮತ್ತು ಕೌಶಲಾಭಿವೃದ್ಧಿಗಾಗಿ ತಿಂಗಳಿಗೆ ₹3,500 ಹಣಕಾಸು ನೆರವು ನೀಡುವುದಾಗಿ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಹೇಳಿದ್ದಾರೆ. ಇಂತಹ ಮಕ್ಕಳಿಗೆ ವಸತಿ ಶಾಲೆಗಳಲ್ಲಿ ಶಿಕ್ಷಣ ನೀಡಲಿದ್ದು, ಖರ್ಚನ್ನು ಸರ್ಕಾರ ಭರಿಸಲಿದೆ ಎಂದರು.

ಮಹಾರಾಷ್ಟ್ರದ ವಸಾಯ್–ವಿರಾರ್ ಮಹಾನಗರ ಪಾಲಿಕೆಯು ಪ್ರತಿ ಮಗುವಿಗೆ ವಾರ್ಷಿಕ ₹24,000 ಹಣಕಾಸು ನೆರವು ಘೋಷಿಸಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಮತಿ ಚಿಕ್ಕಕೆಂಪಮ್ಮ
ದಿವಂಗತ ಶ್ರೀ ಮೇಸ್ತ್ರಪ್ಪರೆಡ್ಡಿ ರವರ ಧರ್ಮಪತ್ನಿ ಜಮೀನ್ದಾರರು ಬಂಡೇಮೊಮ್ಮಸಂದ್ರ ದೊಡ್ಡಗುಬ್ಬಿ (ಅಂಚೆ) ಬೆಂಗಳೂರು.
ಇವರು ದಿನಾಂಕ: 20.05.2021 ಗುರುವಾರದಂದು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ **ವೈಕುಂಠ ಸಮಾರಾಧನೆಯನ್ನು ದಿನಾಂಕ: 30.05.2021ನೇ ಭಾನುವಾರದಂದು ಬೆಳಗ್ಗೆ 10.30 ರಿಂದ 11.30 ಘಂಟೆಯವರೆಗೆ** ಮೃತರ ಸ್ವಗೃಹದಲ್ಲಿ ನಡೆಸಲು ನಿಶ್ಚಯಿಸಲಾಗಿದೆ. ತಾವೆಲ್ಲರೂ ಇದನ್ನೇ ವೈಯಕ್ತಿಕ ಆಮಂತ್ರಣವೆಂದು ಪರಿಗಣಿಸಿ, ಕೋವಿಡ್ ಪರಿಸ್ಥಿತಿಯಿಂದಾಗಿ ತಮ್ಮ ಮನೆಯಿಂದಲೇ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು: **ಮಕ್ಕಳು, ನಾಗರೆಡ್ಡಿ ಸಹೋದರರು, ಸಹೋದರಿ, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು**

ಭಾವಪೂರ್ಣ ಶ್ರದ್ಧಾಂಜಲಿ

1939 - 2021
ಎಂ.ವಿ.ರಾಮಯ್ಯ (ರಾಮಣ್ಣ)
ಇವರು ದಿನಾಂಕ 21.05.2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿ ಹಾಗೂ ಕುಟುಂಬಕ್ಕೆ ಆತ್ಮಸ್ಥೈರ್ಯ ಕೊಡಲೆಂದು ದೇವರಲ್ಲಿ ಪ್ರಾರ್ಥಿಸಬೇಕೆಂದು ವಿನಂತಿಸುತ್ತೇವೆ.
ಇಂತಿ ದುಃಖತಪ್ತರು
ಶ್ರೀಮತಿ. ಲಿಲಿತಮ್ಮ ಮತ್ತು ಕುಟುಂಬವರ್ಗದವರು, ಸ್ನೇಹಿತರು ಮತ್ತು ಬಂಧು-ಮಿತ್ರರು
ಫೋನ್ : 080 26722190, 99025 23767

ಭಾವಪೂರ್ಣ ಶ್ರದ್ಧಾಂಜಲಿ



ಡಾ. ತಿಮ್ಮಪ್ಪ ಶೆಟ್ಟಿಗಾರ್, 61 ವರ್ಷ
ನಿವೃತ್ತ ರಿಜಿಸ್ಟರ್, ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯಕೀಯ ಮಂಡಳಿ, ಬೆಂಗಳೂರು
ಇವರು 26–05–2021ರಂದು ಪ್ರಕೃತಿಯಲ್ಲಿ ಲೀನರಾದರು.
ದುಃಖತಪ್ತ: ಆತ್ಮೀಯ ಸ್ನೇಹಿತರು ಮತ್ತು ಕುಟುಂಬಸ್ಥರು.

FOR ADVERTISEMENT QUERIES
Contact:
Santhosh : 9880856233
Vishal : 9845114560
Ravi : 9606912256

ವೈಕುಂಠ ಸಮಾರಾಧನೆ



ಶ್ರೀ ಎನ್. ರಾಮರೆಡ್ಡಿ
ಇವರು ದಿ॥22-05-2021ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ದಿ॥ 01-06-2021 ಮಂಗಳವಾರ ನಂ.101, 2ನೇ ಮಹಡಿ, S1 ಸ್ಟ್ರೀಟ್, ಮೋರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು–560005 ನಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು:
ಶ್ರೀಮತಿ ಸಿ. ಮಂಜುಳ (ಪತ್ನಿ), ಅಜಿತ್ ರೆಡ್ಡಿ (ಪುತ್ರ) ಹಾಗೂ ಬಂಧು–ಮಿತ್ರರು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Tanveer : 9886213331
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ scan the QR code ಸ್ಕ್ಯಾನ್ ಮಾಡಿ ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಬೈಯಿಂಗ್
Industrial & Factory
Hoskote
WANTED 2 Acre Land Around On Hoskote Malur Road Inside Immediate Settlement Ph: 9591997019 /9845081002

ಉದ್ಯೋಗಾವಕಾಶ
Engg/ Production Technical
ಟ್ರ್ಯಾಕ್ಟರ್ ಮೆಕ್ಯಾನಿಕ್ಸ್ : ಗೋವಾದಲ್ಲಿರುವ ಪ್ರಖ್ಯಾತ ಟ್ರ್ಯಾಕ್ಟರ್ ಡೀಲರ್ ಸಂಸ್ಥೆಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ: ವಸತಿ ಸೌಲಭ್ಯವಿದೆ. ಸಂಪರ್ಕಿಸಿರಿ : 9341631336.

General
WORK FROM home, MNC jobs - Anudip Foundation 7605058338, 8884606485

DH ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP TO BOOK YOUR CLASSIFIEDS ADS ONLINE
condition apply*
5 Easy steps to book your ads
1 LOG INTO WWW.DHCLASSIFIEDS.COM
2 CHOOSE THE CATEGORY
3 CHOOSE THE AD DATES
4 COMPOSE THE MATTER
5 CONFIRM AND PAY
REAL ESTATE JOB NOTICE NAME CHANGE ANY OTHER CATEGORY
WWW.DHCLASSIFIEDS.COM
9880856233
9886213331
E-mail: dhclassified@deccanherald.co.in

ಶಿಕ್ಷಣ
Colleges
ಪ್ರತಿಭಾವಂತಹ ಬಡ ಹೆಣ್ಣು ಮಕ್ಕಳಿಗೆ PUC, B.Com, MBA, ವಾಣಿಜ್ಯ ವಿದ್ಯಾಭ್ಯಾಸ. ಉಚಿತ ಊಟ ವಸತಿಯೊಂದಿಗೆ. ನೆಮ್ಮದಿಮನೆ ಫೌಂಡೇಶನ್. 9341494200

Language Classes
LEARN FLUENT English Speaking from home. ಮನೆಯಿಂದಲೇ ಇಂಗ್ಲಿಷ್ ಮಾತನಾಡುವುದನ್ನು ಕಲಿಯಿರಿ, ವಾರಕ್ಕೆ- Rs.100/ week. Call: 9632675409

ಭವಿಷ್ಯ
Astrology
ಉಚಿತ ಭವಿಷ್ಯ ಶ್ರೀ ಕೇರಳ ದುರ್ಗಾಂಬಿಕಾದೇವಿ ಆರಾಧಕರು ಪ್ರಧಾನ ತಾಂತ್ರಿಕರು ಮೋಡಿ ಮಾಂತ್ರಿಕರು. ದೈವಶಕ್ತಿ ಜ್ಯೋತಿಷ್ಯರು ಪಂಡಿತ್ ಗುರೂಜಿ ವಶೀಕರಣ ಸ್ಪೆಷಲಿಸ್ಟ್ ನಿಮ್ಮಾವುದೇ ಸುಖದುಃಖ ಮನನೊಂದ ಯಾವುದೇ ಗುಪ್ತಸಮಸ್ಯೆಗಳಿಗೂ 1 ದಿನದಲ್ಲಿ ಪರಿಹಾರ.9743010743

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೇಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ ಧರ್ಮಸ್ಥಳ. 7022443071

★ಅಂಭಭವಾನಿ ಜ್ಯೋತಿಷ್ಯಾಲಯ★ ಕೊಳ್ಳೆಗಾಲದ ನಂ.1 ವಶೀಕರಣ ಸ್ಪೆಷಲಿಸ್ಟ್ ದೇವಿಪ್ರಸಾದ್ (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೆಯಿರಲಿ 2 ದಿನದಲ್ಲಿ ಪರಿಹಾರ. 9886755306

★ವಶೀಕರಣ ಸ್ಪೆಷಲಿಸ್ಟ್ ಗುರೂಜಿ. 9663631199★ ಓಂ ಶ್ರೀ ದುರ್ಗಾದೇವಿ ಅನುಗ್ರಹ ಜ್ಯೋತಿಷ್ಯಾಲಯ ಕಟೀಲು ದುರ್ಗಾಪರಮೇಶ್ವರಿ ಅಮ್ಮನವರ ಆರಾಧಕರು. ಪಂಡಿತ್ ಮೋಹನ್ ದಾಸ್ ಶರ್ಮ ಗುರೂಜಿ (ಉಡುಪಿ) ನಿಮ್ಮ ಕುಟುಂಬದ ಸಮಸ್ಯೆಗಳಾದ ನಿಮ್ಮ ಮಕ್ಕಳ ವಿದ್ಯಾಭ್ಯಾಸದಲ್ಲಿ ಬುದ್ಧಿ ಜ್ಞಾನಶಕ್ತಿ ಆರೋಗ್ಯ ಸಮಸ್ಯೆ ತೊಂದರೆ ಇದ್ದರೆ, ನಿಮ್ಮ ಗಂಡ ಪರಸ್ತ್ರೀಯಿಂದ ನಿಮ್ಮ ಸಂಸಾರದಲ್ಲಿತೊಂದರೆ, ನಿಮ್ಮ ಅತ್ತೆ, ಸೊಸೆ, ನಾದಿನಿಯಿಂದ ನಿಮ್ಮ ಸಂಸಾರದಲ್ಲಿ ತೊಂದರೆ ಆಗುತ್ತಿದೆಯೇ? ಪ್ರೀತಿಯಲ್ಲಿ ನಂಬಿ ಮೋಸ ಹೋಗಿದ್ದೀರಾ, ನೀವು ಇಷ್ಟಪಟ್ಟಂತಹ ಸ್ತ್ರೀ/ಪುರುಷ ನಿಮ್ಮಂತೆ ವಶೀಕರಣ ಆಗಲು ನಿಮ್ಮ ಜನ್ಮ ಲಗ್ನದಲ್ಲಿ ಮದುವೆ ವಿಚಾರದಲ್ಲಿ ಕಂಕಣ ತೊಂದರೆ ಆಗುತ್ತಿದ್ದರೆ,ಗಂಡಹೆಂಡತಿ ಕಿರಿಕಿರಿ ಇಂದ ಡೈವರ್ಸ್ ಪ್ರಾಬ್ಲಮ್ ಇರುವುದರಿಂದ ನಿಮ್ಮ ಸಂಸಾರ ಹಾಳಾಗುತ್ತಿದೆ, ಅಣ್ಣ- ತಮ್ಮಂದಿರ ಆಸ್ತಿಯಲ್ಲಿ ತೊಂದರೆ, ಶತ್ರುಗಳಿಂದ ನಿಮ್ಮ ಕುಟುಂಬಕ್ಕೆ ತೊಂದರೆ,ನಿಮ್ಮ ಕುಟುಂಬದಲ್ಲಿ ಮಾಟ ಮಂತ್ರ ಪ್ರಯೋಗದಿಂದ ನಿಮ್ಮ ಕುಟುಂಬ ಸರ್ವನಾಶ ಆಗುತ್ತಿದೆ, ನಿಮ್ಮ ಎಲ್ಲಾ ಕಠಿಣ ಸಮಸ್ಯೆಗಳಿಗೂ ತಾಯಿ ಕೇರಳ ಭಗವತಿ ದೇವಿ ಮತ್ತು ಕಟೀಲು ದುರ್ಗಾಪರಮೇಶ್ವರಿದೇವಿ ಅಮ್ಮನವರ ಪೂಜಾ ಶಕ್ತಿಯಿಂದ ಅಮಾವಾಸ್ಯೆ ಹುಣ್ಣಿಮೆ ಸೂರ್ಯಚಂದ್ರ ಗ್ರಹಣದಿಂದ ಜಪ ಸಿದ್ಧಿಗಳಿಂದ ಕೇವಲ ೧ದಿನದಲ್ಲಿ ೧೦೦% ಶಾಶ್ವತ ಪರಿಹಾರ ಮಾಡುತ್ತಾರೆ. ಮಲ್ಲೇಶ್ವರಂ, ಬೆಂಗಳೂರು

★॥ಶ್ರೀಶಾಕಂಬರಿದೇವಿ॥★ ಜ್ಯೋತಿಷ್ಯರು ಸ್ತ್ರೀಪುರುಷ ವಶೀಕರಣ, ಸಂಭೋಗ ವಶೀಕರಣ ಇನ್ನೂಯಾವುದೇ ಸಮಸ್ಯೆಗಳಿಗೆ 11 ನಿಮಿಷದಲ್ಲಿ ಶಾಶ್ವತ ಪರಿಹಾರ. ಡಾ॥.ವಿವೇಕಾನಂದಜೋಶಿ. 9008968867

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಭಾನುವಾರದ ಪುರವಣಿ

ಮಲಗಿದ್ದು ನೀವಷ್ಟೇ ಅಲ್ಲ 9

ಕದ್ದುತ ಗಾಂಟಿಯೇ ಬಾರಮ್ಮ... 10

ಲಕ್ಷದ್ವೀಪ ಒಂದು ಆಲಾಪ! 11

ಭಾನುವಾರ, 30 ಮೇ 2021

ಬೆತ್ತ ಯಾರದೋ ಸತ್ಯ ಅವನದೇ

ನಾಗೇಶ ಹೆಗಡೆ

'ಶಾಂತತಾ! ಕೋರ್ಟ್ ಚಾಲೂ ಆಹೆ!'

-ಇದು ಖ್ಯಾತ ಮರಾಠಿ ನಾಟಕಕಾರ ವಿಜಯ್ ತೆಂಡೂಲ್ಕರ್ ಅವರ ನಾಟಕದ ಶಿರೋನಾಮೆ. ಒಂದು ಮಗುವಿನ ಅಸಲೀ ಅಪ್ಪ-ಅಮ್ಮ ಯಾರೆಂದು ಪತ್ತೆ ಮಾಡುವ ಅಸಂಗತ ಕಥನ ಅದರಲ್ಲಿದೆ. 'ಕೋರ್ಟ್ ಚಾಲೂ ಆಗಿದೆ, ಗಲಾಟೆ ಮಾಡಬೇಡಿ' ಎಂದು ಒಂದು ಪಾತ್ರ ಕೂಗಿ ಹೇಳುತ್ತದೆ.

ಇದೀಗ ವಿಶ್ವವೇದಿಕೆಯಲ್ಲೂ ಇಂಥದ್ದೊಂದು ನಾಟಕ ರಂಗಕ್ಕೇರುತ್ತಿದೆ. ಕೊರೊನಾ ಎಂಬ ಪ್ರಳಯಾಂತಕ ಶಿಶು ಎಲ್ಲಿ, ಹೇಗೆ ಉದ್ಭವಿಸಿತು ಎಂಬ ಚರ್ಚೆಗೆ ರಂಗೇರುತ್ತಿದೆ. 'ಇದು ಸಹಜವಾಗಿ ನಿಸರ್ಗದಿಂದ ಬಂದಿದ್ದಲ್ಲ; ಚೀನೀಯರ ಪ್ರಯೋಗಶಾಲೆಯಲ್ಲಿ ಸೃಷ್ಟಿಯಾದ ಜೀವಾಯುಧ (Bio Weapon). ಹೇಗೋ ಆಕಸ್ಮಿಕ ಸೋರಿಕೆಯಾಗಿ ಹೊರಬಿದ್ದಿದೆ' ಎಂದು ತಜ್ಞರು ಮೆಲ್ಲಗೆ ಉಸುರಿದ್ದೇ ವಿರಾಟ್ ರೂಪ ತಾಳುತ್ತಿದೆ.

ಸತ್ಯ ಗೊತ್ತಿದ್ದವರು ಬಾಯಿ ಬಿಡುತ್ತಿಲ್ಲ. ಬಿಡಿಸಲೇಬೇಕೆಂದು ಹಟ ತೊಟ್ಟವರು ಸಾಕ್ಷ್ಯಗಳನ್ನು ಮುಂದಿಡುತ್ತಿಲ್ಲ. ವಿಜ್ಞಾನಿಗಳು, ರಾಜಕಾರಣಿಗಳು, ರಾಜತಾಂತ್ರಿಕರು ರಂಗಕ್ಕೆ ಬರುತ್ತಿದ್ದಾರೆ. ಹಿಮ್ಮೇಳದಲ್ಲಿ ಮಾಧ್ಯಮಗಳ ತಮಟೆ ಜೋರಾಗುತ್ತಿದೆ. 'ಚೀನಾ ತಪ್ಪಿತಸ್ಥ' ಎಂಬ ಧ್ವನಿ ನೇಪಥ್ಯದಲ್ಲಿ ಹೊಮ್ಮುತ್ತಿದೆ. ತೀರ್ಪುಗಾರನ ಸ್ಥಾನದಲ್ಲಿರುವ ವಿಶ್ವ ಸ್ವಾಸ್ಥ್ಯ ಸಂಸ್ಥೆಯ (ವಿಸ್ವಾಸಂ) ಅಧ್ಯಕ್ಷ ಮಾತ್ರ 'ಸಾಕ್ಷ್ಯ ಸಾಲದು, ಇನ್ನೂ ತನಿಖೆ ಆಗಬೇಕು' ಎಂದು ಹೇಳುತ್ತಿದ್ದಾರೆ.

ಇದುವರೆಗಿನ ಕತೆ ನಮಗೆ ಗೊತ್ತೇ ಇದೆ: ಚೀನಾದ ವುಹಾನ್ ನಗರದ ತೇವಸಂತೆಯಲ್ಲಿ ಈ ವೈರಾಣು ಪ್ರತ್ಯಕ್ಷವಾಯಿತು. ಸಂತೆಗೆ ಮಾರಾಟಕ್ಕೆ ಬಂದಿದ್ದ ಯಾವುದೋ ಕಾಡುಪ್ರಾಣಿಯ ಮಾಂಸದ ಮೂಲಕ ಈ ಭಯಾನಕ ಸೂಕ್ಷ್ಮಜೀವಿ ಮನುಷ್ಯನಿಗೆ ತಗುಲಿಕೊಂಡಿತು ಎಂದು ಚೀನೀಯರು ಹೇಳಿದ್ದರು. ಆ ಕಾಡುಪ್ರಾಣಿಗೆ ಪ್ರಾಯಶಃ ಯಾವುದೋ ಬಾವಲಿಯ ಎಂಜಲು ಸೋಂಕಿರಬೇಕು ಎಂದು ಊಹಿಸಲಾಗಿತ್ತು. ಹಿಂದೆಯೂ ನಿಫಾ, ಝಿಕಾ ಮತ್ತು ಹಂದಿಜ್ವರ - ಪಕ್ಷಿಜ್ವರಕ್ಕೆ ಕಾರಣವಾದ ವೈರಸ್‌ಗಳೆಲ್ಲ ನಿಸರ್ಗದಿಂದಲೇ ಬಂದಿವೆಯಾದ್ದರಿಂದ ಹೀಗಾಗಿದ್ದೇ ಹೌದೆಂದು ಎಲ್ಲರನ್ನೂ ನಂಬಿಸಲಾಗಿತ್ತು. ಬಾವಲಿಗಳ ದೇಹದಲ್ಲಿ ಇಂಥ ಸಾರ್ಸ್ ಮಾದರಿಯ ವೈರಾಣು ಇರುತ್ತವೆಂದು ಚೀನೀ ಸಂಶೋಧಕಿ ಷಿ ಝೆಂಗ್ಲಿ ಅಲ್ಲಿನ ಗುಹೆಗಳಲ್ಲಿ ಓಡಾಡಿ 2012ರಲ್ಲೇ ವರದಿ ಮಾಡಿದ್ದಳು.

ವುಹಾನ್ ನಗರದಲ್ಲಿ ಸೋಂಕಿತರೆಲ್ಲ ಚಿಕಿತ್ಸೆ ಪಡೆದು ಆಸ್ಪತ್ರೆಯಿಂದ ಹೊರಬಿದ್ದಾಗ ಆ ನಗರ ಆಚರಿಸಿದ 'ಕೊರೊನಾ ಜಯಿಸಿದ ಸಂಭ್ರಮಾಚರಣೆ' ನೋಟ

> ಭೋಪಾಲದ ವಿಷಾನಿಲ ಸೋರಿಕೆ, ಚೆರ್ನೊಬಿಲ್ ಫುಕುಶಿಮಾಗಳ ವಿಕಿರಣ ಸೋರಿಕೆ ವಿಷಯ ಎಲ್ಲರಿಗೂ ತಿಳಿದಂಥದ್ದೆ. ಅದೇ ಹಾದಿಯಲ್ಲಿ ಕೊರೊನಾ ಸೋಂಕು ಚೀನಾದ ಲ್ಯಾಬಿನಿಂದ ಸೋರಿಕೆಯಾಗಿದ್ದು ಹೌದೆ? ಹೌದೆಂಬ ಹೊಗೆ ಎದ್ದಿದೆ.

ಅದಕ್ಕೂ ತುಸು ಹಿಂದೆ 2011ರಲ್ಲೇ ಬೆಳ್ಳಿತೆರೆಗೆ ಬಂದ 'ಕಂಟೇಜಿಯನ್' ಎಂಬ ಸಿನೆಮಾದಲ್ಲಿ ಅದೇ ಚಿತ್ರಕಥೆ ಇತ್ತು. ಬುಲ್ಡೋಜರ್‌ಗಳು ಕಾಡಿನ ಹೆಮ್ಮರಗಳನ್ನು ಬೀಳಿಸುತ್ತಿದ್ದಾಗ ಒಂದು ಬಾವಲಿ ಹಾರಿ ಹೋಗಿ ಕಾಡಂಚಿನ ಹಂದಿಗೂಡಿನ ಸೂರಿಗೆ ನೇತಾಡುತ್ತದೆ. ಅದರ ಬಾಯಿಂದ ಬಿದ್ದ ಹಣ್ಣನ್ನು ಹಂದಿ ತಿನ್ನುತ್ತದೆ; ಆ ಹಂದಿಯ ಮಾಂಸವನ್ನು ಹಾಂಗ್‌ಕಾಂಗಿನಲ್ಲಿ ಬೇಯಿಸಿ ಬಡಿಸಿದವನಿಗೆ ಜ್ವರ ಬರುತ್ತದೆ. ಉಂಡವಳು ವಿಮಾನ ಏರಿ, ತನ್ನೊಂದಿಗೆ ರೋಗಾಣುವನ್ನೂ ಅಮೆರಿಕಕ್ಕೆ ಕೊಂಡೊಯ್ಯುತ್ತಾಳೆ. ಅಲ್ಲಿನ ಮಹಾಸಾಂಕ್ರಾಮಿಕ, ಲಾಕ್‌ಡೌನ್ ಕೋಲಾಹಲ, ರಾಜಕಾರಣ, ಮೆಡಿಕಲ್ ಮಾಫಿಯಾ, ಹಣಕ್ಕಾಗಿ ತಜ್ಞರ ಅಪಹರಣ, ಬ್ಲ್ಯಾಕ್‌ಮೇಲ್ ಇತ್ಯಾದಿ ಎಲ್ಲ ಮಸಾಲೆಗಳೂ ಅದರಲ್ಲಿದ್ದವು.

ಇದು ಲ್ಯಾಬಿನಿಂದ ಆಕಸ್ಮಿಕ ಸೋರಿಕೆಯಾದ ಜೀವಾಯುಧವೇ ಹೌದು ಎನ್ನಲು ಮೇಲ್ನೋಟದ ಸಾಕ್ಷ್ಯಗಳು ಹೀಗಿವೆ: 1. ವೈರಾಣುಗಳನ್ನು ಪೋಷಿಸಿ, ಛೇದಿಸಿ, ಪರೀಕ್ಷಿಸುವಲ್ಲಿ ವಿಶ್ವಖ್ಯಾತಿ ಪಡೆದ ಘೋರಭದ್ರ ಸಂಶೋಧನಾ ಸಂಸ್ಥೆ ವುಹಾನ್‌ನಲ್ಲೇ ಇದೆ. 2. ಈ ಸಂಸ್ಥೆಯ ಸಿಬ್ಬಂದಿ ಹತ್ತುವರ್ಷಗಳ ಹಿಂದೆ ತಾಮ್ರದ ಗಣಿಯಲ್ಲಿ ಬಾವಲಿಗಳ ಸಮೀಕ್ಷೆಗೆ ಹೋದಾಗ ಮೂವರಿಗೆ ಸಾರ್ಸ್ ಮಾದರಿಯ ಜ್ವರ ತಗುಲಿತ್ತು. 3. ಕಳೆದ ವರ್ಷ ಫೆಬ್ರುವರಿಯಲ್ಲಿ ಇಬ್ಬರು ಚೀನೀ ಸಂಶೋಧಕರೇ ಇದು ಲ್ಯಾಬ್‌ನಿಂದ ಸೋರಿಕೆಯಾದ ವೈರಾಣುವೇ ಇರಬೇಕೆಂದು ಹೇಳಿದ್ದಾರೆ. 4. ತುರ್ತು ಚಿಕಿತ್ಸೆಗಾಗಿ ಆಸ್ಪತ್ರೆ ಸೇರಿದವರಲ್ಲಿ ಮೂವರು ಈ ಸಂಸ್ಥೆಯ ಸಿಬ್ಬಂದಿಯೇ ಆಗಿದ್ದಾರೆಂದು ಈಗ ಗೊತ್ತಾಗಿದೆ. 5. ಆಕಸ್ಮಿಕ ಸೋರಿಕೆ ಆದಾಗ ತುರ್ತುಕ್ರಮ, ಪ್ರತ್ಯೌಷಧ ಏನಿರಬೇಕು ಎಂಬುದು ವುಹಾನ್ ವಿಜ್ಞಾನಿಗಳಿಗೆ ಗೊತ್ತಿತ್ತು. ಆದ್ದರಿಂದಲೇ ಚೀನಾ ಅತಿ ಕ್ಷಿಪ್ರವಾಗಿ ಚೇತರಿಸಿಕೊಂಡಿದೆ. ಅಷ್ಟು ದೊಡ್ಡ ದೇಶದಲ್ಲಿ ಕೇವಲ 4636 ಜನ ಕೋವಿಡ್‌ನಿಂದ ಗತಿಸಿದ್ದಾರೆ. ತಾನು ಗೆದ್ದಿದ್ದಕ್ಕೆ ಹಬ್ಬ ಆಚರಿಸಿದೆ. ಗೆದ್ದಿದ್ದು ಹೇಗೆ ಎಂದು ಮಾತ್ರ ಹೇಳಲಿಲ್ಲ.

ತನ್ನದೇನೂ ತಪ್ಪಿಲ್ಲ, ಲ್ಯಾಬಿನಿಂದ ವೈರಸ್ ಸೋರಿಕೆ ಆಗಿಲ್ಲ ಎಂದು ವಾದಿಸುವ ಚೀನಾ ಇನ್ನೂ ಒಂದು ಹೇಳಿಕೆಯನ್ನು ಗಾಳಿಯಲ್ಲಿ ಹರಿಬಿಟ್ಟಿದೆ. ಕಾಡಿನಿಂದ ವೈರಾಣು ಬಂದಿರಲಿಕ್ಕಿಲ್ಲ. ವಿದೇಶೀ ಆಹಾರವಸ್ತುಗಳ ಮೂಲಕ ಇದು ಬಂದಿರಬೇಕು ಎಂದು ಹೇಳಿದೆ. ತನ್ನ ದೇಶಕ್ಕೆ ಎಲ್ಲೆಲ್ಲಿಂದ ಸಿದ್ಧ ಆಹಾರವಸ್ತುಗಳು ಬರುತ್ತಿವೆ ಎಂಬುದರ ಪಟ್ಟಿಯನ್ನೇ ಅದು ಕೊಟ್ಟಿದೆ.

ಕಾಡಿನಲ್ಲಿರುವ ಪ್ರಾಣಿ, ಪಕ್ಷಿ, ಕೀಟಗಳಲ್ಲಿ ನಾನಾ ಬಗೆಯ ವೈರಾಣು ಇರುತ್ತವೆ ನಿಜ. ಆದರೆ ಅವನ್ನು ಲ್ಯಾಬಿಗೆ ತಂದು, ಅದರ ಸೋಂಕುಗುಣ ತೀರಾ ಇಮ್ಮಡಿ ಮುಮ್ಮಡಿ ಆಗುವಂತೆ ತಿದ್ದಿತೀಡಿ ಜೀವಾಣು ಬಾಂಬ್ ಆಗಿ ರೂಪಿಸುವ ಸಂಶೋಧನೆಗಳು ನಡೆಯುತ್ತಲೇ ಇವೆ. ಚೀನಾದ ಅಂಥ ಸಂಶೋಧನೆಗೆ ಅಮೆರಿಕ ಸರ್ಕಾರವೂ ಕೈಜೋಡಿಸಿದ್ದಕ್ಕೆ ಸಾಕ್ಷ್ಯಗಳು ಸಿಕ್ಕಿವೆ. ಪರಮಾಣು ಬಾಂಬ್‌ಗಳ ಬದಲಿಗೆ ಇಂಥ ಜೀವಾಣು ಬಾಂಬ್‌ಗಳನ್ನು, ವಿಷಾನಿಲ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಇಟ್ಟುಕೊಳ್ಳಲು ಎಲ್ಲ ಶಕ್ತರಾಷ್ಟ್ರಗಳೂ ಬಯಸುತ್ತವೆ. ಹಾಗೆ ಮಾಡಬಾರದೆಂದು ವಿಶ್ವಮಟ್ಟದಲ್ಲಿ ಜೀವಾಣು ಬಾಂಬ್ ನಿಷೇಧ ಒಪ್ಪಂದಗಳಿವೆ ನಿಜ. ಆದರೂ ರಹಸ್ಯ ಕಾರ್ಯಾಚರಣೆಗಳು ನಡೆದೇ ಇವೆ. ಇವುಗಳ ಮಧ್ಯೆ ಬಲಾಢ್ಯ ಖಾಸಗಿ ಕಾರ್ಪೊರೇಟ್ ಸಂಸ್ಥೆಗಳೂ ಅಂಥ ಹೈಬ್ರಿಡ್ ವೈರಾಣುಗಳ ಸೃಷ್ಟಿಗೆ ಹಣ ಹೂಡುತ್ತಿವೆ. ಅವುಗಳ ಉದ್ದೇಶ ಏನೆಂದರೆ, ವೈರಸ್‌ಗಳಿಗೆ ಲಸಿಕೆಗಳನ್ನು ತಯಾರಿಸಿ ಲಾಭ ಗಳಿಸುವುದು. ಮನುಕುಲದ ಕಲ್ಯಾಣ!

ಪರಮಾಣು ಬಾಂಬ್‌ಗಳಿಗಿಂತ ಜೀವಾಣು ಬಾಂಬ್ ಉತ್ತಮ ಏಕೆಂದರೆ, ಆಸ್ತಿಪಾಸ್ತಿ ನಷ್ಟ ಆಗುವುದಿಲ್ಲ; ಲಸಿಕೆ ಪಡೆದಿರುವ ಪ್ರಭಾವಿಗಳೆಲ್ಲ ಬಚಾವ್ ಆಗುತ್ತಾರೆ. ಆದರೆ, ಅಂಥ ಬಾಂಬ್ ದಾಳಿಗೆ ಬಲಿಯಾಗುವ ದೇಶದ ಆರ್ಥಿಕ ಬೆನ್ನೆಲುಬು ಮುರಿಯುತ್ತದೆ. ದೇಶರಕ್ಷಣೆಯ ಎಲ್ಲ ವ್ಯವಸ್ಥೆಗಳೂ ಕುಸಿಯುತ್ತವೆ. ವೈರಿ ಯಾರು, ಪ್ರತ್ಯಸ್ತ್ರವನ್ನು ಯಾವ ದಿಕ್ಕಿಗೆ ಪ್ರಯೋಗಿಸಬೇಕು ಎಂಬುದು ಗೊತ್ತಾಗದೆ ಮಿಲಿಟರಿ ಕೈಕಟ್ಟಿ ಕೂರಬೇಕಾಗುತ್ತದೆ. ಹೆಚ್ಚೆಂದರೆ ತನ್ನ ಪ್ರಜೆಗಳಿಗೆ ಆಮ್ಲಜನಕ, ಲಸಿಕೆ, ವೆಂಟಿಲೇಟರು, ಆಕ್ಸಿಮೀಟರು, ಬಯಲು ರುಗ್ಣಾಲಯಗಳ ಉಸ್ತುವಾರಿಯಲ್ಲೇ ಏಗುತ್ತಿರಬೇಕಾಗುತ್ತದೆ. ದೇಶದ ನಾಯಕರಂತೂ ವಿದೇಶೀ ಸಹಾಯಕ್ಕೆ ಅಂಗಲಾಚುತ್ತ, ತನ್ನ ಅಸ್ತವ್ಯಸ್ತ ಆಡಳಿತಯಂತ್ರವನ್ನು ನಿಭಾಯಿಸುವುದರಲ್ಲೇ ವ್ಯಸ್ತ ಆಗಿರಬೇಕಾಗುತ್ತದೆ. ಪ್ರಜೆಗಳು ದಂಗೆ ಏಳದಂತೆ ನೋಡಿಕೊಂಡರೆ ಸಾಕಾಗಿರುತ್ತದೆ.

ಯಾವ ರಾಷ್ಟ್ರಕ್ಕೂ ಇಂಥ ವಿಷಣ್ಣ ಪ್ರಸಂಗ ಬಾರದಂತೆ, ಎಲ್ಲೂ ಇಂಥ ಶಸ್ತ್ರಾಸ್ತ್ರಗಳ ನಿರ್ಮಾಣ ಆಗದಂತೆ ಜಾಗತಿಕ ಮಟ್ಟದಲ್ಲಿ ನಿಗಾ ಇಡುವ ಹೊಣೆಗಾರಿಕೆ ವಿಸ್ವಾಸಂ ಅಧ್ಯಕ್ಷರ ಮೇಲಿರುತ್ತದೆ.

9ನೇ ಪುಟಕ್ಕೆ...

ಕಲಾಕೃತಿ: ಸುರೇಶ ಅರ್ಕಸಾಲಿ

ಸಾವಿರದ ಉಳಿಪೆಟ್ಟು

ಗಂಡು ಕ್ಷೇತ್ರ ಎನಿಸಿಕೊಂಡ ಶಿಲ್ಪಕಲೆಯ ಆವರಣದಲ್ಲಿ ಯಶಸ್ಸು ಮಾತ್ರವಲ್ಲ, ಖುಷಿಯನ್ನೂ ಪಡೆದುಕೊಂಡ ಕನಕಾಮೂರ್ತಿ, ಶಿಲೆಯ ಸ್ಪರ್ಶದಲ್ಲಿ, ಒಡನಾಟದಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡವರು. ಅವರು ಬಾಳಪಯಣ ಮುಗಿಸಿ ಹೋಗಿದ್ದರೂ ಕಲಾಕೃತಿಗಳಲ್ಲಿ ಶಾಶ್ವತವಾಗಿ ನೆಲೆಸಿದ್ದಾರೆ...

ಶಿಲೆ ಅರಳಿ ಕಲೆಯಾಗಿ... ಕನಕಾಮೂರ್ತಿ ಅವರ ಉಳಿಪೆಟ್ಟಿನಲ್ಲಿ ಅರಳಿದ ಶಿಲ್ಪ ಕಾವ್ಯ(ಮೇಲಿನ ಚಿತ್ರ). ಅಂಬು, ಕಟ್ಟಡ ಕಾರ್ಮಿಕರ ಐದು ವರ್ಷದ ಮಗಳೊಬ್ಬಳ ಬದುಕಿನಿಂದ ಉತ್ತೇಜಿತರಾಗಿ ಕನಕಾಮೂರ್ತಿ ಅವರು ರಚಿಸಿದ ಶಿಲ್ಪ(ಕೆಳಗಿನ ಚಿತ್ರ). ಚಿತ್ರ: ರೂಮಿ ಹರೀಶ್

ಸಿ.ಎಸ್. ಸರ್ವಮಂಗಳಾ

ಶಿಲ್ಪಕಲಾವಿದೆ ಕನಕಾಮೂರ್ತಿ ಈಗೊಂದು ಸುಂದರ ನೆನಪು. ಬಣ್ಣಬಣ್ಣದ ಸೀರೆ, ತೋಳಿಲ್ಲದ ರವಿಕೆ, ಎತ್ತಿಕಟ್ಟಿದ ತಲೆಕೂದಲ ಗಂಟು... ಹೊಳೆವ ನಗುವಿನ, ತುಂಬು ಮೊಗದ, ಆತ್ಮವಿಶ್ವಾಸ ತುಳುಕುವ, ನಸುಗಪ್ಪು ಬಣ್ಣದ ಲಕ್ಷಣವಂತೆ. ಇತ್ತೀಚೆಗೆ ಕೊಂಚ ಮೌನಗೊಂಡಿದ್ದಾರೆ, ಕೆತ್ತನೆಯಿಂದ ವಿಮುಖರಾಗಿದ್ದಾರೆ ಎಂದು ಗೆಳೆಯರಿಂದ ಕೇಳಿದ್ದೆ. ಇದೇ ಮೇ 13ರಂದು, 79ನೇ ವಯಸ್ಸಿನಲ್ಲಿ ತಮ್ಮ ಪಯಣ ಮುಗಿಸಿ ಕನಕಾ ಹೊರಟೇಬಿಟ್ಟರು. ಅವರ ಕಮ್ಮನಹಳ್ಳಿಯ ಮನೆಗೆ ಹೋಗಲಾಗಲಿಲ್ಲ ಎಂಬ ತಪ್ಪಿತಸ್ಥ ಭಾವನೆ ಮಾತ್ರ ನನ್ನಲ್ಲಿ ಉಳಿದಿದೆ.

ಕಲ್ಲಿನೊಂದಿಗೆ ಕನಕಾಗೆ ಸದಾ ಪ್ರೀತಿ. ಹೆಣ್ಣು ಮತ್ತು ಶಿಲ್ಪಕಲೆಯ ಸಂಬಂಧಕ್ಕೆ ಬಂದರೆ, ಹೆಣ್ಣಿನ ಆಕೃತಿ ಮತ್ತು ಸೌಂದರ್ಯವನ್ನು ನಿರ್ಭಿಡೆಯಿಂದ ಚಿತ್ರಿಸುತ್ತ, ಹೆಣ್ಣಿನ ಭಾವಸ್ವಭಾವಗಳನ್ನು ಸ್ಫೂರ್ತಿಯಾಗಿಸಿಕೊಂಡು ಸಂಭ್ರಮಿಸಿರುವ ಕಲಾಪ್ರಕಾರಗಳಲ್ಲಿ ಶಿಲ್ಪಕಲೆ ಮುಖ್ಯವಾದದ್ದು. ಹಾಗಿದ್ದರೂ ಮಹಿಳಾಶಿಲ್ಪಿಗಳು ಮಾತ್ರ ಬೆರಳೆಣಿಕೆಯಷ್ಟೇ. ಹೀಗಾಗಿ ಕನಕಾರವರ ಕಲಾಬದುಕು ವಿಶಿಷ್ಟ ಅನುಭವಗಳ ಬುತ್ತಿಯಾಗಿದೆ.

ಗಂಡು ಕ್ಷೇತ್ರ ಎನಿಸಿಕೊಂಡ ಶಿಲ್ಪಕಲೆಯ ಆವರಣದಲ್ಲಿ ಯಶಸ್ಸು ಮಾತ್ರವಲ್ಲ, ಖುಷಿಯನ್ನೂ ಪಡೆದುಕೊಂಡ ಕನಕಾ, ಶಿಲೆಯ ಸ್ಪರ್ಶದಲ್ಲಿ, ಒಡನಾಟದಲ್ಲಿ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡವರು. ಕಲ್ಲು ಬರಡು ವಸ್ತುವಲ್ಲ, ಕರಗದ ಜಡಗುಂಡಲ್ಲ, ತಂಪಾದ, ಮೃದುವಾದ, ಜೀವರಸಭರಿತ ಚೈತನ್ಯದ ಸಾರ. ಉಳಿ ಪೆಟ್ಟುಗಳು ಆತ್ಮೀಯ ಸಂವಾದದಂತೆ ಭಾಸವಾಗಿ, ಜೀವಂತ ವಿನಿಮಯವೇರ್ಪಟ್ಟು, ಕಾವ್ಯಾತ್ಮಕ ನೆಲೆಯಲ್ಲಿ ಆಕೃತಿಯೊಂದು ಜೀವ ತಳೆಯುತ್ತದೆ ಎಂಬುದು ಅವರ ನಿಲುವಾಗಿತ್ತು.

ಸಂಪ್ರದಾಯವಂತರಾದ ತಂದೆ ಜಮೀನ್ದಾರ್ ಮುತ್ತತ್ತಿ ಸುಬ್ಬರಾಯರು ಮಗಳ ಶಿಲ್ಪಕಲೆಯ ಆಯ್ಕೆಯ ಬಗ್ಗೆ ಎಂದೂ ಉತ್ಸಾಹಗೊಂಡವರಲ್ಲ. ಬಿಸಿಲು-ದೂಳಿನಲ್ಲಿ ಶ್ರಮಿಸುತ್ತ, ಇನ್ನೂ ಕಪ್ಪಾಗಿ ಒರಟಾದರೆ, ಯಾರು ಮದುವೆಯಾಗುತ್ತಾರೆ ಎಂಬುದಷ್ಟೇ ಅವರ ಆತಂಕವಾಗಿತ್ತು. ತಾಯಿ ಸುಂದರಮ್ಮನವರು ಕನಕಾ ಸೇರಿದಂತೆ ತಮಗೆ ಹುಟ್ಟಿದ ಮತ್ತು ಪತಿಯ ಮೊದಲ ಹೆಂಡತಿಯ ಮಕ್ಕಳೆಲ್ಲರನ್ನೂ ಸಲಹಿದರು. ಒಟ್ಟು 19 ಮಕ್ಕಳ ಬೃಹತ್ ಕುಟುಂಬದಲ್ಲಿ, ಹಾಡುತ್ತ ಕುಣಿಯುತ್ತ ಬೆಳೆದ ಕನಕಾ, ವಿಜ್ಞಾನದಲ್ಲಿ ಪದವೀಧರೆಯಾಗಿ, ತಿರುಮಕೂಡಲು ನರಸಿಪುರದಿಂದ ಬೆಂಗಳೂರಿಗೆ ವಲಸೆ ಬಂದರು. ಬಸವನಗುಡಿಯ ಕಲಾಶಾಲೆ 'ಕಲಾಮಂದಿರ'ದಲ್ಲಿ ಚಿತ್ರಕಲೆಯ ತರಬೇತಿಗಾಗಿ ಹೆಜ್ಜೆಯಿಟ್ಟವರು, ರೇಖಾಚಿತ್ರದಲ್ಲಿ ತಮಗಿದ್ದ ಕೌಶಲ ಕಂಡುಕೊಳ್ಳುತ್ತಲೇ, ಶ್ರೇಷ್ಠ ಪಾರಂಪರಿಕ ಶಿಲ್ಪಿ ವಾದಿರಾಜರ ಕಲಾಕೃತಿಗಳಿಂದ, ವಿಶೇಷವಾಗಿ ಮರದ ಏಸುಕ್ರಿಸ್ತ ಮತ್ತು ದಂತದ ಕೃಷ್ಣನ ಪ್ರತಿಮೆಗಳಿಂದ ಆಕರ್ಷಣೆಗೊಂಡು ಶಿಲ್ಪಲೋಕಕ್ಕೆ ಕಾಲಿರಿಸಿದರು.

ಗುರು ವಾದಿರಾಜರಲ್ಲಿ ನಾಲ್ಕು ದಶಕಗಳ ಕಾಲ ಕಲಿತು ಸ್ವತಂತ್ರ ಶಿಲ್ಪ ರಚಿಸುವಂತಾದಾಗ, ಬಗೆಬಗೆಯ ಕಲ್ಲು, ಸಿಮೆಂಟು, ಟೆರ್ರಾಕೋಟ, ಮರ ಬಳಸಿ, ಸಾಂಪ್ರದಾಯಿಕ, ಅಸಾಂಪ್ರದಾಯಿಕ, ಜನಪದ, ಪರಿಸರಪರ, ಹೀಗೆ ಎಲ್ಲ ಬಗೆಯ ಶಿಲ್ಪರಚನೆಯಲ್ಲಿ ತೊಡಗಿದರು. ಇಂಥ ವೈವಿಧ್ಯದ ಅನುಭವದಿಂದ ಗಳಿಸಿಕೊಂಡ ಕಾವ್ಯಾತ್ಮಕತೆ ಮತ್ತು ಮೊನಚು, ಕನಕಾ ಅವರಿಗೆ ಸಾಂಪ್ರದಾಯಿಕ ಶಿಲ್ಪಪ್ರಕಾರದ ಅತ್ಯುತ್ತಮ ಪ್ರತಿನಿಧಿಯಾಗಿ ಬೆಳೆಯುವಲ್ಲಿ ನೆರವಾದವು.

ಗುರುಶಿಷ್ಯರ ಕೃತಿಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ, ವಾದಿರಾಜರ 'ಹಾರಾಡುತ್ತಿರುವ ಗಂಧರ್ವರು' ಕೃತಿಯಿಂದ ಕನಕಾರ 'ಯಕ್ಷಿ' ಹುಟ್ಟಿಬಂದಂತೆ ತೋರುತ್ತದೆ. ವಾದಿರಾಜರ ಶ್ರೇಷ್ಠ ಕೃತಿಗಳಾದ ಯಶೋಧರಾ, ಶಿವಪಾರ್ವತಿ, ಅವಲೋಕಿತೇಶ್ವರ ಮತ್ತು ಕನಕಾರ ಸರಸ್ವತಿ, ಕಾಳೀಯಮರ್ದನ ಕೃಷ್ಣ, ಸಪ್ತಋಷಿಗಳು, ರಾಣಿಯ ಶಿರ, ಎಲ್ಲವನ್ನೂ ಒಟ್ಟಾಗಿ ನೋಡುವಾಗ, ಅವರಿಬ್ಬರ ಮನೋಧರ್ಮಗಳು ಥಟ್ಟನೆ ಹೋಲಿಕೆಗೆ ನಿಲುಕುತ್ತವೆ. ಗುರುಗಳಂತೆಯೇ ಶಿಲ್ಪಕಲೆಯ ವಿಷಯದಲ್ಲಿ ಧಾರ್ಮಿಕ ಮಡಿವಂತಿಕೆಯನ್ನು ಕನಕಾ ಮೀರಿದ್ದರು ಎಂಬುದು ನಿಜ. ಶಿಲ್ಪವಿದ್ಯೆ ಜನಾಂಗ ಮತ್ತು ಲಿಂಗಭೇದವನ್ನು ಮೀರಿದ ಕಲಾಪ್ರಕಾರ; ಕಲ್ಲು ಕಡೆಯುವಾಗ ತಾನು ಹೆಣ್ಣೂ ಅಲ್ಲ ಗಂಡೂ ಅಲ್ಲ, ಶಿಲ್ಪಿ ಮಾತ್ರ ಎನ್ನುವುದು ಈಕೆಯ ನೆಲೆ. ಸಾಂಪ್ರದಾಯಿಕ ಶಿಲ್ಪರಚನೆಯ ಹಾದಿಯಲ್ಲಿ ಒಬ್ಬ ಆಲೋಚನಾಶೀಲ ಹೆಣ್ಣಿನ ನೂತನ ಪ್ರಯೋಗಗಳಿಂದ ತೆರೆದುಕೊಂಡ ಆವರಣ ಕನಕಾರವರ ಭಾವಶಿಲ್ಪಲೋಕ. ತಮ್ಮ ಲಹರಿಯನ್ನೇ ಅನುಸರಿಸಿ ಕೆತ್ತಿದ ರಾಗ್ ಕೇದಾರ್, ರಾಗ್ ಮಲ್ಹಾರ್ ಭಾವಪ್ರತಿಮೆಗಳು ಉತ್ತಮ ಉದಾಹರಣೆಗಳು. ಈಕೆಯ ಸಂಗೀತಾಸಕ್ತಿ ಆಳವಾದುದು. ಕೇಳ್ಮೆಯ ಸಂಗದಲ್ಲೇ ಈಕೆಯ ಶಿಲ್ಪವೂ ಅರಳಿತು ಎಂದರೆ ತಪ್ಪಲ್ಲ. ಟ್ರಾಕ್ ಪ್ಯಾಂಟ್, ಟೀ ಶರ್ಟ್ ಧರಿಸಿ, ತಲೆಕೂದಲ ಗಂಟಲ್ಲಿ ಒಂದು ಚೂರು ಮಲ್ಲಿಗೆ ಮುಡಿದು, ಮೈಕೈಯೆಲ್ಲ ಮಣ್ಣುದೂಳು ಮೆತ್ತಿಸಿಕೊಂಡು, ಕಲ್ಲು ಕಡೆಯುವುದೋ, ಅಚ್ಚು ತೆಗೆಯುವುದೋ, ಜೋಡಿಸುವುದೋ ಎಂಥದೋ ಕೆಲಸದಲ್ಲಿ ಮಗ್ನರಾದ ಕನಕಾರನ್ನು ಅವರ ಬಸವನಗುಡಿ ಮನೆಯಲ್ಲಿ ಭೇಟಿಯಾದಾಗಲೆಲ್ಲ, ಕ್ಯಾಸೆಟ್ ಸಂಗೀತದ ಸಾಥ್ ಇರುತ್ತಿತ್ತು. ವಿಶಾಲ ಅಂಗಳದ ಸುತ್ತಮುತ್ತೆಲ್ಲ ನಿಂತೋ, ಮಲಗಿಯೋ, ಉಳಿಏಟು ತಿನ್ನುತ್ತಲೋ, ಪೂರ್ಣಗೊಂಡು ನಗುತ್ತಲೋ, ನೀರಿನ ಟ್ಯಾಂಕಲ್ಲಿ ನೆನೆಯುತ್ತಲೋ ತಮ್ಮ ಇರವನ್ನು ಸಾರುತ್ತಿದ್ದ ಕನಕಾರವರ ಶಿಲ್ಪಗಳು ಒಂದು ಸೆಟ್ಟಿಂಗಿನ ಭಾಗದಂತೆ ಕಾಣುತ್ತಿದ್ದವು.

ಲಾಲ್‌ಬಾಗ್ ಪಶ್ಚಿಮದ್ವಾರದಲ್ಲಿರುವ ಕುವೆಂಪು ಆದಿಯಾಗಿ ಕನ್ನಡದ ಸಾಹಿತಿಗಳು, ಕನಕಾರ ಮೆಚ್ಚಿನ ಸಂಗೀತಗಾರರು, ನಾನಾ ಕ್ಷೇತ್ರದ ದಿಗ್ಗಜರು ಎಲ್ಲರೂ ಇವರ ಕೈಯಲ್ಲಿ ರೂಪ ತಳೆದರು. ಸಾರ್ವಜನಿಕ ಸಂಘಸಂಸ್ಥೆಗಳೂ ಸೇರಿದಂತೆ ನಾಡಿನೆಲ್ಲೆಡೆ ಈ ಕನ್ನಡತಿಯ ಕಲಾಕೃತಿಗಳು ನೆಲೆಸಿವೆ. ಮೊತ್ತಮೊದಲ ಬಾರಿಗೆ ಮಹಿಳೆಯೊಬ್ಬರ ಕಲಾಕೃತಿಗಳು ದೇವಾಲಯಗಳ ಗರ್ಭಗುಡಿಯಲ್ಲಿ ಪ್ರತಿಷ್ಠಾಪನೆಗೊಂಡ ಹಿರಿಮೆ ಕನಕಾರವರಿಗೆ ಸಲ್ಲಬೇಕು. ಮಲ್ಲೇಶ್ವರದ ಗುಡಿಯಲ್ಲಿನ ಗಣೇಶಮೂರ್ತಿ ಮತ್ತು ಚಿಕ್ಕಗುಬ್ಬಿಯ ಆಂಜನೇಯ ವಿಗ್ರಹ ಪ್ರಖ್ಯಾತವಾದವು. ವಿಶ್ವಕರ್ಮ ಜನಾಂಗದ ಪುರುಷರೇ ಪ್ರಧಾನವಾಗಿದ್ದ ಶಿಲ್ಪಕಲೆಯ ನಿರ್ಬಂಧಿತ ವಲಯ ಪ್ರವೇಶಿಸಿ ಇಂಥ ಸಾಧನೆಗೈದದ್ದು ಸಾಮಾನ್ಯ ಸಂಗತಿಯಲ್ಲ. ದೇವನಹಳ್ಳಿಯ ಸರೋಜಾ ಆಚಾರ್ಯ, ಬೆಂಗಳೂರಿನ ರತ್ನಾಭಟ್ ಮುಂತಾದ ಕಲಾವಿದೆಯರ ಹೆಸರುಗಳು ಕೇಳಿಬಂದರೂ ಅವರ ಸಾಂಪ್ರದಾಯಿಕ ಚಟುವಟಿಕೆಗೂ ಕನಕಾ ಅವರ ಕಾರ್ಯವ್ಯಾಪ್ತಿಗೂ ಅಜಗಜಾಂತರ. ಅಲ್ಲದೆ, ಕನಕಾ ಅವರದು ಸ್ವತಂತ್ರ ನಿಲುವು, ತೆರೆದ ಮನಸ್ಸು. ವಾದಿರಾಜರೂ ಸೇರಿದಂತೆ ಕಲಾವಿದರೆಲ್ಲ ರಚಿಸುತ್ತಿದ್ದ ಶಿಲ್ಪಲೋಕದ ಸುಮಕೋಮಲ ಸುಂದರಿಯರನ್ನು ಮೆಚ್ಚಿಕೊಳ್ಳುವ ಹೊತ್ತಿನಲ್ಲೇ, ವಾಸ್ತವವಾಗಿ ಕನಕಾಗೆ ಆಪ್ತವೆನಿಸಿದ್ದು ಕೊಂಚ ಒರಟಾದ, ಸದೃಢವಾದ, ಅತಿಯಾದ ಸಂತುಷ್ಟತೆಯ ಭಾವಕ್ಕೆ ಹೊರತಾದ, ಗಟ್ಟಿ ಮೈಮನಸ್ಸಿನ ಹೆಣ್ಣು ಪ್ರತಿಮೆಗಳೇ. ಕನಕಾ ಕಲ್ಲಿನಲ್ಲಿ ಅರಳಿಸಿದ ಪುರಾಣದ ಋಷಿಮುನಿಗಳು, ಆಡುವ ಮಕ್ಕಳು, ಶ್ರಮಜೀವಿಗಳು ಎಲ್ಲರೂ ಮಾನವಸಹಜ ವಿನಿಮಯದಲ್ಲಿ ತಲ್ಲೀನರು. ಕುಸುರಿ ಚೆಂದದ ಹೊಯ್ಸಳ ಶೈಲಿಗಿಂತ, ಭಾವಪ್ರಧಾನ ಚಾಲುಕ್ಯ ಶೈಲಿಯನ್ನು ಕನಕಾ ತಮ್ಮದಾಗಿಸಿಕೊಂಡರು.

9ನೇ ಪುಟಕ್ಕೆ...

ಕ್ವಾರಂಟೈನ್ ನಮೋನಮಃ!

ಪೂರ್ಣಿಮಾ ಭಟ್ಟ, ಸಣ್ಣಕೇರಿ

ಸುಮಾರು ಇಪ್ಪತ್ತು ವರ್ಷದ ಹಿಂದಿನ ಕತೆ. ಅವು ಕಾಲೇಜು ದಿನಗಳು. ನಮ್ಮ ಹಳ್ಳಿ ಮನೆಯಿಂದ ಕಾಲೇಜಿಗೆ ಓಡಾಡುತ್ತಿದ್ದೆ. ಹೊತ್ತಿಲ್ಲದೇ ಗೊತ್ತಿಲ್ಲದೇ ಎರಗುವ ಕೆಟ್ಟ ಅತಿಥಿಯಂತೆ ಬರುತ್ತಿತ್ತಲ್ಲ ತಿಂಗಳಿಗೊಮ್ಮೆ ಮುಟ್ಟು! ಅದು ಬಂತೆಂದರೆ ಸಾಕು, ಕೆಟ್ಟ ಅಲವರಿಕೆ. ಬೇರೆಲ್ಲವನ್ನೂ ಹೇಗೋ ಹೆಣಗಿಬಿಟ್ಟೇನು. ಆದರೆ ಮನೆಯಲ್ಲಿ ಆಯಿಯ ಕಟ್ಟಪ್ಪಣೆ, ಆ ಮೂರು ದಿನ ಮಾತ್ರ ಹೊರಗೇ ಕೂಡ್ರಬೇಕು ಎಂದು. ಅಜ್ಜ-ಅಜ್ಜಿ ಇರುವ ಮನೆ, ಮೂಲ ದೇವರಿರುವ ಮನೆ, ಪೂಜೆ ಪುನಸ್ಕಾರದ ಮನೆ. ಮುಟ್ಟು ಮೈಲಿಗೆ ಇಲ್ಲದೇ ಇಡೀ ಮನೆ ಓಡಾಡಬೇಡ ಎಂದು ಅವಳ ತಾಕೀತು.

ಅಜ್ಜಿಮನೆಯಲ್ಲಿ ಹೈಸ್ಕೂಲು ಮುಗಿಸಿದ್ದ ನಾನು, ಅಜ್ಜಿಗೆ ಟೋಪಿ ಹಾಕಿಯೇ ಮುಟ್ಟಿನ ದಿನಗಳನ್ನು ಏಮಾರಿಸಿಬಿಡುತ್ತಿದ್ದೆ. ಆದರೆ ನಂತರದ ವರ್ಷಗಳಲ್ಲಿ ನಮ್ಮ ಅಮ್ಮನಿಗೆ ಆ ಟೋಪಿಯ ಸೈಜ್ ಸರಿಯಾಗಲೇ ಇಲ್ಲ. ನೂರೆಂಟು ಕಾರಣ ಕೊಟ್ಟು, ಆಣೆ ಭಾಷೆಗಳನ್ನು ಹಾಕಿ ಅಂತೂ ಹಾಸಿಗೆ ಬೇರೆ ಕೊಟ್ಟೇ ಬಿಡುತ್ತಿದ್ದರು ಆಯಿ. ಅದು ನನಗೆ ಪರಮ ಹಿಂಸೆ. ಇನ್ಯಾರೂ ಹುಡುಗಿಯರಿಲ್ಲದ ಮನೆ ಬೇರೆ. ತಿಂಗಳು ಪೂರ್ತಿ ಅಣ್ಣಂದಿರ ಮೇಲೆ ರುಬಾಬು ಹೊಡೆಯುತ್ತ, ಅಪ್ಪ - ಅಜ್ಜನನ್ನು ಹೆದರಿಸುತ್ತ ಇರುವ ನಾನು, ಈ ಮೂರು ದಿನ ಮೆತ್ತಿನ ಮೇಲಿರುವ ಮೂಲೆಯೊಂದಲ್ಲಿ ಕಟ್ಟಿಹಾಕಿದ ಕುನ್ನಿಮರಿಯಂತೆ ಕೂತು ಕಳೆಯಬೇಕಲ್ಲ ಎಂಬ ಆಲೋಚನೆಯೇ ನನಗೆ ದೊಡ್ಡ ಗುಮ್ಮನಾಗಿತ್ತು. ಊಟ-ತಿಂಡಿಗೆ ಮಾತ್ರ ಕೆಳಗೆ ಬುಲಾವು. ಬಂದರೂ ಪಂಕ್ತಿಯಿಂದ ದೂರ. ಹಂಡೆ ನೀರು ಮುಟ್ಟುವಂತಿಲ್ಲ, ಕುಡಿಯಲು ನೀರು ಕೇಳಬೇಕು, ಅಡುಗೆಗೆ ಸಹಾಯ ಮಾಡುವಂತಿಲ್ಲ, ಜಗಲಿಯಲ್ಲಿ ಪಟ್ಟಾಂಗ ಹೊಡೆಯುತ್ತ ಕೂಡ್ರುವಂತಿಲ್ಲ -ಅಂತೂ ಇಲ್ಲಗಳ ಪಟ್ಟಿ.

> ಮೂರೂ ಮತ್ತೊಂದು ದಿನಗಳ ಮುಟ್ಟೂ, ಹದಿಮೂರೂವರೆ ದಿನಗಳ ಕೋವಿಡ್ಡೂ...

ಕಾಲೇಜು ಇರುವ ದಿನವಾದರೆ ತೊಂದರೆ ಇಲ್ಲ. ಮನೆ ಮರೆಯಾಗುವವರೆಗೆ ಹಿಂದೆ ಹಿಂದೆ ಇದ್ದು, ನಂತರ ಅಣ್ಣಂದಿರೊಡನೆ ಓಡು ನಡಿಗೆಯಲ್ಲಿ ಬಸ್ ಸ್ಟಾಪ್, ಕಾಲೇಜು ಸೇರಿ ಏನೇನೂ ಆಗಿಲ್ಲವೆಂಬಂತೆ ಇರುತ್ತಿದ್ದೆ. ಹೇಗೋ ಮೂರು-ಮತ್ತೊಂದು ದಿನ ದೂಡುತ್ತಿದ್ದೆ. ಆದರೆ ನನ್ನ ದೇಹವೂ ಸರಿ. ಹಬ್ಬ-ಹರಿದಿನ, ದಸರಾ ರಜೆ, ಬೇಸಿಗೆ ರಜಾ ದಿನಗಳು ಶುರುವಾಗುವುದೇ ಕಾಯ್ದು ಕೂಡ್ರುತ್ತಿತ್ತು ಈ ಮುಟ್ಟು. ಮಾರನೇ ದಿನದ ಗೌರಿ ಹಬ್ಬಕ್ಕೆ ಆಯಿ ಅರಳು ಉಂಡೆಗೆ ತಯಾರಿ ನಡೆಸುತ್ತಿದ್ದಾಳೆ... ನನಗಿಲ್ಲಿ ಈ ಕಡೆ ಶುರು. ಬೇಸಿಗೆ ರಜೆಯ ಆರಂಭ. ಮನೆಗೆ ಚಿಕ್ಕಮ್ಮ - ಅವರ ಮಕ್ಕಳೆಲ್ಲ ಬಂದಿದ್ದಾರೆ. ಹತ್ತಿರದ ಮದುವೆಗೆ ಹೋಗುವ ತಯಾರಿ ಬೇರೆ... ಅಷ್ಟರಲ್ಲಿ ನನ್ನ ಬಿಡಾರ ಬೇರೆ!

ಮೊದಲು ಕೆಲ ವರ್ಷಗಳ ಇರುಸುಮುರುಸು, ನಂತರದ ಅಸಹನೆ, ವ್ಯರ್ಥಮಾಡಿದ ಒಂದಷ್ಟು ಕೋಪ-ತಾಪ-ಮಹಿಳಾವಾದದಂಥ ಮೊಂಡಾಟ ಇದರಲ್ಲೇ ಕಾಲೇಜು, ಹಾಸ್ಟೆಲು, ಯೂನಿವರ್ಸಿಟಿ, ಮದುವೆ ಮನೆಕಾಲ ಎಲ್ಲ ಮುಗಿದೇಹೋಯಿತು. ಆಗ ಹಾಗೆಲ್ಲ ಕಳೆದ ದಿನಗಳನ್ನು ಸಿಲ್ಲಿ ಎಂದು ನಾನು ಕೊಡವಿಯೂ ಆಗಿತ್ತು. ಮೊನ್ನೆ ಮೊನ್ನಿನವರೆಗೂ ಆ ನೆನಪುಗಳು ಭೂ ಮಂತ್ರಕಾಳಿಯಾಗಿದ್ದವು.

ಆದರೆ, ನನಗೂ ಕೋವಿಡ್ಡು ಬಂದು ಅಟಕಾಯಿಸಿಕೊಂಡಿತಲ್ಲ! ಐದು ರಾತ್ರಿ-ಐದು ಹಗಲು ಮೈಮೇಲೆ ಎಚ್ಚರವಿಲ್ಲದವರಂತೆ ಮಲಗಿದ್ದೆ. ಜೋಲಿ ಹೊಡೆಯುವುದು ನಿಂತಾಗೊಮ್ಮೆ ಎದ್ದು ಬಾಗಿಲವರೆಗೆ ಹೋಗಿ ಸ್ಟೂಲ್ ಮೇಲಿದ್ದ ಪೇಪರ್ ಪ್ಲೇಟಿನಲ್ಲಿ ಇಟ್ಟ ಊಟವನ್ನು ಬ್ಯಾಲೆನ್ಸ್ ಮೇಲೆಯೇ ತಂದು ಅರ್ಧ ತಿಂದು ಅರ್ಧ ಕಮೋಡಿಗೆ ಹಾಕುತ್ತಿದ್ದೆ. ಮಾತ್ರೆಗಳನ್ನು ಮಾತ್ರ ಪರಾಂಬರಿಸಿ ನೋಡಿ-ನುಂಗುತ್ತಿದ್ದೆ. ಜ್ವರದ ಕಾವಿಗೋ, ಅನ್ನ ತಿಂದ ಸೊಕ್ಕಿಗೋ, ಕೋವಿಡ್ಡಿನ ಮೇಲಿನ ಕೋಪಕ್ಕೋ ಗೊತ್ತಿಲ್ಲ, ರೂಮಿನ ಬಾಗಿಲು ಜಡಿದಿದ್ದರೂ ಬಾಗಿಲಿನಿಂದಾಚೆ ಇರುವ ಗಂಡನನ್ನ - ಮಕ್ಕಳನ್ನ ವಿನಾಕಾರಣ ಒಂದಷ್ಟು ಬೈದು ಮತ್ತೆ ಮುಸುಕೆಳೆದು ಮಲಗುತ್ತಿದ್ದೆ.

11ನೇ ಪುಟಕ್ಕೆ...

ನಮ್ಮ ಬದುಕಿನ ಬಂಡಿ ಈಗ ಹೀಗೇ ಕಾಲುಚಾಚಿ ಮಲಗಿಬಿಟ್ಟಿದೆ ನೋಡ್ರಿ ಸಾಹೇಬ್ರ...

ಮಲಗಿದ್ದು ನೀವಷ್ಟೇ ಅಲ್ಲ ಮನೆಯ ಒಲೆಯಲ್ಲಿ ಬೆಕ್ಕೂ

ಚಿತ್ರಗಳು: ತಾಜುದ್ದೀನ್ ಆಜಾದ್

'ಚರ್ಮ ಕುಟೀರ'ದ ಮಲ್ಲಣ್ಣ, ಸರಕಿನ ಗಾಡಿ ಎಳೆಯುವ ಪಕ್ಕಣ್ಣ, ಗುಜರಿ ಅಂಗಡಿಯ ಕಾಸಿಂ ಭಯ್ಯಾ, ಚಿಂದಿ ಆಯುವ ಸೀತಮ್ಮ...

ಎಲ್ಲಾ ಹೇಗಿದ್ದೀರಿ?

ಸಾಮಾನ್ಯ ದಿನಗಳಲ್ಲಾದರೆ ಏನು ಧಾವಂತ ನಿಮ್ಮದು. ನಸುಕಿನಲ್ಲಿ ಎದ್ದು ಸೂರ್ಯ ಮುಳುಗುವವರೆಗೆ ಬೆವರು ಹರಿಸಿದರೂ ಕೆಲಸವೇ ಮುಗಿಯಲೊಲ್ಲದು. ತುತ್ತಿನ ಚೀಲ ತುಂಬಬೇಕಿತ್ತಲ್ಲ? ಬೆಳಿಗ್ಗೆ ಬೇಗ ಬಂದು ಅಂಗಡಿ ತೆಗೆಯುತ್ತಿದ್ದೆಯಲ್ಲ ಮಲ್ಲಣ್ಣ? ಹೊಸ ಚಪ್ಪಲಿ ಹೊಲಿಯೋದು, ಹಳೆಯ ಚಪ್ಪಲಿ ರಿಪೇರಿ ಮಾಡಿಕೊಡುವುದು... ಬಂದ ಅಲ್ಪ ಆದಾಯದಲ್ಲಿಯೇ ನೆಮ್ಮದಿಯ ಜೀವನ ಸಾಗಿಸೋದು – ಸಂತೆಯೊಳಗಿನ ಸಂತನಂತೆ ಬದುಕಿದ್ದೆಯಲ್ಲವೇ ನೀನು? ಅಂಗಡಿಯಲ್ಲಿ ಕಾಲು ಚಾಚಿ ಮಲಗಿ ಬಿಟ್ಟಿರುವೆಯಲ್ಲ, ಈಗ ಹೊಟ್ಟೆ ಹೊರೆಯಲು ಏನು ಮಾಡುತ್ತಿ? ನಿನ್ನಂತೆ ಪಕ್ಕಣ್ಣನ ಬದುಕಿನ ಬಂಡಿಯೂ ನಿಂತುಬಿಟ್ಟಿದೆ. ನಿಂತ ಬಂಡಿಯ ಮೇಲೆ ಆತನೂ ಕಾಲುಚಾಚಿ ಮಲಗಿ ಬಿಟ್ಟಿದ್ದಾನೆ ನೋಡು. ಕಾಸಿಂ ಭಯ್ಯಾನಾದರೂ ಏನು ಮಾಡುತ್ತಾನೆ ಅಂದುಕೊಂಡಿದ್ದೀರಿ? ಗುಜರಿಯಲ್ಲಿ ಬಿದ್ದ ಸಾಮಾನುಗಳನ್ನು ಈ ರಾಶಿಯಿಂದ ಆ ರಾಶಿಗೆ, ಆ ರಾಶಿಯಿಂದ ಈ ರಾಶಿಗೆ ಹಾಕೋದಷ್ಟೇ ಈಗ ಅವನ ಕೆಲಸ. 'ಯಾಕೆ' ಅಂತ ಕೇಳಿದರೆ, 'ಹೊತ್ತು ಹೋಗಬೇಕಲ್ಲ' ಎಂದು ಮರುಪ್ರಶ್ನೆ ಹಾಕಿಬಿಡುತ್ತಾನೆ. ಹೊತ್ತೇನೋ ಹೋಗುತ್ತದೆ; ಊಟ ಎಂದು ಕೇಳಿದರೆ ಮುಗಿಲ ಕಡೆಗೆ ಮುಖ ಮಾಡುತ್ತಾನೆ.

ಪಾಪ, ಚಿಂದಿ ಆಯುವ ನಮ್ಮ ಸೀತಮ್ಮ ಲಾಕ್‌ಡೌನ್ ಕಾಲದಲ್ಲೂ ರಜೆ ತೆಗೆದುಕೊಳ್ಳಲು ಸಿದ್ಧವಿಲ್ಲ. ಹೆಗಲಿಗೆ ಚೀಲ ಏರಿಸಿಕೊಂಡು ಹೊರಟೇಬಿಟ್ಟಿದ್ದಾಳೆ. ಖಾಲಿ, ಖಾಲಿಯಾಗಿರುವ ಮಾರುಕಟ್ಟೆಗಳಲ್ಲಿ, ರಸ್ತೆಗಳಲ್ಲಿ ಜನರಿಲ್ಲದಿದ್ದರೂ ಗುಜರಿ ಸಿಕ್ಕೇ ಸಿಕ್ಕುತ್ತದೆ ಎನ್ನುವ ನಂಬಿಕೆ ಅವಳಿಗೆ. ವಾಸ್ತವವಾಗಿ, ಸಾಂಕ್ರಾಮಿಕದ ಈ ಅಟ್ಟಹಾಸದಲ್ಲೂ ಅವಳೇ ಹೆಚ್ಚು ಆಶಾವಾದಿ. ಅಂದಹಾಗೆ, ನಿಮ್ಮೆಲ್ಲರ ಮುಖಗಳಲ್ಲಿ ಈಗ ಸಿಟ್ಟು ಎದ್ದು ಕಾಣಬೇಕಿತ್ತು. ಆದರೆ, ಅಲ್ಲಿ ಕಾಣುತ್ತಿರುವುದು ನೋವು ನುಂಗಿದ ವಿಷಣ್ಣವದನ ಮಾತ್ರ. ಕಾಸು ಖಾಲಿಯಾದ ಬಳಿಕ, ಬೀದಿಯಲ್ಲಿ ಹಂಚುತ್ತಿದ್ದ ಆಹಾರ ಪೊಟ್ಟಣಗಳಿಗೂ ಕೈಯೊಡ್ಡಬೇಕಾಯಿತಲ್ಲ? ನೀವು ಕಂಡಿದ್ದ ಕನಸುಗಳು ತುಂಬಾ ಸರಳ. ಆದರೆ, ನನಸಾಗಿಸುವುದು ಅಷ್ಟೇ ಕಠಿಣ ಬಿಡಿ. 'ಕೈತುಂಬಾ ಕೆಲಸ ಮಾಡಬೇಕು, ಹೊಟ್ಟೆ ತುಂಬಾ ಉಂಡು ನೆಮ್ಮದಿಯಿಂದ ಜೀವನ ಸಾಗಿಸಬೇಕು.' ಇದೇ ಅಲ್ಲವೇ, ನಿಮ್ಮ ಕನಸು. ಹಬ್ಬಗಳಿರಲಿ, ಮನೆಯ ಸಂಪ್ರದಾಯಗಳಿರಲಿ, ಜ್ವರದಿಂದ ಬಳಲುತ್ತಿರಲಿ ನೀವು ಕೆಲಸ ಮಾಡದೆ ಬಿಟ್ಟವರಲ್ಲ. ಆದರೆ, ಯಾರಿಗೋ ಹಿಡಿದ ಜ್ವರ ನಿಮ್ಮನ್ನು ಮನೆಯಲ್ಲೇ ಬಂದಿಯಾಗುವಂತೆ ಮಾಡಿಬಿಟ್ಟಿದೆ.

ಆರ್ಥಿಕ ಮುಗ್ಗಟ್ಟಿನ ಈ ಸನ್ನಿವೇಶದಲ್ಲಿ ನಿಮ್ಮ ಕಠಿಣಶ್ರಮ ಮತ್ತು ಕಾಣಿಕೆಯನ್ನು ಯಾರು ತಾನೇ ನೆನಪು ಮಾಡಿಕೊಂಡಾರು? ಹೌದು, ಕೆಲಸದ ಸ್ಥಳದಲ್ಲಿ ನೀವಷ್ಟೇ ಮಲಗಿಲ್ಲ, ನಿಮ್ಮ ಮನೆಯೊಳಗಿನ ಒಲೆಯಲ್ಲೂ ಬೆಕ್ಕು ಮಲಗಿಬಿಟ್ಟಿದೆ...

ಬರಹ: ಪಿನಾಕ

ಬಾಗಿಲು ಅರ್ಧ ತೆರೆದಿದೆ. ಒಳಗೆ ಇನ್ನೂ ಕತ್ತಲು ಆವರಿಸಿದೆ. ಸಲಕರಣೆಗಳನ್ನು ಇಟ್ಟುಕೊಂಡು ಕಾದರೂ ಗ್ರಾಹಕರಿಲ್ಲ. ಮಲಗುವುದೊಂದೇ ಉಳಿದಿರುವ ಕಾಯಕ...

ಚಿಂದಿ ಆಯುವ ನಮ್ಮ ಕೆಲಸಕ್ಕೆ ಯಾವ ಲಾಕ್‌ಡೌನ್?

ಇಚಲ ಹಣ್ಣು ಸರ್
ಇಚಲ ಹಣ್ಣು...
ಲಾಕ್‌ಡೌನ್ ಖರೆ,
ಹೊಟ್ಟೆ ಕೇಳುತ್ತಾ?

ಗುಜರಿಯ ಕಾರ್ಮಿಕನನ್ನೂ ಲಾಕ್‌ಡೌನ್ ಕಟ್ಟಿಹಾಕಿದೆ. ಗುಜರಿಯ ರಾಶಿ ಬದಲಿಸುವುದಷ್ಟೇ ಈಗ ಆತನ ಕೆಲಸ

ಉಳಿಪೆಟ್ಟು

8ನೇ ಪುಟದಿಂದ...

ಕೌಟುಂಬಿಕ ಸಮತೋಲನ ಕಾಯ್ದುಕೊಂಡೇ ಕಲಾಯಾನ ಕೈಗೊಂಡವರು ಕನಕಾ. ಮಗಳೊಂದಿಗೆ ಬದುಕನ್ನು ಸಂಭ್ರಮಿಸಬೇಕೆನ್ನುವ ತಾಯಿಯೊಬ್ಬಳಿಗೆ, ವ್ಯಕ್ತಿ ಮಗನಾಗಿ ರೂಪಾಂತರಗೊಂಡಾಗ, ಅದೇನೂ ಸುಲಭವಾದ ಸವಾಲಲ್ಲ. ವೈಯಕ್ತಿಕ ಆಯ್ಕೆಯ, ಸಾಂಸ್ಕೃತಿಕ ರಾಜಕಾರಣದ ಆಯಾಮವನ್ನು ಪರಿಗಣಿಸುತ್ತಲೇ, ಕನಕಾ ಕೂಡ ಈ ಸನ್ನಿವೇಶವನ್ನು ಎದುರಾಗಿದ್ದಾರೆ ಎಂದು ನನ್ನ ನಂಬಿಕೆ. ಒಂದು ಕುಟುಂಬದ, ಸಮುದಾಯದ ಮಾಮೂಲು ಸಂಗತಿಯಲ್ಲದ, ವಿಶಿಷ್ಟ ಸಂಘರ್ಷಗಳು ಎದುರಾದಾಗ, ನುಂಗಲೂ ಆಗದ, ಕಕ್ಕಲೂ ಆಗದ ಇಕ್ಕಟ್ಟಿನಲ್ಲಿ ವ್ಯಕ್ತಿಯೊಬ್ಬರು ಅನುಭವಿಸುವ ಏಕಾಂಗಿತನ, ಅಸಹಾಯಕತೆ, ಆ ದೋಣಿಯಲ್ಲಿ ಪಯಣಿಸಿದವರಿಗೆ ಮಾತ್ರ ಗೊತ್ತು. ತನ್ನ ಸಮಸ್ಯೆಗಿದ್ದ ಸಾಮಾಜಿಕ ಆಯಾಮವನ್ನು ಅಸಾಧಾರಣವಾಗಿ ನಿಭಾಯಿಸಿ, ಹೆತ್ತ ಕುಡಿಗೆ ಒತ್ತಾಸೆಯಾಗಿ ನಿಲ್ಲುತ್ತಲೇ, ಸಮಾಜಕ್ಕೊಂದು ಮಾದರಿಯಾಗಿ ಬೆಳೆದರು. ಶಿಲೆಗಳನ್ನು ಕೆತ್ತುತ್ತಲೇ ತಾನೂ ಸಾವಿರ ಉಳಿಪೆಟ್ಟು ತಿಂದು ಮಾಗಿದ ಹಿರಿಯ ಜೀವವೊಂದು ಕಣ್ಮರೆಯಾಗಿದೆ. ನಿರಂತರವಾಗಿ ಕನಕಾರವರ ಬೆನ್ನಿಗಿದ್ದ ಒಡನಾಡಿ, ಪತಿ ನಾರಾಯಣಮೂರ್ತಿ, ತಾಯಿಯನ್ನು ಕಳೆದುಕೊಂಡ ರೂಮಿ ಹರೀಶ್, ಅಪಾರ ಬಂಧುಮಿತ್ರರು ಇನ್ನು ಅವರ ಕಲಾಕೃತಿಗಳಲ್ಲೇ ಅವರನ್ನು ಅರಸಬೇಕಿದೆ. ನನ್ನಮಟ್ಟಿಗೆ, ಕನಕಾ 'ಯಕ್ಷಿ'ಯ ರೂಪದಲ್ಲಿ, ನಟರಾಜನ ಸುಂದರ ನಾಟ್ಯಮೂರ್ತಿಯ ರೂಪದಲ್ಲಿ, ನಮ್ಮ ಮನೆಯಲ್ಲೇ ನೆಲೆಸಿದ್ದಾರೆ.


ಕನಕಾ ಅವರ ಕೈಚಳಕದಲ್ಲಿ ಅರಳಿದ ಗಂಧರ್ವ

ಬೆತ್ತ ಯಾರದೋ...

8ನೇ ಪುಟದಿಂದ...

ಆ ಪೀಠಕ್ಕೆ ಯಾರನ್ನು ಕೂರಿಸಬೇಕು ಎಂಬ ಬಗ್ಗೆ ಭಾರೀ ರಾಜಕೀಯ ಜಟಾಪಟಿ ನಡೆಯುತ್ತದೆ. ಈಗಿರುವ (ಇಥಿಯೋಪಿಯಾ ಮೂಲದ) ಟೆಡ್ರೋಸ್ ಮಹಾಶಯ ಅಧ್ಯಕ್ಷನಾಗುವುದು ಅಮೆರಿಕಕ್ಕೆ ಹಾಗೂ ಅದರ ಬೆಂಬಲಿತ ದೇಶಗಳಿಗೆ ಬೇಕಿರಲಿಲ್ಲ. ಆದರೆ ಚೀನಾ ಅದೇನೇನೊ ಮಸಲತ್ತು ಮಾಡಿ, ಆಫ್ರಿಕಾದ ರಾಷ್ಟ್ರಗಳಿಗೆ ಆರ್ಥಿಕ ನೆರವಿನ ಆಮಿಷ ಒಡ್ಡಿ ವೋಟ್ ಬ್ಯಾಂಕನ್ನು ಭದ್ರಪಡಿಸಿ ಟೆಡ್ರೋಸನ್ನು ಗೆಲ್ಲಿಸಿಯೇಬಿಟ್ಟಿತು. ಭಾರತವೂ ಆತನಿಗೇ ವೋಟ್ ಹಾಕಿತು. ಒಂದು ಕಾರಣ ಏನೆಂದರೆ, ಟೆಡ್ರೋಸ್‌ಗೆ ಪ್ರತಿಸ್ಪರ್ಧಿಯಾಗಿ ಪಾಕಿಸ್ತಾನದ ಡಾ. ಸಾನಿಯಾ ನಿಷ್ತಾರ್ ಕಣದಲ್ಲಿದ್ದರು.

ಚೀನಾ ಬೆಂಬಲಿತ ವ್ಯಕ್ತಿ ಗೆದ್ದಿದ್ದ ಉರಿ; ಅಮೆರಿಕವನ್ನೂ ಕೊರೊನಾ ಅಮರಿಕೊಂಡಿದ್ದ ಪರಿ – ಅಂತೂ ಟ್ರಂಪ್‌ಗೆ ವಿಸ್ವಾಸಂ ಮೇಲೆ ವಿಶ್ವಾಸವೇ ಉಳಿಯಲಿಲ್ಲ. ಕೂಗಾಡಿ, ಈ ಸಂಸ್ಥೆಗೆ ಚಂದಾ ಕೊಡುವುದಿಲ್ಲ ಎಂದು ಬೈದಾಡಿದ್ದಂತೂ ಆಯಿತು. ಆದರೆ ಕೊರೊನಾ ಸೋರಿಕೆಗೆ ಚೀನಾದ ಸಂಶೋಧನೆಯೇ ಕಾರಣ ಎಂದು ಬಹಿರಂಗವಾಗಿ ಹೇಳುವ ಹಾಗಿರಲಿಲ್ಲ. ಉಗ್ರ ತನಿಖೆಗೂ ಒತ್ತಾಯಿಸುವ ಹಾಗಿಲ್ಲ - ಏಕೆಂದರೆ ಅಮೆರಿಕದ ಮಿಲಿಟರಿಯೂ ಅಂಥ ಸಂಶೋಧನೆಯಲ್ಲಿ ಶಾಮೀಲಾಗಿದ್ದ ಸಂಗತಿ ಹೊರಬಂದರೆ?

ಸೋರಿಕೆ ಸಾಧ್ಯತೆ ಕುರಿತು ವಿಸ್ವಾಸಂ ತನಿಖೆ ನಡೆಸಬೇಕು ಎಂದು ಅನೇಕ ವಿಜ್ಞಾನಿಗಳು ಒತ್ತಾಯಿಸಿದ್ದಾರೆ. ಹಿಂದೆಯೇ ಅಂಥದ್ದೊಂದು ತನಿಖಾ ಸಮಿತಿಯನ್ನು ವಿಸ್ವಾಸಂ ವುಹಾನ್‌ಗೆ ಕಳಿಸಿ ವರದಿ ತರಿಸಿತ್ತು. 'ಇದು ನೈಸರ್ಗಿಕವಾಗಿ ಹೊರಬಿದ್ದ ಕಾಯಿಲೆ' ಎಂದೇ ತೀರ್ಪು ನೀಡಿತ್ತು. ಆದರೆ, ಆ ಸಮಿತಿಯ 34 ಸದಸ್ಯರ ಪೈಕಿ 17 ಮಂದಿ ಚೀನೀಯರೇ ಆಗಿದ್ದು, ಟೆಡ್ರೋಸ್ ಕೂಡಾ ಚೀನೀ ನೆಂಟನೇ ಆಗಿದ್ದರಿಂದ ತನಿಖಾ ಸಮಿತಿ ನಿಜ ಸಂಗತಿಯನ್ನು ದಫನ ಮಾಡಿದೆ ಎಂಬ ಟೀಕೆ ಬಂದಿತ್ತು. ಇದೀಗ ಅದೇನು ಒತ್ತಡ ಬಂತೊ, ಟೆಡ್ರೋಸ್ 'ಸಾಕ್ಷ್ಯ ಸಾಲದು, ಇನ್ನಷ್ಟು ತನಿಖೆ ನಡೆಯಬೇಕು' ಎಂದಿದ್ದಾರೆ.

ಆದರೆ ಈಗ ಅಮೆರಿಕ ಸತ್ಯಶೋಧಕ್ಕೆ ಇಳಿಯುವುದು ಅನಿವಾರ್ಯವಾಗುತ್ತಿದೆ. ಏಕೆಂದರೆ, ಪ್ರತಿಷ್ಠಿತ 18 ವಿಜ್ಞಾನಿಗಳು ಎರಡು ವಾರಗಳ ಹಿಂದೆ ತನಿಖೆಗೆ ಒತ್ತಾಯಿಸಿ 'ಸೈನ್ಸ್' ಪತ್ರಿಕೆಗೆ ಬರೆದ ಪತ್ರ ಜಗಜ್ಜಾಹೀರಾಗಿದೆ. ಅದಕ್ಕೇ 'ಸತ್ಯಪತ್ತೆ ಕೆಲಸವನ್ನು ತೀವ್ರಗೊಳಿಸಿ' ಎಂದು ಮೊನ್ನೆ ಬುಧವಾರ ಅಧ್ಯಕ್ಷ ಬೈಡನ್ ಅಮೆರಿಕದ ಗುಪ್ತಚರ ಸಂಸ್ಥೆಗೆ ಆದೇಶ ನೀಡಿದ್ದಾರೆ.

ತನಿಖೆಗೆ ವಿಜ್ಞಾನಿಗಳ ಸಹಾಯವಂತೂ ಬೇಕು. ಅವರು ಅದೇನೇ ಸತ್ಯವನ್ನು ಹೊರಗೆಳೆದರೂ ಅದನ್ನೂ ಅಮೆರಿಕ ಸರ್ಕಾರ ತನ್ನ ಅನುಕೂಲಕ್ಕೆ ತಕ್ಕಂತೆ ಬಿಚ್ಚಿಡಬಹುದು ಅಥವಾ ಮುಚ್ಚಿಡಬಹುದು. ಆಗಿನ ಸ್ವಾರಸ್ಯ ಏನೆಂದರೆ ಗುಪ್ತಚರರು ಪತ್ತೆ ಮಾಡಿದ್ದನ್ನು ಮಾಧ್ಯಮಗಳು ಪತ್ತೆ ಮಾಡಿ ಟಾಂ ಟಾಂ ಮಾಡುತ್ತವೆ.

ಆಯಿತು, ಲ್ಯಾಬಿನಿಂದ ವೈರಾಣು ಸೋರಿಕೆಯಾಗಿದ್ದೇ ಹೌದೆಂದು ಗೊತ್ತಾದರೂ ಏನೀಗ? ಯಾರು ಏನು ಮಾಡಲು ಸಾಧ್ಯ? ಚೀನಾ ಅದನ್ನು ಒಪ್ಪಿಕೊಳ್ಳುವುದಿಲ್ಲ. ಈ ಮಹಾಸಾಂಕ್ರಾಮಿಕದಿಂದ ಯಾರು ಯಾರು ಎಷ್ಟೆಷ್ಟು ಗಿಟ್ಟಿಸಿಕೊಳ್ಳಬೇಕೊ ಅವಷ್ಟನ್ನೂ ದಕ್ಕಿಸಿಕೊಂಡಾಗಿದೆ. ಲಸಿಕೆ, ಪಿಪಿಇ ಕಿಟ್, ಸ್ಯಾನಿಟೈಸರ್, ಆಕ್ಸಿಜನ್, ಟೆಸ್ಟಿಂಗ್ ಉಪಕರಣ, ಮೊಬೈಲ್, ಕಂಪ್ಯೂಟರ್, ಟ್ಯಾಬ್ಲೆಟ್‌ಗಳ ತಯಾರಕರೂ ನೆಟ್‌ವರ್ಕ್ ಕಂಪನಿಗಳೂ ತಂತಮ್ಮ ಕೈಲಾದ ಸೇವೆಗೆ ಇಳಿದು ಲಾಭಾಂಶವನ್ನು ಷೇರುದಾರರಿಗೆ ರವಾನಿಸುತ್ತಿವೆ. ಕಷ್ಟಕ್ಕೀಡಾದವರಿಗೆ, ನಷ್ಟದಲ್ಲಿದ್ದವರಿಗೆ ಮತ್ತು ಪ್ರಾಣತೆತ್ತ ವೈದ್ಯ ವೃಂದಕ್ಕೆ ಪರಿಹಾರ ಕೊಡುವಂತೆ ಚೀನಾವನ್ನು ಕೋರಲು ಸಾಧ್ಯವೆ?

ಕೊನೆಗೂ ದೊಣ್ಣೆ ಯಾರದೋ ಎಮ್ಮೆಯೂ ಅವನದೇ!

ಅಂತೂ ಸತ್ಯಶೋಧನೆಯ ಈ ಅಸಂಗತ ನಾಟಕ ರಂಗಕ್ಕೇರಲಿದೆ. ರಾಜಕೀಯ ಮಸಲತ್ತು, ತನಿಖಾ ವರದಿಗಾರರ ಕಸರತ್ತುಗಳ ನಡುವೆ ಹೆಚ್ಚೆಂದರೆ ಲ್ಯಾಬ್‌ಗಳ ಭದ್ರತಾ ವ್ಯವಸ್ಥೆ ಇನ್ನಷ್ಟು ಬಿಗಿಯಾದೀತು. ನಮ್ಮನಿಮ್ಮೆಲ್ಲರ ಬದುಕಿನ ಭದ್ರತೆಯ ವಿಷಯ ಪಾರ್ಕಲಾಂ.

ಸದ್ಯಕ್ಕೆ 'ಶಾಂತತಾ! ಕೋರ್ಟ್ ಚಾಲೂ ಆಗಿದೆ!'

ಮುನ್ನೋಟ 30-05-2021 ರಿಂದ 06-06-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಮುಂದಿನ ಬದುಕಿನ ಬಗ್ಗೆ ಸ್ವಲ್ಪ ಚಿಂತೆ ಮಾಡುವಿರಿ. ಸರಿಯಾದ ನಿರ್ಣಯದಿಂದ ಮುಂದಿನ ಬದುಕಿಗೊಂದು ದಾರಿ ಕಂಡುಕೊಳ್ಳುವಿರಿ. ಕಾರ್ಯಕ್ಷೇತ್ರದಲ್ಲಿ ಸ್ನೇಹಿತರಿಂದ ಮತ್ತು ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ದೊರೆತು ನೆಮ್ಮದಿ ಕಾಣುವಿರಿ. ಹಿರಿಯರಿಂದ ಬಂದ ಸಲಹೆಗಳನ್ನು ನಿರಾಕರಿಸಬೇಡಿ. ದಿಢೀರ್ ಶ್ರೀಮಂತರಾಗಲು ಹೋಗಿ ಅಪಕೀರ್ತಿ ಸಂಭವಿಸಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಂತೋಷಭರಿತ ಮಾತುಗಳಿಂದ ನಿಮ್ಮ ಸಹಪಾಠಿಗಳನ್ನು ರಂಜಿಸುವಿರಿ. ಕುಟುಂಬದ ಸದಸ್ಯರೊಡನೆ ಹಿಂದಿನ ಅಪರೂಪದ ಕ್ಷಣಗಳನ್ನು ನೆನೆಸಿಕೊಳ್ಳುವಿರಿ. ಮಕ್ಕಳ ಆರೋಗ್ಯದ ಕಡೆಗೆ ಎಚ್ಚರ ವಹಿಸಿರಿ. ಹಣದ ಒಳಹರಿವು ನಿಮ್ಮ ನಿರೀಕ್ಷೆಯಷ್ಟು ಇರುತ್ತದೆ. ನಿಮ್ಮ ನೆಚ್ಚಿನ ವ್ಯಕ್ತಿಗಳ ಆಸೆ ಪೂರೈಕೆಗಾಗಿ ಒತ್ತಡ ಹೆಚ್ಚಾಗಬಹುದು. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ, ವೇತನ ಏರಿಕೆ ಆಗಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಕೆಲಸ ಕಾರ್ಯಗಳಲ್ಲಿ ಅತಿಯಾದ ಆತುರ ಬೇಡ. ನಿಮ್ಮ ಕೆಲವು ಪ್ರಮುಖ ಯೋಜನೆಗಳು ಕೈಗೂಡುವ ಸಂದರ್ಭವಿದೆ. ನಿಮ್ಮ ನಿರೀಕ್ಷೆಗೆ ತಕ್ಕಷ್ಟು ಆದಾಯ ಇರುತ್ತದೆ. ಕೆಲಸದ ಒತ್ತಡ ಹೆಚ್ಚಾಗಿ ಸ್ವಲ್ಪ ಬಳಲುವಿರಿ. ಹೊಸ ಸಂಪನ್ಮೂಲಗಳ ಹುಡುಕಾಟ ನಡೆಸುವಿರಿ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ಇರುತ್ತದೆ. ಪರಿಚಿತರ ಸಹಾಯದಿಂದ ಉತ್ತಮ ಉದ್ಯೋಗ ದೊರೆಯುವ ಸಾಧ್ಯತೆ ಇದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವ್ಯವಹಾರದ ವಿಚಾರದಲ್ಲಿ ಮಾತನಾಡುವಾಗ ಯಾವುದೇ ಸಂಕೋಚ ಬೇಡ, ಸಂಕೋಚಪಟ್ಟಲ್ಲಿ ಹಿನ್ನಡೆಯಾಗುವುದು. ಉದ್ಯೋಗ ಕ್ಷೇತ್ರದಲ್ಲಿ ಉತ್ತಮ ಸಂಬಂಧವನ್ನು ಹೊಂದುವಿರಿ. ಸಂಶೋಧಕರಿಗೆ ಅತ್ಯಂತ ಕ್ರಿಯಾಶೀಲರಾಗಿರುವ ಕಾಲ, ಅವರ ಸಂಶೋಧನೆಗಳಿಗೆ ತಾರ್ಕಿಕ ಫಲಿತಾಂಶ ಬರುವ ಸಾಧ್ಯತೆ ಇದೆ. ಆಮದು ಮತ್ತು ರಫ್ತಿನ ವ್ಯವಹಾರ ಮಾಡುವವರ ವ್ಯವಹಾರ ವಿಸ್ತರಣೆ ಆಗುವ ಯೋಗವಿದೆ.

ಸಿಂಹ — ಮಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಗೃಹಬಳಕೆ ವಸ್ತುಗಳನ್ನು ಖರೀದಿ ಮಾಡುವಿರಿ. ಮನೆಗೆ ಆಲಂಕಾರಿಕ ವಸ್ತುಗಳನ್ನು ಖರೀದಿ ಮಾಡುವಿರಿ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು. ಮಕ್ಕಳಿಂದ ನಿಮಗೆ ಗೌರವ ದೊರೆಯುತ್ತದೆ. ವ್ಯವಹಾರದ ಒಳಗುಟ್ಟುಗಳನ್ನು ಯಾರಿಗೂ ತಿಳಿಸದೇ ಇರುವುದು ಬಹಳ ಉತ್ತಮ, ತಿಳಿಸಿದಲ್ಲಿ ನಿಮ್ಮ ವ್ಯವಹಾರದ ಮೇಲೆ ವ್ಯತಿರಿಕ್ತ ಪರಿಣಾಮಗಳು ಬೀರಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಆರಂಭದಲ್ಲಿ ನಿಮ್ಮ ಕಾರ್ಯಚಟುವಟಿಕೆಗಳು ಇತರರ ಹಾಸ್ಯಕ್ಕೆ ಒಂದು ವಸ್ತುವಾಗಬಹುದು. ಬಹುದಿನದ ಆಸೆ ಈಡೇರುವ ಸಾಧ್ಯತೆಯಿದೆ. ಆಸ್ತಿ ಖರೀದಿಗಾಗಿ ಬಹಳ ಶ್ರಮ ಮಾಡಬೇಕಾಗಬಹುದು. ಸಂಗಾತಿಯ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ವಹಿಸಿರಿ. ಬುದ್ಧಿವಂತಿಕೆಯಿಂದ ಆಲೋಚಿಸಿ ನಿಮ್ಮ ಕಾರ್ಯಗಳನ್ನು ಕಾರ್ಯಗತ ಮಾಡಿದಲ್ಲಿ ಯಶಸ್ಸನ್ನು ಖಂಡಿತ ಕಾಣುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಪ್ರಗತಿ ದೊರೆತು ಆತ್ಮವಿಶ್ವಾಸ ಹೆಚ್ಚುತ್ತದೆ. ಸಂಗಾತಿಯ ಅಭಿಪ್ರಾಯಕ್ಕೆ ಮನ್ನಣೆ ನೀಡಿ ಇದ್ದ ಮನಸ್ತಾಪವನ್ನು ದೂರ ಮಾಡಿಕೊಳ್ಳಿರಿ. ಆಸ್ತಿ ಖರೀದಿಯ ವಿಷಯಕ್ಕೆ ರೆಕ್ಕೆಪುಕ್ಕಗಳು ಮೂಡಿ ಅದಕ್ಕೆ ಬೇಕಾದ ತಯಾರಿಯಲ್ಲಿ ತೊಡಗಿಕೊಳ್ಳುವಿರಿ. ವ್ಯವಹಾರದಲ್ಲಿ ಎದುರಾಳಿಗಳ ಮಾತಿನಿಂದ ನಿಮಗೆ ಭಯ ಹುಟ್ಟಬಹುದು. ಆದರೆ ತಾತ್ವಿಕವಾಗಿ ಮಂಡಿಸಿದಲ್ಲಿ ಜಯ ಇರುತ್ತದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ಕೆಲವು ರಾಜಕಾರಣಿಗಳಿಗೆ ಅಭಿವೃದ್ಧಿ ಇರುತ್ತದೆ ಮತ್ತೆ ಕೆಲವರಿಗೆ ಮೂಲೆಗುಂಪಾಗುವ ಸಾಧ್ಯತೆಗಳಿವೆ. ಮಾಧ್ಯಮ ಮತ್ತು ಪ್ರಚಾರದಲ್ಲಿ ಇರುವವರಿಗೆ ಉತ್ತಮ ಹೆಸರು ಬಂದು ಅಭಿವೃದ್ಧಿ ಇರುತ್ತದೆ. ವಿನಾಕಾರಣ ಬೇರೆಯವರ ತಪ್ಪಿಗೆ ಗುರಿಯಾಗುವ ಸಾಧ್ಯತೆಗಳಿವೆ. ಧನದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಎಂಜಿನಿಯರಿಂಗ್ ತಂತ್ರಜ್ಞರಿಗೆ ಬೇಡಿಕೆ ಹೆಚ್ಚಾಗುತ್ತದೆ. ಒಳಾಂಗಣ ವಿನ್ಯಾಸಕಾರರಿಗೆ ಉತ್ತಮ ಸಂಪಾದನೆ ಇರುತ್ತದೆ. ಹೆಚ್ಚು ಮಾತನಾಡುವುದರಿಂದ ಬಂಧುಗಳ ಮಧ್ಯೆ ವೈಮನಸ್ಯ ಹೆಚ್ಚಬಹುದು. ನಿಮ್ಮ ವೃತ್ತಿರಂಗದಲ್ಲಿ ಹೆಚ್ಚಿನ ಸ್ಪರ್ಧೆಯನ್ನು ಎದುರಿಸಿ ಗೆಲ್ಲುವ ಅವಕಾಶವಿದೆ. ನಿಮ್ಮವರನ್ನು ಸಮರ್ಥನೆ ಮಾಡಿಕೊಳ್ಳುವ ಸಂದರ್ಭದಲ್ಲಿ ತಪ್ಪಿತಸ್ಥರನ್ನು ಸಮರ್ಥನೆ ಮಾಡಿಕೊಳ್ಳಬೇಡಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯವಿದ್ದು ಪ್ರಶಸ್ತಿ-ಪುರಸ್ಕಾರಗಳು ದೊರೆಯುವ ಲಕ್ಷಣಗಳಿವೆ. ನಿಮ್ಮ ನೂತನ ಯೋಜನೆಗಳನ್ನು ಪಾಲುದಾರರೊಡನೆ ಸರಿಯಾಗಿ ಹಂಚಿಕೊಳ್ಳಿರಿ, ಆಗ ಅದಕ್ಕೆ ಬೇಕಾದ ಧನ ಸಹಾಯ ಮತ್ತು ಸಹಕಾರ ದೊರೆಯುತ್ತದೆ. ಸಂಗಾತಿಯ ಆರೋಗ್ಯದ ಬಗ್ಗೆ ಗಮನವಿರಲಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಹಿಂದಿನ ಕೆಲ ಘಟನೆಗಳು ನಿಮ್ಮ ಮನಸ್ಸನ್ನು ಕಲಕಬಹುದು. ಸಂಗಾತಿಯ ಸಕಾಲಿಕ ಸಲಹೆಗಳಿಂದ ಸಮಸ್ಯೆಗಳು ದೂರವಾಗುತ್ತವೆ. ನಿಮ್ಮ ಸಹೋದ್ಯೋಗಿಗಳಿಗೆ ಉತ್ಸಾಹವನ್ನು ತುಂಬಿ ಕೆಲಸ ಮಾಡಲು ಹುರಿದುಂಬಿಸುವಿರಿ. ನಿಮ್ಮ ಪ್ರತಿಭೆಯನ್ನು ನಿಮ್ಮ ಹಿಂಜರಿಕೆ ಮರೆಮಾಚಬಹುದು ಆದ್ದರಿಂದ ಹಿಂಜರಿಕೆಯನ್ನು ಬಿಡಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ವೃತ್ತಿಯಲ್ಲಿ ಬದಲಾವಣೆಯನ್ನು ಬಯಸುವವರಿಗೆ ಈಗ ಪ್ರಶಸ್ತ ಕಾಲ. ಅನಿರೀಕ್ಷಿತ ಅವಕಾಶಗಳು ಒದಗಿಬರುವ ಸಾಧ್ಯತೆಗಳಿವೆ. ಹಿರಿಯ ಸ್ಥಾನದಲ್ಲಿರುವವರಿಗೆ ಉದ್ಯೋಗಿಗಳಿಂದ ಗೌರವ ಸಮರ್ಪಣೆ ಇರುತ್ತದೆ. ಹಿರಿಯ ಅಧಿಕಾರಿಗಳ ಮೇಲಿದ್ದ ಆಪಾದನೆಗಳು ಮಂಜಿನಂತೆ ಕರಗುತ್ತವೆ.

ಪದಬಂಧ 2689



ಮೇಲಿನಿಂದ ಕೆಳಕ್ಕೆ

1. ವಿಮಾ ದಾಖಲೆ ಪತ್ರ 3
2. ಸದಾ ಹಾಸದ ವದನ 4
3. ಜವಾಬ್ದಾರಿ ಹೊತ್ತವ ಜಾಮೀನಾಗಿ ನಿಲ್ಲುವವ 4
4. ಹಿಂದಿಯವರ ದೃಷ್ಟಿಯ ಕಣ್ಣು 3
6. ದಳಕ್ಕೆ ಸೇರಿದ ಉತ್ತರ ಭಾರತದ ಕುಲ ನಾಮ 3
8. ಕೆರೆ ಕದಡಿ ಹುಟ್ಟಿಬಂದ ರಾಮಾಯಣದ ರಾಕ್ಷಸಿ 3
10. ಕೇರಳದ ಅರಣ್ಯ ಪ್ರದೇಶ 3
12. ಆಕಾಶದಲ್ಲಿ ಹಾರಾಡುವ ಮೋಜು 5
13. ಹೊದೆಯುವುದಕ್ಕೆ ಬೆಚ್ಚಗಿದ್ದರೂ ಇದರ ಮೇಲೆ ನಡೆಯುವುದು ಚೆನ್ನ 5
15. ರಮಾಮಣಿಯಲ್ಲಿರುವ ಸ್ತ್ರೀ ತಲೆಕೆಳಕಾಗಿ ಮೂಡಿದ್ದಾಳೆ 3
16. ಇದು ಎಲ್ಲವನ್ನೂ ಒಳಗೊಂಡಿದೆ 3
20. ಹೋಳಿಗೆ ಜಾತಿಗೆ ಸೇರಿದ ಸಿಹಿ ತಿನಿಸು 3
22. ಗಳದಲ್ಲಿನ ವಿಷ 3
23. ಮರ್ಮವನ್ನು ಅರಿತು ಕರ್ಮವನ್ನು ಅನುಸರಿಸುವವ 4
24. ಕೈಗೆ ಮನಸ್ಸಿಗೆ ಎಟುಕದ ಎತ್ತರ 3
25. ಮಂಡಲದಲ್ಲಿ ವಿಧಾನ ಸಭೆ 4
26. ನರರು ಅನುಭವಿಸಬೇಕಾದ್ದು ನಾಕಕ್ಕೆ ವಿರುದ್ಧ 3
28. ಮೊಟಕು ಮಾಡಿದಾಗ ಉಂಟಾಗುವ ನವೆ 3

ಎಡದಿಂದ ಬಲಕ್ಕೆ

1. ಆದಾಯದಲ್ಲಿ ಭಾಗಕ್ಕೆ ಬರುವ ಮಂದಿ 4
3. ಕನ್ನಡದ ನವನಾವೀನ್ಯತೆ 4
5. ಕಲಿಕೆಗಾಗಿ ಮಾರ್ಗದರ್ಶಕನಿಗೆ ನೀಡಬೇಕಾದ ಸಂಭಾವನೆ 5
7. ಜಾನಕಿಪತಿಯನ್ನು ಅಕ್ಕರೆಯಿಂದ ಕರೆಯುವ ಪರಿ 4
9. ವಾಯುವಿನಲ್ಲಿ ತೇಲಿಬರುವ ರಥ 4
11. ಪಕ್ಷಿಯ ಹಾರಾಟ; ಮನಸ್ಸಿನ ಸಂಚಾರ 5
14. ಕಿಣಿ ಕಿಣಿ ಎಂದು ಸದ್ದು ಮಾಡುವ ಗೆಜ್ಜೆ 3
16. ಬಿಗಿತವಿಲ್ಲದೆ ಲೂಸಾಗಿದೆ 3
17. ಮಹಾ ಜನ ನೀರೆರೆದುಕೊಳ್ಳುವ ಸಂಭ್ರಮ 3
18. ಗಾನಕ್ಕೆ ಹೆಸರಾದ ಯಕ್ಷ ಸೋದರ 3
19. ನನ್ನ ಚಿನ್ನ ....! 3
21. ತನಗೆ ತಾನೆ ಮಾತನಾಡಿಕೊಳ್ಳುವ ದೃಶ್ಯ ನಾಟಕದಲ್ಲಿ ಹೀಗೆ 3
23. ಸಿರಿ ಸಂಪಾದನೆ 5
26. ಸಂತೋಷ, ಹಾಸ್ಯವೇ ನಡವಳಿಕೆಯ ವಿಧಿ 4
27. ಮನಸ್ಸಿನಲ್ಲಿ ಏನೋ ಗೊಂದಲ ಕಾತರ ಅದರಿಂದ ಅಕ್ಷರಗಳೇ ಹಿಂದು ಮುಂದು 4
29. ಪರಿಶುದ್ಧವಾದ ಹೆಸರು 5
30. ದ್ವಾಪರದ ನಂತರ ಬಂದ ತಿಳುವಳಿಕೆಯ ಸಮಯ 4
31. ಭೂಮಿಯಲ್ಲಿ ಸೇರಿಹೋಗಿದ್ದು 4

ಪದಬಂಧ ಉತ್ತರ -2688

ಮೇಲಿಂದ ಕೆಳಕ್ಕೆ

1. ಮನೋಭಾವ 2.ಡುರುಕು 3.ಶುನಕ 4.ಗರೆಹಾಕು 6.ತನು 8.ಗತೊ 10. ಜನಮಾನಸ 12.ಬಾಳಸಂಗಾತಿ 13.ಸಮಾಸ 14.ರದನ 18.ಮೊಲೆಗೂಸು 19.ರುಜು 20.ಇಕ್ಕು 21.ಶ್ರೀಕುಮಾರ 23.ನೆಹರು 24.ಕುಡುಕ

ಎಡದಿಂದ ಬಲಕ್ಕೆ

1.ಮರಳುಗಾಡು 3.ಶುಭಗಳಿಗೆ 5.ರುಜಿನ 6.ತಳಕು 7.ಕರಗ 9.ವಜನು 11.ತಂಬಾಕು 13.ಸರ್ವಾಧಿಕಾರ 15.ಸಮಾಗಮಾ 16.ದಯಾಸಂಘ 17.ಸಹಾಯಧನ 18.ಮೊಸರು 20.ಇತಿಶ್ರೀ 22.ಜುಲ್ಮಾನೆ 24.ಕುಮ್ಮಕ್ಕು 25.ಹರಡು 26.ಸುರನರರು 27.ಕಲ್ಲನಾಗರ

ಕದ್ಯುತ ಗಾಂತಿಯೇ ಬಾರಮ್ಮ...

ಅಪರೂಪದ ರಾಗವೊಂದನ್ನು ಹುಡುಕಿ ತೆಗೆದು ಪ್ರಯೋಗದಲ್ಲಿ ಅಳವಡಿಸಿತು ಈ ಪರಿವಾರ, ಅದೂ ಒಬ್ಬೊಬ್ಬರು ಒಂದೊಂದು ಊರಲ್ಲಿ ಇದ್ದುಕೊಂಡು!

ಎಸ್. ಆರ್. ರಾಮಕೃಷ್ಣ

ವಸಂತಾ ಕಣ್ಣನ್ ಅವರು (ಬಲಬದಿ), ತಮ್ಮ ಮಗಳು ಕಲ್ಕತ್ತ ಕೆ.ಶ್ರೀವಿದ್ಯಾ ಅವರೊಂದಿಗೆ ಅಪರೂಪದ ರಾಗವೊಂದನ್ನು ಹುಡುಕಿ ತೆಗೆದು ಪ್ರಯೋಗಿಸಿದ್ದಾರೆ

ಕರ್ನಾಟಕ ಸಂಗೀತದ ಗುರು ವಸಂತಾ ಕಣ್ಣನ್ ಅವರು ಕದ್ಯುತ ಗಾಂತಿಯೆಂಬ ಅತಿವಿರಳ ರಾಗದಲ್ಲಿ ತಿಲ್ಲಾನವೊಂದನ್ನು ರಚಿಸಿದ್ದಾರೆ. ಮಗಳು ಕಲ್ಕತ್ತ ಕೆ. ಶ್ರೀವಿದ್ಯಾ ಮತ್ತು ಮಗ ಮೋಹನ್ ಕಣ್ಣನ್ ಅವರೊಡಗೂಡಿ ಈ ಸಂಯೋಜನೆಯನ್ನು ಹಾಡಿದ್ದಾರೆ. ಜೊತೆಗೆ ಪಿಟೀಲು ನುಡಿಸಿದ್ದಾರೆ. ಈ ಮೂವರೂ ಸೇರಿ ಮಾಡಿರುವ ವಿಡಿಯೊವನ್ನು ಯೂಟ್ಯೂಬ್‌ನಲ್ಲಿ ನೋಡಬಹುದು. ಈ ಧ್ವನಿಮುದ್ರಣ ಹೇಗೆ ಮೂಡಿಬಂತು ಎಂಬುದನ್ನು ವಸಂತಾ ಮತ್ತು ಶ್ರೀವಿದ್ಯಾ 'ಭಾನುವಾರದ ಪುರವಣಿ'ಗೆ ನೀಡಿದ ಸಂದರ್ಶನದಲ್ಲಿ ಹಂಚಿಕೊಂಡಿದ್ದಾರೆ.

- **ತಿಲ್ಲಾನವನ್ನು ನೀವು ಯಾವಾಗ ಸಂಯೋಜಿಸಿದಿರಿ ಮತ್ತು ಹೇಗೆ ಧ್ವನಿಮುದ್ರಿಸಿದಿರಿ?**

ಶ್ರೀವಿದ್ಯಾ: ಇದೆಲ್ಲವೂ ಶುರುವಾಗಿದ್ದು 'ಸದಾ' ಹಾಡಿನಿಂದ. ಅದನ್ನು ನನ್ನ ಸಹೋದರ ಮೋಹನ್ 'ಶಾಲಾ' ಎಂಬ ಮರಾಠಿ ಚಲನಚಿತ್ರಕ್ಕಾಗಿ ಸಂಯೋಜಿಸಿದ್ದಾನೆ (2011). ಆ ಹಾಡನ್ನು ನಾವಿಬ್ಬರೂ ಹಾಡಿದ್ದು, ಗಂಡು, ಹೆಣ್ಣು ಎರಡೂ ದನಿಯ ಹಾಡಿಗೆ ನಮ್ಮ ತಾಯಿ ಪಿಟೀಲು ನುಡಿಸಿದ್ದಾರೆ. ಈ ಹಾಡು ಆ ವರ್ಷದ ವಿಡಿಯೊ ಮ್ಯೂಸಿಕ್ ಅವಾರ್ಡ್ ಅನ್ನು ಗೆದ್ದುಕೊಂಡಿತು.

ಇತ್ತೀಚೆಗೆ, ಲಾಕ್‌ಡೌನ್ ಸಮಯದಲ್ಲಿ, ನಾನು ಮತ್ತು ಮೋಹನ್ ಈ ಹಾಡಿನಲ್ಲಿ ಹೇಗೆ ಮನೋಧರ್ಮ ಪ್ರಯೋಗ ಮಾಡಬಹುದು ಎಂದು ನೋಡುತ್ತಿದ್ದೆವು. 'ಸದಾ' ಹಾಡು ಇರುವುದು ಶೇಖರ ಚಂದ್ರಿಕಾ ರಾಗದಲ್ಲಿ. ನಾವು ರಾಗಾಂತರಕ್ಕಾಗಿ ಗೃಹಭೇದ ತಂತ್ರವನ್ನು ಬಳಸಿದೆವು. ಶೇಖರ ಚಂದ್ರಿಕಾ ರಾಗದ ಧೈವತವನ್ನು ಆಧಾರ ಷಡ್ಜವಾಗಿ ಇಟ್ಟುಕೊಂಡು ಕದ್ಯುತ ಗಾಂತಿ ರಾಗಕ್ಕೆ ಬಂದೆವು. ಅದು ತುಂಬಾ ಮೋಹಕವಾಗಿದ್ದು ನನ್ನ ತಾಯಿಯ ಮನಸ್ಸಿನಲ್ಲಿ ಅನುರಣಿಸುತ್ತಲೇ ಇತ್ತು. ಅವರು ಕೇವಲ ಎರಡೇ ಎರಡು ದಿನಗಳಲ್ಲಿ ಈ ತಿಲ್ಲಾನವನ್ನು ರಚಿಸಿಕೊಟ್ಟರು.

ಸಂಗೀತ

ಲಾಕ್‌ಡೌನ್‌ನ ಉತ್ತುಂಗದ ದಿನಗಳಲ್ಲಿ ಧ್ವನಿಮುದ್ರಣವು ಒಂದು ಸವಾಲಾಗಿತ್ತು. ಮನೆಯಲ್ಲೇ ನಮ್ಮ ಝೂಮ್ ರೆಕಾರ್ಡರ್‌ಗಳನ್ನು ಬಳಸಿ ಧ್ವನಿಮುದ್ರಿಸಬೇಕಿತ್ತು. ಯಾವುದೇ ತರಹದ ಹೊರಗಿನ ಶಬ್ದ ಬಾರದಂತೆ ನೋಡಿಕೊಳ್ಳಲು ನಗರವು ನಿದ್ದೆಗೆ ಜಾರುವ ತನಕ ನಾವು ಕಾಯಬೇಕಿತ್ತು! ಹಾಗಾಗಿ ಚೆನ್ನೈನಲ್ಲಿರುವ ನಾನು ಮತ್ತು ಅಮ್ಮ, ಮುಂಬೈಯಲ್ಲಿರುವ ಮೋಹನ್ ಎಲ್ಲರಿಗೂ ಅದು ತಡರಾತ್ರಿಯ ಧ್ವನಿಮುದ್ರಣವಾಗಿತ್ತು.

- **ವಸಂತಾ ಕಣ್ಣನ್ ಅವರ ಪ್ರಯೋಗಗಳ ಕುರಿತು ಇನ್ನಷ್ಟು ಹೇಳಿ...**

ಶ್ರೀವಿದ್ಯಾ: ಈ ರಾಗದಲ್ಲಿ ಯಾವುದೇ ಶಾಸ್ತ್ರೀಯ ರಚನೆ ಕಂಡುಬಂದಿರದ ಕಾರಣ, ಅಮ್ಮ ರಾಗದ ಸ್ವರಗಳು ಮತ್ತು ಆರೋಹಣ ಅವರೋಹಣದ ಲಕ್ಷಣಗಳನ್ನು ತಿಲ್ಲಾನದ ಸಾಹಿತ್ಯದಲ್ಲಿ ಸೇರಿಸಿದ್ದಾರೆ. ಒಮ್ಮೆ ತಿಲ್ಲಾನವನ್ನು ರಚಿಸಿದ ಮೇಲೆ ಅದನ್ನು ಹೇಗೆ ಹಾಡಿ ಪ್ರಸ್ತುತಪಡಿಸುವುದು ಎಂದು ಅಮ್ಮ, ಮೋಹನ್ ಮತ್ತು ನಾನು ಹಲವು ಸಾರಿ ಚರ್ಚಿಸಿದೆವು. ಅಮ್ಮ ಮತ್ತು ನಾನು ಹಾಡುವುದು ಹಾಗೂ ಪಿಟೀಲು ಕೂಡ ನುಡಿಸುವುದು ಎನ್ನುವ ಆಲೋಚನೆ ಬಂದಿದ್ದು ಮೋಹನನಿಗೆ. ಅವನು ಗಿಟಾರ್ ನುಡಿಸಿದ ಮತ್ತು ಕರ್ನಾಟಕ ಸಂಗೀತದಲ್ಲಿ ಪ್ರಚಲಿತವಿರದ ಆದರೆ ಪಾಶ್ಚಿಮಾತ್ಯ ಸಂಗೀತದ ಬಹುಮುಖ್ಯ ಭಾಗವಾಗಿರುವ ಹಾರ್ಮನಿ (ಬಹು ಸ್ವರಗಳನ್ನು ಮೇಳೈಸಿ ಏಕಕಾಲಕ್ಕೆ ನುಡಿಸುವುದು) ತಂದ. ಹಲವು ವಿಚಾರಗಳ ಬಗ್ಗೆ ನಾವು ಚರ್ಚಿಸಿದರೂ ಶಾಸ್ತ್ರೀಯ ಸಂಯೋಜನೆಯ ಪರಿಶುದ್ಧತೆಯನ್ನು ಉಳಿಸಿಕೊಳ್ಳಬೇಕು ಎನ್ನುವುದು ನಮ್ಮ ಖಚಿತ ನಿಲುವಾಗಿತ್ತು.

- **ಎರಡು ಪಿಟೀಲು, ಒಂದು ಗಿಟಾರ್ ಒಳಗೊಂಡ ಈಗಿನ ರೂಪದಲ್ಲಿಯೇ ಇದನ್ನು ಕಛೇರಿಯಲ್ಲಿ ಹಾಡುವ ಆಲೋಚನೆಗಳಿವೆಯೇ?**

ಶ್ರೀವಿದ್ಯಾ: ತಿಲ್ಲಾನವನ್ನು ಸಾಧಾರಣವಾಗಿ ಕಛೇರಿಯ ಕೊನೆಯಲ್ಲಿ ಹಾಡುತ್ತಾರೆ. ಶಾಸ್ತ್ರೀಯ ಸಂಗೀತ ಕಛೇರಿಯಲ್ಲಿ ಸಭಿಕರೆದುರು ನೇರವಾಗಿ ಹಾಡುವಾಗ ಪಿಟೀಲು ಮತ್ತು ಮೃದಂಗ ನಮ್ಮ ಜೊತೆಗಿರುತ್ತವೆ. ಈ ಕೊರೊನಾ ಪಿಡುಗು ಮುಗಿದ ಮೇಲೆ ಮತ್ತೆ ನಾವು ಮೂವರೂ ಒಟ್ಟಾಗಿ ಈ ತಿಲ್ಲಾನವನ್ನು ಕೇಳುಗರೆದುರು ನೇರವಾಗಿ ಹಾಡಲು ಖಂಡಿತ ಕಾತರರಾಗಿದ್ದೇವೆ.

- **ಈ ನಂತರದಲ್ಲಿ ಮತ್ತೆ ಯಾವ ಹೊಸ ಸಂಯೋಜನೆ ಬರುತ್ತಿದೆ?**

ವಸಂತಾ ಕಣ್ಣನ್ : ಖಂಡಿತವಾಗಿಯೂ ನನ್ನ ಮಗ ಮತ್ತು ಮಗಳೊಡನೆ ಸೇರಿ ಅವರ ಇನ್ನಷ್ಟು ರಚನೆಗಳನ್ನು ಹಾಡಬೇಕಿದೆ. ನಾನು ಸುನಾದಮ್ ಎಂದು ಹೆಸರಿಟ್ಟಿರುವ ಹೊಸ ರಾಗದಲ್ಲಿ ನನ್ನ ರಚನೆಗಳಲ್ಲೊಂದಾದ 'ಪಾಡಿಡುವೋಮೇ' ಎಂಬ ಕೃತಿಯನ್ನು ಧ್ವನಿಮುದ್ರಿಸುವ ಆಲೋಚನೆಯಿದೆ. ರಾಗಾನ್ವೇಷಣೆಯ ಕುರಿತಂತೆ ನನ್ನ ಮಗಳು ವಿಡಿಯೊ ಸರಣಿಯೊಂದನ್ನು ಮಾಡುತ್ತಿದ್ದಾಳೆ.

- **ಕದ್ಯುತ ಗಾಂತಿ ರಾಗದ ಬಗ್ಗೆ, ಅದರ ಉಗಮ ಮತ್ತು ಇತಿಹಾಸದ ಕುರಿತಾಗಿ ಇನ್ನಷ್ಟು ತಿಳಿಸಿ. ಇದು ಹಿಂದೂಸ್ತಾನೀ ಸಂಗೀತದ ಜೋಗ್ ರಾಗವನ್ನು ಮತ್ತು ಕರ್ನಾಟಕ ಸಂಗೀತದ ನಾಟ ರಾಗವನ್ನು ಹೋಲುತ್ತದೆ. ಇದು ಅವೆರಡಕ್ಕಿಂತ ಹೇಗೆ ಭಿನ್ನ?**

ವಸಂತಾ ಕಣ್ಣನ್: ಕದ್ಯುತ ಗಾಂತಿ ರಾಗವು ಮೇಳಕರ್ತ ಪದ್ಧತಿಯಲ್ಲಿನ ಮೂವತ್ತೆರಡನೆಯ ರಾಗವಾದ ರಾಗವರ್ಧಿನಿಯಲ್ಲಿ ಜನ್ಯವಾಗಿದೆ. ಸ ರಿ3 ಗ3 ಮ1 ಪ ನಿ2 ಸ – ಸ ನಿ2 ಪ ಮ1 ಗ3 ರಿ3 ಸ – ಇವು ಆರೋಹಣ, ಅವರೋಹಣಗಳು. ಇದೊಂದು ಅತಿವಿರಳ ರಾಗವಾಗಿದ್ದು ನನ್ನ ತಿಲ್ಲಾನಕ್ಕೂ ಮೊದಲು ಇದರಲ್ಲಿ ಯಾವ ಶಾಸ್ತ್ರೀಯ ಸಂಯೋಜನೆಯೂ ಬಂದಿರುವುದು ತಿಳಿದಿಲ್ಲ. ಇದು ಹಿಂದೂಸ್ತಾನೀ ಸಂಗೀತದ ಜೋಗ್ ರಾಗಕ್ಕೆ ಹತ್ತಿರವಾಗಿದ್ದರೂ ಸೂಕ್ಷ್ಮಸಂಗತಿಗಳಲ್ಲಿ ವಿಭಿನ್ನವಾಗಿದೆ. ಜೋಗ್ ರಾಗವು ಹೀಗಿದೆ: ಸ ಗ3 ಮ1 ಪ ನಿ2 ಸ –ಸ ನಿ2 ಪ ಮ1 ಗ3 ಮ1 ಗ2 ಸ. ನಾಟ ರಾಗಕ್ಕೆ ಹೋಲಿಸಿದರೆ, ಆರೋಹಣದಲ್ಲಿನ ಮೊದಲ ಕೆಲವು ಸ್ವರಗಳಲ್ಲಿ ಮಾತ್ರ ಸಾಮ್ಯತೆಯಿದೆ. ನಾಟದಲ್ಲಿನ ನಿಷಾದವು ಭಿನ್ನವಾಗಿದ್ದು ರಾಗದ ಸ್ವರೂಪ ಹೀಗಿದೆ: ಸ ರಿ3 ಗ3 ಮ1 ಪ ನಿ3 ಸ – ಸ ನಿ3 ಪ ಮ1 ಗ3 ಮ1 ರಿ3 ಸ. ಎರಡೂ ರಾಗಗಳಲ್ಲಿ ರಿ ಒಂದೇ ರೀತಿಯಿದ್ದರೂ ಕದ್ಯುತ ಗಾಂತಿಯಲ್ಲಿ ಅದರ ಪ್ರಯೋಗ ಭಿನ್ನವಾಗಿದ್ದು, ನಾಟ ರಾಗದಲ್ಲಿರುವ ಆಂದೋಲನ ಇಲ್ಲಿ ಸೌಮ್ಯವಾಗಿದೆ.

ಅನುವಾದ: ಸಹನಾ ಹೆಗಡೆ

ನನ್ನ ಅವ್ವ... ಶಕ್ತಿಶಾಲಿ ಮಹಿಳೆ

ಶಿವಾನಂದ ಕಣವಿ

ಶಾಂತಾದೇವಿ ಕಣವಿ

ಸಾವಿಲ್ಲದ ಆತ್ಮವೊಂದು ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಆದರೆ, ಒಬ್ಬ ವ್ಯಕ್ತಿಯ ನೆನಪು, ಪ್ರಭಾವ ಉಳಿದವರ ಪ್ರಜ್ಞೆಯಲ್ಲಿ ಆ ವ್ಯಕ್ತಿಯ ನಂತರವೂ ಉಳಿಯುತ್ತದೆ. ಆ ಮಟ್ಟಿಗೆ ಅವರಿನ್ನೂ ನಮ್ಮೊಡನೆ, ನಮ್ಮಲ್ಲಿ ಇದ್ದಾರೆಂದು ಹೇಳಬಹುದು. ನನ್ನ ಅವ್ವನಿಗೆ ಕೆಲವು ಆಳವಾದ ನಂಬಿಕೆಗಳಿದ್ದವು. ಆದರೆ, ಅವಳೆಂದೂ ಕುಟುಂಬದಲ್ಲಿ ಇತರರ ಮೇಲೆ ತನ್ನ ನಂಬಿಕೆಗಳನ್ನು ಹೇರಲಿಲ್ಲ ಅಥವಾ ಭಾಷಣವನ್ನೂ ಕೊಡುತ್ತಿರಲಿಲ್ಲ. ತನ್ನ ನಡೆಯಲ್ಲಿಯೇ ಅವಳದನ್ನು ವ್ಯಕ್ತಗೊಳಿಸುತ್ತಿದ್ದಳು. ಹೀಗಾಗಿ ನನ್ನ ಮೇಲೆ ಬಾಲ್ಯದಿಂದ ಅವು ಗಾಢ ಪ್ರಭಾವವನ್ನು ಬೀರಿದವು.

ಅವ್ವ ನಿರೀಶ್ವರವಾದಿ ಆಗಿರಲಿಲ್ಲ. ಆದರೆ, ಜೀವನದುದ್ದಕ್ಕೂ ಎಂದೂ ಅವಳು ಯಾವ ದೇವರ ಪೂಜೆಗಾಗಿಯೂ ಗುಡಿ, ಗುಂಡಾರಗಳಿಗೆ ಹೋಗಲಿಲ್ಲ. ಧಾರ್ಮಿಕ ನಂಬಿಕೆಗಳು ವೈಯಕ್ತಿಕ, ಹೊರತೋರಿಕೆಗಾಗಿ ಅಲ್ಲ ಎಂಬುದು ಅವಳ ಗಾಢ ನಂಬಿಕೆಯಾಗಿತ್ತು. ಮನೆಯ ಪೂಜಾ ಕೋಣೆಯ ಏಕಾಂತದಲ್ಲಿ ಅವಳು ಆಗಾಗ ಧ್ಯಾನ ಮಾಡುತ್ತಿದ್ದಳು. ಪೂಜೆ, ಪುನಸ್ಕಾರ, ಹೋಮ, ಹವನ ಮುಂತಾದವುಗಳನ್ನು ಅವಳು ಎಂದೂ ಆಚರಿಸುತ್ತಿದ್ದಿಲ್ಲ. ಜ್ಯೋತಿಷ್ಯ ಮತ್ತು ಅದರೊಡನೆಯ ಗ್ರಹಣ, ರಾಹುಕಾಲ, ಮುಹೂರ್ತ, ಶಕುನ-ಅಪಶಕುನ, ಗ್ರಹ ಶಾಂತಿ ಇತ್ಯಾದಿಗಳಿಂದಂತೂ ಅವಳು ಬಹಳ ದೂರವಿದ್ದಳು. ಚಿಕ್ಕಂದಿನಿಂದಲೂ ಅವಳು ಚಿಕಿತ್ಸಕ, ವಾಸ್ತವವಾದಿ, ವೈಚಾರಿಕ ದೃಷ್ಟಿಕೋನವನ್ನು ಬೆಳೆಸಿಕೊಂಡಿದ್ದಳು. ಜನಸೇವೆಯಲ್ಲಿ ತೊಡಗಿರುವ ಎಲ್ಲರ ಬಗ್ಗೆಯೂ ಅವಳಿಗೆ ಗೌರವವಿತ್ತು. ಅವಳ ಸಾಹಿತ್ಯದ ಓದು ವಿಶಾಲವಾಗಿತ್ತು ಮತ್ತು ಕೊನೆಯ ದಿನಗಳವರೆಗೂ ನಡೆದಿತ್ತು. ಅವಳು ಸ್ವಭಾವತಃ ವಾಸ್ತವವಾದಿ ಆದ್ದರಿಂದಲೇ ಉಳಿದ ಕನ್ನಡದ ಮತ್ತು ಯುರೋಪಿನ ವಾಸ್ತವವಾದಿಗಳು ಅವಳಿಗೆ ಪ್ರಿಯರಾಗಿದ್ದರು.

> ಕನ್ನಡದ ಹಿರಿಯ ಲೇಖಕಿಯರಲ್ಲಿ ಒಬ್ಬರಾಗಿದ್ದ ದಿವಂಗತ ಶಾಂತಾದೇವಿ ಕಣವಿ ಅವರದು ಚೆಂಬೆಳಕಿನಂತಹ ವ್ಯಕ್ತಿತ್ವ. ಅವರ ಸ್ಮೃತಿ ಗ್ರಂಥ 'ಸಂಜೆಮಲ್ಲಿಗೆ' ಇನ್ನೇನು ಪ್ರಕಟವಾಗಲಿದೆ. ಈ ಹೊತ್ತಿನಲ್ಲಿ, ಅವರ ಹಿರಿಯ ಪುತ್ರನಿಂದ ಅಮ್ಮನಿಗೆ ನುಡಿನಮನ...

ತಾಯಿಯಾಗಿ ನಾವು ಚಿಕ್ಕವರಿದ್ದಾಗ ನಮ್ಮನ್ನು ಸಹಜವಾಗಿ ಪ್ರೀತಿ ಮತ್ತು ಅನುಶಾಸನ ಮಿಶ್ರಿಸಿ ಬೆಳೆಸಿದಳು.ಆದರೆಸ್ವಲ್ಪ ಪ್ರಜ್ಞಾವಂತರಾದಂತೆಯೇ ಕುಟುಂಬದ ವಿಷಯಗಳಲ್ಲಿ ಪಾರದರ್ಶಿಯೂ ಮತ್ತು ವೈಚಾರಿಕವಾಗಿ ಉದಾರಮತವಾದಿಯೂ ಆಗಿದ್ದಳು. ಈಗ ಎಷ್ಟೋ ಬಾರಿ ನಾವು ನಮ್ಮ ಮಕ್ಕಳ ಜೊತೆಗೆ ಹಾಗಿದ್ದೀವಾ ಎಂದು ಅನೇಕ ಬಾರಿ ನನಗೆ ಪ್ರಶ್ನೆಯೇಳುತ್ತದೆ.

ಅವಳ ನಂಬಿಕೆಗಳು ಗಾಢವಾಗಿದ್ದವು. ಆದರೂ ಎಂದೂ ಸ್ಥಾವರವಾಗಿದ್ದಿಲ್ಲ. ಹೊಸ ವಿಚಾರ ಅಥವಾ ಚಿಂತನೆಯ ಕ್ರಮಕ್ಕೆ ಸರಳವಾಗಿ ತನ್ನನ್ನು ತಾನು ತೆರೆದುಕೊಂಡಿದ್ದಳು. ಸುತ್ತೆಲ್ಲ ವೈಚಾರಿಕ ಜಡತ್ವ ತುಂಬಿದ್ದಾಗ ಇದೊಂದು ಅಪರೂಪದ ಗುಣವಾಗಿಲ್ಲವೇ? ಸ್ವತಃ ಅವಳು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಶ್ರೋತೃವಾಗಿದ್ದಳೇ ಹೊರತು ವೇದಿಕೆಯೇರಿ ಭಾಷಣ ಬೀರಲು ಹಿಂಜರಿದಳು. ಆಡಂಬರ, ಪ್ರಚಾರ ಪಿಪಾಸೆ, ತನ್ನ ಸಾಧನೆಯ ಬಗ್ಗೆ ಗರ್ವ ಇತ್ಯಾದಿ ಅವಳ ಹತ್ತಿರವೆಂದೂ ಸುಳಿಯಲಿಲ್ಲ. ಇಂಥ ತಾಯಿಯಿಂದ ಪ್ರಭಾವಿತರಾಗದೇ ಇರಲು ನಮಗೆಲ್ಲ ಹೇಗೆ ಸಾಧ್ಯ? ನಮ್ಮೊಳಗೆ ಅವಳಿಂದೂ ಜೀವಿಸಿದ್ದಾಳೆ ಎಂದು ನನಗನಿಸುತ್ತದೆ.

ಲೇಖನದ ಪೂರ್ಣಪಾಠಕ್ಕಾಗಿ www.prajavani.co.in

ಕಣ್ ಅರಳಿದಾಗಲಷ್ಟೇ ಕಂಡ ಬೇಂದ್ರೆ!

ಎಚ್. ದಂಡಪ್ಪ



ಕಂಡವರಿಗಷ್ಟೆ
ಸಂಪಾದಕರು: ಡಾ.ಗೀತಾ ವಸಂತ, ರಾಜಕುಮಾರ ಮಡಿವಾಳರ
ಪ್ರ: ಬೇಂದ್ರೆ ಬದುಕು ಬರಹ
ಸಂ: 98864 36020
ಪು: 400 ₹275

ಬೇಂದ್ರೆಯವರು ಕನ್ನಡದ ಮಹತ್ವದ ಕವಿ, ಶ್ರೇಷ್ಠ ಕವಿ, 'ವರಕವಿ'. ಮಹತ್ವದ ಕವಿಯ ಲಕ್ಷಣವೆಂದರೆ, ಆ ಕವಿಯು ಎಲ್ಲಾ ಕಾಲದ ವಿಮರ್ಶಾ ಸಿದ್ಧಾಂತಗಳನ್ನು ಮೀರಿ ಬೆಳೆಯುತ್ತಾ ಕಾಲದ ಪ್ರವಾಹದಲ್ಲಿ ಉಳಿದುಕೊಳ್ಳುತ್ತಾ ಸಾಗುವುದು. ಏಕೆಂದರೆ ವಿಮರ್ಶಾ ಸಿದ್ಧಾಂತಗಳು, ಮಾನದಂಡಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತವೆ. ಬೇಂದ್ರೆಯವರ ಕಾವ್ಯ ಅಂತಹ ಎಲ್ಲ ಮಾನದಂಡಗಳಲ್ಲೂ ಗೆದ್ದು ಇಂದಿಗೂ ಚರ್ಚೆಯಾಗುತ್ತಾ ಅಪಾರವಾದ ಸಾಧ್ಯತೆಗಳಿಗೆ ತೆರೆದುಕೊಳ್ಳುತ್ತಲೇ ಇದೆ.

ಮಾಸ್ತಿಯವರಿಂದ ಇಲ್ಲಿಯವರೆಗಿನ ಹಿರಿಯ ಕಿರಿಯ ವಿಮರ್ಶಕರು ಬೇಂದ್ರೆಯವರ ಕಾವ್ಯವನ್ನು ಅಧ್ಯಯನ ಮಾಡಿ ಲೇಖನಗಳು, ಗ್ರಂಥಗಳನ್ನು ಬರೆದಿದ್ದಾರೆ. ಒಂದು ಸಂಸ್ಕೃತಿಯಲ್ಲಿ ಓದುಗ ಸಮುದಾಯವನ್ನು ಬೆಳೆಸುವುದು ಆ ಗ್ರಂಥಗಳೇ ಎಂಬುದರಲ್ಲಿ ಸಂಶಯವಿಲ್ಲ. ಇಂತಹ ವಿಮರ್ಶಾ ಗ್ರಂಥಗಳ ಸಾಲಿಗೆ ಡಾ. ಗೀತಾ ವಸಂತ ಮತ್ತು ರಾಜಕುಮಾರ ಮಡಿವಾಳರ ಸಂಪಾದಿಸಿರುವ 'ಕಂಡವರಿಗಷ್ಟೆ' ಸಂಪುಟವು ಸೇರುತ್ತದೆ.

ಈ ಸಂಪುಟದಲ್ಲಿ ಅರವತ್ತಾರು ಲೇಖನಗಳಿವೆ. ಇವುಗಳನ್ನು 'ಬೇಂದ್ರೆ; ಪರಂಪರೆಯ ಬನಿ' ಮತ್ತು 'ಬೇಂದ್ರೆ; ಎದೆಯದನಿ' ಎಂದು ಎರಡು ಭಾಗ ಮಾಡಿದ್ದಾರೆ. ಮೊದಲನೆಯ ಭಾಗದಲ್ಲಿ ಬೇಂದ್ರೆಯವರ ಕಾವ್ಯದ ಅಧ್ಯಯನದ ಲೇಖನಗಳಿದ್ದರೆ, ಎರಡನೆಯ ಭಾಗದಲ್ಲಿ ಜೀವನ ಚರಿತ್ರಾತ್ಮಕ ವಿಚಾರಗಳು, ಬದುಕಿನ ವಿವರಗಳು, ಬೇಂದ್ರೆಯವರನ್ನು ಕಂಡು ಮಾತನಾಡಿಸಿದ ಅನುಭವಗಳು ಇವೆ. ಜೊತೆಗೆ ಅವರ ಕಾವ್ಯದ ವಿಮರ್ಶೆಯೂ ಸೇರಿಕೊಂಡಿದೆ. ಎಲ್ಲಾ ತಲೆಮಾರಿನ ಲೇಖಕರು ಬರೆದಿರುವ ಎರಡೂ ಭಾಗದ ಲೇಖನಗಳಲ್ಲಿ ಕವಿ ಕವಿತೆಗಳ ಕುರಿತ ಅಧ್ಯಯನಪೂರ್ಣ ಲೇಖನಗಳೂ ಇವೆ. ಪರಿಚಯಾತ್ಮಕ ವಿವರಣಾತ್ಮಕ ಲೇಖನಗಳೂ ಇವೆ.

ಜನಭಾಷೆ ಮತ್ತು ಪ್ರಕೃತಿ ಭಾಷೆ ಎರಡನ್ನೂ ಸೇರಿಸಿ ಬೇಂದ್ರೆಯವರು ವಿಶಿಷ್ಟವಾದ ಕಾವ್ಯ ಭಾಷೆಯನ್ನು ರೂಪಿಸಿಕೊಂಡಿದ್ದರು. ಇದರಿಂದಾಗಿ ಅವರ ಕವಿತೆಗಳಲ್ಲಿ ಅನಂತ ಅರ್ಥಸಾಧ್ಯತೆಗಳು ಒಳಗೊಳ್ಳಲು, ಮಾನವೀಯ ಸಂಬಂಧಗಳನ್ನು ಬೆಸೆಯಲು ಸಾಧ್ಯವಾಗಿದೆ. ಇವು ಕಾಲದಿಂದ ಕಾಲಕ್ಕೆ ಓದುಗನ, ವಿಮರ್ಶಕನ ಸಾಮರ್ಥ್ಯಕ್ಕನುಗುಣವಾಗಿ ತನ್ನ ಅರ್ಥಸಾಧ್ಯತೆಗಳನ್ನು ವಿಸ್ತರಿಸಿಕೊಳ್ಳುತ್ತಾ ಹೋಗುತ್ತವೆ. ಬೇಂದ್ರೆಯವರ ಈ ಕಾವ್ಯ ಶಕ್ತಿಯನ್ನು ನಾವು ಹಿಡಿಯದಿದ್ದರೆ ಅವರ ಕಾವ್ಯವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವೆಂದೇ ತಿಳಿಯಬೇಕು. ಈ ಸಂಪುಟದಲ್ಲಿ ಕೆಲವು ಲೇಖನಗಳು ವಿವರಣಾತ್ಮಕ ಹಂತದಲ್ಲಿರುವುದರಿಂದ ಅರ್ಥಸಾಧ್ಯತೆಗಳು ಮತ್ತು ತಾತ್ವಿಕ ಒಳನೋಟಗಳನ್ನು ಗ್ರಹಿಸಿ ವಿಶ್ಲೇಷಿಸಲು ಸಾಧ್ಯವಾಗಿಲ್ಲ.

ಒಳನೋಟ

ಬೇಂದ್ರೆಯವರಿಗೆ ಪ್ರಕೃತಿ ಮತ್ತು ವಿಜ್ಞಾನ ಎರಡೂ ಮುಖ್ಯವಾಗುತ್ತವೆ. ವಿಜ್ಞಾನ ಅವರಿಗೆ ವಿಜ್ಞಾನ ಸೂರ್ಯನಾಗಿದ್ದಾನೆ. 'ವಿಜ್ಞಾನ ಸೂರ್ಯ' ಎಂಬ ಕವಿತೆಯಲ್ಲಿ, ಅನ್ನದೇವನ ಅವತಾರಕ್ಕೆ ಮುನ್ನ ಇಂದು ವಿಜ್ಞಾನ ಸೂರ್ಯನು ಉದಯಿಸಬೇಕಾಗಿದೆ ಎಂದೇ ಹೇಳುತ್ತಾರೆ. ತತ್ವಶಾಸ್ತ್ರದಂತೆ, ವಿಜ್ಞಾನದಂತೆ ಕಾವ್ಯವೂ ಸತ್ಯಶೋಧನೆಯ ಒಂದು ಪ್ರಕಾರ. ಇವು ಪ್ರಕೃತಿಯ ರಹಸ್ಯಗಳನ್ನು ತಿಳಿಸಿಕೊಡುತ್ತವೆ. ಇಲ್ಲಿನ ಲೇಖನಗಳಲ್ಲಿ ಪ್ರಕೃತಿ ಕವಿತೆಗಳನ್ನು ಅಧ್ಯಯನ ಮಾಡುವಾಗ ತತ್ವಶಾಸ್ತ್ರ ಮತ್ತು ವಿಜ್ಞಾನದ ಪೂರಕ ವಿಚಾರಗಳನ್ನುಮರೆಯಲಾಗಿದೆ.ಕಾವ್ಯವು ಜ್ಞಾನದ ಶ್ವಾಸವಿದ್ದಂತೆ ಎಂದು ವರ್ಡ್ಸ್‌ವರ್ತ್ ಹೇಳುತ್ತಾನೆ. ಅದು ಸೂಕ್ಷ್ಮವಾದದ್ದು, ಚೈತನ್ಯಶಾಲಿಯಾದದ್ದು, ವಿಜ್ಞಾನದ ಎಲ್ಲ ಲಕ್ಷಣಗಳೂ ಅದಕ್ಕಿವೆ. ಆದರೆ ಈ ಜ್ಞಾನದ ಜೊತೆಗೆ ಕಾವ್ಯದಲ್ಲಿ ಭಾವವೂ ಸೇರಿಕೊಂಡಿದೆ, ಕಾವ್ಯಕ್ಕೆ ಮಾನವೀಯ ಮೌಲ್ಯಗಳಿರುವಂತೆ ವಿಜ್ಞಾನಕ್ಕೆ ಇರುವುದಿಲ್ಲ ಎನ್ನುತ್ತಾನೆ. ಬೇಂದ್ರೆಯವರ ಕಾವ್ಯವನ್ನು ಈ ದೃಷ್ಟಿಯಿಂದ ನೋಡಿದರೆ ಅದರ ಅರ್ಥಸಾಧ್ಯತೆಗಳು ಹೆಚ್ಚುತ್ತವೆ.

ಬೇಂದ್ರೆಯವರ ಕಾವ್ಯವನ್ನು ಪ್ರಕೃತಿ, ಪ್ರೀತಿ, ತಾಯಿ, ಮಾನವೀಯತೆ, ವಿರಾಟ್ ದರ್ಶನ, ಅಧ್ಯಾತ್ಮ, ಅನುಭಾವ ಮುಂತಾದ ವಿಭಾಗಗಳನ್ನಾಗಿಸಿ ಅಧ್ಯಯನ ಮಾಡಿರುವ ಕ್ರಮವೊಂದು ಇದೆ. ಆದರೆ ಈ ಸಂಪುಟದಲ್ಲಿ ಆ ರೀತಿ ವಿಭಾಗಿಸಿಕೊಳ್ಳದಿದ್ದರೂ ಕೆಲವು ಲೇಖಕರು ಇದೇ ಧಾಟಿಯನ್ನು ಅನುಸರಿಸಿದ್ದಾರೆ. ಇದರಿಂದ ಕವಿತೆಯನ್ನು ಒಂದೇ ಉದ್ದೇಶಕ್ಕೆ ಕಟ್ಟಿಹಾಕಿದಂತೆ ಆಗಬಹುದು. ಕೆಲವು ಲೇಖನಗಳು ಭಾಷಾ ಬಳಕೆಯನ್ನು ವಿಶ್ಲೇಷಿಸುತ್ತಾ ಬೇಂದ್ರೆ ಕಾವ್ಯದ ಅರ್ಥ ಸಾಧ್ಯತೆಗಳನ್ನು ವಿವರಿಸಲು ಪ್ರಯತ್ನಿಸಿವೆ. ಇನ್ನೂ ಕೆಲವು ಲೇಖನಗಳು ಆಧುನಿಕೋತ್ತರ ಚಿಂತನೆಗಳ ಹಿನ್ನೆಲೆಯಲ್ಲಿ ಕವಿತೆಗಳನ್ನು ವಿಶ್ಲೇಷಿಸಲು ಪ್ರಯತ್ನಿಸಿವೆ.

ಹೃದಯಸಮುದ್ರ, ಮುಕ್ತಕಂಠ, ಚೈತ್ಯಾಲಯ, ಜೀವಲಹರಿ ಈ ಸಂಕಲನಗಳು 'ಅರಳು-ಮರಳು' ಎಂಬ ಹೆಸರಿನಲ್ಲಿ ಒಟ್ಟಾಗಿ ಸೇರಿ ಪ್ರಕಟವಾಗಿವೆ. ಈ ಕವಿತೆಗಳಲ್ಲಿ ಬೇಂದ್ರೆಯವರ ಆಧ್ಯಾತ್ಮಿಕತೆ, ಅನುಭಾವ, ಗುರುಭಕ್ತಿಯ ಸ್ವರೂಪದ ನೆಲೆಗಳು ವ್ಯಕ್ತವಾಗಿವೆ. ಮಾನವನ ಉನ್ನತಿಗೆ ಅವಶ್ಯವಾದ ಆಧ್ಯಾತ್ಮಿಕ ವಿಚಾರಗಳಿವೆ. ಮೊದಲೇ ತಿಳಿಸಿದಂತೆ ಆಯಾ ಕವಿತೆಗಳನ್ನು ಭಾಷಾ ವಿನ್ಯಾಸದಲ್ಲಿಯೇ ಅಧ್ಯಯನ ಮತ್ತು ವಿಶ್ಲೇಷಣೆ ಮಾಡಬೇಕು. ಆದರೆ ಈ ಸಂಪುಟದಲ್ಲಿ 'ಅರಳು-ಮರಳು' ಸಂಕಲನದಿಂದ ಆಯ್ಕೆ ಮಾಡಿರುವ ಕವನಗಳು ತುಂಬಾ ಕಡಿಮೆ. ಸಂಪುಟವನ್ನು ಸಂಯೋಜಿಸುವಾಗ ಸಂಪಾದಕರು ಬೇಂದ್ರೆಕಾವ್ಯದ ಬೆಳವಣಿಗೆಯ ಹಂತಗಳನ್ನು ಹಾಗೂ ಕನ್ನಡ ಸಾಂಸ್ಕೃತಿಕ ಪರಿಸರಕ್ಕೆ, ಆ ಮೂಲಕ ಸಾಧ್ಯವಾದರೆ ವಿಶ್ವ ಸಾಹಿತ್ಯಕ್ಕೆ ಅವರು ಕೊಟ್ಟಿರುವ ಕೊಡುಗೆಗಳನ್ನು ವಿವರಿಸುವಂತಹ ಅಧ್ಯಯನಪೂರ್ಣ ಲೇಖನಗಳು ಸೇರುವಂತೆ ನೋಡಿಕೊಳ್ಳಬಹುದಾಗಿತ್ತು.

ಈ ಸಂಪುಟದಲ್ಲಿ ಬೇಂದ್ರೆಯವರ ಗರಿ ಸಂಕಲನ: ಕೆಲವು ಟಿಪ್ಪಣಿಗಳು, ಬೇಂದ್ರೆಯವರು ಭಾವಾನುವಾದಿಸಿದ 'ಸ್ವಪ್ನ ನೌಕೆ', ನಾಕುತಂತಿ ಮತ್ತು ಸಾವಿತ್ರಿ, ಕವಿ ಗುರುಗಳು, ಕತ್ತಲೆ ಕವಿದ ಹೊತ್ತು, ಬೇಂದ್ರೆ ಕಾವ್ಯ: ಲೌಕಿಕದಲ್ಲಿ ಪರಮಾರ್ಥದ ಹುಡುಕಾಟ, ವರ್ತಮಾನದ ಹೊಸ ಸೃಷ್ಟಿಯ ಶೋಧದ ಪ್ರಶ್ನೆ ಮತ್ತು ಆತಂಕಗಳು, ಬೇಂದ್ರೆಯವರ ಕಾವ್ಯದಲ್ಲಿ ಇಳಿಯುವ ಪ್ರಕ್ರಿಯೆಯಾಗಿ ಐದು ಐದೆಯರು, ನೂರು ವರ್ಷದ 'ಬೆಳಗು' ಕವಿತೆ- ಮುಂತಾದ ಲೇಖನಗಳಲ್ಲಿ ಬೇಂದ್ರೆ ಕಾವ್ಯದ ತಾತ್ವಿಕತೆಯನ್ನು, ಒಳನೋಟಗಳನ್ನು ವಿಶ್ಲೇಷಣೆ ಮಾಡಲಾಗಿದೆ. ಹಾಗೆಯೇ ಎರಡನೇ ಭಾಗದಲ್ಲಿನ ಕುಚ್ಚಿನ ಟೋಪಿಯ ಬೆಚ್ಚನೆ ಬೇಂದ್ರೆ, ಬೇಂದ್ರೆಯವರೊಡನೆ, ನನ್ನ ಬೇಂದ್ರೆ ಪುರಾಣ, ಬೇಂದ್ರೆ ಅಂದ್ರೆ ಬೇಂದ್ರೆ ಮುಂತಾದ ಲೇಖನಗಳು ವರಕವಿಯ ಬದುಕು ಮತ್ತು ಬರಹಗಳು ಜೀವನ ಚರಿತ್ರಾತ್ಮಕ ವಿಮರ್ಶೆಯ ನೆಲೆಗಳಲ್ಲಿದ್ದು ಮಹತ್ವದ ಒಳನೋಟಗಳನ್ನು ಒದಗಿಸುತ್ತವೆ.

ಬೇಂದ್ರೆಯವರ 125ನೇ ಜನ್ಮದಿನಾಚರಣೆಯ ಅಂಗವಾಗಿ ಹಲವಾರು ಪ್ರಸಿದ್ಧ ವಿಮರ್ಶಕರು, ತರುಣ ಬರಹಗಾರರ ಲೇಖನಗಳನ್ನು ಸಂಪಾದಿಸಿ ಪ್ರಕಟಿಸಿರುವುದು ಸಾರ್ಥಕವಾದ ಕೆಲಸ. ಬೇಂದ್ರೆ ಮತ್ತು ಕುವೆಂಪು ಕನ್ನಡ ಜನಮಾನಸದಲ್ಲಿ ಸಾಂಸ್ಕೃತಿಕ ವ್ಯಕ್ತಿತ್ವವನ್ನು ಪಡೆದವರು. ಇಬ್ಬರೂ ನಮ್ಮ ಕಾವ್ಯ ಸಂಸ್ಕೃತಿಯ ಎರಡು ಮೇರುಗಳು. ಒಂದು ಸಂಸ್ಕೃತಿಯಲ್ಲಿ ಕಾವ್ಯಾಭಿವ್ಯಕ್ತಿಯನ್ನು ಅನನ್ಯವಾಗಿ ಸ್ವೀಕರಿಸುವ ಓದುಗರು ಸೃಷ್ಟಿಯಾಗುವುದು, ಅಭಿರುಚಿಯನ್ನು ಬೆಳೆಸುವುದು, ಕಾವ್ಯದ ಒಳದಾರಿಗಳನ್ನು ಕಂಡುಕೊಳ್ಳುವುದು ಮತ್ತು ಕನ್ನಡ ಕಾವ್ಯ ಪರಂಪರೆಯ ಮಹತ್ವದ ಕೃತಿಗಳ ಕಡೆಗೆ ಹೊಸ ಓದುಗರ ಗಮನ ಸೆಳೆಯುವುದಕ್ಕೆ ಇಂತಹ ಸಂಕಲನಗಳಿಂದ ಸಾಧ್ಯವಾಗುತ್ತದೆ.

❖

ಕಥೆ

ಸಂಧ್ಯಾರಾಣಿ ಬರೆದ ಕಥೆ
ಉಗ್ರಪ್ಪನ ಹಡಪ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಎಸ್.ಜಿ. ಸಿದ್ದರಾಮಯ್ಯ ಬರೆದ ಕವಿತೆ
ಗಂಗೆ ಅಳುತ್ತಿದ್ದಾಳೆ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಕಳಿಲಾಕ ಇದ್ದ ಕೇಡ ಬೆಳುದಿಂಗಳ ನೋಡಾ...

ರಘುನಾಥ ಚ.ಹ.



ಬೆಳುದಿಂಗಳ ನೋಡಾ
ಲೇ: ಎಸ್.ಆರ್. ವಿಜಯಶಂಕರ
ಪ್ರ: ಚಿಂತನ ಚಿತ್ತಾರ, ಮೈಸೂರು.
ಸಂ: 9945668082
ಪು: 240 ₹240

ಬೇಂದ್ರೆಯವರ 'ಬೆಳುದಿಂಗಳ ನೋಡಾ' ಕವಿತೆಯ ವಿಶ್ಲೇಷಣೆಯ ಮೂಲಕ ಆರಂಭಗೊಳ್ಳುವ ಎಸ್.ಆರ್. ವಿಜಯಶಂಕರ ಅವರ 'ಬೆಳುದಿಂಗಳ ನೋಡಾ' ಕೃತಿ, ಲೇಖಕ ತನ್ನ ಓದು ಮತ್ತು ಚಿಂತನೆಗೆ ದಕ್ಕಿದ ಬೆಳುದಿಂಗಳನ್ನು ಸಹೃದಯರೊಂದಿಗೆ ಹಂಚಿಕೊಳ್ಳುವ ಪ್ರಯತ್ನದಂತಿದೆ. ಬೇಂದ್ರೆಯವರ ಬೆಳುದಿಂಗಳ ನೋಟದ ಕವಿತೆಯ ಅರ್ಥಸಾಧ್ಯತೆಗಳನ್ನು ತೆರೆದಿಡುತ್ತಾ ಹೋಗುವ ಬರಹ, ಲೇಖಕರ ತಂದೆಯ ಅಂತಿಮಸಂಸ್ಕಾರದ ನೆನಪಿನೊಂದಿಗೆ ಹೊಸತೊಂದು ಆಯಾಮ ಪಡೆಯುತ್ತದೆ. ಭೌತಿಕ ಶರೀರ ಬೆಂಕಿಯ ಮೂಲಕ ಬೆಳಕಿಗೆ ಸೇರುವ ಪ್ರಕ್ರಿಯೆ ಲೇಖಕರಲ್ಲಿ ಆಧ್ಯಾತ್ಮಿಕ ಲಹರಿಗಳನ್ನು ಉಂಟುಮಾಡುತ್ತದೆ; ಮೃತರ ಬದುಕೇ ಬೆಳುದಿಂಗಳಾಗಿದ್ದುದನ್ನು ಸೂಚಿಸುತ್ತದೆ. ಏಕಕಾಲಕ್ಕೆ ವೈಯಕ್ತಿಕವೂ ಸಾರ್ವತ್ರಿಕವೂ ಆಗುವುದು ಒಳ್ಳೆಯ ಕವಿತೆಯದು ಮಾತ್ರವಲ್ಲ, ಎಲ್ಲ ಒಳ್ಳೆಯ ಬರಹಗಳ ಗುಣವೂ ಹೌದು. ಕಾವ್ಯದ ಆಶಯಪ್ರಧಾನ ವಿಶ್ಲೇಷಣೆಗಳೇ ಹೆಚ್ಚಾಗಿರುವ ಸಂದರ್ಭದಲ್ಲಿ, ಸದ್ಯದ ಅಗತ್ಯವಾಗಿರುವ ರಸಪ್ರಧಾನ ಭಾವಪ್ರಧಾನ ಬರಹಗಳಿಗೆ ಉದಾಹರಣೆಯಾಗಿ ವಿಜಯಶಂಕರರ 'ಬೆಳುದಿಂಗಳ ನೋಡಾ' ವಿಶ್ಲೇಷಣೆಯನ್ನು ನೋಡಬಹುದು.

ಬೆಳುದಿಂಗಳ ನೋಡಾ ಎನ್ನುವ ಆಹ್ವಾನ, ಸಂಕಲನದ ಉಳಿದ ಬರಹಗಳಿಗೂ ಅನ್ವಯಿಸುವಂತಹದ್ದು. ಕನ್ನಡ ಸಾಂಸ್ಕೃತಿಕ ಲೋಕದ ಕೆಲವು ತಾರೆಗಳನ್ನು 'ಇಗೋ ನೋಡಿರಿ' ಎಂದು ತೋರುವ ತೋರುಬೆರಳಿನಂತೆ ಈ ಕೃತಿಯ ಬರಹಗಳಿವೆ. ಟಿ.ಎಸ್. ವೆಂಕಣ್ಣಯ್ಯ, ಟಿ.ವಿ. ವೆಂಕಟಾಚಲಶಾಸ್ತ್ರಿ, ಜಿ. ರಾಮಕೃಷ್ಣ, ಚೆನ್ನವೀರ ಕಣವಿ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಉಮಾಕಾಂತ ಭಟ್ಟ, ಷ. ಶೆಟ್ಟರ್, ಬರಗೂರು ರಾಮಚಂದ್ರಪ್ಪ ಮುಂತಾದವರ ಕುರಿತ ಬರಹಗಳು ಕೃತಿಗಳ ಮೂಲಕ ವ್ಯಕ್ತಿಯನ್ನೂ, ವ್ಯಕ್ತಿತ್ವದ ನೆರಳು ಕೃತಿಗಳಲ್ಲಿ ಇರುವುದನ್ನೂ ಗುರ್ತಿಸುವ ಪ್ರಯತ್ನಗಳಾಗಿವೆ. ಈ ಕೃತಿ-ವ್ಯಕ್ತಿ ವಿಶೇಷಗಳ ಬರಹಗಳಲ್ಲಿ ವಿಶಿಷ್ಟವಾಗಿ ಕಾಣಿಸುವುದು ಗಿರೀಶ ಕಾರ್ನಾಡ ಹಾಗೂ ಕೆ.ಬಿ. ಸಿದ್ದಯ್ಯನವರ ಕುರಿತಾದ ಬರಹಗಳು. ಕಾರ್ನಾಡರ ನಾಟಕಗಳ ಅನನ್ಯತೆಯನ್ನು ಸೂಚಿಸುತ್ತ, ಆ ಕೃತಿಗಳಷ್ಟೇ ಅವರ ನಿಷ್ಠುರ ಪ್ರಾಮಾಣಿಕ ಹಾಗೂ ಧರ್ಮನಿರಪೇಕ್ಷ ವ್ಯಕ್ತಿತ್ವವೂ ವಿಶಿಷ್ಟವಾಗಿದ್ದುದನ್ನು ವಿಜಯಶಂಕರ್ ಗುರ್ತಿಸುತ್ತಾರೆ. ಕಾಲೇಜು ದಿನಗಳಲ್ಲಿ ಕಂಡ ಕೆ.ಬಿ. ಸಿದ್ದಯ್ಯನವರ ವೈಚಾರಿಕತೆ ಮುಂದಿನ ದಿನಗಳಲ್ಲಿ ಅವರ ಕಾವ್ಯದಲ್ಲಿ ಪ್ರಖರವಾಗಿ ಅಭಿವ್ಯಕ್ತಗೊಂಡಿದ್ದನ್ನು ವಿಶ್ಲೇಷಿಸುವ ಮೂಲಕ, ಬಕಾಲ, ಗಲ್ಲೆಬಾನಿಗಳ ಕವಿ-ಕಾವ್ಯದ ಬಗ್ಗೆ ಓದುಗರ ಗಮನಸೆಳೆಯುತ್ತಾರೆ.

ವಿಮರ್ಶೆ

ಪುಸ್ತಕದ ಎರಡನೇ ಭಾಗದಲ್ಲಿನ 'ಇಪ್ಪತ್ತೊಂದನೇ ಶತಮಾನದ ಮೊದಲ ಘಟ್ಟದ ಕನ್ನಡ ಸಾಹಿತ್ಯ' ಲೇಖನ ಈ ಸಂಕಲನದಲ್ಲಿ ಹೆಚ್ಚು ಕುತೂಹಲ ಕೆರಳಿಸುವ ಹಾಗೂ ಚರ್ಚೆಗೆ ಅವಕಾಶ ಕಲ್ಪಿಸುವ ಬರಹ. 56 ಪುಟಗಳಷ್ಟು ದೀರ್ಘವಾದ ಈ ಬರಹ, 2001ರಿಂದ 2017ರವರೆಗಿನ ಕನ್ನಡ ಸಾಹಿತ್ಯದ ಅವಲೋಕನವಾಗಿದೆ. ಈ ಅವಧಿಯನ್ನು, ಕಳೆದ ಐದು ದಶಕಗಳ ಎಲ್ಲ ಸಾಹಿತ್ಯ ಶ್ರದ್ಧೆಗಳೂ ಸಕ್ರಿಯವಾಗಿರುವ ಕಾಲಘಟ್ಟ ಎಂದು ಸರಿಯಾಗಿಯೇ ಗುರ್ತಿಸಿರುವ ಸಮೀಕ್ಷಕರು, 'ಸಾಮಾಜಿಕ ಕಳಕಳಿ, ಅನ್ಯಾಯ-ಶೋಷಣೆಗಳ ವಿರುದ್ಧದ ಹೋರಾಟ ಮುಂತಾದ ಆಶಯಗಳು ಸಾಹಿತ್ಯ ಕೃತಿಗಳ ಕಲಾಸಿದ್ಧಿಗಿಂತ ಮುಖ್ಯ' ಎಂಬ ವಿಚಾರ ರೂಪುಗೊಂಡಿರುವುದರ ಬಗ್ಗೆ ಗಮನಸೆಳೆಯುತ್ತಾರೆ.

ಈ ವಿಚಾರಗಳೆಲ್ಲವೂ ಸರಿಯೇ. ಆದರೆ, ಹೊಸ ಶತಮಾನದ ಮೊದಲೆರಡು ದಶಕಗಳ ಅವಧಿಯಲ್ಲಿ ಗಮನಸೆಳೆದ ಹೊಸ ಲೇಖಕರ ಸಮೀಕ್ಷೆ ಎನ್ನುವ ಕುತೂಹಲದಿಂದ ಓದಿದರೆ ಈ ಬರಹ ನಿರಾಶೆ ಹುಟ್ಟಿಸುತ್ತದೆ. ಈ ಎರಡು ದಶಕಗಳಿಗೆ ಮೊದಲೇ ಬರಹಗಾರರಾಗಿ ಪ್ರಸಿದ್ಧರಾದ ಲೇಖಕರ ಸಾಹಿತ್ಯದ ವಿವೇಚನೆಯೇ ಇಲ್ಲಿ ಹೆಚ್ಚಿನ ಸ್ಥಾನ ಪಡೆದುಕೊಂಡಿದೆ. ಮೂಲಭೂತವಾದವನ್ನು ವಿರೋಧಿಸುವ ಕವಿ ಎಂದು ಆರಿಫ್ ರಾಜಾ ಅವರ ಬಗ್ಗೆ ಮೂರ್ನಾಲ್ಕು ಸಾಲುಗಳಲ್ಲಿ ಬರೆಯುವ ವಿಜಯಶಂಕರರು, ಹಿಂದೂಮೂಲಭೂತವಾದದ ವಿರೋಧಿ ದನಿಯಾಗಿ ದೀರ್ಘವಾಗಿ ಚರ್ಚಿಸಿರುವುದು ಎಚ್.ಎಸ್. ವೆಂಕಟೇಶಮೂರ್ತಿ ಅವರ ಕವಿತೆಯನ್ನು. ತಿರುಮಲೇಶರ ಕಾವ್ಯಕ್ಕೆ ಹೆಚ್ಚಿನ ಅವಕಾಶ ಇರುವ ಸಮೀಕ್ಷೆಯಲ್ಲಿ, ಆಶಯದ ಜೊತೆಗೆ ಕಲಾಸಿದ್ಧಿಯಲ್ಲೂ ಗಮನಾರ್ಹ ಯಶಸ್ಸುಪಡೆದಿರುವ ಲಲಿತಾ ಸಿದ್ಧಬಸವಯ್ಯನವರ ಕಾವ್ಯಕ್ಕೆ ಸಿಕ್ಕಿರುವುದು ಒಂದು ಪ್ಯಾರಾ ಮಾತ್ರ.

ಮೌನೇಶ ಬಡಿಗೇರರ 'ಮಾಯಾ ಕೋಲಾಹಲ'ದ ಕಥೆಗಳಿಗೆ ವಿಮರ್ಶೆಯ ನ್ಯಾಯ ಸಂದಿದೆಯಾದರೂ, ಕಳೆದೆರಡು ದಶಕಗಳಲ್ಲಿ ಗಮನಾರ್ಹ ಕಥೆಗಳನ್ನು ಬರೆದ ಮಂಜುನಾಥ್ ಲತಾ, ಗಂಗಾಧರ ಬೀಚನಹಳ್ಳಿ ಅವರ ಕಥೆಗಳ ಪ್ರಸ್ತಾಪವೇ ಸಮೀಕ್ಷೆಯಲ್ಲಿಲ್ಲ. ಕನ್ನಡ ಕಾದಂಬರಿ ಲೋಕಕ್ಕೆ ಹೊಸ ಸಂವೇದನೆಯೊಂದನ್ನು ಸೇರ್ಪಡೆಗೊಳಿಸಿದ ವಿ.ಎಂ. ಮಂಜುನಾಥರ 'ಅಸ್ಪೃಶ್ಯ ಗುಲಾಬಿ' ಕೃತಿಯ ಉಲ್ಲೇಖವೂ ಇಲ್ಲ. ಹೊಸ ಬರಹಗಾರರ ಸಾಹಿತ್ಯವನ್ನು ವಿಮರ್ಶಕರು ಗಮನಿಸುವುದಿಲ್ಲ ಎನ್ನುವ 'ಜನಪ್ರಿಯ ಆರೋಪ'ಕ್ಕೆ ವಿಯಶಂಕರ ಅವರ ಈ ಸಮೀಕ್ಷೆಯೂ ಹೊರತಾಗಿಲ್ಲ.

ತಮ್ಮ ಬರಹಗಳನ್ನು ಲೇಖಕರು 'ವಿಮರ್ಶಾ ಪ್ರಬಂಧಗಳು' ಎಂದು ಕರೆದಿದ್ದಾರೆ. ಆದರೆ, ಪ್ರಬಂಧದ ಶಿಲ್ಪ ಹಾಗೂ ಧ್ವನಿ ಇಲ್ಲಿಲ್ಲ. ವ್ಯಕ್ತಿಚಿತ್ರಗಳೇ ಹೆಚ್ಚಿನ ಪ್ರಮಾಣದಲ್ಲಿರುವ ಈ ಸಂಕಲನದ ರಚನೆಗಳನ್ನು ಲೇಖನಗಳು ಎಂದು ಕರೆಯುವುದೇ ಹೆಚ್ಚು ಸರಿ. ವಿಮರ್ಶಾನ್ಯಾಯ-ಪ್ರಾತಿನಿಧ್ಯದ ದೃಷ್ಟಿಯಿಂದ ಚರ್ಚೆಗೆ ಅವಕಾಶ ಕಲ್ಪಿಸಿದರೂ, 'ಮದುಮಗಳ ಕಣ್ಣಿನ ಬಗೀ / ಚಂದಿರನ ನಗಿ' ಇರುವಂಥ ಸಾರಸ್ವತ ಬೆಳುದಿಂಗಳನ್ನ ಸಹೃದಯರೊಂದಿಗೆ ಸೊಗಸಾಗಿ ಹಂಚಿಕೊಂಡಿರುವ ಕಾರಣದಿಂದಾಗಿ ಈ ಕೃತಿ ಆಪ್ತವೆನ್ನಿಸುತ್ತದೆ.

❖

ಗುರುಕಾವ್ಯದ ಸ್ಥೂಲ ಹಂದರ

ಟಿ.ಎನ್.ವಾಸುದೇವಮೂರ್ತಿ



ನಾರಾಯಣ ಗುರು ಸಂಪೂರ್ಣ ಕೃತಿಗಳು
ಕನ್ನಡಕ್ಕೆ: ವಿನಯ ಚೈತನ್ಯ
ಪ್ರ: ಇನ್‌ಸೈಟ್ ಪಬ್ಲಿಕಾ, ನವಕ್ಕಾವು
ಸಂ: 94 00 737475
ಪು: 248 ₹399

ಮೂಲತಃ ಕೇರಳದವರಾದ ವಿನಯಚೈತನ್ಯ ಅವರು ಕನಕಪುರ ರಸ್ತೆಯ ನಾರಾಯಣಗುರು ಗುರುಕುಲದಲ್ಲಿ 40 ವರ್ಷಗಳ ಕಾಲ ಅಧ್ಯಕ್ಷರಾಗಿದ್ದವರು. ಇಂಗ್ಲಿಷಿನಲ್ಲಿ ಹಲವು ಕೃತಿಗಳನ್ನು ಬರೆದಿರುವ ಲೇಖಕರು ಕನ್ನಡದಲ್ಲೂ ಅಕ್ಕಮಹಾದೇವಿ, ಮಿಲರೇಪ ಮುಂತಾದ ಪುಸ್ತಕಗಳನ್ನು ಬರೆದಿದ್ದಾರೆ. ಪ್ರಸ್ತುತ ಕೃತಿಯಲ್ಲಿ ಸಂಸ್ಕೃತ ಹಾಗೂ ಮಲಯಾಳಂನಲ್ಲಿ ರಚನೆಗೊಂಡ ನಾರಾಯಣ ಗುರುಗಳ ಸಮಗ್ರ ಕೃತಿಗಳ ಕನ್ನಡ ಅನುವಾದವಿದೆ.

ಕನ್ನಡದಲ್ಲಿ ಈಗಾಗಲೇ ಕೆ.ಕೆ.ನಾಯರ್, ಪಿ.ಪರಮೇಶ್ವರನ್, ಮಲಾರ್ ಜಯರಾಮ ರೈ, ಓ ಶಾಮಭಟ್ಟ, ಕೆ.ಎಂ.ರಾಘವ ನಂಬಿಯಾರ್ ಮುಂತಾದವರು ನಾರಾಯಣ ಗುರುಗಳ ಜೀವನ ಚರಿತ್ರೆಗಳನ್ನು ರಚಿಸಿದ್ದಾರೆ. ಇವಲ್ಲದೇ ನಾರಾಯಣ ಗುರುಗಳ ಕುರಿತಾಗಿ ಹತ್ತು ಹಲವು ಲೇಖನ, ಪ್ರಬಂಧಗಳೂ ಕಾಲಕಾಲಕ್ಕೆ ಪ್ರಕಟವಾಗಿವೆ. ಆದರೆ ನಾರಾಯಣ ಗುರುಗಳ ಸಮಗ್ರ ಸಾಹಿತ್ಯ ಇದೇ ಮೊದಲ ಸಲ ಕನ್ನಡದಲ್ಲಿ ಬರುತ್ತಿದೆ.

ಭಾರತದಲ್ಲಿ ಗಾಂಧಿ, ಅಂಬೇಡ್ಕರ್ ಮುಂತಾದವರ ಸಾಮಾಜಿಕ ಚಳವಳಿಗಳು ಪ್ರಾರಂಭವಾಗುವ ಮೊದಲೇ, 19ನೇ ಶತಮಾನದ ಉತ್ತರಾರ್ಧದಲ್ಲೇ, ಜಾತಿವೈಷಮ್ಯ, ಪ್ರಾಣಿವಧೆ, ಅಸ್ಪೃಶ್ಯತೆ ಮುಂತಾದ ಸಾಮಾಜಿಕ ರೋಗಗಳ ಚಿಕಿತ್ಸೆಗೆ ಮುಂದಾದ ಪ್ರಮುಖ ಸಂತ ನಾರಾಯಣ ಗುರು. ಕನ್ನಡದ ಓದುಗರಿಗೆ ನಾರಾಯಣ ಗುರುಗಳು ಒಬ್ಬ ಸಮಾಜ ಸುಧಾರಕ ಸಂತನೆಂದೇ ಪರಿಚಿತರು. ಆದರೆ, ಅವರ ಬಗೆಗೆ ಅಷ್ಟುಮಾತ್ರ ಹೇಳಿದರೆ ಅದು ಅಪೂರ್ಣ ಚಿತ್ರಣವಾಗುತ್ತದೆ ಎಂಬುದು ವಿನಯ ಚೈತನ್ಯರ ಅಭಿಪ್ರಾಯ. ಅವರನ್ನು ಒಬ್ಬ ಅದ್ವೈತ ಸಿದ್ಧಾಂತದ ಪ್ರತಿಪಾದಕನಂತೆ ಬಿಂಬಿಸುವುದು ಲೇಖಕರ ಮೂಲ ಆಶಯವಿದ್ದಂತಿದೆ. ಫ್ರೆಂಚ್ ತತ್ವಜ್ಞಾನಿ ರೋಮೇ ರೋಲೋರಂತಹ ಜೀವನ ಚರಿತ್ರಕಾರರು ಈಗಾಗಲೇ ನಾರಾಯಣ ಗುರುಗಳ ಬರವಣಿಗೆಗಳಲ್ಲಿ ಆದಿಶಂಕರರ ಅದ್ವೈತ ಸಿದ್ಧಾಂತದ ಪ್ರಭಾವವಿರುವುದನ್ನು ಗುರುತಿಸಿದ್ದಾರೆ.

ಲೇಖಕರು ಹೇಳುವಂತೆ ನಾರಾಯಣ ಗುರುಗಳನ್ನು ಅದ್ವೈತಕ್ಕಷ್ಟೇ ಸೀಮಿತಗೊಳಿಸುವುದು ಪುನಃ ಅಪೂರ್ಣ ಚಿತ್ರಣವೇ ಆಗುತ್ತದೆ. ಏಕೆಂದರೆ, ಅವರ ಕೃತಿಗಳಲ್ಲಿ ಬುದ್ಧ ಮತ್ತು ಶಂಕರರ ತತ್ವಗಳೆರಡೂ ಮಿಳಿತವಾಗಿವೆ. ಜೊತೆಗೆ ರಾಮಾನುಜರ ಭಕ್ತಿರಸವೂ ಕಂಡು ಬರುತ್ತದೆ. ನಾರಾಯಣ ಗುರುಗಳು ಸಹ ರಾಮಾನುಜರಂತೆಯೇ ದಲಿತರಿಗೆ ದೇವಸ್ಥಾನ ಪ್ರವೇಶದ ಹಕ್ಕನ್ನು ಹಾಗೂ ಸಾಮಾಜಿಕ ಸ್ಥಾನಮಾನಗಳನ್ನು ಗಳಿಸಿಕೊಡಲು ಶ್ರಮಿಸಿದವರು. ನಾರಾಯಣ ಗುರುಗಳ ರಚನೆಗಳಲ್ಲಿ ಅದ್ವೈತದ ಹಲವು ಒಳನೋಟಗಳು ಇವೆಯಾದರೂ ಮಿಥ್ಯಾವಾದವನ್ನು ಪ್ರತಿಪಾದಿಸುವ ಶಾಂಕರ ಅದ್ವೈತಕ್ಕಿಂತ ಸಾಮಾಜಿಕ ಕಳಕಳಿಯುಳ್ಳ ನಾರಾಯಣ ಗುರುಗಳ ಅದ್ವೈತ ಹೇಗೆ ಭಿನ್ನವಾದುದು ಎಂಬ ಜಿಜ್ಞಾಸೆಗೆ -ಸುದೀರ್ಘ ಪ್ರಸ್ತಾವನೆಯುಳ್ಳ- ಈ ಕೃತಿಯಲ್ಲಿ ಸಮಾಧಾನ ಸಿಗುವುದಿಲ್ಲ.

ಮೊದಲ ಓದು

ನಾರಾಯಣ ಗುರುಗಳ ಮೇಲೆ ಉಪನಿಷತ್ತು ಮತ್ತು ಅದ್ವೈತ ವೇದಾಂತದ ಪ್ರಭಾವವಿದೆಯಾದರೂ ಶಂಕರರಂತೆ ಉಪನಿಷತ್ತುಗಳನ್ನು ಸೈದ್ಧಾಂತಿಕ ನೆಲೆಯಲ್ಲಿ ಪ್ರತಿಪಾದಿಸುವ ಪ್ರಯತ್ನವಾಗಲೀ ಆಸಕ್ತಿಯಾಗಲೀ ಅವರ ಕೃತಿಗಳಲ್ಲಿ ಕಂಡುಬರುವುದಿಲ್ಲ. ಬದಲಾಗಿ ಕವಿ ರವೀಂದ್ರ, ಕುವೆಂಪು, ಬೇಂದ್ರೆ, ಮಧುರಚೆನ್ನರಂತೆ ಕಾವ್ಯಮಾರ್ಗದಲ್ಲಿ ಉಪನಿಷತ್ ವಿವೇಕವನ್ನು ಮರುಸೃಷ್ಟಿಸುವ ಪ್ರಯತ್ನ ಅವರ ರಚನೆಗಳಲ್ಲಿ ಕಂಡು ಬರುತ್ತದೆ. ಬೇಂದ್ರೆಯವರಂತೂ ಜ್ಞಾನದೇವ, ಕಬೀರ, ಅರವಿಂದ, ರವೀಂದ್ರ ಮುಂತಾದವರ ಅನುಭಾವದ ರಚನೆಗಳನ್ನು ಅನನ್ಯ ರೀತಿಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡಕ್ಕೆ ಸಿದ್ಧಿಸಿರುವ ಇಂತಹ ಅನುಭಾವ ಸಾಹಿತ್ಯದ ಹಿನ್ನೆಲೆಯಲ್ಲಿ ಈ ಕೃತಿಯನ್ನು ಅವಲೋಕಿಸಿದಾಗ ನಾರಾಯಣ ಗುರುಗಳ ಕಾವ್ಯದ ವಸ್ತು-ವಿಚಾರಗಳ ಒಂದು ಸ್ಥೂಲ ಹಂದರವಷ್ಟೇ ನಮಗೆ ಪರಿಚಯವಾಗುತ್ತದೆ.

ನಾರಾಯಣ ಗುರು 1880ಕ್ಕೂ ಮುನ್ನ ರಚಿಸಿದ್ದ ಒಂದು ಪದ್ಯವನ್ನು ಅವರಿಗೆ ತೋರಿಸಿದಾಗ 'ಆ ಪದ್ಯವನ್ನು ಬರೆದ ವ್ಯಕ್ತಿ ಈಗ ಇಲ್ಲ' ಎಂದು ಅವರು ಹೇಳಿದ್ದರಂತೆ. ನಾರಾಯಣ ಗುರುವಿನಂತಹ ಒಬ್ಬ ಸಂತ-ಕವಿಯ ಪ್ರತಿಭೆ ಕಾಲಾಂತರದಲ್ಲಿ ಯಾವೆಲ್ಲ ಮಾರ್ಗಗಳನ್ನು ಹಿಡಿಯುತ್ತದೆ, ಯಾವೆಲ್ಲ ಸ್ಥಿತ್ಯಂತರಗಳಿಗೆ ಒಳಪಡುತ್ತದೆ ಎಂಬುದು ಒಂದು ಕುತೂಹಲಕಾರಿ ಅಧ್ಯಯನ. ಈ ದೃಷ್ಟಿಯಿಂದ ಅವರ ಕೃತಿಗಳನ್ನು ಕಾಲಾನುಕ್ರಮದಲ್ಲಿ ಸಂಕಲಿಸದಿರುವುದು ಈ ಸಂಕಲನದ ಒಂದು ದೊಡ್ಡ ಕೊರತೆಯಂತೆ ತೋರುತ್ತದೆ. ಆದಾಗ್ಯೂ ಅವರ ಸಮಗ್ರ ಕೃತಿಗಳನ್ನು ಕನ್ನಡಿಗರಿಗೆ ಪರಿಚಯಿಸಲು ಪ್ರಯತ್ನಿಸಿರುವ ವಿನಯಚೈತನ್ಯರ ಪ್ರಯತ್ನ ಶ್ಲಾಘನೀಯ.

❖

ಲಕ್ಷದ್ವೀಪ ಒಂದು ಆಲಾಪ!

ಪತ್ರಿಕೆಗಳನ್ನು ತಿರುವಿ ಹಾಕಿದರೆ ಈಗ ನಿತ್ಯ ಲಕ್ಷದ್ವೀಪದ ಸುದ್ದಿ. ಈ ಕೇಂದ್ರಾಡಳಿತ ಪ್ರದೇಶದಲ್ಲಿ ರಾಜಕೀಯದ ತಳಮಳ. ಏನೇನೋ ಆಡಳಿತಾತ್ಮಕ ಬದಲಾವಣೆಗಳಿಗೆ ಅಲ್ಲೀಗ ಪ್ರತಿರೋಧದ ಗಾಳಿ ಬೀಸುತ್ತಿದೆ. ತನ್ನ ಸುತ್ತಲಿನ ಸ್ವಚ್ಛ ಸಾಗರದಷ್ಟೇ ಪ್ರಶಾಂತವಾಗಿದ್ದ ಈ ಮನಮೋಹಕವಾದ ದ್ವೀಪಕ್ಕೆ ಕೆಲವು ತಿಂಗಳ ಹಿಂದೆ ಪ್ರವಾಸಕ್ಕೆ ಹೋದಾಗ ಕಂಡು, ಕೇಳಿದ ನೋಟಗಳು ಎಷ್ಟೊಂದು ಸೊಗಸು!

ಲಕ್ಷದ್ವೀಪ ಸಮೂಹದ ಕಲ್ಪೇನಿಯ ಸಮುದ್ರತೀರದಲ್ಲಿ ಕಂಡ ನಯನಮನೋಹರ ನೋಟ

ಆನಂದ ಕುಮಾರ್

ಪ್ರವಾಸ

ಕೋಟ್ಯಂತರ ವರ್ಷಗಳ ವಿಕಾಸ ಪಥದಲ್ಲಿ ನಾವು ವಾಸಿಸುತ್ತಿರುವ ಭೂಮಿಯು ಅನೇಕಾನೇಕ ವಿಸ್ಮಯಗಳಿಗೆ ಸಾಕ್ಷಿಯಾಗಿದೆ. ಅಂತಹ ವಿಸ್ಮಯಗಳಲ್ಲಿ ಕೇಂದ್ರಾಡಳಿತ ಪ್ರದೇಶವಾದ ಲಕ್ಷದ್ವೀಪವೂ ಒಂದು. ಸಾವಿರಾರು ದ್ವೀಪಗಳು ಸೇರಿ ಲಕ್ಷದ್ವೀಪವೆಂಬ ಹೆಸರು ಪಡೆದುಕೊಂಡಿರುವ ಇಲ್ಲಿಯ ಒಟ್ಟು ಮೂವತ್ತಾರು ಮಧ್ಯಮಗಾತ್ರದ ದ್ವೀಪಗಳಲ್ಲಿ ಹತ್ತು ದ್ವೀಪಗಳು ಮಾತ್ರ ಮಾನವ ವಾಸಕ್ಕೆ ಯೋಗ್ಯವಾಗಿವೆ. ಈ ಮೂವತ್ತಾರು ದ್ವೀಪಗಳ ಒಟ್ಟು ಸುತ್ತಳತೆ 36.69 ಚದರ ಕಿಲೊ ಮೀಟರ್‌ನಷ್ಟಿದ್ದು ಕೇರಳದ ದಕ್ಷಿಣ ಭಾಗದ ಅರಬ್ಬಿ ಸಮುದ್ರದ ತೀರದಿಂದ ಇನ್ನೂರರಿಂದ ನಾಲ್ಕುನೂರು ಕಿಲೊಮೀಟರ್ ದೂರದಲ್ಲಿ ಈ ದ್ವೀಪಗಳು ಚಾಚಿಕೊಂಡಿವೆ.

ಸಮುದ್ರದ ಒಳಗಿಂದ ಬೆಂಕಿಯುಂಡೆಯಂತೆ ಉಕ್ಕಿ ಹೊರಹೊಮ್ಮುವ ಲಾವಾರಸವೇ ದ್ವೀಪಗಳ ರಚನೆಗೆ ಮೂಲಕಾರಣವೆಂದು ವಿಜ್ಞಾನಿಗಳು ಗುರುತಿಸಿದ್ದಾರಾದರೂ ಇದರ ಜೊತೆಗೆ, ಇನ್ನೂ ಮೂರು ಕಾರಣಗಳನ್ನು ಅವರು ಕೊಡುತ್ತಾರೆ. ಅವುಗಳೆಂದರೆ ಉಪಖಂಡಗಳ ಘರ್ಷಣೆ, ಹಿಮನದಿಗಳ ಹಿಮ್ಮೆಟ್ಟುವಿಕೆ ಮತ್ತು ಮಣ್ಣಿನ ಮಡ್ಡಿಯ ಶೇಖರಣೆ. ಅಂದರೆ ಉದಾಹರಣೆಗಾಗಿ ಹೇಳಬೇಕೆಂದರೆ ನೀರು ತುಂಬಿದ ಒಂದು ಗಾಜಿನ ಅಥವಾ ಪ್ಲಾಸ್ಟಿಕ್ ಬಾಟಲಿಯನ್ನು ಅನೇಕ ದಿನ ಮುಟ್ಟದೆ ಹಾಗೆಯೇ ಇಟ್ಟರೆ ತಳದಲ್ಲಿ ಮಣ್ಣಿನ ಬಣ್ಣದ ಚಿಕ್ಕ ಪದರ ರಚನೆಯಾಗುವುದನ್ನು ನಾವೆಲ್ಲಾ ನೋಡಿಯೇ ಇರುತ್ತೇವೆ. ಇದನ್ನೇ 'ಸೆಡಿಮೆಂಟ್ ಡಿಪಾಸಿಷನ್' ಅನ್ನುತ್ತಾರೆ.

ಲಾವಾರಸ ಸ್ಫೋಟಗೊಂಡಾಗ ಅದು ನೀರಿನ ಮೇಲ್ಮೈಗೆ ತಂದೆರಚುವ ಕೆಸರೇ ದ್ವೀಪಗಳ ಉದಯಕ್ಕೆ ಮುಖ್ಯ ಕಾರಣವೆನ್ನುತ್ತಾರೆ ವಿಜ್ಞಾನಿಗಳು. ಆಳದಿಂದ ಸಮುದ್ರದ ಮೇಲ್ಮೈಗೆ ಚಿಮ್ಮುವ ಮೊದಲಿನ ಲಾವಾರಸಕ್ಕೆ 'ಸೀ ಮೌಂಟ್' ಅನ್ನುತ್ತಾರೆ. ಹಾಗೆ ರಚನೆಯಾದ ಮಣ್ಣಿನ ಪದರದ ಮೇಲೆ ಸತ್ತ ದೈತ್ಯ ಜಲಚರ ಪ್ರಾಣಿಗಳ ಅವಶೇಷಗಳು ಬಂದು ಸೇರಿಕೊಳ್ಳುತ್ತವೆ. ಅಲ್ಲಿ ನಿಧಾನಕ್ಕೆ ಹುಲ್ಲು ಬೆಳೆಯ ತೊಡಗುತ್ತದೆ. ನಂತರ ಮರಗಿಡ ಬೆಳೆಯುತ್ತವೆ. ಇಂತಹ ಒಂದು ವಿಸ್ಮಯ ಏರ್ಪಡಲು ಸಾವಿರಾರು ವರ್ಷಗಳೇ ತೆಗೆದುಕೊಳ್ಳುತ್ತವೆ. ಕೆಲವೊಮ್ಮೆ ಹೀಗೆ ರಚನೆಯಾದ ದ್ವೀಪಗಳು ಪ್ರಕೃತಿಯ ವೈರುಧ್ಯಗಳಿಂದ ಕಾಣೆಯಾದ ಉದಾಹರಣೆಗಳೂ ಇವೆ.

ಕ್ರಿಸ್ತಪೂರ್ವ 1500ರಷ್ಟು ಹಿಂದೆಯೇ ಲಕ್ಷದ್ವೀಪದಲ್ಲಿ ಮಾನವರು ವಾಸವಾಗಿದ್ದ ಬಗ್ಗೆ ಪುರಾವೆಗಳಿವೆ. ಅಂತೆಯೇ ಏಳನೇ ಶತಮಾನದಲ್ಲೇ ಮುಸ್ಲಿಂ ಮಿಷನರಿಗಳು ಈ ದ್ವೀಪದಲ್ಲಿದ್ದ ಸಾಕ್ಷ್ಯಗಳಿವೆ. ಕ್ರಿ.ಶ 1799ರವರೆಗೆ ಟಿಪ್ಪು ಸುಲ್ತಾನನ ಆಡಳಿತಕ್ಕೆ ಒಳಪಟ್ಟಿದ್ದ ಲಕ್ಷದ್ವೀಪ ನಂತರ ಬ್ರಿಟಿಷರ ಪಾಲಾಯಿತು. ಸ್ವಾತಂತ್ರ್ಯಾನಂತರ 1956ರಲ್ಲಿ ನಮ್ಮ ದೇಶದ ಕೇಂದ್ರಾಡಳಿತ ಪ್ರದೇಶವಾಗಿ ಗುರುತಿಸಲ್ಪಟ್ಟಿತು.

ಇಲ್ಲಿಯ ಜನರ ಧರ್ಮದ ಬಗ್ಗೆ ಅನೇಕ ಕಥೆಗಳಿದ್ದು, ಕೇರಳದ ಕೊಚ್ಚಿಯ ಕೊನೆಯ ರಾಜ ಚೆರಮಾನ್ ಪೆರುಮಾಳ್ ದ್ವೀಪಕ್ಕೆ ಬಂದಾಗ ಅರಬ್ ವ್ಯಾಪಾರಿಗಳ ಪ್ರಭಾವಕ್ಕೆ ಒಳಗಾಗಿ ಮತಾಂತರ ವಾಗಿದ್ದಾನೆ ಎಂಬುದು ಅವುಗಳಲ್ಲಿ ಒಂದು. ಇಲ್ಲಿಯ ಬಹುತೇಕ ಜನರನ್ನು ಬ್ರಿಟಿಷರು ತೆಂಗಿನಕಾಯಿ ಆಯಲು ಕೇರಳ ಮತ್ತು ಮಂಗಳೂರು ಕಡೆಯಿಂದ ಕರೆದು ಕೊಂಡು ಹೋಗಿದ್ದರೆಂದು ಹೇಳಲಾಗುತ್ತದೆ. ಮೂಲ ದಲ್ಲಿ ಕರಾವಳಿ ತೀರದಿಂದ ಸಮುದ್ರದಲ್ಲಿ ತೇಲಿಕೊಂಡು ಹೋದ ತೆಂಗಿನ ಕಾಯಿಗಳಿಂದಲೇ ದ್ವೀಪಗಳಲ್ಲಿ ತೆಂಗಿನ ಮರ ಹುಟ್ಟಿಕೊಂಡವೆಂದೂ ಹೇಳಲಾಗುತ್ತದೆ.

ದ್ವೀಪವಾಸಿಗಳು ತುಂಬಾ ಸ್ನೇಹಜೀವಿಗಳಾಗಿದ್ದು, ಬಹುತೇಕರು ಮುಸ್ಲಿಂ ಜನಾಂಗಕ್ಕೆ ಸೇರಿದವರು. ನಮ್ಮ ದೇಶವನ್ನು 'ಮೈನ್ ಲ್ಯಾಂಡ್' ಎಂದು ಅಪಾರವಾಗಿ ಪ್ರೀತಿಸುವವರು. ಅಂತೆಯೇ ಅಲ್ಲಿಯ ಬಹಳಷ್ಟು ಯುವಕರು ನಮ್ಮ ಸೇನಾಪಡೆಗೆ ಸೇರಿಕೊಂಡಿದ್ದಾರೆ. ಆಶ್ಚರ್ಯವೆಂದರೆ ಇಲ್ಲಿ ಕಳ್ಳತನವೇ ಇಲ್ಲ. ಸಣ್ಣಪುಟ್ಟ ಜಗಳ ಮತ್ತು ಹೊಡೆದಾಟಗಳನ್ನು ಹೊರತುಪಡಿಸಿದರೆ ದ್ವೀಪಕ್ಕೆ ನ್ಯಾಯಾಂಗ ವ್ಯವಸ್ಥೆಯ ಅಗತ್ಯವೇ ಇಲ್ಲವೆನಿಸುತ್ತದೆ. ಹಾಗಾಗಿ ಲಕ್ಷದ್ವೀಪದ ರಾಜಧಾನಿ ಕವರಟ್ಟಿಯಲ್ಲಿ ತಿಂಗಳಿಗೊಮ್ಮೆ ಮಾತ್ರ ಕೋರ್ಟಿನ ಕಲಾಪ ನಡೆಯುತ್ತದೆ. ಕೇರಳದಿಂದ ಹೈಕೋರ್ಟಿನ ನ್ಯಾಯಾಧೀಶರು ಹೆಲಿಕಾಪ್ಟರ್‌ನಲ್ಲಿ ಹೋಗಿ ಒಂದು ದಿನದ ಮಟ್ಟಿಗೆ ಕಲಾಪ ನಡೆಸಿ ಬರುತ್ತಾರೆ!

ಇಲ್ಲಿಯ ಮುಖ್ಯ ದ್ವೀಪಗಳೆಂದರೆ ಕವರಟ್ಟಿ, ಕಲ್ಪೇನಿ, ಮಿನಿಕಾಯ್, ಅಗಟ್ಟಿ, ಕಡಮಟ್ಟಿ, ತಿನ್ನಿಕಾರ್ ಮತ್ತು ಬಂಗಾರಂ. ಪ್ರಮುಖ ದ್ವೀಪವಾದ 'ಕೊಡಮಾಟ್' ಅನ್ನು ಹಿಂದೆ 'ಲಖ್‌ದೀವ್ ಮಿನಿಕಾಯ್' ದ್ವೀಪವೆಂದು ಕರೆಯುತ್ತಿದ್ದರು.

ಲಕ್ಷದ್ವೀಪವು ಪ್ರಕೃತಿಯ ಒಂದು ಸುಂದರ ಕೊಡುಗೆಯಾಗಿದ್ದು ನಿಸರ್ಗ ಪ್ರೇಮಿಗಳನ್ನು ಕೈಬೀಸಿ ಕರೆಯುತ್ತದೆ. ಅಲ್ಲಿ ಎಲ್ಲಿ ನೋಡಿದರೂ ತೆಂಗಿನಮರಗಳು ಮತ್ತು ಸುತ್ತಲೂ ತುಂಬಾ ಶುಭ್ರವಾದ ಬೀಚ್‌ಗಳನ್ನು ಕಾಣಬಹುದು. ದ್ವೀಪಗಳ ಅಂಚಿನಿಂದ ಒಂದೆರಡು ಕಿ.ಮೀ.ವರೆಗೆ ದೋಣಿಯಲ್ಲಿ ಸಂಚರಿಸಿ ನೋಡಿದರೂ ಇಪ್ಪತ್ತರಿಂದ ಮೂವತ್ತು ಅಡಿ ಆಳದವರೆಗೂ ಸಮುದ್ರದ ತಳ ಕಾಣುತ್ತದೆ. ನೀರು ತಿಳಿಯಾದ ನೀಲಿ ಬಣ್ಣದಿಂದ ಕೂಡಿರುತ್ತದೆ. ಗ್ಲಾಸ್ ಬಾಟಮ್ ದೋಣಿಗಳಲ್ಲಿ ಸಮುದ್ರದ ಮೇಲೆ ಬಹು ದೂರ ಸಾಗಿ ತಿಳಿ ನೀರಿನ ಸಮುದ್ರದ ತಳದಲ್ಲಿರುವ 'ಕೋರಲ್ ರೀಫ್'ಗಳನ್ನು ಕಾಣಬಹುದು.

ಇಲ್ಲಿಯ ಇನ್ನೊಂದು ವಿಶೇಷವೆಂದರೆ ಲಕ್ಷದ್ವೀಪಕ್ಕೆ ವಿದೇಶಿ ಪ್ರವಾಸಿಗರಿಗೆ ಪ್ರವೇಶಾವಕಾಶವಿಲ್ಲ! ನಾವು ಅಲ್ಲಿಗೆ ಪ್ರವಾಸ ಹೋಗಬೇಕೆಂದರೂ ಕೊಚ್ಚಿಯಲ್ಲಿರುವ ಪ್ರವಾಸ ಅಭಿವೃದ್ಧಿ ನಿಗಮದಿಂದ ಅಗತ್ಯವಾಗಿ ಅನುಮತಿ ಪಡೆಯಬೇಕಾಗುತ್ತದೆ. ಕೊಚ್ಚಿಯಿಂದ ವಿಮಾನದಲ್ಲಿ ಅಗಟಿ ದ್ವೀಪಕ್ಕೆ ಒಂದು ಗಂಟೆಯ ಪ್ರಯಾಣವಾದರೆ, ಹಡಗಿನಲ್ಲಿ ಕೊಚ್ಚಿಯಿಂದ 14ರಿಂದ 20 ಗಂಟೆಯವರೆಗೆ ಪಯಣಿಸಬೇಕಾಗುತ್ತದೆ. ಕೊಚ್ಚಿ ಮತ್ತು ಕಲ್ಲಿಕೋಟೆಯಿಂದ ಸಹ ಅನೇಕ ಹಡಗುಗಳು ಪ್ರವಾಸಿಗರನ್ನು ಕರೆದೊಯ್ಯುತ್ತವೆ. ರಾಜಧಾನಿ ಕವರಟ್ಟಿಯಲ್ಲಿ ಕಾಣಲು ಸುಂದರ ಮಸೀದಿಗಳಿದ್ದು, ಆಭರಣಗಳಿಂದ ಅಲಂಕೃತವಾದ ಉಜ್ರಾ ಮಸೀದಿ ಪ್ರವಾಸಿಗರ ಕೇಂದ್ರ ಬಿಂದು. ಅಲ್ಲಿ ಸುಂದರವಾದ ಮೆರೀನ್ ಅಕ್ವೇರಿಯಂ ಸಹ ಇವೆ. ಇತರ ದ್ವೀಪಗಳಲ್ಲಿ ಸುಂದರವಾದ ವಾಚ್ ಟವರುಗಳು, ಸ್ಕೂಬಾ ಮತ್ತು ಅಂಡರ್ ವಾಟರ್ ಡೈವಿಂಗ್‌ಗಳು ಮತ್ತು ಕೋರಲ್ ರೀಫ್ ವೀಕ್ಷಣೆಯ ವಿಶೇಷ ದೋಣಿಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ಒಂದು ದ್ವೀಪದಿಂದ ಇನ್ನೊಂದು ದ್ವೀಪಕ್ಕೆ ಹಡಗಿನಲ್ಲೇ ಪ್ರಯಾಣಿಸಬೇಕಾಗುತ್ತದೆ.

ದ್ವೀಪಗಳ ಸುತ್ತಲೂ ಆಳವಾದ ನೀರಿಲ್ಲದ ಕಾರಣ ಬಂದರು ನಿರ್ಮಾಣಕ್ಕೆ ಅವಕಾಶವಿಲ್ಲದೆ ಹಡಗುಗಳನ್ನು ದೂರ ಸಮುದ್ರದ ಮಧ್ಯದಲ್ಲಿ ಲಂಗರು ಹಾಕಿ ನಿಲ್ಲಿಸಲಾಗುತ್ತದೆ. ಅಲ್ಲಿಂದ ಮೋಟರ್ ಬೋಟುಗಳಲ್ಲಿ ಆಳ ಸಮುದ್ರದ ಮೇಲೆ ದ್ವೀಪಕ್ಕೆ ಪ್ರಯಾಣಿಸುವುದೇ ಒಂದು ರೋಮಾಂಚಕ ಅನುಭವ. ಒಂದು ಬೆಂಕಿಪೊಟ್ಟಣದಿಂದ ಹಿಡಿದು ಪ್ರತಿಯೊಂದು ಆಹಾರ ಧಾನ್ಯದವರೆಗೆ ಎಲ್ಲಾ ವಸ್ತುಗಳನ್ನು ಕೊಚ್ಚಿಯಿಂದ ತರಿಸಿಕೊಂಡರೂ ತುಂಬಾ ಕಡಿಮೆ ಬೆಲೆಗೆ ದ್ವೀಪದಲ್ಲಿ ಹೊಟ್ಟೆ ತುಂಬಾ ಮೀನೂಟವನ್ನು ಒದಗಿಸುತ್ತಾರೆ. ನಮ್ಮ ಮಂಗಳೂರಿನಿಂದಲೂ ಹಣ್ಣು-ದಿನಸಿ ಸಾಮಗ್ರಿಗಳು ಹೋಗುತ್ತವೆ.

ಬೇರೆ ದ್ವೀಪಗಳಿಗೆ ಹೋಲಿಸಿದರೆ ಲಕ್ಷದ್ವೀಪ ನವನಾಗರೀಕತೆಯ ಹೊಡೆತಕ್ಕೆ ಸಿಗದೆ, ನೈಸರ್ಗಿಕ ಸೌಂದರ್ಯವನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿರುವ ಮನಮೋಹಕ ತಾಣ. ❖

ಕ್ವಾರಂಟೈನ್...

8ನೇ ಪುಟದಿಂದ...

ಅರೆ ಎಚ್ಚರವಿದ್ದಷ್ಟು ಹೊತ್ತೂ ಮೊಬೈಲು, ಪುಸ್ತಕ, ಕಂಪ್ಯೂಟರ್ ಎಲ್ಲವನ್ನೂ ಎತ್ತಿ ಕಿಟಕಿಯಿಂದ ಆಚೆ ಎಸೆಯುವಷ್ಟು ರೊಚ್ಚು. ನಾಲ್ಕು ವರ್ಷದ ಮಗ ಬಾಗಿಲಿಗೆ ಬಂದು ನನ್ನ ಕರೆದರೆ, ನನಗೆ ಓ ಅನ್ನಲೂ ಆಗದಷ್ಟು ಅಲ್ಲಿಗೆ ಹತ್ತಿರ - ಇಲ್ಲಿಗೆ ದೂರ!

ಆರನೇ ದಿನ ಕಳೆದ ನಂತರ ಜ್ವರದ ಪಾರಮಾರ್ಥಿಕ ಸ್ವಲ್ಪ ಹರಿದು ಇಲ್ಲಿಯ ಪ್ರಪಂಚಕ್ಕೆ ಕಣ್ಣು ಬಿಡತೊಡಗಿದೆ. ಹೊರಗಡೆ ಮಕ್ಕಳು ಪಾತ್ರೆ ಬಿಸಾಡಿ, ಆಟಿಕೆ ಎಳೆದಾಡಿ ಮಾಡುತ್ತಿದ್ದ ಶಬ್ದಗಳೆಲ್ಲ ರೂಮಿನಲ್ಲಿ ಕೂತ ನನಗೆ ಗೆಜ್ಜೆಯ ಕಿಂಕಿಣಿಯಂತೆ ಕೇಳತೊಡಗಿದವು. ಮಕ್ಕಳೊಡನೆ ತಮಾಷೆ ಮಾಡಿ ಗಂಡ ನಕ್ಕರೆ, ನನಗೆ ಇಲ್ಲಿ ಎದೆಯ ಮೇಲೆ ನಿಗಿ ನಿಗಿ ನಕ್ಷತ್ರ ಸುರಿದಂತೆ ಒಂಥರ ಹೇಳಲಾಗದ ಅನುಭವಿಸಲಂತೂ ಸಾಧ್ಯವೇ ಇಲ್ಲದ ಹಿತವಾದ ಹಳಹಳಿಕೆ. ಮಕ್ಕಳು ಪ್ರತೀ ಬಾರಿ ಅವರಪ್ಪನನ್ನು ದೊಡ್ಡ ದನಿಯಲ್ಲಿ ಕರೆದಾಗಲೂ ನನ್ನ ಹೊಟ್ಟೆಯಲ್ಲಿ ಸೂಜಿ ಮೆಣಸು ಕುಟ್ಟಿದ ಘಾಟು!

ಎರಡು ದಿನ ಹಾಗೂ ಹೀಗೂ ಕಾಲ ಹಾಕಿದ ನನಗೆ ನಂತರ ತಡೆಯಲಾಗಲಿಲ್ಲ. ವಿಡಿಯೊ ಕಾಲ್ ಮಾಡಿ ತಲೆ ತಿನ್ನತೊಡಗಿದೆ. ಸೂಪರ್ ಮಾರ್ಕೆಟ್ಟಿನಿಂದ ಮೊಸರು ತರಿಸಲಾ? ಮಕ್ಕಳಿಗೆ ಆರ್ಡರ್ ಮಾಡಿದ್ದ ಆ್ಯಕ್ಟಿವಿಟಿ ಬುಕ್ ಬಂದಿದೆಯಾ? ಅದನ್ನು ಮಾಡಿಸಲು ಟೈಮು ಇದೆಯಾ? ಕಿಚನ್ನಿನ ಕಟ್ಟೆ ಕ್ಲೀನೇ ಆಗಿಲ್ಲ... ಇದೆಲ್ಲ ಅನವಶ್ಯಕ ಸಾಲು ಪ್ರಶ್ನೆಗಳು ಗಂಡನಿಗೆ.

ಪುಸ್ತಕದ ಕಪಾಟಿನ ಬಾಗಿಲು ಮುಚ್ಚಿದೆಯಾ? ಕೀಬೋರ್ಡಿನ ಕ್ಲಾಸಿಗೆ ನಾಲ್ಕೂ ಐವತ್ತೈದಕ್ಕೇ ಜಾಯಿನ್ ಆದೆಯಾ? ಅರ್ಧ ಪೇಜು ಕನ್ನಡ ಬರೆದೆಯಾ? ಪೈಜಾಮ ಹಿಂದೆ ಮುಂದಾಗಿದೆಯಾ? ಸ್ಸು ಸ್ಸೂ ಮಾಡಿದೆಯಾ? ಇಂಥದ್ದೆಲ್ಲ ಬೇಕಾರ್ ಸವಾಲುಗಳು ಮಕ್ಕಳಿಗೆ. ಊಹ್ಞೂಂ.. ಯಾವ ಪ್ರಶ್ನೆಯನ್ನು ಎಷ್ಟೇ ಹಿಂದು-ಮುಂದು ಮಾಡಿ ಕೇಳಿದರೂ ಬಾಗಿಲು ತೆಗೆದು 'ನೀನು ಹೊರಗೆ ಬಾ... ನಮ್ಮೊಂದಿಗೆ ಇರು' ಎನ್ನುತ್ತಿಲ್ಲ ಯಾರೊಬ್ಬರೂ. ನನಗೆ ಮತ್ತೆ ಇಪ್ಪತ್ತು ವರ್ಷ ಹಿಂದಕ್ಕೆ, ಕೈ ಹಿಡಿದುಕೊಂಡು ದರದರನೆ ಎಳೆದುಕೊಂಡು ಹೋದ ಅನುಭವ!

ಈ ಕೋವಿಡ್ಡಿನ ಸಂಕಟದಲ್ಲಿ ಬಾಣಂತನವನ್ನು ನೆನೆಯದೇ ಇರಲು ಹೇಗಾದೀತು...? ಇಬ್ಬರು ಮಕ್ಕಳನ್ನು ಹೆತ್ತು ಮಹಾತಾಯಿಯಾದಾಗಲೂ ನಾನು ಬಾಣಂತಿ ಆರೈಕೆ ಮಾಡಿಕೊಂಡಿದ್ದು ಮಾತ್ರ ಅಷ್ಟಕ್ಕಷ್ಟೇ. ಮೊದಲನೆಯದು ಲಂಡನ್ನಿನಲ್ಲಿ. ಅಲ್ಲಿ ಎರಡನೇ ದಿನಕ್ಕೇ ಆಸ್ಪತ್ರೆಯಿಂದ ಮನೆಗೆ ಬಂದು, ಮೂರನೇ ದಿನದಿಂದ ಪಾತ್ರೆಯನ್ನೂ ತೊಳೆದಿದ್ದೆ. ಬಾಣಂತನ ಮಾಡಲು ಬಂದ ನಮ್ಮಮ್ಮ ನನ್ನ ಧಿಗು-ಧಿಗು ನೋಡಿ ಹೆದರಿದರೂ ಅಲ್ಲಿನ ವ್ಯವಸ್ಥೆಗಳೇ ಹಾಗಂದಮೇಲೆ ಸುಮ್ಮನಾಗಿ ಹೋದರು. ಇನ್ನು ಎರಡನೆಯದಂತೂ ನಮ್ಮ ಬೆಂಗಳೂರಿನಲ್ಲಿ. ಮೊದಲ ಬಾಣಂತನವನ್ನು ಸಲೀಸಾಗಿ ಮುಗಿಸಿ ಸೊಂಟಗಟ್ಟಿ ಮಾಡಿಕೊಂಡ ಅನುಭವ ನನ್ನನ್ನು ಇನ್ನಷ್ಟು ಒಡ್ಡಿಯನ್ನಾಗಿ ಮಾಡಿತ್ತು. ಎರಡನೆಯ ಮಗುವಿನ ಎಲ್ಲಾ ಕೆಲಸ ಮಾಡಿಕೊಂಡೇ ಮೊದಲನೆಯವನಿಗೂ ಇನ್ನಷ್ಟು ಅಂಟಿಕೊಂಡೆ. ಒಳ್ಳೆಯ ಸಮಯ ಸಾಧಕ ನರಿಯಂತೆ ಬೆಳಗಿಂಜಾವ, ಸರಿರಾತ್ರಿ ಮಕ್ಕಳ ಎಲ್ಲ ಕೆಲಸ ಮುಗಿಸುತ್ತಿದ್ದೆ. ಮೂಡು ಸರಿಯಾಗಿ ಇಲ್ಲದಾಗ ಒಮ್ಮೊಮ್ಮೆ ಗುಟುರು ಹಾಕಿದರೂ ಅಲ್ಲೇ ಮರೆಯುತ್ತಿದ್ದೆ. ಸಂಸಾರ ಮಕ್ಕಳು ನಾನಿಲ್ಲದೇ ಬದುಕಬಹುದಾ ಎಂಬುದು ನನಗೆ ಪ್ರಶ್ನೆಯೇ ಆಗಿರಲಿಲ್ಲ. ಖಂಡಿತ ಸಾಧ್ಯವಿಲ್ಲದ ಮಾತು ಅದು ಎಂದು ಯಾವತ್ತೋ ನಾನು ತೀರ್ಮಾನ ಮಾಡಿಯಾಗಿತ್ತು.

ಆದರೆ ಈ ಕೋವಿಡ್ಡಿನಿಂದ ಹಾಸಿಗೆ ಹಿಡಿದದ್ದು ಮಾತ್ರ ಈ ಲೋಕದ ಅನುಭವಕ್ಕೆ ನಿಲುಕದ್ದು. ಮುಚ್ಚಿದ ಬಾಗಿಲ ಹಿಂದೆ ಆಗುವ ಪ್ರತೀ ಶಬ್ದವೂ ಒಮ್ಮೊಮ್ಮೆ ಆರ್ತವೇ. ಮಕ್ಕಳ ಒಂದೊಂದು ಬಿಕ್ಕೂ ನನ್ನನ್ನು ಹನಿಗಣ್ಣಾಗಿಸುತ್ತಿತ್ತು. ಒಮ್ಮೆ ಅವು ಕೆಮ್ಮಿದರೆ ಸಾಕು - ಹೊಟ್ಟೆಯಲ್ಲಿ ಇದ್ದುದು ಎಲ್ಲಾ ಹೊರಬಂದು ರಾತ್ರಿ ಪೂರ್ತಿ ಉಪವಾಸ ಮಲಗಿಬಿಟ್ಟರೆ ಎಂಬಷ್ಟು ದೂರಾಲೋಚನೆ! ದಿನಗಳೆದಂತೆ ಮಕ್ಕಳು ನನ್ನ ಸ್ಪರ್ಶವನ್ನೇ ಪೂರಾ ಮರೆತುಬಿಟ್ಟವಾ ಎಂಬ ಘಾತ. ವಿಡಿಯೊ ಕಾಲ್ ಮಾಡುವಾಗಲೊಮ್ಮೆ ಅವರ ಕಣ್ಣ ಮಿಂಚು ನೋಡಿ ನನ್ನ ಎದೆಯಲ್ಲಿ ಥವ. ಎಲ್ಲವೂ ಮತ್ತೆ ಸರಿ ಹೋದೀತು ಎಂಬ ಗಟ್ಟಿಭಾವ.

ಅಂತೂ ಇಂತೂ ಹದಿಮೂರೂವರೆ ದಿನಗಳನ್ನು ನರಳುತ್ತ ಮುಗಿಸಿದ್ದೇನೆ. ಮೊದಲಷ್ಟು ದಿನ ಮೈಕೈ ಹಿಂಡಿ ಹಾಕಿದ ಜ್ವರ ಮೇಲೋ, ದಿನಗಳೆದಂತೆ ಎದೆಯ ಮೂಲೆಯಲ್ಲಿ ಗುಡ್ಡವಾಗುತ್ತ ನಡೆದ ಅಸಹಾಯಕತೆ, ಕಹಿ ಅನುಭವ ಮೇಲೋ ಎಂಬುದನ್ನು ನಿರ್ಧಾರ ಮಾಡಲು ಅಸಾಧ್ಯ ಎಂಬಷ್ಟು ಬಳಲಿದ್ದೇನೆ. ಅಮ್ಮ ಹೊರಬಂದ ಮಾರನೆಯದಿನ ಮಾವಿನ ಕಸ್ಟರ್ಡ್, ನಂತರ ಒಂದಿನ ಈರುಳ್ಳಿ ದೋಸೆ, ಶನಿವಾರ ಬೆಳಗ್ಗೆ ಹತ್ತಕ್ಕೆ ಒಥೆಲ್ಲೋ ಬೋರ್ಡ್ ಗೇಮ್ ಅನ್ನುತ್ತ ಲೆಕ್ಕಾಚಾರ ಹಾಕುವ ಮಕ್ಕಳ ದನಿಗೆ ರೂಮಿನಲ್ಲಿ ಶತಪಥ ಹಾಕುತ್ತ ಬೆರಗಾಗುತ್ತೇನೆ. ನಾಳೆ ಹದಿನಾಲ್ಕು ದಿನ ಮುಗಿದಮೇಲೆ, ಗಂಟೆ ಶಂಖ ಜಾಗಟೆಗಳ ಸಮೇತ ವೈಕುಂಠದ ಬಾಗಿಲುಗಳು ಒಂದಾದ ನಂತರ ಇನ್ನೊಂದು ತೆರೆಯುವ ಸಂಭ್ರಮವನ್ನು ನೆನೆದು ಪುಳಕಿತಗೊಳ್ಳುತ್ತ ಆಕಾಶ ನೋಡುತ್ತೇನೆ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಪದ-ಬದಲಾಟ

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿ

1.ಮಾಲಕನಚಾವಿ 2.ಗಾಯತ್ರಿಮಂತ್ರ 3.ರಮಾಮನವಿ

ನಗುನಗುತಾ ಕಲಿ

HMT ನೆನಪಿಟ್ಟರೆ ಮೌಂಟ್ ಎವರೆಸ್ಟ್ ಏರಿದ ಮೊದಲಿಗರ ಹೆಸರನ್ನು ಸುಲಭವಾಗಿ ನೆನಪಿಡಬಹುದು

H = ಹಿಲರಿ, M = ಮೌಂಟ್ ಎವರೆಸ್ಟ್

T = ತೇನ್‌ಸಿಂಗ್

ಶಬ್ದಗಳಲ್ಲಿ ಸರಸ...

ಇಲ್ಲಿ ಕೊಟ್ಟಿರುವ 'ಸ' ಬಳ್ಳಿಯ 16 ಅಕ್ಷರಗಳಿಂದ ಎರಡಕ್ಷರದಂತೆ ಹೊಂದಿಸಿ ಎಂಟು ಪದಗಳನ್ನು ರಚಿಸಿ

ಸೋ	ಸೀ	ಸಂ	ಸಿ
ಸ	ಸೆ	ಸೀ	ಸೆ
ಸೇ	ಸೂ	ಸೆ	ಸು
ಸ	ಸೊ	ಸ	ಸು

ಗಣಿತದಲ್ಲಿ ಗರ್ದಿ ಗಮ್ಮತ್ತು

ನಿನ್ನ ಪ್ರೀತಿಯ ಅಂಕಿಯನ್ನೇ ಕೊಡುವ ಗುಣಾಕಾರ

12345679-ಇದೊಂದು ಸ್ವಾರಸ್ಯಕರ ಸಂಖ್ಯೆ.

ಒಂದರಿಂದ ಒಂಬತ್ತರವರೆಗಿನ ನಿನ್ನ ಪ್ರೀತಿಯ ಸಂಖ್ಯೆಗೆ 9ರಿಂದ ಗುಣಿಸಿ ಬಂದ ಉತ್ತರವನ್ನು ಮೇಲಿನ ಸ್ವಾರಸ್ಯಕರ ಸಂಖ್ಯೆಯೊಂದಿಗೆ ಗುಣಿಸಿದರೆ ಅದು ನಿನ್ನ ಪ್ರೀತಿಯ ಅಂಕಿಯನ್ನೇ ಉತ್ತರದಲ್ಲಿ ಕೊಡುತ್ತದೆ

ಉದಾ: ನನ್ನ ಪ್ರೀತಿಯ ಅಂಕಿ 7

ಆದರೆ, 7x9=63

ಈ 63ನ್ನು 12345679ಕ್ಕೆ ಗುಣಿಸಿದರೆ

12345679

X 6

=777777777

ಪ್ರೀತಿಯ ಅಂಕಿ ಸಿಕ್ಕಿತು.

ನೀನು ಬೇರೆ ಬೇರೆ ಅಂಕಿಗಳಿಂದ ಗುಣಿಸಿ ನೋಡು

ಟ್ವೆಂಟಿ – 20 ಮ್ಯಾಚ್

ಒಗಟು ಒಡೆದು ಉತ್ತರ ಹೊಂದಿಸಿ

1.	ಕಂಬದ ಮ್ಯಾಗ ನಿಂಬಿ ಕಾಯಿ	A.	ಕನ್ನಡಿ
2.	ಹಸರ ಗಿಡದಾಗ ಮೊಸರು ಚೆಲ್ಲೈತಿ	B.	ಒಲೆ
3.	ಜುಟ್ಲ ಹುಡ್ಗಿ ದೇವರ್ಗೆ ಹೊಂಟೈತಿ	C.	ಪತ್ರೋಳಿ
4.	ಅವ್ವ ಕುಂತಾಳ ಮಗಳು ಓಡಾಡ್ತಾಳ	D.	ತಲೆ
5.	ಅಟ್ಟಂ ಬಟ್ಟಂ ಅರಣ್ಯದ್ಯಾಗ ಶೆಟ್ಟಿ ಅಂಗಡಿ ಇಟ್ಟಾನ	E.	ಮೆಣಸಿನಕಾಯಿ
6.	ನೂರ ಮಂದಿಗೆ ಒಂದೇ ಉಡದಾರ	F.	ಬಾರಕೋಲು
7.	ಅವ್ವ ಕಿವಿ ಹರಕಿ ಮಗ ಹೊಟ್ಟೆ ಡುಮ್ಮ	G.	ಕಲ್ಲಂಗಡಿ
8.	ಗಿಡದ ತುಂಬ ಗಿಣಿ ಮುಕರ್ಯಾವು	H.	ಕಸಬರಗಿ
9.	ಹಸರ ತ್ವಾಟ ಬೆಳ್ಳಿ ಗೂಟ	I.	ತೆಂಗಿನಕಾಯಿ
10.	ಹಿಡಿಯಾಕ ಹೋದ್ರ ಕಡಿಯಾಕ ಬರ್ತೈತಿ	J.	ಜೇನುಗೂಡು
11.	ಒಂದೇ ಹಪ್ಪಳ ಊರಿಗೆಲ್ಲ ಊಟ	K.	ದೀಪ
12.	ಅಂಗಳ ತುಂಬಾ ಇಂಗಳ ಗೂಟ	L.	ಬೀಸುಕಲ್ಲು
13.	ಅವ್ವ ಅಂದ್ರ ಬರಲ್ಲ, ಅಪ್ಪ ಅಂದ್ರ ಬರಲ್ಲ ಕೈ ಹಿಡಿದು ಕರದ್ರ ಬರ್ತೈತಿ	M.	ಮೂಲಂಗಿ
14.	ಈಟಪಾರ ಗಿದ್ನ ಅಕ್ಕಿ ಹೊರತಾನ	N.	ಉರಿ
15.	ಬಾಯಲ್ಲಿ ತಿಂದು ಬೆನ್ನಲ್ಲಿ ಕಾರತದ	O.	ಕದ
16.	ಹಸರ ಕುಬಸಕ್ಕೆ ಹನ್ನೆರಡ ಟಿಬ್ಬಿ	P.	ಹಂಡೆ-ಗಿಂಡಿ
17.	ಬಂಗಾರ ಗುಬ್ಬಿ ಬಾಯಲ್ಲಿ ನೀರ ಕುಡಿತದ	Q.	ಹತ್ತಿ ತೊಳೆ
18.	ಬೆಳ್ಳಿ ಗಿಂಡಿಗೆ ಬಾಯಿ ಇಲ್ಲ	R.	ಚಂದ್ರ
19.	ಗಿಡ್ಡನ ಹುಡುಗ ಸಡ್ಡ ಹೊಡಿತಾನ	S.	ಲವಂಗ
20.	ಅಕ್ಕ ಅಕ್ಕ ನಾರಿ ಅಕ್ಕನ ಮಾರ್ಯಾಗ ಮಾರಿ	T.	ಚುಕ್ಕಿ

ಡಣ್ಣ ಚಿಕ್ಕ ಕೇಳ್ರಪ್ಪ ಕಥೆಯ

ಕೆರೆಗೆ ಹಾರ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ



ಕೆರೆಗೆ ಹಾರ, ಜನಪದ ಸಾಹಿತ್ಯದ ಕಥನಗೀತೆಗಳಲ್ಲಿ ಬಲು ಪ್ರಸಿದ್ಧವಾದುದು. ಕಲ್ಲನಕೇರಿ ಮಲ್ಲನಗೌಡ ಕೆರೆಯೊಂದ ಕಟ್ಟಿಸಿದ್ದ. ಆದರೆ, ಅದರಲ್ಲಿ ಸೆರೆಮುಕ್ಕ ನೀರಿರಲಿಲ್ಲ. ಮಲ್ಲನಗೌಡ ಚಿಂತಾಕ್ರಾಂತನಾದ

'ಕೆರೆಗೆ ಹಾರ ಕೊಟ್ಟರಷ್ಟೇ ನೀರು ಬರುತ್ತದೆ' ಎಂದ ಜೋಯಿಸ. ಮಲ್ಲನಗೌಡನ ಮಗಳ ಕನಸಿನಲ್ಲಿ ಬಂದ ಗಂಗಾದೇವಿಯೂ ಕೆರೆಯಲ್ಲಿ ನೀರು ಬರಲು ತನಗೆ ಹಾರ ಬೇಕೇಬೇಕು ಎಂದು ಹೇಳಿದಂತಾಯ್ತು

ಮಲ್ಲನಗೌಡ ತನ್ನ ಸಣ್ಣ ಸೊಸೆ ಭಾಗೀರಥಿಯನ್ನು ಕೆರೆಗೆ ಹಾರವಾಗಿ ಕೊಡಲು ನಿರ್ಧರಿಸಿದ. ಮಗನಿಗೆ ಗೊತ್ತಾಗಬಾರದು ಎಂದು ಆತನನ್ನು ವ್ಯಾಪಾರಕ್ಕಾಗಿ ಬೇರೆ ಊರಿಗೆ ಕಳುಹಿಸಿಕೊಟ್ಟ



ಭಾಗೀರಥಿಯನ್ನು ಎತ್ತಿನ ಬಂಡಿಯಲ್ಲಿ ಮೆರವಣಿಗೆಯಲ್ಲಿ ಕೆರೆಗೆ ಕರೆದೊಯ್ದ ಮಲ್ಲನಗೌಡನ ಕುಟುಂಬ ಗಂಗಾಪೂಜೆಯನ್ನು ನೆರವೇರಿಸಿತು. ಮುಂದಿನದನ್ನು ನೆನೆದು ಎಲ್ಲರ ಮನಸ್ಸುಗಳು ಭಾರವಾಗಿದ್ದವು

ಗಂಗಾಪೂಜೆ ಮುಗಿದು ವಾಪಸು ಬರುವಾಗ ಮಲ್ಲನಗೌಡನ ಹೆಂಡತಿ ಬೇಕಂತಲೇ ಬಂಗಾರದ ಕಳಸ, ಆರತಿಯನ್ನು ಕೆರೆಯ ಅಂಗಳದಲ್ಲಿ ಬಿಟ್ಟುಬಂದಿದ್ದಳು. ತರುವಂತೆ ಭಾಗೀರಥಿಯನ್ನು ಕಳಿಸಿದಳು

ಕೆರೆಗೆ ಹೋದ ಭಾಗೀರಥಿ ಬಂಗಾರದ ಕಳಸ ಮತ್ತು ಆರತಿ ತಟ್ಟೆ ಹಿಡಿದು ಬರುವಾಗ ಮಳೆ ಬಂದು ನೀರು ಉಕ್ಕಿತು. ಆಕೆ ಒಂದೊಂದು ಮೆಟ್ಟಿಲು ಏರುತ್ತಿದ್ದಂತೆ ಕೆರೆಯಲ್ಲಿ ನೀರು ತುಂಬಿ, ಆಕೆ ಹಾರವಾದಳು. ಕೆರೆ ತುಂಬಿತು

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಚ	ಡ	ದ	ಕು	ಕು
ಕಿ	ಕೆ	ಕು	ಕ	ಕು

	ಂ		ಹೆಗಲು
	ಂ		ಕಾಲು ತೆಗೆದ ತೆನೆ
	ಂ		ಗುಚ್ಛ
	ಂ		ಹೋಮಕ್ಕೆ ತೆಗೆದ ತಗ್ಗು
	ಂ		ಬೆಟ್ಟ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ 1 ಜಿಂಕೆ 2 ಹಂದಿ 3 ಸಿಂಹ 4 ಮಂಗ 5 ಒಂಟೆ

ಶಬ್ದಗಳಲ್ಲಿ ಸರಸ: 1 ರವಾನೆಗಾರ 2 ನವಜೀವನ 3 ವರಗೌರವ 4 ಸಮಾನಮಾಸ 5 ನವಕವನ 6 ರಮಾಕುಮಾರ 7 ನಿಜರಜನಿ 8 ವಿಕಟಕವಿ 9 ಕಂಬದಬಂಕ 10 ಗಜದಜಗ

ಟ್ವೆಂಟಿ- 20 ಮ್ಯಾಚ್: 1-M, 2-T, 3-D, 4-H, 5-C, 6-A, 7-P, 8-B, 9-S, 10-E, 11-Q, 12-R, 13-G, 14-O, 15-N, 16-F, 17-I, 18-L, 19-J, 20-K

ಮಜ ಮಜ ಮಜಕೂರದ ಮೇ 23ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಮೀರಾ ಕಾರಕ್ಕಿ, ಕಳಸ, ಚಿಕ್ಕಮಗಳೂರು ಜಿಲ್ಲೆ

ಯಶವಂತ ಗು.ಕಡಬೂರ ಬೆಳಗಾವಿ

ಶ್ರೀಲಕ್ಷ್ಮಿ, ಮಂಡ್ಯ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

‘ದಿ ಹಂಡ್ರೆಡ್’ ಟೂರ್ನಿಗೆ ಜೆಮಿಮಾ

ಜೆಮಿಮಾ

ಮುಂಬೈ (ಪಿಟಿಐ): ಭಾರತದ ಯುವ ಬ್ಯಾಟರ್ ಜೆಮಿಮಾ ರಾಡ್ರಿಗಸ್ ಜುಲೈ ತಿಂಗಳಲ್ಲಿ ಇಂಗ್ಲೆಂಡ್‌ನಲ್ಲಿ ನಡೆಯಲಿರುವ ನೂರು ಎಸೆತಗಳ ಕ್ರಿಕೆಟ್ ಟೂರ್ನಿ ‘ದಿ ಹಂಡ್ರೆಡ್’ನಲ್ಲಿ ಪಾಲ್ಗೊಳ್ಳಲಿದ್ದು ನಾರ್ತರ್ನ್ ಸೂಪರ್ ಚಾರ್ಜರ್ಸ್ ತಂಡದ ಪರ ಆಡಲಿದ್ದಾರೆ.

ಜುಲೈ 21ರಿಂದ ನಡೆಯಲಿರುವ ಟೂರ್ನಿಯಲ್ಲಿ ಪುರುಷ ಮತ್ತು ಮಹಿಳೆಯರ 8 ತಂಡಗಳು ಪಾಲ್ಗೊಳ್ಳಲಿವೆ. ಭಾರತ ಮಹಿಳಾ ಟಿ20 ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಉಪನಾಯಕಿ ಸ್ಮೃತಿ ಮಂದಾನ, ಶಫಾಲಿ ವರ್ಮಾ ಮತ್ತು ಆಲ್‌ರೌಂಡರ್ ದೀಪ್ತಿ ಶರ್ಮಾ ಈಗಾಗಲೇ ವಿವಿಧ ತಂಡಗಳನ್ನು ಸೇರಿ ಕೊಂಡಿದ್ದಾರೆ.

ಬಿಟಿಸಿಯಲ್ಲಿ ಲಸಿಕೆ ಶಿಬಿರ

ಬೆಂಗಳೂರು: ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಕುದುರೆಗಳನ್ನು ನೋಡಿಕೊಳ್ಳುತ್ತಿರುವ ಕಾರ್ಮಿಕರಿಗೆ ಕೋವಿಡ್ ಲಸಿಕೆ ಶಿಬಿರವನ್ನು ಆಯೋಜಿಸಲಾಗಿದೆ. 850 ಕುದುರೆಗಳ ಮೇಲ್ವಿಚಾರಣೆ ಮಾಡುತ್ತಿರುವ ಎಲ್ಲರಿಗೂ ಕ್ಲಬ್‌ನ ಆವರಣದಲ್ಲಿ ಲಸಿಕೆ ನೀಡಲಾಗುತ್ತಿದೆ.

ಲಸಿಕೆಯನ್ನು ದೇಣಿಗೆ ನೀಡಿರುವ ಜವರಾಯ್ ಎಸ್.ಪೂನಾವಾಲ ಅವರಿಗೆ ಬಿಟಿಸಿಯ ವ್ಯವಸ್ಥಾಪನಾ ಸಮಿತಿ ಕೃತಜ್ಞತೆ ಸಲ್ಲಿಸಿದೆ.

ಬಿಸಿಸಿಐ ವಿಶೇಷ ಸಾಮಾನ್ಯ ಸಭೆಯಲ್ಲಿ ನಿರ್ಧಾರ: ಟಿ20 ವಿಶ್ವಕಪ್ ತೀರ್ಮಾನ ವಿಳಂಬ

ಮತ್ತೆ ಯುಎಇಯತ್ತ ಐಪಿಎಲ್

ನವದೆಹಲಿ (ಪಿಟಿಐ): ಕೋವಿಡ್‌ನಿಂದಾಗಿ ದಿಢೀರ್ ಮುಂದೂಡಲಾದ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಉಳಿದ ಪಂದ್ಯಗಳನ್ನು ಯುಎಇಯಲ್ಲಿ ನಡೆಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ನಿರ್ಧರಿಸಿದೆ.

ಶನಿವಾರ ವರ್ಚುವಲ್ ಆಗಿ ನಡೆದ ಮಂಡಳಿಯ ವಿಶೇಷ ಸಾಮಾನ್ಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದ್ದು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಪಂದ್ಯಗಳನ್ನು ನಡೆಸಲಾಗುವುದು ಎಂದು ತಿಳಿಸಲಾಗಿದೆ. ದಿನಾಂಕ ಇನ್ನೂ ನಿಗದಿ ಮಾಡಿಲ್ಲ. ಆದರೆ ಸೆಪ್ಟೆಂಬರ್ 18 ಮತ್ತು ಅಕ್ಟೋಬರ್ 10ರ ನಡುವೆ ಪಂದ್ಯಗಳು ನಡೆಯುವ ಸಾಧ್ಯತೆ ಹೆಚ್ಚಾಗಿದೆ.

‘ಸೆಪ್ಟೆಂಬರ್‌ನಲ್ಲಿ ಭಾರತದಲ್ಲಿ ಮಳೆಯ ಸಮಸ್ಯೆ ಇರುತ್ತದೆ. ಆದರೆ ಯುಎಇಯಲ್ಲಿ ಕ್ರಿಕೆಟ್ ಪಂದ್ಯಗಳಿಗೆ ಅದು ಸೂಕ್ತ ಕಾಲ’ ಎಂದು ಮಂಡಳಿ ತಿಳಿಸಿದೆ.

ಈ ಬಾರಿಯ ಟೂರ್ನಿಯಲ್ಲಿ ಒಟ್ಟು 60 ಪಂದ್ಯಗಳನ್ನು ನಿಗದಿ ಮಾಡಲಾಗಿದೆ. ಆದರೆ 29 ಪಂದ್ಯಗಳು ಮುಗಿಯುವಷ್ಟರಲ್ಲಿ ಬಯೊಬಬಲ್‌ನಲ್ಲಿರುವ ಆಟಗಾರರನ್ನು ಕೋವಿಡ್ ಕಾಡಲು ಆರಂಭವಾದ ಕಾರಣ ಮೇ ನಾಲ್ಕರಂದು ಟೂರ್ನಿಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಗಿತ್ತು.

ಯುಎಇಯಲ್ಲಿ ಕಳೆದ ಬಾರಿ ನಡೆದ ಐಪಿಎಲ್ ಟೂರ್ನಿಯ ಪಂದ್ಯವೊಂದರ ಸಂದರ್ಭ –ಪಿಟಿಐ ಚಿತ್ರ

ಟಿ20 ವಿಶ್ವಕಪ್: ನಿರ್ಧಾರಕ್ಕೆ ಕಾಲಾವಕಾಶ: ಭಾರತದಲ್ಲಿ ನಡೆಸಲು ಉದ್ದೇಶಿಸಿರುವ ಟಿ20 ವಿಶ್ವಕಪ್ ಟೂರ್ನಿ ಅಕ್ಟೋಬರ್ ಕೊನೆಯ ವಾರದಲ್ಲಿ ಆರಂಭಗೊಳ್ಳಬೇಕಾಗಿದೆ. ಆದರೆ ಟೂರ್ನಿಗೆ ಆತಿಥ್ಯ ವಹಿಸುವ ಕುರಿತು ಅಂತಿಮ ನಿರ್ಧಾರ ಕೈಗೊಳ್ಳಲು ಐಸಿಸಿ ಬಳಿ ಒಂದು ತಿಂಗಳ ಕಾಲಾವಕಾಶ ಕೋರಲು ತೀರ್ಮಾನಿಸಲಾಗಿದೆ.

‘ಸದ್ಯ ಭಾರತದಲ್ಲಿ ಆರೋಗ್ಯ ವಿಷಮ ಸ್ಥಿತಿ ಇದೆ. ಆದ್ದರಿಂದ ಯಾವುದೇ ನಿರ್ಧಾರ ಕೈಗೊಳ್ಳಲು ಸಾಧ್ಯವಿಲ್ಲ. ಜುಲೈ1ರಂದು ಮತ್ತೊಂದು ವಿಶೇಷ ಸಭೆ ನಡೆಯಲಿದ್ದು ವಿಶ್ವಕಪ್ ಆಯೋಜಿಸುವ ಬಗ್ಗೆ ಅಂದು ತೀರ್ಮಾನಿಸಲಾಗುವುದು’ ಎಂದು ಬಿಸಿಸಿಐ ತಿಳಿಸಿದೆ.

ಜೂನ್ ಒಂದರಂದು ದುಬೈಯಲ್ಲಿ ನಡೆಯಲಿರುವ ಐಸಿಸಿಯ ಮಂಡಳಿ ಸಭೆಯಲ್ಲಿ ಬಿಸಿಸಿಐ ಅಧ್ಯಕ್ಷ ಸೌರವ್ ಗಂಗೂಲಿ, ಕಾರ್ಯದರ್ಶಿ ಜಯ್ ಶಾ ಮತ್ತು ಉಪಾಧ್ಯಕ್ಷ ರಾಜೀವ್ ಶುಕ್ಲಾ ಪಾಲ್ಗೊಳ್ಳಲಿದ್ದು ವಿಶ್ವಕಪ್ ಬಗ್ಗೆ ಅಲ್ಲಿಯೂ ಚರ್ಚೆ ನಡೆಯಲಿದೆ.

ಕಳೆದ ಬಾರಿ ರದ್ದಾದ ರಣಜಿ ಟೂರ್ನಿಗೆ ಸಂಬಂಧಿಸಿ ಆಟಗಾರರಿಗೆ ನೀಡಬೇಕಾದ ಪರಿಹಾರಧನದ ವಿಷಯ ಸಭೆಯಲ್ಲಿ ಚರ್ಚೆಯಾಗಲಿಲ್ಲ. ರಾಜ್ಯವೊಂದರ ಪ್ರತಿನಿಧಿ ಈ ಕುರಿತು ಪ್ರಶ್ನಿಸಿದ್ದರು. ಆದರೆ ಜನವರಿಯಲ್ಲಿ ನಡೆದ ಸಭೆಯಲ್ಲೇ ಈ ಕುರಿತು ನಿರ್ಧಾರ ಪ್ರಕಟಿಸಿದ್ದರಿಂದ ಮತ್ತೊಮ್ಮೆ ಚರ್ಚೆ ನಡೆಸುವ ಅಗತ್ಯವಿಲ್ಲ ಎಂಬ ಅಭಿಪ್ರಾಯ ಮೂಡಿಬಂತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಡಬ್ಲ್ಯುಟಿಸಿ: ಭಾರತ ತಂಡಕ್ಕೆ ವ್ಯವಸ್ಥಿತ ಪ್ರತ್ಯೇಕವಾಸ’

ದುಬೈ (ಪಿಟಿಐ): ನ್ಯೂಜಿಲೆಂಡ್ ವಿರುದ್ಧ ನಿಗದಿಯಾಗಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಫೈನಲ್ ಪಂದ್ಯಕ್ಕೂ ಮೊದಲು ಭಾರತ ತಂಡದ ಆಟಗಾರರಿಗೆ ‘ವ್ಯವಸ್ಥಿತ ಪ್ರತ್ಯೇಕವಾಸ‘ ಇರಲಿದೆ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಶನಿವಾರ ತಿಳಿಸಿದೆ. ಆದರೆ ಇಂಗ್ಲೆಂಡ್‌ನಲ್ಲಿ ತಂಡಕ್ಕಿರುವ ‘ಕಠಿಣ ಕ್ವಾರಂಟೈನ್’ನ ಅವಧಿಯನ್ನು ಅದು ಉಲ್ಲೇಖಿಸಿಲ್ಲ.

ಜೂನ್ 18ರಿಂದ 22ರವರೆಗೆ ಸೌತಾಂಪ್ಟನ್‌ನ ಹ್ಯಾಂಪ್‌ಶೈರ್ ಬೌಲ್‌ನಲ್ಲಿ ವಿಶ್ವದ ಎರಡು ಪ್ರಮುಖ ತಂಡಗಳು ಮುಖಾಮುಖಿಯಾಗಲಿವೆ.

ಆತಿಥೇಯ ತಂಡದ ಎದುರು ದ್ವಿಪಕ್ಷೀಯ ಸರಣಿ ಆಡಲು ನ್ಯೂಜಿಲೆಂಡ್ ಈಗಾಗಲೇ ಇಂಗ್ಲೆಂಡ್‌ಗೆ ಬಂದಿಳಿದಿದೆ. ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡವು ತವರಿನಲ್ಲಿ 14 ದಿನಗಳ ಕ್ವಾರಂಟೈನ್ ಮುಗಿಸಿ ಜೂನ್ 3ರಂದು ಇಂಗ್ಲೆಂಡ್ ತಲುಪಲಿದೆ.

‘ಮೇ 17ರಂದು ಬಿಡುಗಡೆಯಾಗಿರುವ ಆರೋಗ್ಯ ಸುರಕ್ಷಾ ಕಾಯ್ದೆಯಲ್ಲಿ ವಿವರಿಸಿರುವಂತೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ನಡೆಸಲು ಇಂಗ್ಲೆಂಡ್ ಸರ್ಕಾರ ಅನುಮತಿ ನೀಡಿದೆ. ಭಾರತ ತಂಡವು ಇಂಗ್ಲೆಂಡ್ ತಲುಪಿದ ಬಳಿಕ ನೇರವಾಗಿ ಹ್ಯಾಂಪ್‌ಶೈರ್ ಬೌಲ್‌ನ ಹೊಟೇಲ್‌ಗೆ ತೆರಳಲಿದೆ. ಅಲ್ಲಿ ಕೋವಿಡ್ ಪರೀಕ್ಷೆಗಳಿಗೆ ಒಳಗಾದ ನಂತರ ಆಟಗಾರರು ವ್ಯವಸ್ಥಿತ ಪ್ರತ್ಯೇಕವಾಸಕ್ಕೆ ತೆರಳಲಿದ್ದಾರೆ’ ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಮಹಿಳಾ ತಂಡಕ್ಕೂ ಸೌತಾಂಪ್ಟನ್‌ನಲ್ಲಿ ಕ್ವಾರಂಟೈನ್: ಪುರುಷರ ತಂಡದೊಂದಿಗೆ ಇಂಗ್ಲೆಂಡ್‌ಗೆ ತೆರಳಲಿರುವ ಭಾರತದ ಮಹಿಳಾ ತಂಡಕ್ಕೂ ಸೌತಾಂಪ್ಟನ್‌ನಲ್ಲಿ ಕಠಿಣ ಕ್ವಾರಂಟೈನ್ ಇರಲಿದೆ. ಆದರೆ ಬ್ರಿಸ್ಟಲ್‌ನಲ್ಲಿ ಆತಿಥೇಯ ಮಹಿಳಾ ತಂಡದ ವಿರುದ್ಧ ಒಂದು ಟೆಸ್ಟ್ ಪಂದ್ಯದಲ್ಲಿ (ಜೂನ್ 16ರಿಂದ ಆರಂಭ) ಭಾರತದ ಮಹಿಳೆಯರು ಆಡಲಿದ್ದಾರೆ. ನಂತರ ಎರಡು ಟಿ20 ಮತ್ತು ಮೂರು ಏಕದಿನ ಪಂದ್ಯಗಳು ನಡೆಯಲಿವೆ.

ಸುದ್ದಿ 2 ನಿಮಿಷ

ರ‍್ಯಾಂಕಿಂಗ್ ಪಾಯಿಂಟ್‌ಗಿಂತ ತರಬೇತಿ ಅಗತ್ಯ: ಬಜರಂಗ್

ನವದೆಹಲಿ (ಪಿಟಿಐ): ಪೋಲೆಂಡ್‌ನಲ್ಲಿ ನಡೆಯಲಿರುವ ರ‍್ಯಾಂಕಿಂಗ್ ಸಿರೀಸ್ ಕುಸ್ತಿ ಟೂರ್ನಿಯಲ್ಲಿ ಭಾಗವಹಿಸದಿರಲು ಭಾರತದ ಬಜರಂಗ್ ಪೂನಿಯಾ ನಿರ್ಧರಿಸಿದ್ದಾರೆ. ರ‍್ಯಾಂಕಿಂಗ್ ಪಾಯಿಂಟ್ಸ್‌ಗಿಂತ ಟೋಕಿಯೊ ಒಲಿಂಪಿಕ್ಸ್ ಸಿದ್ಧತೆಗೆ ತರಬೇತಿ ಅಗತ್ಯವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ಅವರು ಸ್ಪರ್ಧಿಸುವ 65 ಕೆಜಿ ವಿಭಾಗವು ಹೆಚ್ಚು ಪೈಪೋಟಿಯಿಂದ ಕೂಡಿರುತ್ತದೆ. ಆದ್ದರಿಂದ ಉತ್ತಮ ತರಬೇತಿ ಜೊತೆಗಾರನೊಂದಿಗೆ ತಾಲೀಮು ನಡೆಸಲು ಬಜರಂಗ್ ಉದ್ದೇಶಿಸಿದ್ದಾರೆ.

‘ಕೋವಿಡ್‌ನಿಂದಾಗಿ ತರಬೇತಿಯಲ್ಲಿ ವ್ಯತ್ಯಯವಾಗಿದೆ. ಅಂತರರಾಷ್ಟ್ರೀಯ ಪ್ರಯಾಣ ನಿರ್ಬಂಧದಿಂದಾಗಿ ಬೇರೆ ದೇಶಗಳಿಗೆ ತರಬೇತಿಗೆ ತೆರಳಲು ಸಾಧ್ಯವಾಗಿಲ್ಲ’ ಎಂದು ಭಾರತ ಕ್ರೀಡಾ ಪ್ರಾಧಿಕಾರದೊಂದಿಗೆ ನಡೆಸಿದ ಸಂವಾದದಲ್ಲಿ ಬಜರಂಗ್ ಹೇಳಿದ್ದಾರೆ.

ಜೂನ್ 8ರಿಂದ 13ರವರೆಗೆ ಪೋಲೆಂಡ್‌ನ ವಾರ್ಸಾದಲ್ಲಿ ರ‍್ಯಾಂಕಿಂಗ್ ಸಿರೀಸ್ ಟೂರ್ನಿ ನಡೆಯಲಿದ್ದು, ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಭಾರತದ ಕುಸ್ತಿಪಟುಗಳು ಭಾಗವಹಿಸಲಿದ್ದಾರೆ. ಸ್ಪರ್ಧೆಯ ಬಳಿಕ ತಂಡದ ತರಬೇತಿ ಶಿಬಿರವೂ ಅಲ್ಲಿ ನಡೆಯಲಿದೆ. ಬಜರಂಗ್ ಅವರು ತಮ್ಮ ಕೋಚ್ ಶಾಕೊ ಬೆಂಟಿನಿಡಿಸ್ ಜೊತೆ ತರಬೇತಿಗಾಗಿ ರಷ್ಯಾಕ್ಕೆ ತೆರಳಲಿದ್ದಾರೆ.

ಸುಶೀಲ್ ಪೊಲೀಸ್ ಕಸ್ಟಡಿ ವಿಸ್ತರಣೆ

ನವದೆಹಲಿ (ಪಿಟಿಐ): ಯುವ ಪೈಲ್ವಾನನ ಕೊಲೆ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಮತ್ತು ಸಹಚರ ಅಜಯ್ ಕುಮಾರ್ ಸೆಹ್ರಾವತ್ ಅವರ ಪೊಲೀಸ್ ಕಸ್ಟಡಿ ಅವಧಿಯನ್ನು ದೆಹಲಿ ನ್ಯಾಯಾಲಯ ನಾಲ್ಕು ದಿನ ವಿಸ್ತರಿಸಿದೆ.

ದೆಹಲಿಯ ಛತ್ರಸಾಲ್ ಕ್ರೀಡಾಂಗಣದಲ್ಲಿ ನಡೆದ ಪ್ರಕರಣದಲ್ಲಿ 23 ವರ್ಷದ ಸಾಗರ್ ಧನಕಾರ್ ಮತ್ತು ಇಬ್ಬರು ಗೆಳೆಯರ ಮೇಲೆ ಸುಶೀಲ್ ಕುಮಾರ್ ಮತ್ತು ಸಹಚರರು ಹಲ್ಲೆ ನಡೆಸಿದ್ದರು ಎನ್ನಲಾಗಿದೆ. ತಲೆಮರೆಸಿಕೊಂಡಿದ್ದ ಸುಶೀಲ್ ಕುಮಾರ್ ಅವರನ್ನು ಮೇ 23ರಂದು ಬಂಧಿಸಲಾಗಿತ್ತು. ಅಂದು ಆರು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿತ್ತು.

ಶನಿವಾರ ಅವರನ್ನು ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಯಾರೂ ಕಾನೂನಿಗೆ ಅತೀತರಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಾಧೀಶರಾದ ಮಯಂಕ್ ಗೋಯೆಲ್ ಕಸ್ಟಡಿ ಅವಧಿಯನ್ನು ವಿಸ್ತರಿಸಿ ಆದೇಶ ನೀಡಿದರು.

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಮಹಿಳಾ ವಿಭಾಗದಲ್ಲಿ ಬಾರ್ಟಿ, ಸ್ವಾಟೆಕ್, ಒಸಾಕ ಮೇಲೆ ಕಣ್ಣು

ನಡಾಲ್‌ಗೆ ಜೊಕೊವಿಚ್, ಫೆಡರರ್ ಸವಾಲು

ಪ್ಯಾರಿಸ್ (ರಾಯಿಟರ್ಸ್): ಹಿಂದಿನ ನಾಲ್ಕು ಆವೃತ್ತಿ ಸೇರಿದಂತೆ ಒಟ್ಟು 13 ಬಾರಿ ಚಾಂಪಿಯನ್ ಆಗಿರುವ ಸ್ಪೇನ್‌ನ ರಫೆಲ್ ನಡಾಲ್ ಮತ್ತೊಂದು ಪ್ರಶಸ್ತಿ ಮೇಲೆ ಕಣ್ಣಿಟ್ಟು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಈ ಬಾರಿ ಕಣಕ್ಕೆ ಇಳಿಯಲಿದ್ದಾರೆ.

ಭಾನುವಾರ ಆರಂಭವಾಗಲಿರುವ ಟೂರ್ನಿಯಲ್ಲಿ ವಿಶ್ವ ಕ್ರಮಾಂಕದಲ್ಲಿ ಮೊದಲ ಸ್ಥಾನದಲ್ಲಿರುವ ಸರ್ಬಿಯಾದ ನೊವಾಕ್ ಜೊಕೊವಿಚ್ ಮತ್ತು ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ಕೂಡ ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿದ್ದಾರೆ.

ದಾಖಲೆಗಳ ಒಡೆಯ ನಡಾಲ್ ಈ ಬಾರಿ ಆರಂಭದ ಟೂರ್ನಿಗಳಲ್ಲಿ ಸ್ವಲ್ಪ ಹಿನ್ನಡೆ ಅನುಭವಿಸಿದ್ದರೂ ರೋಮ್ ಓಪನ್‌ನಲ್ಲಿ ಅಮೋಘ ಸಾಮರ್ಥ್ಯ ಮೆರೆದು ಫ್ರೆಂಚ್ ಓಪನ್ ಟೂರ್ನಿಗೆ ಅತ್ಯುತ್ತಮ ಸಿದ್ಧತೆ ಮಾಡಿಕೊಂಡಿದ್ದರು. ಮಾಂಟೆ ಕಾರ್ಲೊ ಮತ್ತು ಮ್ಯಾಡ್ರಿಡ್ ಓಪನ್ ಟೂರ್ನಿಗಳಲ್ಲಿ ಅವರು ಕ್ರಮವಾಗಿ ರುಬ್ಲೆವ್ ಮತ್ತು ಅಲೆಕ್ಸಾಂಡರ್ ಜ್ವೆರೆವ್‌ಗೆ ಮಣಿದಿದ್ದರು. ಆದರೆ ರೋಮ್ ಓಪನ್ ಫೈನಲ್‌ನಲ್ಲಿ ಜೊಕೊವಿಚ್ ಅವರನ್ನು ಮಣಿಸಿದ್ದರು.

ರಫೆಲ್ ನಡಾಲ್ –ರಾಯಿಟರ್ಸ್ ಚಿತ್ರ

ಆ್ಯಶ್ಲಿ ಬಾರ್ಟಿ –ಎಎಫ್‌ಪಿ ಚಿತ್ರ

ಕಳೆದ ಭಾರಿ ಎರಡನೇ ಪ್ರಶಸ್ತಿಯ ಕನಸಿನೊಂದಿಗೆ ಫ್ರೆಂಚ್ ಓಪನ್ ಕಣಕ್ಕೆ ಇಳಿದಿದ್ದ ಜೊಕೊವಿಚ್ ಅವರನ್ನು ಫೈನಲ್‌ನಲ್ಲಿ ನಡಾಲ್ ಸೋಲಿಸಿದ್ದರು. ಈ ಬಾರಿ ಇವರಿಬ್ಬರು ಸೆಮಿಫೈನಲ್‌ನಲ್ಲಿ ಮುಖಾಮುಖಿಯಾಗುವ ಸಾಧ್ಯತೆ ಇದೆ. ಅದಕ್ಕೂ ಮೊದಲು ಜೊಕೊವಿಚ್‌ಗೆ ಮತ್ತೊಂದು ಸವಾಲು ಇದೆ. ಕ್ವಾರ್ಟರ್ ಫೈನಲ್‌ನಲ್ಲಿ ಅವರಿಗೆ ರೋಜರ್ ಫೆಡರರ್ ಎದುರಾಳಿಯಾಗುವ ಸಾಧ್ಯತೆ ಇದೆ.

ಆರಂಭ: ಮಧ್ಯಾಹ್ನ 2.30 (ಭಾರತೀಯ ಕಾಲಮಾನ)
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಸೆಲೆಕ್ಟ್ 1,2

ಆಸ್ಟ್ರಿಯಾದ ಡೊಮಿಮಿಕ್ ಥೀಮ್, ರಷ್ಯಾದ ಡ್ಯಾನಿಯಲ್ ಮೆಡ್ವೆಡೆವ್, ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಮತ್ತು ಗ್ರೀಸ್‌ನ ಸ್ಟೆಫನೋಸ್ ಸಿಸಿಪಸ್ ಕೂಡ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಬಾರ್ಟಿ, ಸ್ವಾಟೆಕ್‌ಗೆ ಸವಾಲಿನ ಟೂರ್ನಿ: ಮಹಿಳಾ ವಿಭಾಗದಲ್ಲಿ ಕಳೆದ ಬಾರಿಯ ಚಾಂಪಿಯನ್ ಪೋಲೆಂಡ್‌ನ ಇಗಾ ಸ್ವಾಟೆಕ್, 2019ರ ಪ್ರಶಸ್ತಿ ವಿಜೇತೆ ಆಸ್ಟ್ರೇಲಿಯಾದ ಆ್ಯಶ್ಲಿ ಬಾರ್ಟಿ, ಕಳೆದ ಬಾರಿಯ ರನ್ನರ್ ಅಪ್ ಅಮೆರಿಕದ ಸೋಫಿಯಾ ಕೆನಿನ್, ಮೂರು ಬಾರಿಯ ಚಾಂಪಿಯನ್ ಅಮೆರಿಕದ ಸೆರೆನಾ ವಿಲಿಯಮ್ಸ್ ಮತ್ತು ಜಪಾನ್‌ನ ನವೊಮಿ ಒಸಾಕ ನಡುವೆ ತೀವ್ರ ಪೈಪೋಟಿ ಇದೆ.

ಬೆಲ್‌ಗ್ರೇಡ್ ಓಪನ್‌ನಲ್ಲಿ ಜೊಕೊವಿಚ್‌ಗೆ ಪ್ರಶಸ್ತಿ: ತವರಿನ ಪ್ರೇಕ್ಷಕರನ್ನು ರಂಜಿಸಿದ ನೊವಾಕ್ ಜೊಕೊವಿಚ್ ಶನಿವಾರ ಕೊನೆಗೊಂಡ ಬೆಲ್‌ಗ್ರೇಡ್ ಓಪನ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಫೈನಲ್‌ನಲ್ಲಿ ಅವರು ಸ್ಲೊವಾಕಿಯಾದ ಅಲೆಕ್ಸ್ ಮೊಲ್ಕನ್ ಎದುರು 6-4, 6-3ರಲ್ಲಿ ಜಯ ಗಳಿಸಿದರು.

ಜೂನ್ 3ರಿಂದ ಆನ್‌ಲೈನ್ ಚೆಸ್

ಬೆಂಗಳೂರು: ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆಯು ಜೂನ್ 3ರಿಂದ 12ರವರೆಗೆ ಮೊದಲ ಬಾರಿ ಆನ್‌ಲೈನ್ ಚೆಸ್ ಟೂರ್ನಿಯನ್ನು ಆಯೋಜಿಸಿದೆ. ಬಾಲಕ ಮತ್ತು ಬಾಲಕಿಯರಿಗಾಗಿ ಐದು ವಯೋವರ್ಗಗಳಲ್ಲಿ ಈ ಟೂರ್ನಿ ನಡೆಯಲಿದೆ.

ಪ್ರತಿ ವಿಭಾಗದಲ್ಲಿ ಮೊದಲ ಎರಡು ಸ್ಥಾನ ಗಳಿಸುವ ಚೆಸ್ ಪಟುಗಳು ರಾಷ್ಟ್ರೀಯ ಯೂತ್ ಆನ್‌ಲೈನ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸುವ ಅವಕಾಶ ಪಡೆಯುತ್ತಾರೆ.

ಹೆಚ್ಚಿನ ಮಾಹಿತಿಗಾಗಿ www.karnatakachess.com ವೆಬ್‌ಸೈಟ್‌ಗೆ ಲಾಗ್ ಆನ್ ಆಗಬಹುದು ಅಥವಾ ಯುನೈಟೆಡ್ ಕರ್ನಾಟಕ ಚೆಸ್ ಸಂಸ್ಥೆಯ ಜಂಟಿ ಕಾರ್ಯದರ್ಶಿ ಮಂಜುನಾಥ್ ಜೈನ್ (ಮೊಬೈಲ್ ಸಂಖ್ಯೆ 9036464600) ಅವರನ್ನು ಸಂಪರ್ಕಿಸಬೇಕು.

ನಿಂದನೆ: ತಮೀಮ್‌ಗೆ ದಂಡ

ತಮೀಮ್

ದುಬೈ (ಪಿಟಿಐ): ಅವಾಚ್ಯ ಪದಗಳನ್ನು ಬಳಸಿದ ಬಾಂಗ್ಲಾದೇಶ ಕ್ರಿಕೆಟ್ ತಂಡದ ನಾಯಕ ತಮೀಮ್ ಇಕ್ಬಾಲ್ ಪಂದ್ಯಶುಲ್ಕದ 15 ಶೇಕಡಾ ಮೊತ್ತವನ್ನು ಕಳೆದುಕೊಳ್ಳಲಿದ್ದಾರೆ. ವಿಶ್ವಕಪ್ ಸೂಪರ್ ಲೀಗ್ ಸರಣಿಯ ಅಂಗವಾಗಿ ಶ್ರೀಲಂಕಾ ವಿರುದ್ಧ ಢಾಕಾದಲ್ಲಿ ನಡೆದ ಏಕದಿನ ಪಂದ್ಯದಲ್ಲಿ ಅವರು ಅಶಿಸ್ತು ತೋರಿದ್ದರು ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ತಿಳಿಸಿದೆ.

ಐಸಿಸಿ ನಿಯಮಾವಳಿಯ ಕಾಯ್ದೆ 2.3ರ ಅನ್ವಯ ತಮೀಮ್ ತಪ್ಪಿತಸ್ಥ ಎಂದು ಸಾಬೀತಾಗಿದೆ. ದಂಡದೊಂದಿಗೆ ಒಂದು ಡಿಮೆರಿಟ್ ಪಾಯಿಂಟ್ ನೀಡಲಾಗಿದೆ.

ಕೋವಿಡ್‌ನಿಂದ ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ಪಿಂಚಣಿ

ನವದೆಹಲಿ (ಪಿಟಿಐ): ಉದ್ಯೋಗದ ಸಂದರ್ಭದಲ್ಲಿ ಮೃತಪಟ್ಟವರಿಗೆ ನೀಡುವ ‘ಕಾರ್ಮಿಕರ ರಾಜ್ಯ ವಿಮೆ ನಿಗಮದ (ಇಎಸ್‌ಐಸಿ) ಪಿಂಚಣಿ’ ಯೋಜನೆಯ ಪ್ರಯೋಜನವನ್ನು ಕೋವಿಡ್‌ನಿಂದ ಮೃತಪಟ್ಟವರಿಗೂ ವಿಸ್ತರಿಸಲಾಗುವುದು ಎಂದು ಪ್ರಧಾನ ಮಂತ್ರಿಯವರ ಕಚೇರಿ (ಪಿಎಂಒ) ಶನಿವಾರ ಹೇಳಿದೆ.

ದುಡಿಯುವ ಸದಸ್ಯರನ್ನು ಕಳೆದುಕೊಂಡ ಕುಟುಂಬಗಳ ಹಣಕಾಸಿನ ಸಂಕಷ್ಟಗಳನ್ನು ಕಡಿಮೆ ಮಾಡಲು ಈ ಕ್ರಮಗಳು ನೆರವಾಗುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಕ್ಕೆ, ಮೃತ ಕಾರ್ಮಿಕನ ಒಂದು ದಿನದ ಸರಾಸರಿ ವೇತನದ ಶೇಕಡ 90ರಷ್ಟನ್ನು ಪಿಂಚಣಿಯ ರೂಪದಲ್ಲಿ ನೀಡಲಾಗುತ್ತದೆ. ಇದು ಹಿಂದಿನ ವರ್ಷದ ಮಾರ್ಚ್ 24ರಿಂದ ಅನ್ವಯ ಆಗುವಂತೆ ಜಾರಿಗೆ ಬರಲಿದೆ, 2022ರ ಮಾರ್ಚ್ 24ರವರೆಗಿನ ಪ್ರಕರಣಗಳಿಗೆ ಅನ್ವಯವಾಗಲಿದೆ.


ನರೇಂದ್ರ ಮೋದಿ

ನೌಕರರ ಠೇವಣಿ ಆಧಾರಿತ ವಿಮೆ (ಇಡಿಎಲ್‌ಐ) ಯೋಜನೆಯ ಅಡಿ ಗರಿಷ್ಠ ವಿಮಾ ಮೊತ್ತವನ್ನು ₹ 7 ಲಕ್ಷಕ್ಕೆ ಹೆಚ್ಚಿಸಿರುವುದು ಕೋವಿಡ್‌ನಿಂದಾಗಿ ಮೃತಪಟ್ಟ ನೌಕರರ ಕುಟುಂಬಗಳಿಗೆ ನೆರವಾಗುತ್ತದೆ ಎಂದು ಪಿಎಂಒ ಹೇಳಿದೆ. ವಿಮಾ ಮೊತ್ತದ ಹೆಚ್ಚಳವು 2020ರ ಫೆಬ್ರುವರಿ 15ರಿಂದ ಅನ್ವಯವಾಗಿ ಮುಂದಿನ ಮೂರು ವರ್ಷಗಳ ಅವಧಿಗೆ ಜಾರಿಯಲ್ಲಿ ಇರುತ್ತದೆ.

ಗುತ್ತಿಗೆ ಕಾರ್ಮಿಕರ ಕುಟುಂಬಗಳಿಗೆ ಕೂಡ ಇದರ ಪ್ರಯೋಜನ ದೊರೆಯಬೇಕು ಎಂಬ ಕಾರಣಕ್ಕೆ, ‘ಒಂದೇ ಕಡೆ ನಿರಂತರವಾಗಿ’ ಕೆಲಸ ಮಾಡಿರಬೇಕು ಎಂಬ ನಿಯಮವನ್ನು ಸಡಿಲಿಸಲಾಗಿದೆ. ಮೃತಪಡುವ 12 ತಿಂಗಳ ಅವಧಿಯಲ್ಲಿ ಉದ್ಯೋಗ ಬದಲಿಸಿದ್ದವರಿಗೂ ವಿಮೆಯ ಪ್ರಯೋಜನ ಸಿಗಲಿದೆ ಎಂದು ಪಿಎಂಒ ಪ್ರಕಟಣೆ ತಿಳಿಸಿದೆ.

ಈ ಯೋಜನೆಗಳಿಗೆ ಸಂಬಂಧಿಸಿದ ವಿಸ್ತೃತ ಮಾರ್ಗಸೂಚಿಗಳನ್ನು ಕೇಂದ್ರ ಕಾರ್ಮಿಕ ಸಚಿವಾಲಯವು ಹೊರಡಿಸಲಿದೆ. ‘ಇಎಸ್‌ಐಸಿ ಅಡಿ ಪಿಂಚಣಿ ಹಾಗೂ ಇಡಿಎಲ್‌ಐ ಯೋಜನೆಗಳು ದುಡಿಯುವ ಸದಸ್ಯರನ್ನು ಕೋವಿಡ್‌ನಿಂದಾಗಿ ಕಳೆದುಕೊಂಡ ಕುಟುಂಬಗಳಿಗೆ ಹಣಕಾಸಿನ ಆಸರೆ ನೀಡಲಿವೆ’ ಎಂದು ಪ್ರಧಾನಿ ಮೋದಿ ಅವರು ಟ್ವೀಟ್ ಮಾಡಿದ್ದಾರೆ.

ಮುಂಬೈ: ₹ 100ರ ಗಡಿ ದಾಟಿದ ಪೆಟ್ರೋಲ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶನಿವಾರ ಇಂಧನ ದರ ಹೆಚ್ಚಿಸಿವೆ. ಇದರಿಂದ ಮುಂಬೈನಲ್ಲಿ ಪೆಟ್ರೋಲ್ ದರ ₹ 100ರ ಗಡಿ ದಾಟಿದೆ.

ತೈಲ ಮಾರಾಟ ಕಂಪನಿಗಳು ಶನಿವಾರ ಪೆಟ್ರೋಲ್ ದರವನ್ನು ಲೀಟರಿಗೆ 26 ಪೈಸೆ ಮತ್ತು ಡೀಸೆಲ್ ದರವನ್ನು 28 ಪೈಸೆಯಷ್ಟು ಹೆಚ್ಚಿಸಿವೆ. ಇದರಿಂದಾಗಿ ಮುಂಬೈನಲ್ಲಿ ಪೆಟ್ರೋಲ್ ದರ ₹ 100.19 ಮತ್ತು ಡೀಸೆಲ್ ದರ ₹ 92.17ರಷ್ಟಾಗಿದೆ.

ಪ್ರಮುಖ ನಗರಗಳಲ್ಲಿ ಇಂಧನ ದರ (ಲೀಟರಿಗೆ)

ನಗರ	ಪೆಟ್ರೋಲ್	ಡೀಸೆಲ್
ಬೆಂಗಳೂರು	₹97.07	₹89.99
ದೆಹಲಿ	₹93.94	₹84.89
ಮುಂಬೈ	₹100.19	₹92.17

ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರದ ಹಲವು ನಗರಗಳಲ್ಲಿ ಪೆಟ್ರೋಲ್ ದರ ಈಗಾಗಲೇ ₹ 100ರ ದಾಟಿದೆ. ರಾಜಸ್ಥಾನದ ಶ್ರೀಗಂಗಾನಗರದಲ್ಲಿ ಪೆಟ್ರೋಲ್ ದರವು ದೇಶದಲ್ಲಿಯೇ ಗರಿಷ್ಠ (₹ 104.94) ಮಟ್ಟದಲ್ಲಿದೆ.

ಈ ತಿಂಗಳಿನಲ್ಲಿ ಒಟ್ಟಾರೆ 15 ಬಾರಿ ಇಂಧನ ದರ ಹೆಚ್ಚಿಸಲಾಗಿದೆ. ಇದರಿಂದ ಪೆಟ್ರೋಲ್ ದರ ಲೀಟರಿಗೆ ₹ 3.54 ಮತ್ತು ಡೀಸೆಲ್ ದರ ₹ 4.16ರಷ್ಟು ಏರಿಕೆ ಆದಂತಾಗಿದೆ.

ಸ್ಥಳೀಯ ಮಾರಾಟ ತೆರಿಗೆ ಆಧಾರದ ಮೇಲೆ ರಾಜ್ಯದಿಂದ ರಾಜ್ಯಕ್ಕೆ ಇಂಧನ ದರದಲ್ಲಿ ವ್ಯತ್ಯಾಸ ಆಗುತ್ತದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹547

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1450 (1480)
ಸೋಯಾ (ರಿಫೈನ್ಡ್)	₹1382 (1385)
ಸೂರ್ಯಕಾಂತಿ(ರಿಫೈನ್ಡ್)	₹1590 (1590)
ಪಾಮೋಲಿನ್	₹1250 (1265)

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-15600
ಕಾಳು ಮೆಣಸು	400
ಅಡಿಕೆ	
ಬಂಟ್ವಾಳ	
ಹೊಸತು	23500-40000
ಹಳತು	42500-50000
ಕೋಕ	10000-22500
ಯಲ್ಲಾಪುರ	
ಬಿಳಿಗೋಟು	29110-30510
ಚಾಲಿ	33370-36720
ಪುತ್ತೂರು	
ಹೊಸತು	28000-39500
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ (ಸಿ.ಬಿ)	240-342
ದ್ವಿತಳಿ (ಬಿ.ವಿ)	285-432

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	10925	---	10700	--- ಸೆಂಟ್ಸ್
ಎಸಿ	4675	---	4125	
ಆರ್‌ಪಿ	5175	---	5200	
ಆರ್‌ಸಿ	3100	---	3065	--- ಡಾಲರ್ಸ್

ಕಾರು ಮಾರಾಟ ಚೇತರಿಕೆಗೆ ಬೇಕು 2 ವರ್ಷ: ಮಹೀಂದ್ರ

ನವದೆಹಲಿ (ರಾಯಿಟರ್ಸ್): ದೇಶದಲ್ಲಿ ಕಾರು ಮಾರಾಟವು ಕೋವಿಡ್ ಸಾಂಕ್ರಾಮಿಕಕ್ಕೂ ಮೊದಲಿನ ಗರಿಷ್ಠ ಮಟ್ಟ ತಲುಪಲು ಇನ್ನೆರಡು ವರ್ಷ ಬೇಕಾಗಲಿದೆ ಎಂದು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಅನಿಶ್ ಶಾ ಹೇಳಿದ್ದಾರೆ.

ದೇಶದ ಬಹುಪಾಲು ಜನರಿಗೆ ಕೋವಿಡ್ ಲಸಿಕೆ ನೀಡಿದರೆ ಹಾಗೂ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಆದರೆ ಆರ್ಥಿಕ ಚೇತರಿಕೆಗೆ ನೆರವಾಗಲಿದೆ. ಆಗ, 2023ರಲ್ಲಿ ಕಾರು ಮಾರಾಟದಲ್ಲಿ ಚೇತರಿಕೆ ಕಾಣಬಹುದು. ಲಸಿಕೆ ನೀಡುವಿಕೆಯಲ್ಲಿ ವಿಳಂಬವಾದರೆ ಚೇತರಿಕೆಗೆ ಏಟು ಬೀಳುವ ಸಾಧ್ಯತೆ ಇದೆ ಎಂದೂ ಅವರು ತಿಳಿಸಿದ್ದಾರೆ.

2019ರಲ್ಲಿನ ಮಂದಗತಿಯ ಆರ್ಥಿಕತೆ ಮತ್ತು 2020ರಲ್ಲಿ ಕೋವಿಡ್ ಸಾಂಕ್ರಾಮಿಕದ ಪರಿಣಾಮಗಳಿಂದಾಗಿ ಭಾರತದಲ್ಲಿ ಪ್ರಯಾಣಿಕ ವಾಹನ ಮಾರಾಟವು ಕಳೆದ ಹಣಕಾಸು ವರ್ಷದಲ್ಲಿ 27 ಲಕ್ಷಕ್ಕೆ ಇಳಿಕೆ ಕಂಡಿತು. ಇದು ಆರು ವರ್ಷಗಳ ಕನಿಷ್ಠ ಮಟ್ಟವಾಗಿದೆ.

ಕೋವಿಡ್ ಬಿಕ್ಕಟ್ಟು ಬಗೆಹರಿಯುವವರೆಗೂ ನಗರ ಮತ್ತು ಗ್ರಾಮೀಣ ಭಾಗದ ಜನ ಖರೀದಿಗೆ ಮುಂದಾಗುವುದಿಲ್ಲ. ಕುಟುಂಬದಲ್ಲಿ ಯಾರಾದರೂ ಒಬ್ಬರಿಗೆ ಕೋವಿಡ್ ಬಂದರೆ ಏನು ಮಾಡುವುದು ಎಂಬ ಆತಂಕದಲ್ಲಿದ್ದಾರೆ ಎಂದಿದ್ದಾರೆ.

‘ಜಿಎಸ್‌ಟಿ ದಂಡ ವಿನಾಯಿತಿ, ಸಣ್ಣ ಉದ್ದಿಮೆಗಳಿಗೆ ಸಹಾಯ’

ನವದೆಹಲಿ (ಪಿಟಿಐ): ಮಾಸಿಕ ಜಿಎಸ್‌ಟಿ ವಿವರವನ್ನು ತಡವಾಗಿ ಸಲ್ಲಿಸಿದವರಿಗೆ ದಂಡ ವಿಧಿಸುವ ವಿಚಾರದಲ್ಲಿ ಕೆಲವು ವಿನಾಯಿತಿ ನೀಡುವ ಜಿಎಸ್‌ಟಿ ಮಂಡಳಿಯ ತೀರ್ಮಾನವು ಸಣ್ಣ ಉದ್ದಿಮೆಗಳಿಗೆ ನೆರವಾಗುತ್ತದೆ, ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಆದಾಯ ತಂದುಕೊಡುತ್ತದೆ ಎಂದು ತೆರಿಗೆ ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತೆರಿಗೆ ಪಾವತಿ ಬಾಕಿ ಇಲ್ಲದಿದ್ದರೆ, 2017ರ ಜುಲೈನಿಂದ ಈ ವರ್ಷದ ಏಪ್ರಿಲ್‌ವರೆಗಿನ ಜಿಎಸ್‌ಟಿಆರ್–3ಬಿ ಸಲ್ಲಿಸದೆ ಇದ್ದವರಿಗೆ ಪ್ರತಿ ವಿವರಕ್ಕೆ ₹ 500ರವರೆಗೆ ದಂಡ ನಿಗದಿ ಮಾಡಲಾಗಿದೆ. ತೆರಿಗೆ ಪಾವತಿಸುವುದು ಬಾಕಿ ಇದ್ದರೆ, ಅವರು ಆಗಸ್ಟ್ 31ಕ್ಕೆ ಮೊದಲು ವಿವರಗಳನ್ನು ಸಲ್ಲಿಸಿದರೆ, ಪ್ರತಿ ವಿವರಕ್ಕೆ ₹ 1,000 ದಂಡ ನಿಗದಿಪಡಿಸಲಾಗಿದೆ.

₹ 2 ಕೋಟಿವರೆಗೆ ವಾರ್ಷಿಕ ವಹಿವಾಟು ಹೊಂದಿರುವವರು 2020–21ನೆಯ ಸಾಲಿನಲ್ಲಿ ತೆರಿಗೆ ವಿವರ ಸಲ್ಲಿಸುವುದು ಐಚ್ಛಿಕ ಎಂದು ಶುಕ್ರವಾರ ನಡೆದ ಜಿಎಸ್‌ಟಿ ಮಂಡಳಿಯ ಸಭೆಯಲ್ಲಿ ತೀರ್ಮಾನಿಸಲಾಗಿದೆ.

‘ಸಣ್ಣ ಉದ್ದಿಮೆಗಳ ಹಿತಾಸಕ್ತಿಯನ್ನು ಜಿಎಸ್‌ಟಿ ಮಂಡಳಿಯು ಸರಿಯಾಗಿ ಗಮನಕ್ಕೆ ತೆಗೆದುಕೊಂಡಿದೆ ಎಂದು ಹೇಳಬಹುದು. ಈ ಉದ್ಯಮಗಳಿಗೆ ಅಗತ್ಯ ವಿನಾಯಿತಿ ನೀಡಿದೆ’ ಎಂದು ಇವೈ ಟ್ಯಾಕ್ಸ್ ಪಾರ್ಟ್ನರ್ ಸಂಸ್ಥೆಯ ಅಭಿಷೇಕ್ ಜೈನ್ ಹೇಳಿದರು.

ಭಾರತಕ್ಕೆ ಲಸಿಕೆ ಪೂರೈಕೆ: ಅಮೆರಿಕ ಶೀಘ್ರ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತಕ್ಕೆ ಲಸಿಕೆ ಪೂರೈಸುವ ಕುರಿತಂತೆ ಅಮೆರಿಕ ಬರುವ ವಾರಗಳಲ್ಲಿ, ಆಹಾರ ಮತ್ತು ಔಷಧ ನಿಯಂತ್ರಣ ಇಲಾಖೆಯ (ಎಫ್‌ಡಿಎ) ಅನುಮೋದನೆಯನ್ನು ಆಧರಿಸಿ ನಿರ್ಧಾರ ಕೈಗೊಳ್ಳುವ ಸಂಭವವಿದೆ.

ವಿದೇಶಾಂಗ ಸಚಿವ ಜೈಶಂಕರ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ನಡುವೆ ಲಸಿಕೆ ಪಾಲುದಾರಿಕೆ ಕುರಿತು ಶುಕ್ರವಾರ ವಾಷಿಂಗ್ಟನ್ ಡಿ.ಸಿ.ಯಲ್ಲಿ ಸಭೆ ನಡೆದಿತ್ತು.

ಭಾರತಕ್ಕೆ ಎಷ್ಟು ಲಸಿಕೆ ಮತ್ತು ಯಾವಾಗ ಕಳುಹಿಸಬೇಕು ಎಂದು ಅಧ್ಯಕ್ಷ ಜೋ ಬೈಡನ್ ನೇತೃತ್ವದ ಆಡಳಿತ ನಿರ್ಧರಿಸಲಿದೆ. ಸೂಕ್ತ ಸಂದರ್ಭದಲ್ಲಿ ನಿರ್ಧಾರ ತೆಗೆದುಕೊಳ್ಳುವ ವಿಶ್ವಾಸವಿದೆ ಸಂಭವವಿದೆ ಎಂದೂ ಜೈಶಂಕರ್ ತಿಳಿಸಿದ್ದರು.

ಅಮೆರಿಕ ಪ್ರವಾಸದ ವೇಳೆ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಅವರನ್ನು ಭೇಟಿಯಾದ ಎಸ್. ಜೈಶಂಕರ್ –ಪಿಟಿಐ ಚಿತ್ರ

ಅಸ್ಟ್ರಾಜೆನೆಕಾದ 6 ಕೋಟಿ ಲಸಿಕೆಯು ಗುಣಮಟ್ಟದ ಪರೀಕ್ಷೆ ಇನ್ನೂ ಆಗ ಬೇಕಿದೆ. ಬಹುಶಃ ಮುಂದಿನ ವಾರಗಳಲ್ಲಿ ಇದು ಆಗಬಹುದು ಎಂದು ಅಮೆರಿಕ ವಿದೇಶಾಗ ಇಲಾಖೆಯ ಪ್ರಭಾರ ಉಪ ಕಾರ್ಯದರ್ಶಿ ಡೀನ್ ತಾಂಪ್ಸನ್ ತಿಳಿಸಿದರು.

ಚರ್ಚೆ ಫಲಪ್ರದ: ಬ್ಲಿಂಕೆನ್: ‘ಪ್ರಾದೇಶಿಕ ಭದ್ರತೆ, ಅಮೆರಿಕದಿಂದ ಕೋವಿಡ್ ಪರಿಹಾರ ಪ್ರಯತ್ನಗಳು, ಭಾರತ–ಚೀನಾ ಗಡಿ ಪರಿಸ್ಥಿತಿ ಮತ್ತು ಅಫ್ಗಾನಿಸ್ತಾನಕ್ಕೆ ಸಹಕಾರ ಸೇರಿ ವಿವಿಧ ವಿಷಯಗಳ ಬಗ್ಗೆ ಜೈಶಂಕರ್‌ರೊಂದಿಗೆ ಚರ್ಚಿಸಿದ್ದೇನೆ. ಈ ಬಗ್ಗೆ ಉಭಯ ರಾಷ್ಟ್ರಗಳು ಜಂಟಿಯಾಗಿ ಕೆಲಸ ಮಾಡಲಿದೆ’ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆಂಟನಿ ಬ್ಲಿಂಕೆನ್ ಟ್ವೀಟ್ ಮಾಡಿದ್ದಾರೆ.

ಲಸಿಕೆಗೆ ತೆರಿಗೆ: ಜೂನ್ 8ಕ್ಕೆ ವರದಿ

ನವದೆಹಲಿ (ಪಿಟಿಐ): ಕೋವಿಡ್ ಲಸಿಕೆ, ಔಷಧಗಳು, ಸ್ಯಾನಿಟೈಸರ್, ಮಾಸ್ಕ್, ಪಿಪಿಇ ಕಿಟ್ ಮತ್ತು ಆಮ್ಲಜನಕ ಸಿಲಿಂಡರ್‌ಗಳ ಮೇಲಿನ ಜಿಎಸ್‌ಟಿ ಪ್ರಮಾಣದ ಕುರಿತು ಸಚಿವರ ಸಮಿತಿಯು ಜೂನ್ 8ರಂದು ವರದಿ ನೀಡಲಿದೆ. ಸಚಿವರ ಸಮಿತಿಯು ತೆರಿಗೆ ಪ್ರಮಾಣದ ಪರಿಶೀಲನೆ ನಡೆಸಲಿದೆ ಎಂದು ಶುಕ್ರವಾರ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದರು.

ಮುಂಬೈ ಧಾರಣೆ

ಶೇಂಗಾ

29-5-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9250-930
ದಪ್ಪ ಮಧ್ಯಪ್ರದೇಶ(ಹೊಸ)	10400-10500
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1460 (1490)
ಒಂದು ವಾರದ ಡೆಲಿವರಿ	1455 (1485)
ಸೋಯಾ ಕಚ್ಚಾ	1380 (1390)
ಪಾಮ್ ವಾರದ ಡೆಲಿವರಿ	1248 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1550 (1560)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 48,650 (48,650)
ಬೆಳ್ಳಿ ಕೆ.ಜಿ 71,200 (70,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಡಗಿಗೆ ಬೆಂಕಿ, ಶ್ರೀಲಂಕಾದ ಕೆಲವೆಡೆ ಆಮ್ಲ ಮಳೆ ನಿರೀಕ್ಷೆ

ಕೊಲಂಬೊ (ಪಿಟಿಐ): ಕಳೆದ ವಾರ ಶ್ರೀಲಂಕಾದ ಕೊಲಂಬೊ ಕರಾವಳಿ ಬಳಿ ರಾಸಾಯನಿಕಗಳನ್ನು ಹೊತ್ತು ತರುತ್ತಿದ್ದ ಸರಕು ಸಾಗಣೆ ಹಡಗಿಗೆ ಬೆಂಕಿ ಹೊತ್ತಿಕೊಂಡಿದ್ದ ಪರಿಣಾಮ ನೈಟ್ರೋಜನ್ ಡೈಆಕ್ಸೈಡ್ ಸೋರಿಕೆ ಆಗಿದೆ. ಹೀಗಾಗಿ ಸುತ್ತಲಿನ ಪ್ರದೇಶಗಳಲ್ಲಿ ಲಘುವಾಗಿ ಆಮ್ಲ ಮಳೆ ಬೀಳುವ ನಿರೀಕ್ಷೆ ಇದೆ ಎಂದು ಶ್ರೀಲಂಕದ ಕರಾವಳಿ ಪರಿಸರ ಸಂರಕ್ಷಣಾ ಪ್ರಾಧಿಕಾರ ಎಚ್ಚರಿಸಿದೆ.

ಹಡಗಿನಲ್ಲಿ ಸಿಲುಕಿದ್ದ ಭಾರತ, ರಷ್ಯಾ, ಚೀನಾ, ಫಿಲಿಪ್ಪೀನ್ಸ್ ದೇಶಗಳ 25ಕ್ಕೂ ಹೆಚ್ಚು ಸಿಬ್ಬಂದಿಯನ್ನು ಮಂಗಳವಾರವೇ ರಕ್ಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿಂಗಾಪುರ ನೋಂದಣಿಯ ಎಂವಿ ಎಕ್ಸ್–ಪ್ರೆಸ್ ಪರ್ಲ್ ಸರಕು ಹಡಗು ಗುಜರಾತ್‌ನ ಹಾಜಿರದಿಂದ ಕೊಲಂಬೊಗೆ ಸುಮಾರು 25 ಟನ್ ನೈಟ್ರಿಕ್ ಆಮ್ಲ ಮತ್ತು 325 ಟನ್ ಇಂಧನವನ್ನು ಹೊತ್ತು ತರುತ್ತಿದ್ದಾಗ ಬೆಂಕಿ ಹೊತ್ತೊಕೊಂಡಿತ್ತು.

ಕೋವಿಡ್: ಮಾಲ್‌ಗಳಿಗೆ ₹ 3 ಸಾವಿರ ಕೋಟಿ ನಷ್ಟ

ನವದೆಹಲಿ (ಪಿಟಿಐ): ಕೋವಿಡ್‌ನ ಎರಡನೇ ಅಲೆ ನಿಯಂತ್ರಿಸಲು ಹಲವು ರಾಜ್ಯಗಳಲ್ಲಿ ಹೇರಿರುವ ಲಾಕ್‌ಡೌನ್ ಮತ್ತು ನಿರ್ಬಂಧಗಳಿಂದಾಗಿ ಎಂಟು ವಾರಗಳಲ್ಲಿ ಮಾಲ್‌ಗಳಿಗೆ ಅಂದಾಜು ₹ 3 ಸಾವಿರ ಕೋಟಿ ನಷ್ಟವಾಗಿದೆ.

ಕೋವಿಡ್‌ನ ಎರಡನೇ ಅಲೆಯ ಪರಿಣಾಮದಿಂದಾಗಿ ಎಲ್ಲಾ ವಿಭಾಗಗಳಲ್ಲಿಯೂ ರಿಟೇಲ್ ವಹಿವಾಟಿನಲ್ಲಿ ಶೇಕಡ 25ರಷ್ಟು ನಷ್ಟವಾಗಿದೆ. ಇದು ಮಾಲ್‌ಗಳ ಮಾಲೀಕರ ಮೇಲೆಯೂ ಪರಿಣಾಮ ಉಂಟುಮಾಡಲಿದೆ ಎಂದು ಶಾಪಿಂಗ್ ಸೆಂಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಎಸ್‌ಸಿಎಐ) ಅಧ್ಯಕ್ಷ ಮುಕೇಶ್ ಕುಮಾರ್ ತಿಳಿಸಿದ್ದಾರೆ. ರಿಟೇಲ್ ವಹಿವಾಟಿಗೆ ಆಗಿರುವ ನಷ್ಟವು ಸರಿಸುಮಾರು ₹ 25 ಸಾವಿರ ಕೋಟಿ ಎಂದು ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ್ದಾರೆ.

ಕೊರೊನಾ ಹೊಸ ರೂಪಾಂತರ ಪತ್ತೆ

ಹನೊಯಿ (ರಾಯಿಟರ್ಸ್): ಕೊರೊನಾ ವೈರಸ್‌ನ ಹೊಸ ರೂಪಾಂತರವನ್ನು ವಿಯೆಟ್ನಾಂ ಪತ್ತೆ ಹಚ್ಚಿದೆ.

ಇದು ಭಾರತ ಮತ್ತು ಬ್ರಿಟನ್‌ನ ಕೋವಿಡ್–19 ರೂಪಾಂತರದ ಮಿಶ್ರಣವಾಗಿದ್ದು, ಗಾಳಿಯಲ್ಲಿ ವೇಗವಾಗಿ ಹರಡುತ್ತದೆ ಎಂದು ಅಲ್ಲಿನ ಆರೋಗ್ಯ ಸಚಿವ ಎನ್‌ಗುಯೆನ್ ಥಾನ್ಹ ಲಾಂಗ್ ಶನಿವಾರ ತಿಳಿಸಿದ್ದಾರೆ.